ಶುಕ್ರವಾರ, ಫೆಬ್ರುವರಿ 28, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 59 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಪ್ರಯೋಗಾತ್ಮಕ ಪಾತ್ರಗಳ ಆಯ್ಕೆಯೇ ಗೆಲುವಿನ ಸೂತ್ರ ಎಂದಿದ್ದಾರೆ ನಟ ವಿಜಯ ರಾಘವೇಂದ್ರ

ಆಳ-ಅಗಲ
ಏಳು ಗ್ರಹಗಳ 'ಪಥಸಂಚಲನ'

ಎಫ್‌ಐಆರ್ ಇಲ್ಲದಿದ್ದರೂ ನಿರೀಕ್ಷಣಾ ಜಾಮೀನು 9

'ಕ್ಷೇತ್ರ ಮರುವಿಂಗಡಣೆ: ಒಗ್ಗಟ್ಟಿನ ಹೋರಾಟ ಅಗತ್ಯ' 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,612	22,545	₹90,020 (ಬೆಂಗಳೂರು)	₹1.50 ಲಕ್ಷ (ಬೆಂಗಳೂರು)	87.18

ವಿಧಾನ ಪರಿಷತ್: ಮರು ಎಣಿಕೆ ಇಂದು

ಚಿಕ್ಕಮಗಳೂರು: ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ ಸ್ಥಾನಕ್ಕೆ ಚುನಾವಣೆ ನಡೆದು ಮೂರು ವರ್ಷಗಳ ಬಳಿಕ ಮತಗಳ ಮರು ಎಣಿಕೆಗೆ ಶುಕ್ರವಾರ ನಡೆಯಲಿದ್ದು, ಜನರಲ್ಲಿ ಕುತೂಹಲ ಹೆಚ್ಚಿಸಿದೆ.

2021ರ ಡಿಸೆಂಬರ್ 10ರಂದು ನಡೆದ ಚುನಾವಣೆಯಲ್ಲಿ ಬಿಜೆಪಿಯ ಎಂ.ಕೆ. ಪ್ರಾಣೇಶ್ 6 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಫಲಿತಾಂಶದ ವಿರುದ್ಧ ಗಾಯತ್ರಿ ಶಾಂತೇಗೌಡ ದೂರು ಸಲ್ಲಿಸಿದ್ದರಿಂದ ಈಗ ಮತಗಳ ಮರು ಎಣಿಕೆ ನಡೆಯುತ್ತಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಹಂಚಿಕೆಯಲ್ಲಿ ಕಡಿತಕ್ಕೆ ಕೇಂದ್ರ ಚಿಂತನೆ ● ಮುಂದಿನ ವರ್ಷ ಜಾರಿ ಸಾಧ್ಯತೆ

ರಾಜ್ಯಗಳ ಪಾಲು ಕಡಿತ?

- ಈಗಿನ ಪಾಲು ಶೇ 41 ರಷ್ಟು ಇದ್ದು, ಶೇ 40ಕ್ಕೆ ಇಳಿಸುವ ಸಾಧ್ಯತೆ
- ಹಣಕಾಸು ಆಯೋಗಕ್ಕೆ ಕೋರಿಕೆ ಸಲ್ಲಿಸಲು ಕೇಂದ್ರ ಸಿದ್ಧತೆ
- ಅಕ್ಟೋಬರ್ 31ರೊಳಗೆ ಶಿಫಾರಸು ಸಲ್ಲಿಸಲಿರುವ ಆಯೋಗ

ನವದೆಹಲಿ (ರಾಯಿಟರ್ಸ್): ಕೇಂದ್ರವು ಸಂಗ್ರಹಿಸುವ ತೆರಿಗೆಯಲ್ಲಿ ರಾಜ್ಯಗಳಿಗೆ ನೀಡುವ ಪಾಲನ್ನು ಈಗಿನ ಶೇ 41ರಿಂದ ಶೇ 40ಕ್ಕೆ ಇಳಿಸಲು ಶಿಫಾರಸು ಮಾಡುವಂತೆ ಹಣಕಾಸು ಆಯೋಗಕ್ಕೆ ಕೋರಿಕೆ ಸಲ್ಲಿಸಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದೆ.

ತೆರಿಗೆ ಪಾಲು ಕಡಿತಗೊಳಿಸುವ ನಿರ್ಧಾರವು ಕಾರ್ಯರೂಪಕ್ಕೆ ಬಂದರೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನಡುವೆ ಜಟಾಪಟಿಗೆ ಕಾರಣವಾಗುವ ಸಾಧ್ಯತೆಯಿದೆ.

ಅರ್ಥಶಾಸ್ತ್ರಜ್ಞ ಅರವಿಂದ ಪನಗರಿಯಾ ನೇತೃತ್ವದ ಹಣಕಾಸು ಆಯೋಗವು ತನ್ನ ಶಿಫಾರಸು-ಗಳನ್ನು ಇದೇ ಅಕ್ಟೋಬರ್ 31ರೊಳಗೆ ಸರ್ಕಾರಕ್ಕೆ ಸಲ್ಲಿಸಲಿದ್ದು, 2026-27ರ ಆರ್ಥಿಕ ವರ್ಷದಿಂದ ಜಾರಿಗೆ ಬರಲಿವೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಚಿವ ಸಂಪುಟವು ಮಾರ್ಚ್ ಅಂತ್ಯದ ವೇಳೆಗೆ ಕೋರಿಕೆಗಳಿಗೆ ಒಪ್ಪಿಗೆ ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ರಾಜ್ಯ ಸರ್ಕಾರಗಳಿಗೆ ಹಂಚಿಕೆ ಮಾಡುವ ತೆರಿಗೆಯ ಪಾಲು 1980ರಲ್ಲಿ ಶೇ 20ರಷ್ಟು ಇದ್ದದ್ದು, ಈಗ ಶೇ 41ಕ್ಕೆ ಜಿಗಿದಿದೆ.

9ನೇ ಪುಟ ನೋಡಿ

ಉಚಿತ ಕೊಡುಗೆ; ಅನುದಾನ ಇಲ್ಲ?

ಕೆಲವು ರಾಜ್ಯ ಸರ್ಕಾರಗಳು ಮಾಸಿಕ ನಗದು ನೆರವು, ಸಾಲ ಮನ್ನಾ ಮತ್ತು ಇತರ ಉಚಿತ ಯೋಜನೆ ಜಾರಿಗೊಳಿಸುವುದನ್ನು ತಡೆಯಲು ಕೇಂದ್ರ ಸರ್ಕಾರ ಹೊಸ ಮಾರ್ಗಗಳನ್ನು ಕಂಡುಕೊಳ್ಳುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ.

ಆದರೆ, ಜನರಿಗೆ ಉಚಿತ ಯೋಜನೆಗಳನ್ನು ನೀಡುತ್ತಿರುವ ರಾಜ್ಯಗಳಿಗೆ ಕೇಂದ್ರ ಸರ್ಕಾರವು ಅನುದಾನವನ್ನು ನಿರಾಕರಿಸ-ಲಿದೆಯೇ ಎಂಬುದು ತಕ್ಷಣವೇ ಸ್ಪಷ್ಟವಾಗಿಲ್ಲ. ಕೆಲವು ಷರತ್ತುಗಳನ್ನು ವಿಧಿಸಿ, ಅವುಗಳನ್ನು ಪೂರೈಸಿದ ಬಳಿಕವೇ ರಾಜ್ಯಗಳಿಗೆ ಅನುದಾನ ಬಿಡುಗಡೆಗೊಳಿಸುವ ವ್ಯವಸ್ಥೆ ಜಾರಿಗೊಳಿಸಲು ಕೇಂದ್ರವು ಚಿಂತನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

'ಕೇಂದ್ರದ ಹೊಸ ಅಸ್ತ್ರ'

'ತೆರಿಗೆ ಹಂಚಿಕೆ, ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ), ಪ್ರಕೃತಿ ವಿಕೋಪ ಪರಿಹಾರದಲ್ಲಿ ಅನ್ಯಾಯ, ಹೊಸ ಶಿಕ್ಷಣ ನೀತಿ. ಯುಜಿಸಿ ನಿಯಮಾವಳಿಗಳಿಗೆ ತಿದ್ದುಪಡಿಯೂ ಸೇರಿದಂತೆ ಕೇಂದ್ರ ಸರ್ಕಾರದ ಪ್ರತಿಯೊಂದು ಕ್ರಮವೂ ರಾಜ್ಯವನ್ನು ಶಿಕ್ಷಿಸುವ ದುರುದ್ದೇಶದಿಂದ ಕೂಡಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ.

9ನೇ ಪುಟ ನೋಡಿ

₹35 ಸಾವಿರ ಕೋಟಿ ಉಳಿಕೆ

ರಾಜ್ಯಗಳಿಗೆ ನೀಡುವ ತೆರಿಗೆ ಪಾಲಿನಲ್ಲಿ ಶೇ 1ರಷ್ಟು ಕಡಿತಗೊಳಿಸಿದರೆ ಕೇಂದ್ರ ಸರ್ಕಾರದ ಬಳಿ ₹35 ಸಾವಿರ ಕೋಟಿ ಉಳಿಯಲಿದೆ. ಪ್ರಸಕ್ತ ವರ್ಷದ ನಿರೀಕ್ಷಿತ ತೆರಿಗೆ ಸಂಗ್ರಹದ ಆಧಾರದ ಮೇಲೆ ಈ ಲೆಕ್ಕಾಚಾರ ಮಾಡಲಾಗಿದೆ. ತೆರಿಗೆ ಸಂಗ್ರಹದ ಮೊತ್ತ ಬದಲಾದಂತೆ, ಕೇಂದ್ರ ಸರ್ಕಾರದ ಬಳಿ ಉಳಿಯುವ ಮೊತ್ತದಲ್ಲೂ ಬದಲಾವಣೆ ಉಂಟಾಗಬಹುದು.

ಅಜ್ಜನ ರಥೋತ್ಸವ... ಹುಬ್ಬಳ್ಳಿಯಲ್ಲಿ ಗುರುವಾರ ಸಿದ್ಧಾರೂಢಸ್ವಾಮಿ ರಥೋತ್ಸವವು ಭಕ್ತಸಾಗರದ ಮಧ್ಯೆ ಅದ್ದೂರಿಯಿಂದ ಜರುಗಿತು ಚಿತ್ರ: ಗೋವಿಂದರಾಜ ಜವಳಿ

ನಕಲಿ ಅಂಕಪಟ್ಟಿ ಜಾಲ: ಒಬ್ಬ ಸೆರೆ

ಪ್ರಜಾವಾಣಿ ವಾರ್ತೆ

ರಾಜೀವ್ ಸಿಂಗ್ ಆರೋರಾ

ಕಲಬುರಗಿ: ದೇಶದ ವಿವಿಧ ವಿಶ್ವವಿದ್ಯಾಲಯಗಳು, ಶಿಕ್ಷಣ ಸಂಸ್ಥೆಗಳ ಹೆಸರಿನಲ್ಲಿ ನಕಲಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಮುದ್ರಿಸಿ ಮಾರುತ್ತಿದ್ದ ಜಾಲವನ್ನು ನಗರ ಸೈಬರ್, ಆರ್ಥಿಕ ಮತ್ತು ಮಾದಕವಸ್ತು ತಡೆ (ಸೆನ್) ಠಾಣೆ ಪೊಲೀಸರು ಭೇದಿಸಿದ್ದು, ಒಬ್ಬ ಆರೋಪಿಯನ್ನು ಬಂಧಿಸಿದ್ದಾರೆ.

'2020ರಲ್ಲಿ ಸ್ಟೇಷನ್ ಬಜಾರ್ ಠಾಣೆಯಲ್ಲಿ ದಾಖಲಾಗಿದ್ದ ನಕಲಿ ಅಂಕಪಟ್ಟಿ ಪ್ರಕರಣದ ತನಿಖೆಯನ್ನು ಈಚೆಗೆ ಚುರುಕುಗೊಳಿಸಲಾಗಿತ್ತು. ಈ ಪ್ರಕರಣದಲ್ಲಿ ದೆಹಲಿ ಮೂಲದ ರಾಜೀವ್ ಸಿಂಗ್ ಅರೋರಾನನ್ನು ಪೊಲೀಸರು ಬಂಧಿಸಿದ್ದಾರೆ. ರಾಜ್ಯದ ದಾವಣಗೆರೆ, ಬೆಂಗಳೂರು, ಹುಬ್ಬಳ್ಳಿ, ಬಾಗಲಕೋಟೆ ಸೇರಿ ಹಲವೆಡೆ ನಕಲಿ ಅಂಕಪಟ್ಟಿ ಮತ್ತು ಪ್ರಮಾಣ ಪತ್ರ ಜಾಲ ವಿಸ್ತರಿಸಿಕೊಂಡಿದೆ' ಎಂದು ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಮೈಸೂರು ವಿಶ್ವವಿದ್ಯಾಲಯ, ರಾಜ್ಯ ಮುಕ್ತ ವಿವಿ, ಬೆಂಗಳೂರು ವಿವಿ ಸೇರಿ ದೇಶದ 28 ವಿವಿಗಳ ಹೆಸರಲ್ಲಿನ 522 ನಕಲಿ ಅಂಕಪಟ್ಟಿಗಳು, 1,626 ಖಾಲಿ ಅಂಕಪಟ್ಟಿಗಳು, 403 ಹಾಲೊಗ್ರಾಮ್, 122 ಸೀಲ್‌ಗಳು, 36 ಮೊಬೈಲ್‌ಗಳು (12 ಸ್ಮಾರ್ಟ್ ಫೋನ್, 24 ಕೀ ಪ್ಯಾಡ್), 13 ಸಿಮ್ ಕಾರ್ಡ್‌ಗಳು ಬಂಧಿತನಿಂದ ವಶಕ್ಕೆ ಪಡೆಯಲಾಗಿದೆ' ಎಂದು ಮಾಹಿತಿ ನೀಡಿದರು.

8ನೇ ಪುಟ ನೋಡಿ

ಅಮೆಜಾನ್ ಕಂಪನಿಗೆ ₹ 340 ಕೋಟಿ ದಂಡ

ನವದೆಹಲಿ (ಪಿಟಿಐ): ಟ್ರೇಡ್‌ಮಾರ್ಕ್ ಉಲ್ಲಂಘನೆಗೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್, ಅಮೆಜಾನ್ ಇಂಡಿಯಾಕ್ಕೆ ₹340 ಕೋಟಿ ದಂಡ ವಿಧಿಸಿದೆ. 12

ವರದಹಳ್ಳಿಯಲ್ಲಿ 36 ಕೋಳಿ ಸಾವು: ಮುನ್ನೆಚ್ಚರಿಕೆ ಕ್ರಮ

ಚಿಕ್ಕಬಳ್ಳಾಪುರದಲ್ಲಿ ಹಕ್ಕಿಜ್ವರ ಪತ್ತೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಜಿಲ್ಲೆಯಲ್ಲಿ ಮೊದಲ ಬಾರಿಗೆ ಹಕ್ಕಿಜ್ವರ ಪತ್ತೆಯಾಗಿದ್ದು, ವರದಹಳ್ಳಿಯಲ್ಲಿ 36 ಕೋಳಿಗಳು ಹಕ್ಕಿಜ್ವರದಿಂದ ಮೃತಪಟ್ಟಿವೆ.

ಚಿಕ್ಕಬಳ್ಳಾಪುರ ತಾಲ್ಲೂಕಿನ ವರದಹಳ್ಳಿಯ ದ್ಯಾವಪ್ಪ ಮತ್ತು ರತ್ನಮ್ಮ ಸಾಕಿದ 36 ಕೋಳಿಗಳು ಶನಿವಾರ ರಾತ್ರಿ ಏಕಾಏಕಿ ಮೃತಪಟ್ಟಿದ್ದವು.

ಕೋಳಿಗಳು ವಿಷಾಹಾರ ಸೇವನೆಯಿಂದ ಅಥವಾ ಯಾವುದಾದರೂ ರೋಗದಿಂದ ಮೃತಪಟ್ಟಿವೆಯೇ ಎನ್ನುವುದನ್ನು ತಿಳಿಯಲು ಮಾದರಿ ಸಂಗ್ರಹಿಸಿ ಬೆಂಗಳೂರು ಮತ್ತು ಭೋಪಾಲ್ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು.

ವರದಿ ಗುರುವಾರ ಜಿಲ್ಲಾಡಳಿತ ಮತ್ತು ಪಶುಸಂಗೋಪನಾ ಇಲಾಖೆಯ ಕೈ ಸೇರಿದೆ. ಹಕ್ಕಿಜ್ವರದಿಂದಲೇ ಕೋಳಿಗಳು ಮೃತಪಟ್ಟಿರುವುದು ದೃಢಪಟ್ಟಿದೆ.

8ನೇ ಪುಟ ನೋಡಿ

ಎಲ್ಲ ಕೋಳಿಗಳ ಸಾಮೂಹಿಕ ಹತ್ಯೆ

ವರದಹಳ್ಳಿಯಲ್ಲಿ ಗುರುವಾರ ಸಹ ಎರಡು ಕೋಳಿ ಸಾವನ್ನಪ್ಪಿದ್ದು, ಗ್ರಾಮದ ಒಂದು ಕಿ.ಮೀ ವ್ಯಾಪ್ತಿಯನ್ನು ಸೋಂಕಿತ ಪ್ರದೇಶ ಹಾಗೂ 10 ಕಿ.ಮೀ ವ್ಯಾಪ್ತಿಯನ್ನು ಸರ್ವೆಲೆನ್ಸ್ ವಲಯ ಎಂದು ಎಂದು ಜಿಲ್ಲಾಡಳಿತ ಘೋಷಿಸಿದೆ.

ವರದಹಳ್ಳಿಯ ಎಲ್ಲಾ ಕೋಳಿಗಳನ್ನು ಶುಕ್ರವಾರ ಸಾಮೂಹಿಕವಾಗಿ ಕೊಲ್ಲಲು ನಿರ್ಧರಿಸಲಾಗಿದೆ.

ಈ ಗ್ರಾಮದಲ್ಲಿ 350 ಕೋಳಿಗಳಿದ್ದು ಆ ಪೈಕಿ ಈಗಾಗಲೇ ಸುಮಾರು 40 ಕೋಳಿ ಮೃತಪಟ್ಟಿವೆ. ಗ್ರಾಮದ ಸುತ್ತಮುತ್ತಲಿನ ಕೋಳಿಗಳನ್ನು 15 ದಿನಗಳಿಗೆ ಒಮ್ಮೆ ಪರೀಕ್ಷೆಗೆ ಒಳಪಡಿಸಲು ತೀರ್ಮಾನಿಸಲಾಗಿದೆ. 90 ದಿನ ಮಾದರಿಗಳ ಪರೀಕ್ಷೆ ನಡೆಯಲಿದೆ.

ಮಾನ್ವಿ: 30 ಹಕ್ಕಿಗಳ ನಿಗೂಢ ಸಾವು

ರಾಯಚೂರು: ಜಿಲ್ಲೆಯ ಮಾನ್ವಿಯ ಗ್ರಾಮೀಣ ಪ್ರದೇಶದಲ್ಲಿ ಕಳೆದ 24 ಗಂಟೆಗಳ ಅವಧಿಯಲ್ಲಿ 14 ಕಾಗೆಗಳು ಸೇರಿ 30 ಹಕ್ಕಿಗಳು ನಿಗೂಢವಾಗಿ ಮೃತಪಟ್ಟಿವೆ. ಹಕ್ಕಿ ಜ್ವರದ ಭೀತಿಯ ಕಾರಣಕ್ಕೆ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವೈದ್ಯರ ತಂಡ ಬುಧವಾರ ಗ್ರಾಮಕ್ಕೆ ಭೇಟಿ ನೀಡಿ, ಮಾದರಿ ಸಂಗ್ರಹಿಸಿ ಪರೀಕ್ಷೆಗಾಗಿ ಬೆಂಗಳೂರಿನ ಪ್ರಯೋಗಾಲಯಕ್ಕೆ ಕಳುಹಿಸಿದೆ.

8ನೇ ಪುಟ ನೋಡಿ

ಎರಡು ಮಸೂದೆಗಳು ಸರ್ಕಾರಕ್ಕೆ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ಮಸೂದೆ-2024' ಮತ್ತು 'ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಮಸೂದೆ- 2024' ಅನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಗುರುವಾರ ರಾಜ್ಯ ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದಾರೆ.

ಈ ಎರಡೂ ಮಸೂದೆಗಳನ್ನು ಈ ಹಿಂದೆ ರಾಜ್ಯಪಾಲರು ಸ್ಪಷ್ಟೀಕರಣ ಕೇಳಿ ಸರ್ಕಾರಕ್ಕೆ ಹಿಂದಿರುಗಿಸಿದ್ದರು. ರಾಜ್ಯ ಸರ್ಕಾರ ಸ್ಪಷ್ಟನೆ ನೀಡಿ ಮತ್ತೆ ಸಲ್ಲಿಸಿತ್ತು. ಆದರೆ, ಸ್ಪಷ್ಟೀಕರಣಗಳು ತೃಪ್ತಿಕರವಾಗಿಲ್ಲ ಎಂದು ರಾಜ್ಯಪಾಲರು ಎರಡನೇ ಬಾರಿಗೆ ಹಿಂದಿರುಗಿಸಿದ್ದಾರೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯದ ಮೂಲಗಳು ತಿಳಿಸಿವೆ.

ಸಹಕಾರ ಸಂಘಗಳ ತಿದ್ದುಪಡಿ ಮಸೂದೆಗೆ ಸಂಬಂಧಿಸಿದಂತೆ, 'ನಾಮನಿರ್ದೇಶಿತ ಸದಸ್ಯರಿಗೆ ಮತದಾನದ ಹಕ್ಕು ನೀಡುವುದು ಸರಿಯಾದ ಕ್ರಮವಲ್ಲ. ಇದು ಸಮಾಜದ ಮೇಲೆ ಹಿಡಿತ ಸಾಧಿಸಲು ಅವಕಾಶ ಮಾಡಿಕೊಡುತ್ತದೆ. ಇದು ಪ್ರಜಾಸತ್ತಾತ್ಮಕವಾಗಿ ಸರಿಯಾದ ಕ್ರಮವಲ್ಲ. ಈ ತಿದ್ದುಪಡಿ ಚುನಾಯಿತ ಸದಸ್ಯರ ಹಕ್ಕುಗಳನ್ನು ಹಿಂಬಾಗಿಲಿನ ಮೂಲಕ ಕಸಿದುಕೊಳ್ಳಲು ಅವಕಾಶ ಮಾಡಿಕೊಡಲಿದೆ. ಸ್ವತಂತ್ರ ಮತ್ತು ನ್ಯಾಯಸಮ್ಮತ ಚುನಾವಣೆಯ ಹಿತದೃಷ್ಟಿಯಿಂದ, ಆರ್ಥಿಕ ಹೊರೆಯ ಕಾರಣಕ್ಕೆ ಸಹಕಾರಿ ಚುನಾವಣಾ ಪ್ರಾಧಿಕಾರಗಳನ್ನು ರದ್ದುಪಡಿಸುವ ಪ್ರಸ್ತಾವವು ಸೂಕ್ತವಲ್ಲ' ಎಂದು ರಾಜ್ಯಪಾಲರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

5B ಪುಟ ನೋಡಿ

ಇ-ಮೇಲ್ ಮೂಲಕ ಸಮನ್ಸ್, ನೋಟಿಸ್ ಜಾರಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇನ್ನು ಮುಂದೆ ರಾಜ್ಯದ ಎಲ್ಲಾ ನ್ಯಾಯಾಲಯಗಳು ಇ-ಮೇಲ್ ಮೂಲಕ ನೋಟಿಸ್ ಅಥವಾ ಸಮನ್ಸ್ ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ; ಈ ಕುರಿತಾದ ನಿಯಮಗಳಿಗೆ ಅಗತ್ಯ ತಿದ್ದುಪಡಿ ಮಾಡಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಈ ಸಂಬಂಧ ವಕೀಲ ಅನಿರುದ್ಧ ಸುರೇಶ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಅರ್ಜಿ ವಿಲೇವಾರಿ ಮಾಡಿದೆ. ಈ ಹಿಂದಿನ ವಿಚಾರಣೆ ವೇಳೆ ಖುದ್ದು ವಾದ ಮಂಡಿಸಿದ್ದ ಅರ್ಜಿದಾರ ಅನಿರುದ್ಧ ಸುರೇಶ್, 'ಇ-ಮೇಲ್ ಮೂಲಕ ಸಮನ್ಸ್ ಜಾರಿಗೊಳಿಸಲು ಅಧಿಸೂಚನೆ ಹೊರಡಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿದ್ದರು. ಇದನ್ನು ಮಾನ್ಯ ಮಾಡಿದ್ದ ನ್ಯಾಯಪೀಠ, 'ಇ-ಮೇಲ್ ಮೂಲಕ ನೋಟಿಸ್ ಜಾರಿಗಾಗಿ ನಿಯಮಗಳನ್ನು ಅನುಮೋದಿಸುವ ತುರ್ತು ಅವಶ್ಯವಿದೆ. ನಿಯಮಗಳ ತಿದ್ದುಪಡಿಗಾಗಿ ಮಾಡಿದ ಶಿಫಾರಸಿನ ಸ್ಥಿತಿಗತಿಯ ಕುರಿತಂತೆ ಫೆ. 25ರೊಳಗೆ ಮಾಹಿತಿ ನೀಡಬೇಕು' ಎಂದು ಸರ್ಕಾರಕ್ಕೆ ನಿರ್ದೇಶಿಸಿತ್ತು.

ಅನುಪಾಲನಾ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಿದ ಸರ್ಕಾರದ ಪರ ವಕೀಲರು, 'ಕರಡು ನಿಯಮಗಳನ್ನು ಇದೇ 17ರಂದು ಅನುಮೋದಿಸಲಾಗಿದ್ದು ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ. ಅದರಂತೆ ಹೈಕೋರ್ಟ್, ಜಿಲ್ಲಾ ನ್ಯಾಯಾಲಯಗಳು ಮತ್ತು ನ್ಯಾಯಮಂಡಳಿಗಳೂ ಸೇರಿದಂತೆ ಎಲ್ಲಾ ನ್ಯಾಯಾಲಯಗಳು ಎಲೆಕ್ಟ್ರಾನಿಕ್ ಮೇಲ್ ಮೂಲಕ ನೋಟಿಸ್ ಅಥವಾ ಸಮನ್ಸ್‌ಗಳನ್ನು ನೀಡುವಂತೆ ಆದೇಶಿಸುವ ಅಧಿಕಾರವನ್ನು ಹೊಂದಿವೆ' ಎಂದು ವಿವರಿಸಿದರು.



GET FREE DATES
ON THESE DATES!
28th Feb – Mar 2nd
₹499ರ ಮೌಲ್ಯದ ಯಾವುದೇ ಹೆಚ್ಚಿನ ಖರೀದಿಯೊಂದಿಗೆ
UP TO 40% OFF!*
FACTORY PRICE ADVANTAGE
*ಸ್ಟೋರ್ ಉತ್ಪನ್ನಗಳ ಮೇಲೆ
FREE
Bolas
Bolas® Black Dates Arabian
From UAE
• Soft • Chewy • Mildly Sweet
Net Weight: 150g
Bolas Arabian Dates 150g worth MRP
₹ 125/-
*ಕ್ರಿಯಾತ್ಮಕ ರಚನೆ
*ಷರತ್ತುಗಳು ಮತ್ತು ನಿಯಮಗಳು ಅನ್ವಯವಾಗುತ್ತವೆ. | *ಮೊದಲ 100 ಗ್ರಾಹಕರಿಗೆ ಮಾತ್ರ ಆಫರ್ ಲಭ್ಯ. | *ಆಫರ್ ಸ್ಟಾಕ್ ಇರುವವರೆಗೆ ಮಾತ್ರ ಮಾನ್ಯವಾಗಿರುತ್ತದೆ. | * ಪ್ರತಿ ಗ್ರಾಹಕ ಒಮ್ಮೆಮಾತ್ರ ಆಫರ್ ಪಡೆಯಬಹುದು.
*ದುರುಪಯೋಗದ ಸಂದರ್ಭದಲ್ಲಿ ಕೊಡುಗೆ ನಿರಾಕರಿಸುವ ಹಕ್ಕನ್ನು ಆಡಳಿತ ಮಂಡಳಿ ಕಾಯ್ದಿರಿಸಿಕೊಂಡಿದೆ.
DRY FRUITS | NUTS | SWEETS & MORE
FACTORY PRICE ADVANTAGE
ಬೋಳಾಸ್ Bolas
ಚೆನ್ನಪಟ್ಟಣ-9483548777 | ಕನಕಪುರ-9019963559 | ತುಮಕೂರು-9364009426 | ಬನಶಂಕರಿ-9364016910 | ಬಾಣಸವಾಡಿ-9364016909 | ಬೆಂಗಳೂರು ಮೀನಾಕ್ಷಿಮಾಲ್-9606019779 | ಬೆಂಗಳೂರು ಟಿಸಿ ಪಾಳ್ಯ-9364016907 | ಬಸವೇಶ್ವರ ನಗರ-9364016904 | ಗಾಂಧಿ ಬಝಾರ್- 9364016908 | ಹರಳೂರು-6364863287 | ಎಚ್.ಎಸ್.ಆರ್-6364863283 | ಜಯನಗರ-6364863281 | ನೆಲಮಂಗಲ-9364016903 | ನ್ಯೂ ತಿಪ್ಪಸಂದ್ರ ಮೈನ್ ರೋಡ್-6364863285 | ಆಫ್ ಸರ್ಜಾಪುರ ರೋಡ್-6364863286 | ಆರ್ ಟಿ ನಗರ-6364863284 | ಸಂಪಿಗೆ ರೋಡ್ ಮಲ್ಲೇಶ್ವರಂ-9364016905 | ಉತ್ತರಹಳ್ಳಿ-9364016911 | ವಿದ್ಯಾರಣ್ಯಪುರ-9364016902 | ವಿಜಯನಗರ ಕ್ವಾರ್ಡ್ ರೋಡ್-9364016906 | ವಿಲ್ಸನ್ ಗಾರ್ಡನ್6364863282 | ಮತ್ತಿಕೆರೆ-9364016901 | ಕೆಂಗೇರಿ-9364016916 | ಬಿಟಿಎಂ ಲೇಔಟ್-9364016917
/bolas.outlet
www.bolas.co.in

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪರೀಕ್ಷೆ ಬೆಂಗಳೂರಿನಲ್ಲಿ ಗುರುವಾರ ಆರಂಭವಾದ ರಾಷ್ಟ್ರೀಯ ತೋಟಗಾರಿಕಾ ಮೇಳದಲ್ಲಿ ಪ್ರದರ್ಶಿಸಲಾದ ಹಣ್ಣನ್ನು ಪರೀಕ್ಷಿಸಿದ ಯುವತಿ

ಪ್ರಧಾನಿ ಮೋದಿ ಕ್ಷಮೆಯಾಚನೆ
'ನನ್ನಿಂದ ಅಪಚಾರವಾಗಿದ್ದರೆ ಕ್ಷಮಿಸಿ' 9

2 ತಿಂಗಳಾದರೂ ಸಿಗದ ವೇತನ 5
'ಆಹ್ವಾನದ ಮೇರೆಗೆ ಡಿಕೆಶಿ ಭಾಗಿ' 5

ಅರಮನೆ ಮೈದಾನದ ಭೂಸ್ವಾಧೀನ ಪ್ರಕರಣ: ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತಾಕೀತು

ವಾರದಲ್ಲಿ ಟಿಡಿಆರ್ ಠೇವಣಿ ಇಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಸ್ತೆಗಳ ವಿಸ್ತರಣೆಗಾಗಿ ಸ್ವಾಧೀನಪಡಿಸಿ ಕೊಂಡಿರುವ ಅರಮನೆ ಮೈದಾನದ 15 ಎಕರೆಗೂ ಹೆಚ್ಚು ಭೂಮಿಗೆ ಸಂಬಂಧಿಸಿದಂತೆ ₹3,400 ಕೋಟಿಗೂ ಹೆಚ್ಚಿನ 'ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕು' (ಟಿಡಿಆರ್) ಪ್ರಮಾಣ ಪತ್ರಗಳನ್ನು ಒಂದು ವಾರದೊಳಗೆ ನ್ಯಾಯಾಲಯ ದಲ್ಲಿ ಠೇವಣಿ ಇಡುವಂತೆ ಕರ್ನಾಟಕ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಗುರುವಾರ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಎಂ.ಎಂ.ಸುಂದರೇಶ್ ಮತ್ತು ಅರವಿಂದ್ ಕುಮಾರ್ ಅವರ ಪೀಠವು ಕರ್ನಾಟಕ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿತು. ಸರ್ಕಾರದ ನಿಲುವು ಏಕರೂಪ ವಾಗಿಲ್ಲ. ಸರ್ಕಾರ ಆಗಾಗ ನಿಲುವನ್ನು ಬದಲಿಸುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿತು.

ಅರಮನೆ ಮೈದಾನ ಒಟ್ಟು 472 ಎಕರೆ 16 ಗುಂಟೆ ಜಾಗ ಹೊಂದಿದೆ. ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಅವರ ಕಾನೂನುಬದ್ಧ ಉತ್ತರಾಧಿಕಾರಿ ಮತ್ತು ಇತರರು ಸಲ್ಲಿಸಿದ ನ್ಯಾಯಾಂಗ ನಿಂದನೆ ಅರ್ಜಿಗಳು ಮತ್ತು ಇತರ ಪ್ರಕರಣ ಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಡಿಸೆಂಬರ್‌ನಲ್ಲಿ ಆದೇಶ ಹೊರಡಿಸಿತ್ತು. ಅರಮನೆ ಮೈದಾನಕ್ಕೆ ಹೊಂದಿ ಕೊಂಡಿರುವ ಪ್ರದೇಶ ಗಳಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿ ಮೌಲ್ಯಕ್ಕೆ ಅನುಗುಣವಾಗಿ ರಸ್ತೆ ವಿಸ್ತರಣೆ ಉದ್ದೇಶ ಕ್ಕಾಗಿ ಪಡೆದ ಅರಮನೆ ಜಾಗವನ್ನು ಮೌಲ್ಯೀಕರಿಸಿ, ವರ್ಗಾವಣೆ ಮಾಡಬಹುದಾದ ಟಿಡಿಆರ್ ನೀಡುವಂತೆ ನಿರ್ದೇಶನ ನೀಡಿತ್ತು. ಗುರುವಾರ ನಡೆದ ನ್ಯಾಯಾಂಗ ನಿಂದನೆ ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಹಾಗೂ ಬಿಡಿಎ ಆಯುಕ್ತ ಎನ್.ಜಯರಾಂ ಹಾಜರಿದ್ದರು.

ರಾಜ್ಯ ಸರ್ಕಾರ ಮತ್ತು ಅಧಿಕಾರಿಗಳ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲರಾದ ಕಪಿಲ್ ಸಿಬಲ್, ರಾಜೀವ್ ಧವನ್, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ, 'ಅರಮನೆ ಮೈದಾನ ವಿವಾದದಲ್ಲಿ ಹೈಕೋರ್ಟ್‌ನಲ್ಲಿ ರಾಜ್ಯ ಸರ್ಕಾರದ ಪರ ತೀರ್ಪು ಬಂದಿದೆ. ಮುಖ್ಯ ಮೇಲ್ಮನವಿಯನ್ನು ನ್ಯಾಯ ಪೀಠ ಇತ್ಯ-ರ್ಥಪಡಿಸಬೇಕು ಎಂದು ಕೋರಿದರು.

'ರಾಜ್ಯ ಸರ್ಕಾರದ ಪರವಾಗಿ ಹೈಕೋರ್ಟ್ ತೀರ್ಪು ನೀಡಿದೆ. ಜತೆಗೆ, ಸರ್ಕಾರವು ಈಚೆಗೆ ಸುಗ್ರೀವಾಜ್ಞೆ ಹೊರಡಿಸಿದೆ. ಈ ಜಾಗವನ್ನು 2024ರಲ್ಲಷ್ಟೇ ಸ್ವಾಧೀನಕ್ಕೆ ತೆಗೆದು ಕೊಂಡಿದ್ದೇವೆ' ಎಂದು ಕಪಿಲ್ ಸಿಬಲ್ ಪ್ರತಿಪಾದಿಸಿದರು.

ರಾಜವಂಶಸ್ಥರ ಪರ ವಾದ ಮಂಡಿಸಿದ ಹಿರಿಯ ವಕೀಲರಾದ ಎ.ಕೆ. ಗಂಗೂಲಿ, ರಾಕೇಶ್ ದ್ವಿವೇದಿ, ಮಾಧವಿ ದಿವಾನ್ ಮತ್ತು ಗೋಪಾಲ್ ಶಂಕರನಾರಾಯಣನ್, 'ರಾಜ್ಯ ಸರ್ಕಾರದ ಅಧಿಕಾರಿಗಳು 2024ರ ಡಿಸೆಂಬರ್ 10ರಂದು ನ್ಯಾಯಾಂಗ ನಿಂದನೆಗೆ ಗುರಿಯಾಗಿದ್ದಾರೆ' ಎಂದರು.

'ಸರ್ಕಾರವು ಒಂದು ವಾರದೊಳಗೆ ಟಿಡಿಆರ್ ಠೇವಣಿ ಇಡಲಿ. ನಾವು ಈ ಎಲ್ಲ ವಿಷಯವನ್ನು ಪರಿಗಣಿಸುತ್ತೇವೆ' ಎಂದು ಹೇಳಿದ ಪೀಠವು ವಿಚಾರಣೆಯನ್ನು ಮಾರ್ಚ್ 20ಕ್ಕೆ ಮುಂದೂಡಿತು.

5B ಪುಟ ನೋಡಿ

'ಖಜಾನೆಗೆ ಲಕ್ಷ ಕೋಟಿ ಹೊರೆ'

ರಾಜ್ಯ ಸರ್ಕಾರ ಈಗಾಗಲೇ ಸುಗ್ರೀವಾಜ್ಞೆ ಹೊರಡಿಸಿದೆ. ಹೀಗಾಗಿ, ರಸ್ತೆ ವಿಸ್ತರಣೆಗಾಗಿ 15 ಎಕರೆ 39 ಗುಂಟೆ ಜಾಗವನ್ನು ಸ್ವಾಧೀನಪಡಿಸಿಕೊಳ್ಳಲು ಬಯಸುತ್ತಿಲ್ಲ. 1994ರಲ್ಲಿ ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಲಾಗಿ-ತ್ತು. ಆದರೆ, ಜಾಗದ ಮೌಲ್ಯಮಾಪನವನ್ನು 2024ರ ಪ್ರಕಾರ ಮಾಡಲಾಗುತ್ತಿದೆ. ಪ್ರಸ್ತುತ ಟಿಡಿಆರ್ ನೀಡಲು ಅನುಮತಿಸಿದರೆ, 462 ಎಕರೆಗಳ ಸಂಪೂರ್ಣ ಸ್ವಾಧೀನ ಮಾಡಿದಾಗ ಟಿಡಿಆರ್ ರೂಪದಲ್ಲಿ ರಾಜ್ಯ ಒಂದು ಲಕ್ಷ ಕೋಟಿ ರೂಪಾಯಿಗಿಂತ ಹೆಚ್ಚು ಭರಿಸಬೇಕಾಗುತ್ತದೆ

ಕಪಿಲ್ ಸಿಬಲ್, ರಾಜ್ಯ ಸರ್ಕಾರದ ಪರ ವಕೀಲ

ಅರಮನೆ ಮೈದಾನ ಸ್ವಾಧೀನ ಹಾಗೂ ಟಿಡಿಆರ್ ನೀಡುವ ವಿಷಯದಲ್ಲಿ ರಾಜ್ಯದ ನಿಲುವು ದ್ವಂದ್ವದಿಂದ ಕೂಡಿದೆ

ಗೋಪಾಲ್ ಶಂಕರನಾರಾಯಣನ್, ಹಿರಿಯ ವಕೀಲ

ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಲು ರಾಜ್ಯ ಸರ್ಕಾರವು ತನ್ನದೇ ಆದ ಚತುರ ಮಾರ್ಗಗಳನ್ನು ಅಳವಡಿಸಿಕೊಂಡಿದೆ

ಮಾಧವಿ ದಿವಾನ್, ಹಿರಿಯ ವಕೀಲೆ

ಅಂಡರ್‌ಪಾಸ್‌ಗೆ ಬಳಕೆಯಾದ 1,270 ಚದರ ಮೀಟರ್ ಜಾಗಕ್ಕೆ ಟಿಡಿಆರ್ ನೀಡುತ್ತೇವೆ. ಆದರೆ, ಬಳಕೆಯಾಗದ ಭೂಮಿಗೂ ಟಿಡಿಆರ್ ಅನ್ನು ಠೇವಣಿ ಇಡುವಂತೆ ನ್ಯಾಯಾಲಯ ಸೂಚಿಸಿದೆ. ಜಾಗದ ಮಾಲೀಕರಿಗೆ ಅಭಿವೃದ್ಧಿ ಹಕ್ಕು ನೀಡಲು ನಾವು ನಿರಾಕರಿಸಿದ್ದೇವೆ. ನಾವು ನ್ಯಾಯಾಲಯದ ಆದೇಶ ಪಾಲನೆ ಮಾಡಬೇಕಿದೆ. ಜತೆಗೆ, ಸಾರ್ವಜನಿಕ ಹಿತಾಸಕ್ತಿ ಕಾಪಾಡಬೇಕಿದೆ

ಎ.ಎಸ್.ಪೊನ್ನಣ್ಣ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ

ಪುಸ್ತಕ ವೀಕ್ಷಣೆ ವಿಧಾನಸೌಧದ ಆವರಣದಲ್ಲಿ ಗುರುವಾರ ಆಯೋಜಿಸಿದ್ದ ಪುಸ್ತಕ ಮೇಳದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಾಹಿತಿ ಚಂದ್ರಶೇಖರ ಕಂಬಾರ ಅವರು ಪುಸ್ತಕ ಮಳಿಗೆಗಳನ್ನು ವೀಕ್ಷಿಸಲು ಆಗಮಿಸಿದ ಕ್ಷಣ ಚಿತ್ರ: ಎಂ.ಎಸ್.ಮಂಜುನಾಥ್

ಹೂಡಿಕೆ ಹೆಸರಿನಲ್ಲಿ ಮೋಸ • ಸೈಬರ್ ಅಪರಾಧ ಏರಿಕೆ

ತಿಂಗಳಲ್ಲೇ ₹110 ಕೋಟಿ ವಂಚನೆ

• ಆದಿತ್ಯ ಕೆ.ಎ.

ಬೆಂಗಳೂರು: ಮಹಾನಗರಗಳ ಪೈಕಿ ರಾಜಧಾನಿ ಬೆಂಗಳೂರು ಸೈಬರ್ ವಂಚಕ ನೆಚ್ಚಿನ ನಗರವಾಗಿದೆ. ದಿನದಿಂದ ದಿನಕ್ಕೆ ಸೈಬರ್ ಕಳ್ಳರ ಬಲೆಗೆ ಬೀಳುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಜನವರಿ ತಿಂಗಳಲ್ಲಿ ಬೆಂಗಳೂರು ನಿವಾಸಿಗಳೇ ₹110.50 ಕೋಟಿ ಕಳೆದುಕೊಂಡಿದ್ದಾರೆ.

ಆನ್‌ಲೈನ್ ವಹಿವಾಟು ಹೆಚ್ಚಿದ ಬಳಿಕ ಇದೇ ಮೊದಲ ಬಾರಿಗೆ ಒಂದೇ ತಿಂಗಳಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ವಂಚನೆ ನಡೆದಿರುವುದು ಸೈಬರ್ ಅಪರಾಧ ಸೇರಿದಂತೆ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾ ಗಿರುವ ಪ್ರಕರಣಗಳಿಂದ ಗೊತ್ತಾಗಿದೆ.

ಕಳೆದ ಮೂರು ವರ್ಷಗಳಲ್ಲಿ ತಿಂಗಳೊಂದರಲ್ಲಿ ₹50 ಕೋಟಿ ವಂಚನೆ ನಡೆದಿದ್ದೇ ಗರಿಷ್ಠವಾಗಿತ್ತು. ಆದರೆ, ಈ ವರ್ಷ ಜನವರಿಯಲ್ಲಿ ವಂಚನೆ ಮೊತ್ತ ಶತ ಕೋಟಿ ರೂಪಾಯಿ ದಾಟಿದೆ. ಹೂಡಿಕೆ ಹೆಸರಿನಲ್ಲಿ ಹೆಚ್ಚಿನ ವಂಚನೆ ಪ್ರಕರಣಗಳು ವರದಿಯಾ ಗುತ್ತಿವೆ. ಹಲವರು ಸೈಬರ್ ಕಳ್ಳರ ಗಾಳಕ್ಕೆ ಸುಲಭವಾಗಿ ಸಿಲುಕಿ ಹಣ ಕಳೆದು ಕೊಳ್ಳುತ್ತಿದ್ದಾರೆ ಎಂದು ಸೈಬರ್ ಪೊಲೀಸ್ ಮೂಲಗಳು ತಿಳಿಸಿವೆ.

'ಪತ್ರಿಕೆಗಳು, ವಿದ್ಯುನ್ಮಾನ ಮಾಧ್ಯಮ ಗಳಲ್ಲಿ ಸೈಬರ್ ವಂಚನೆ ಕುರಿತು ಎಚ್ಚರಿಕೆ ವಹಿಸುವಂತೆ ಜಾಹೀರಾತು ಪ್ರಕಟಿಸ ಲಾಗುತ್ತಿದೆ. ಮೊಬೈಲ್ ಫೋನ್ ಕಾಲರ್ ಟ್ಯೂನ್ ಮೂಲಕವೂ ಜಾಗೃತಿ ಮೂಡಿಸಲಾಗುತ್ತಿದೆ. ಆದರೂ, ಜನರು ಮುನ್ನೆಚ್ಚರಿಕೆ ವಹಿಸುತ್ತಿಲ್ಲ. ಸುಲಭವಾಗಿ ದುಪ್ಪಟ್ಟು ಹಣ ಸಿಗಲಿದೆ ಎನ್ನುವ ಕಾರಣಕ್ಕೆ ಹೂಡಿಕೆ ಮಾಡಿ ಮೋಸಕ್ಕೆ ಒಳಗಾಗು ತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

4ನೇ ಪುಟ ನೋಡಿ

ಜನವರಿಯಲ್ಲಿ ನಡೆದಿರುವ ವಂಚನೆ ಪ್ರಕರಣಗಳು

₹70 ಕೋಟಿ ಹೂಡಿಕೆ ಹೆಸರಿನಲ್ಲಿ ವಂಚನೆ	₹1,046 ಸೈಬರ್ ಅಪರಾಧ ಠಾಣೆಗಳಲ್ಲಿ ದಾಖಲಾದ ಪ್ರಕರಣಗಳು	₹87 ಲಕ್ಷ ಸಾರ್ವಜನಿಕರಿಗೆ ಹಿಂದಿರುಗಿಸಲು ಸಾಧ್ಯವಾಗಿರುವ ಮೊತ್ತ
7 ಪ್ರಕರಣಗಳಲ್ಲಿ ಆರೋಪಿಗಳ ಬಂಧನ	41 ಬಂಧಿತ ಆರೋಪಿಗಳ ಸಂಖ್ಯೆ	₹2.39 ಕೋಟಿ ಬ್ಯಾಂಕ್ ಖಾತೆಗಳಲ್ಲಿ ಮುಟ್ಟುಗೋಲು ಹಾಕಿಕೊಂಡಿರುವ ಮೊತ್ತ

ಇಡ್ಲಿ ತಯಾರಿ: ಪ್ಲಾಸ್ಟಿಕ್ ಬಳಕೆ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಲಾಸ್ಟಿಕ್ ಹಾಳೆ ಬಳಸಿ ತಯಾರಿಸಿದ ಇಡ್ಲಿ ಅಸುರಕ್ಷಿತ ಎನ್ನುವುದು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ ನಡೆಸಿದ ಪರೀಕ್ಷೆಯಿಂದ ದೃಢಪಟ್ಟಿದೆ. ಅದರ ಬೆನ್ನಲ್ಲೇ, ಪ್ಲಾಸ್ಟಿಕ್ ಬಳಕೆಯನ್ನು ಇಲಾಖೆ ನಿಷೇಧಿಸಿದೆ.

ಈ ಬಗ್ಗೆ ಸುದ್ದಿಗಾರರಿಗೆ ಗುರುವಾರ ಪ್ರತಿಕ್ರಿಯಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, 'ಹಿಂದೆ ಬಟ್ಟೆ ಉಪಯೋಗಿಸಿ ಇಡ್ಲಿ ತಯಾರಿಸುತ್ತಿದ್ದರು. ಪ್ಲಾಸ್ಟಿಕ್ ಹಾಳೆಗಳನ್ನು ಈಗ ಉಪಯೋಗಿಸಲಾಗುತ್ತಿದೆ. ಇಲಾಖೆಯ ಅಧಿಕಾರಿಗಳು 251 ಸ್ಥಳಗಳಲ್ಲಿ ಪರಿಶೀಲಿಸಿ, ಪರೀಕ್ಷೆ ಮಾಡಿದ್ದಾರೆ. 52 ಕಡೆ ಪ್ಲಾಸ್ಟಿಕ್ ಹಾಳೆ ಬಳಸಿ ಇಡ್ಲಿ ಬೇಯಿಸಿ ರುವುದು ಗಮನಕ್ಕೆ ಬಂದಿದೆ. ಪ್ಲಾಸ್ಟಿಕ್‌ನಲ್ಲಿ ಕ್ಯಾನ್ಸರ್‌ಕಾರಕ ಅಂಶ ಗಳು ಇರುತ್ತವೆ. ಅದು ಇಡ್ಲಿಗೆ ಸೇರಿ, ಆರೋಗ್ಯಕ್ಕೆ ಅಪಾಯ ಕಾರಿಯಾಗುವ ಸಂಭವವಿದೆ' ಎಂದು ಹೇಳಿದರು.

'ಪ್ಲಾಸ್ಟಿಕ್ ಹಾಳೆ ಬಳಕೆಯಿಂದ ಇಡ್ಲಿಯಲ್ಲಿ ಕಾರ್ಸಿನೋಜೆನಿಕ್ (ಕ್ಯಾನ್ಸರ್ ಕಾರಕ) ಅಂಶ ಸೇರ್ಪಡೆಯಾಗುವ ಸಾಧ್ಯತೆಯಿದೆ. ಇದು ಕ್ಯಾನ್ಸರ್‌ಗೆ ಕಾರಣವಾಗಲಿದೆ. ಯಾವುದೇ ಕಾರಣಕ್ಕೂ ಇಡ್ಲಿ ತಯಾರಿಕೆ ವೇಳೆ ಪ್ಲಾಸ್ಟಿಕ್ ಬಳಕೆಗೆ ಅವಕಾಶವಿಲ್ಲ. ಬಳಸಿದವರ ಮೇಲೆ ದಂಡ ವಿಧಿಸುವುದು ಸೇರಿ ವಿವಿಧ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ' ಎಂದು ಹೇಳಿದರು.

'ಹೋಟೆಲ್, ಉಪಾಹಾರ ಕೇಂದ್ರ ಸೇರಿ ವಿವಿಧೆಡೆ ಇಡ್ಲಿ ತಯಾರಿಕೆ ವೇಳೆ ಪ್ಲಾಸ್ಟಿಕ್ ಹಾಳೆ ಬಳಕೆ ನಿಷೇಧಿಸಲಾಗಿದೆ. ಎರಡು ದಿನಗಳಲ್ಲಿ ಈ ಬಗ್ಗೆ ಅಧಿಕೃತ ಸುತ್ತೋಲೆ ಹೊರಡಿಸಲಾಗುವುದು' ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ಬಾಲಕಿ ಮೇಲೆ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಶಿವಪುರಿ (ಮಧ್ಯಪ್ರದೇಶ): ಶಿವಪುರಿ ಜಿಲ್ಲೆಯ ದಿನಾರಾದಲ್ಲಿ ಐದು ವರ್ಷ ವಯಸ್ಸಿನ ಬಾಲಕಿಯೊಬ್ಬಳ ಮೇಲೆ ಅತ್ಯಾಚಾರ ಎಸಗಲಾಗಿದೆ. ಈ ಪ್ರಕರಣ ಬಹಿರಂಗವಾದ ನಂತರ ಅಲ್ಲಿ ಜನರ ಆಕ್ರೋಶದ ಕಟ್ಟೆ ಒಡೆದಿದೆ.

ಅತ್ಯಾಚಾರದ ಪರಿಣಾಮವಾಗಿ ಬಾಲಕಿಗೆ ತೀವ್ರ ಗಾಯಗಳು ಆಗಿದ್ದು, ಆಕೆಯ ಗುಪ್ತಾಂಗದ ಮೇಲೆ 28 ಕಡೆ ಹೊಲಿಗೆ ಹಾಕಬೇಕಾಗಿದೆ ಎಂದು ವೈದ್ಯರು ತಿಳಿಸಿರುವುದಾಗಿ ಎನ್‌ಡಿಟಿವಿ ವರದಿ ಹೇಳಿದೆ.

ಬಾಲಕಿಯ ಮೇಲೆ ಅತ್ಯಾಚಾರ ಎಸಗಿರುವುದು 16 ವರ್ಷ ವಯಸ್ಸಿನ ಬಾಲಕ ಎನ್ನಲಾಗಿದೆ. ಕಾನೂನು ಜೊತೆ ಸಂಘರ್ಷಕ್ಕೆ ಗುರಿಯಾಗಿರುವ ಈತನನ್ನು ಪೊಲೀಸರು ಬಂಧಿಸಿದ್ದಾರೆ. ಮದ್ಯದ ಅಮಲಿನಲ್ಲಿ ಈತ ಬಾಲಕಿಯ ತಲೆಯನ್ನು ಹಲವು ಬಾರಿ ಗೋಡೆಗೆ ಬಡಿದಿದ್ದಾನೆ ಎಂದು ವರದಿಯು ಹೇಳಿದೆ.

ಅತ್ಯಾಚಾರ ಎಸಗಿದವನಿಗೆ ಮರಣ ದಂಡನೆ ವಿಧಿಸಬೇಕು ಎಂಬ ಮನವಿ ಪತ್ರವನ್ನು ಎಲ್ಲ ಸಮುದಾಯಗಳ ಜನ ಒಟ್ಟಾಗಿ ಜಿಲ್ಲಾಧಿಕಾರಿ ಹಾಗೂ ಎಸ್‌ಪಿಗೆ ಸಲ್ಲಿಸಿದರು. ಮರಣ ದಂಡನೆಗೆ ಒತ್ತಾಯಿಸಿ ಜನರು ನಡೆಸಿದ ಪ್ರತಿಭಟನೆ ಸಂದರ್ಭದಲ್ಲಿ ಕಾಂಗ್ರೆಸ್, ಬಿಜೆಪಿ ಮುಖಂಡರೂ ಭಾಗಿಯಾಗಿದ್ದರು.

‘ಕೆಎಸ್‌ಆರ್‌ಟಿಸಿ ನೌಕರರ ಪರಿಸ್ಥಿತಿ ಸುಧಾರಿಸಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನಿಗಮಗಳ ನೌಕರರು ದಕ್ಷತೆಯಿಂದ ಮತ್ತು ಮಾನವೀಯವಾಗಿ ಕೆಲಸ ಮಾಡಲು ಬೇಕಾದ ಸೌಕರ್ಯ ಒದಗಿಸಲು, ಆರ್ಥಿಕ ಪರಿಸ್ಥಿತಿ ಸುಧಾರಿಸಲು ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಶನ್ ಬೇಸರ ವ್ಯಕ್ತಪಡಿಸಿದೆ.

ಕೆಎಸ್‌ಆರ್‌ಟಿಸಿ ತನ್ನ 66 ವರ್ಷಗಳ ಸುದೀರ್ಘ ಪ್ರಯಾಣದಲ್ಲಿ ಅನೇಕ ಸಾಧನೆಗಳನ್ನು ಮಾಡಿದೆ. ಜೊತೆ ಜೊತೆಗೆ ಏಳುಬೀಳುಗಳನ್ನು ಕಂಡಿದೆ. ಶಕ್ತಿ ಯೋಜನೆ ಜಾರಿಯಾದ ಬಳಿಕ ಮಹಿಳೆಯರು ಆರ್ಥಿಕ ಹೊರೆ ಇಲ್ಲದೇ 400 ಕೋಟಿ ಬಾರಿ ಪ್ರಯಾಣಿಸಿದ್ದಾರೆ. ನಾಲ್ಕು ಗೋಡೆಗಳ ಮಧ್ಯೆ ಉಳಿದವರೂ ಹೊರ ಬರುವಂತೆ ಮಾಡಿದೆ. ಸರ್ಕಾರವನ್ನು ಹೊರ-ತುಪಡಿಸಿದರೆ ಅತಿ ಹೆಚ್ಚು ಉದ್ಯೋಗವನ್ನು ಸಾರಿಗೆ ನಿಗಮಗಳು ನೀಡಿವೆ. ಆದರೆ, ನೌಕರ ವರ್ಗಗಳಲ್ಲಿ ಸಮಾಧಾನ ತರುವ ಕೆಲಸವಾಗಿಲ್ಲ ಎಂದು ಫೆಡರೇಷನ್ ಅಧ್ಯಕ್ಷ ಎಚ್‌. ವಿ. ಅನಂತಸುಬ್ಬರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ನಿಗಮಗಳ ಕಾರ್ಯಕ್ಷಮತೆ, ಆರ್ಥಿಕ ಪರಿಸ್ಥಿತಿ ಸುಧಾರಿಸಲು ಹಲವು ಸಮಿತಿಗಳು ರಚನೆಯಾಗಿ ಅನೇಕ ವರದಿ, ಶಿಫಾರಸುಗಳನ್ನು ನೀಡಿದ್ದರೂ ಅವುಗಳು ಜಾರಿಯಾಗಿಲ್ಲ. ಸಂಸ್ಥೆ ನಮ್ಮದು ಎಂಬ ಪ್ರಜ್ಞೆಯಿಂದ ಕೆಲಸ ಮಾಡುವ ಪ್ರಯತ್ನಗಳಾಗಿಲ್ಲ’ ಎಂದು ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರು ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು **ಮೆ॥ ಹೇಮಕುಂಡ್ ಇಂಜಿನೀಯರಿಂಗ್ ಟೆಕ್ನಿಕ್ಸ್**, ಪ್ಲಾಟ್ ನಂ. 23, ದೊಡ್ಡೇನಕ್ಕುಂಡಿ 2ನೇ ಹಂತ, ಕೈಗಾರಿಕಾ ವಲಯ, ಹೂಡಿ ಗ್ರಾಮದ ಸರ್ವೆ ನಂ. 22, ಕೃಷ್ಣರಾಜಪುರಂ ಹೋಬಳಿ, ಬೆಂಗಳೂರು ಪೂರ್ವ (ಹಿಂದೆ ದಕ್ಷಿಣ) ತಾಲ್ಲೂಕು, ಬೆಂಗಳೂರು, ಇವರಿಂದ ಖರೀದಿಸಲು ಇಚ್ಛಿಸಿರುತ್ತಾರೆ ಹಾಗೂ ದಿನಾಂಕ: 20/05/1992ರ ಮಾರಾಟ ಕ್ರಯ ಪತ್ರದ ಮೂಲಕ ಸ್ವಾಧೀನಪಡಿಸಿಕೊಂಡಿರುವ ಸ್ವತ್ತಾಗಿದ್ದು ಹಾಗೂ ಇವರೇ ಸದರಿ ಸ್ವತ್ತಿನ ಸಂಪೂರ್ಣ ಮಾಲೀಕರು ಎಂದು ಪ್ರತಿನಿಧಿಸುತ್ತಾರೆ.

ಯಾವುದೇ ವ್ಯಕ್ತಿಗಳಿಗೆ ಸದರಿ ಸ್ವತ್ತಿನ ವಿಚಾರವಾಗಿ ಯಾವುದೇ ಮಾನ್ಯ, ಸಮರ್ಥನೀಯ, ಕಾನೂನುಬದ್ಧ ಆಕ್ಷೇಪಣೆಗಳು/ಹಕ್ಕುಗಳು/ಹಕ್ಕು, ಶೀರ್ಷಿಕೆ ಮತ್ತು ಆಸಕ್ತಿಯನ್ನು ಹೊಂದಿದ್ದಲ್ಲಿ, ಈ ಪ್ರಕಟಣೆಯ ದಿನಾಂಕದಿಂದ 15 **ದಿನಗಳ** ಅವಧಿಯೊಳಗೆ ಕೆಳಗೆ ಸಹಿ ಮಾಡಿದವರಿಗೆ ಲಿಖಿತವಾಗಿ ತಮ್ಮ ತಕರಾರುಗಳುನ್ನು ದಾಖಲಿಸಲು ಈ ಮೂಲಕ ಸೂಚನೆ ನೀಡಲಾಗಿದೆ. ವಿಫಲವಾದಲ್ಲಿ ಕೆಳಗೆ ವಿವರಿಸಿದ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗೂ ಯಾವುದೇ ರೀತಿಯ ಹಕ್ಕು, ಶೀರ್ಷಿಕೆ ಅಥವಾ ಆಸಕ್ತಿ ಅಥವಾ ಯಾವುದೇ ಕಾನೂನುಬದ್ಧ ಹಕ್ಕು/ಆಕ್ಷೇಪಣೆಗಳಿಲ್ಲವೆಂದು ಪರಿಗಣಿಸಿ ಮಾರಾಟ ಪ್ರಕ್ರಿಯೆಯನ್ನು ಮುಂದುವರಿಸಲಾಗುತ್ತದೆ.

ಷೆಡ್ಯೂಲ್ ಸ್ವತ್ತು

ಬೆಂಗಳೂರು, ಬೆಂಗಳೂರು ಪೂರ್ವ (ಹಿಂದೆ ದಕ್ಷಿಣ) ತಾಲ್ಲೂಕು, ಕೃಷ್ಣರಾಜಪುರಂ ಹೋಬಳಿ, ಹೂಡಿ ಗ್ರಾಮದ ಸರ್ವೆ ನಂ. 22ರಲ್ಲಿರುವ ಸ್ಥಿರಾಸ್ತಿ ಸ್ವತ್ತು ಪ್ಲಾಟ್ ನಂ. 23, ದೊಡ್ಡೇನಕ್ಕುಂಡಿ 2ನೇ ಹಂತ, ಕೈಗಾರಿಕಾ ವಲಯ, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿರುವ (ಬಿಬಿಎಂಪಿ), ಅಳತೆ ಪೂರ್ವದಿಂದ ಪಶ್ಚಿಮಕ್ಕೆ 38.00 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಮಕ್ಕೆ 55.50 ಮೀಟರ್‌ಗಳು, ಒಟ್ಟು ವಿಸ್ತೀರ್ಣ 2109 ಚದರ ಮೀಟರ್‌ಗಳು ಹಾಗೂ ಇದರ ಚೆಕ್ಕುಬಂದಿ–

ಪೂರ್ವಕ್ಕೆ : ಫ್ಲಾಟ್ ನಂ. 22,
ಪಶ್ಚಿಮಕ್ಕೆ : ರಸ್ತೆ,
ಉತ್ತರಕ್ಕೆ : ಕೆಇಬಿ ಜಮೀನು,
ದಕ್ಷಿಣಕ್ಕೆ : ಫ್ಲಾಟ್ ನಂ. 24.

ಮಹೇಶ್ .ಡಿ, ವಕೀಲರು
ನೋಬಲ್ ಲಾ ಅಸೋಸಿಯೇಟ್ಸ್, ವಕೀಲರು
ನಂ.76, ರಂಗರಾವ್ ರಸ್ತೆ, ಶಂಕರಪುರ, ಬಸವನಗುಡಿ, ಬೆಂಗಳೂರು–560 004. ಮೊಬೈಲ್: 9880299441
E-Mail: maheshdnla@gmail.com

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಎಲ್7255141
ದಿನಾಂಕ : 17–02–2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂಗಳ ಸರಬರಾಜಿಗಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ಸಂಕ್ಷಿಪ್ತ ವಿವರಣೆ : 15/5ಟಿ ಸಾಮರ್ಥ್ಯದ ಇಒಟಿ (ಎಲೆಕ್ಟ್ರಿಕ್ ಓವರ್‌ಹೆಡ್ ಟ್ರಾವೆಲಿಂಗ್) ಕ್ರೇನ್‌ಗಳ ವಿನ್ಯಾಸ, ತಯಾರಿಕೆ, ಸರಬರಾಜು, ಸ್ಥಾಪನೆ, ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು. (**ಟೆಂಡರ್ ಸಂ. ಎಲ್7255141**) (**ಪ್ರಮಾಣ : 01 ಸಂಖ್ಯೆ**)
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **11–03–2025 ರಂದು 10:30 ಗಂಟೆಯವರೆಗೆ**
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು ಹುಬ್ಬಳ್ಳಿ
ಪಿಯುಬಿ/804/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024–25
South Western Railway - SWR | SWRRLY | SWRRLY

Dr.AMBEDKAR INSTITUTE OF TECHNOLOGY
BDA Outer Ring Road, Mallathahally, Bengaluru – 560 056
Tel – 080- 23211232 & Mob No -9986003865
A I T/SS/3142/2024-25 Date: 27.02.2025

TENDER NOTIFICATION

Sealed quotations are invited from Reputed/ Authorized firms for supply, installation, testing & commissioning of the following:
A) 1/10/56 G Core switch and 1/10G Transceiver Components to Data Centre.
B) Wi-Fi Network to Dr.AIT Hostels.
Details and specification of requirements can be downloaded from college website **www.drait.edu.in.** The sealed quotation should be submitted on or before **25.03.2025 by 1:00 PM** along with a DD of **Rs.500/-** for each item. Quotations will be opened on the same day i.e. **25.03.2025 at 4.00 PM.**

Sd/- Principal Sd/- Secretary, PVPWT

ವಿಧಾನಸೌಧದ ಆವರಣದಲ್ಲಿ ಗುರುವಾರ ಆರಂಭವಾದ ಪುಸ್ತಕ ಮೇಳದಲ್ಲಿ ಪಾಲ್ಗೊಂಡಿದ್ದ ಸಾರ್ವಜನಿಕರು (ಎಡಚಿತ್ರ) ವೈವಿಧ್ಯಮಯ ಪುಸ್ತಕಗಳನ್ನು ವೀಕ್ಷಿಸಿದ ಪುಸ್ತಕ ಪ್ರಿಯರು ಚಿತ್ರಗಳು: ಎಂ.ಎಸ್‌.ಮಂಜುನಾಥ್

ಪ್ರತಿ ವರ್ಷವೂ ವಿಧಾನಸೌಧದಲ್ಲಿ ಪುಸ್ತಕ ಹಬ್ಬ: ಮುಖ್ಯಮಂತ್ರಿ ಸಿದ್ದರಾಮಯ್ಯ

ಒಂದೇ ಸೂರಿನಡಿ ಬಹು ಭಾಷಾ ಪುಸ್ತಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ತಲೆಮಾರಿನ ಜನರಲ್ಲಿ ಪುಸ್ತಕ ಪ್ರೀತಿ ಬೆಳೆಸಲು ವಿಧಾನಸೌಧದ ಆವರಣದಲ್ಲಿ ಇದೇ ಮೊದಲ ಬಾರಿ ಆಯೋಜಿಸಿರುವ ‘ಪುಸ್ತಕ ಹಬ್ಬ’ದಲ್ಲಿ ಕನ್ನಡ ಸೇರಿದಂತೆ ಹಲವು ಭಾಷೆಯ ಪುಸ್ತಕಗಳು ಗಮನ ಸೆಳೆದವು.

ಕರ್ನಾಟಕ ವಿಧಾನಸಭೆ ಸಚಿವಾಲಯ ಆಯೋಜಿಸಿರುವ ನಾಲ್ಕು ದಿನಗಳ ಪ್ರಥಮ ಪುಸ್ತಕ ಮೇಳದಲ್ಲಿ 151 ಪುಸ್ತಕ ಮಳಿಗೆಗಳಿಗೆ ಅವಕಾಶ ಮಾಡಿಕೊಡಲಾಗಿದ್ದು, ಕನ್ನಡೇತರ ಭಾಷೆಯ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಶೇ 20ರಷ್ಟು ಮಳಿಗೆಗಳನ್ನು ಮೀಸಲಿಡಲಾಗಿದೆ. ಮೊದಲ ದಿನ ಸಾಹಿತ್ಯಾಸಕ್ತರು, ಪುಸ್ತಕ ಪ್ರಿಯರ ಸಂಖ್ಯೆ ಕಡಿಮೆ ಇದ್ದರೂ, ಭೇಟಿ ನೀಡಿದವರು ಪುಸ್ತಕಗಳ ವೈವಿಧ್ಯ ಕಂಡು ಬೆರಗಾದರು. ಬಯಸಿದ ಪುಸ್ತಕಗಳನ್ನು ರಿಯಾಯಿತಿ ದರದಲ್ಲಿ ಖರೀದಿಸಿದರು.

> **ನಾಲ್ಕು ವರ್ಷಗಳಿಂದ ಸ್ಥಗಿತವಾಗಿರುವ ಪುಸ್ತಕ ಖರೀದಿ ಪ್ರಕ್ರಿಯೆಯನ್ನು ಸರ್ಕಾರ ಆರಂಭಿಸಬೇಕು. ಪ್ರಕಾಶಕರ ನೆರವಿಗೆ ನಿಲ್ಲಬೇಕು**
> **ಬೊಳುವಾರು ಮಹಮ್ಮದ್ ಕುಂಞಿ** ಸಾಹಿತಿ

ಪ್ರತಿ ವರ್ಷವೂ ‘ಪುಸ್ತಕ ಹಬ್ಬ’: ‘ಪ್ರತಿ ವರ್ಷವೂ ‘ಪುಸ್ತಕ ಹಬ್ಬ’ ಆಯೋಜಿಸಲು ಅಗತ್ಯ ಅನುದಾನ ಒದಗಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ಪುಸ್ತಕ ಹಬ್ಬ’ ಉದ್ಘಾಟಿಸಿ ಮಾತನಾಡಿದ ಅವರು, ‘ಸಾಹಿತ್ಯದ ಓದು ಮನುಷ್ಯನಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುತ್ತದೆ. ಪ್ರತಿಯೊಬ್ಬರೂ ಪುಸ್ತಕ ಖರೀದಿಸಿ, ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಮಕ್ಕಳನ್ನು ಮೊಬೈಲ್, ಸಾಮಾಜಿಕ ಜಾಲತಾಣಗಳನ್ನು ಬಳಕೆ ಮಾಡುವುದರಿಂದ ಮುಕ್ತಗೊಳಿಸಬೇಕು’ ಎಂದು ಸಲಹೆ ನೀಡಿದರು.

ಸಾಹಿತಿಗಳಾದ ಚಂದ್ರಶೇಖರ ಕಂಬಾರ, ವಸುಧೇಂದ್ರ, ಪ್ರಕಾಶ್ ಮೂರ್ತಿ, ಬೊಳುವಾರು ಮಹಮ್ಮದ್ ಕುಂಞಿ, ಗೋವಾ ಸಾಹಿತಿ ದಾಮೋದರ್ ಮೌಜೊ ಅವರನ್ನು ಸನ್ಮಾನಿಸಲಾಯಿತು.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಫರೀದ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಉಪಸ್ಥಿತರಿದ್ದರು.

ಫಾರಂ ನಂ. 26
(ಕಂಪನಿಗಳ (ಇನ್ಕಾರ್ಪೊರೇಶನ್) ನಿಯಮಗಳು, 2014ರ ನಿಯಮ 30ರ ಪ್ರಕಾರ)
ಕೇಂದ್ರ ಸರ್ಕಾರದ ಸಮಕ್ಷಮದಲ್ಲಿ (ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಲಯ, ಹೈದರಾಬಾದ್)
ಕಂಪನಿಗಳ ಕಾಯ್ದೆ, 2013, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 13(4)ರ ಮತ್ತು ಕಂಪನಿಗಳ (ಇನ್ಕಾರ್ಪೊರೇಶನ್) ನಿಯಮಗಳು, 2014ರ ನಿಯಮ 30(6)(ಎ)ರ ವಿಷಯದಲ್ಲಿ
ಮತ್ತು
ಜೆನಿತ್ ಸಾಫ್ಟ್‌ವೇರ್ ಲಿಮಿಟೆಡ್ (ಸಿಐಎನ್ U72200KA1996PLC020609) ನೋಂದಾಯಿತ ಕಚೇರಿ ವಿಳಾಸ ನಂ. 18, 4ನೇ ‘ಸಿ’ ಅಡ್ಡರಸ್ತೆ, 5ನೇ ಬ್ಲಾಕ್, ಕೈಗಾರಿಕಾ ಬಡಾವಣೆ, ಕೋರಮಂಗಲ, ಬೆಂಗಳೂರು 560 095, ಕರ್ನಾಟಕ ಇವರ ವಿಷಯದಲ್ಲಿ
...ಅರ್ಜಿದಾರರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಈ ಮೇಲ್ಕಂಡ ಕಂಪನಿಯು ಫೆಬ್ರವರಿ 24, 2025 ರಂದು ಹಮ್ಮಿಕೊಂಡಿದ್ದ ತನ್ನ ಅಸಾಧಾರಣ ಸಾಮಾನ್ಯ ಸಭೆ (EGM)ಯಲ್ಲಿ ಹೊರಡಿಸಲಾಗಿರುವ ವಿಶೇಷ ಠರಾವಿನ ಮೆಮೊರಾಂಡಮ್ ಆಫ್ ಅಸೋಸಿಯೇಷನ್‌ನ ಮಾರ್ಪಾಡನ್ನು ಖಚಿತಪಡಿಸಿ, ಕಂಪನಿಯು ತನ್ನ ನೋಂದಾಯಿತ ಕಚೇರಿಯನ್ನು “ಕರ್ನಾಟಕ ರಾಜ್ಯ” ದಿಂದ “ಮಹಾರಾಷ್ಟ್ರ ರಾಜ್ಯಕ್ಕೆ” ಬದಲಾಯಿಸುವಿಕೆಯನ್ನು ಬಲಪಡಿಸಬೇಕೆಂದು ಕೋರಿ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 13ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಉದ್ದೇಶಿಸಿರುತ್ತದೆ.

ಕಂಪನಿಯ ಉದ್ದೇಶಿತ ನೋಂದಾಯಿತ ಕಚೇರಿ ಬದಲಾಯಿಸುವಿಕೆಯ ಪ್ರಸ್ತಾವಣೆಯಿಂದಾಗಿ ಯಾವುದೇ ವ್ಯಕ್ತಿಯ ಹಿತಾಸಕ್ತಿಗೆ ಧಕ್ಕೆ ಉಂಟಾಗುವಂತಿದ್ದಲ್ಲಿ, ಅಂತಹವರು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ, ತಮ್ಮ ಹಿತಾಸಕ್ತಿಯ ಸ್ವರೂಪ ಮತ್ತು ವಿರೋಧದ ಹಿನ್ನಲೆಗಳನ್ನು ನಮೂದಿಸಿರುವ ಒಂದು ಪೂರಕ ಅಫಿಡವಿಟ್ ಸಮೇತ ತಮ್ಮ ಆಕ್ಷೇಪಣೆಗಳನ್ನು ನೋಂದಾಯಿತ ಅಂಚೆ ಮೂಲಕ ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಲಯ, 3ನೇ ಮಹಡಿ, ಕಾರ್ಪೊರೇಟ್ ಭವನ, ಬಂಡ್ಲಗುಡ, ನಾಗೊಳೆ, ತಟ್ಟಿನ್ನರಂ ಗ್ರಾಮ, ಹಯಾತ್ ನಗರ ಮಂಡಲ, ರಂಗಾರೆಡ್ಡಿ ಜಿಲ್ಲೆ, **ಹೈದರಾಬಾದ್ 500068, ತೆಲಂಗಾಣ ರಾಜ್ಯ** ವಿಳಾಸಕ್ಕೆ ಸಲ್ಲಿಸತಕ್ಕದ್ದು ಹಾಗೂ ಅದರ ಒಂದು ಪ್ರತಿಯನ್ನು ಕೆಳಕಂಡ ಕಂಪನಿಯ ನೋಂದಾಯಿತ ಕಚೇರಿ ವಿಳಾಸಕ್ಕೆ ಕೂಡ ರವಾನಿಸುವುದು:
ಜೆನಿತ್ ಸಾಫ್ಟ್‌ವೇರ್ ಲಿಮಿಟೆಡ್
ನಂ. 18, 4ನೇ ‘ಸಿ’ ಅಡ್ಡರಸ್ತೆ, 5ನೇ ಬ್ಲಾಕ್, ಕೈಗಾರಿಕಾ ಬಡಾವಣೆ, ಕೋರಮಂಗಲ, ಬೆಂಗಳೂರು 560095, ಕರ್ನಾಟಕ.

ಅರ್ಜಿದಾರರ ಪರವಾಗಿ
ಜೆನಿತ್ ಸಾಫ್ಟ್‌ವೇರ್ ಲಿಮಿಟೆಡ್
ಸಹಿ/–
ದಿನಾಂಕ: 28.02.2025
ಸ್ಥಳ: ಬೆಂಗಳೂರು
ಹರೀಶ್ ದೇಸಾಯಿ, ನಿರ್ದೇಶಕರು (ಡಿಐಎನ್: 00350792)

PUBLIC NOTICE

Notice is hereby given to the public at large that we are investigating the title and ownership rights in respect of the immovable Property belonging to Mr. Chandrashekar Shivshankar, Mr. Balachandar Mahadevan and others, which is morefully described in the Schedule hereunder and hereinafter referred to as “Schedule Property”.
All persons/entities including an individual, Hindu Undivided Family, financial institutions, non-banking financial institutions, lenders and/or creditors having any right, title, interest, claim in respect of the Schedule Property thereof by way of inheritance, bequest, transfer, mortgage, pledge, charge, lien, license, assignment, tenancy, gift, encumbrance, family arrangements/settlement, release, succession, decree or order of any competent court of law, contracts/agreements, development rights, partnership, right of way, contracts or any other liability or any commitment thereof by whatever nature, are hereby requested to intimate in writing along with documentary evidence to the undersigned at the address mentioned below within Ten (10) days from the date of publication of this notice, failing which it shall be deemed that they have given up such claims and further such claims shall not be enforceable/binding on the ownership rights of the land owners and the same shall be treated as clear and marketable.

SCHEDULE PROPERTY

All that piece and parcel of the converted land bearing Survey No.19/2, measuring 1 Acre 16 Guntas or 60984 Square Feet, [acquired under three registered Sale Deeds], situated at Venkateshapura Village, Yelahanka Hobli, Bangalore North Taluk, Bangalore Urban District, converted as per the Official Memorandum bearing No.B.DIS.ALN. SR(NA)239/02-03, dated 25/01/2003, issued by the Deputy Commissioner, Bangalore District, now coming within the limits of BBMP Ward No.05, Bangalore and commonly bounded on: **East by** : Road measuring 30' X 500' equivalent to 14 Guntas formed in same survey No.19/2 & thereafter private property, **West by** : Land bearing Survey No.20, **North by** : Property belongs to BDA, **South by** : Portion of Land in Sy. No.19/2, msg 1 Acre.

R PURSHOTAM, Advocate & Legal Consultant
M/s RPM ASSOCIATES, #7, I Floor, Jayashri Building, Yamunabai Road, Madhavanagar, Bangalore – 560 001, Mob : 9980200300

ಯುವಜನರಿಗೆ ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಕರೆ

‘ಗಾಂಧೀಜಿ ಆದರ್ಶ, ಮೌಲ್ಯ ಪಾಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗಾಂಧೀಜಿ ಅವರ ಅಹಿಂಸಾ ತತ್ವಗಳು ಮತ್ತು ಸರ್ವೋದಯ ಸಿದ್ಧಾಂತಗಳನ್ನು ಯುವಜನರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುನ್ನಡೆಯಬೇಕು’ ಎಂದು ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ಹೇಳಿದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ‘ಗಾಂಧಿ ಸಿನಿಮಾ ಕ್ಲಬ್’ ಉದ್ಘಾಟಿಸಿ, ಸಂವಾದ ಸರಣಿಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ‘ಗಾಂಧೀಜಿ ಅವರ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ತಪ್ಪು ಮಾಹಿತಿಗಳನ್ನು ಹರಿಬಿಡಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಅವರ ಬಗ್ಗೆ ವಾಸ್ತವ ತಿಳಿದುಕೊಳ್ಳಲು ಸಾಹಿತ್ಯ ಕೃತಿಗಳನ್ನು ಓದಬೇಕು. ಗಾಂಧೀಜಿ ಅವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದ ಬಳಿಕ ಸ್ವಾತಂತ್ರ್ಯ ಹೋರಾಟದ ಸ್ವರೂಪವನ್ನೇ ಬದಲಾಯಿಸಿದರು’ ಎಂದರು.

‘ಗಾಂಧೀಜಿ ಅವರ ಜೀವನ ಚರಿತ್ರೆ ಹಾಗೂ ತತ್ವಗಳ ಮೇಲೆ ಅನೇಕ ಚಲನಚಿತ್ರಗಳು ಬಂದಿವೆ. ಅವರ ಹೆಸರನ್ನು ಬಳಸಿಕೊಂಡು ಕಮರ್ಷಿಯಲ್ ಚಿತ್ರಗಳನ್ನೂ ನಿರ್ಮಿಸಲಾಗಿದೆ. ಇವುಗಳ ನಡುವಿನ ವ್ಯತ್ಯಾಸವನ್ನು ಗುರುತಿಸಬೇಕು. ಗಾಂಧೀಜಿ ಅವರು ಭಿನ್ನಾಭಿಪ್ರಾಯ ಇರುವ ವ್ಯಕ್ತಿಗಳ ಜತೆಗೂ ಆರೋಗ್ಯಕರ ಸಂವಾದ ನಡೆಸಿ, ವಿಶ್ವಾಸಕ್ಕೆ ಪಡೆಯುತ್ತಿದ್ದರು. ಇಂದಿನ ಪರಿಸ್ಥಿತಿಗೆ ಈ ರೀತಿಯ ಸಂವಾದಗಳು ಅಗತ್ಯ’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗಿರೀಶ್ ಕಾಸರವಳ್ಳಿ ಅವರು (ಎಡದಿಂದ ಮೂರನೆಯವರು) ‘ಗಾಂಧಿ ಸಿನಿಮಾ ಕ್ಲಬ್’ ಉದ್ಘಾಟಿಸಿದರು. (ಎಡದಿಂದ) ವೂಡೇ ಪಿ. ಕೃಷ್ಣ, ಎನ್‌ ಆರ್‌ ವಿಶುಕುಮಾರ್, ಇ.ಕೆ. ಮೆನನ್, ಕೊಂಡಜ್ಜಿ ಮೋಹನ್ ಮತ್ತು ವಿಜಯ್ ಹನಕೆರೆ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ‘ನಿಧನದ ನಂತರವೂ ತತ್ವಾದರ್ಶಗಳು ಶಾಶ್ವತವಾಗಿ ಉಳಿಯುತ್ತವೆ. ಗಾಂಧೀಜಿ ಅವರ ತತ್ವಾದರ್ಶಗಳನ್ನು ಜನರು ಮರೆಯಬಾರದು. ಅವರ ತತ್ವ, ಸಿದ್ಧಾಂತ, ವಿಚಾರಗಳು ಸರ್ವಕಾಲಕ್ಕೂ ಪ್ರಸ್ತುತ’ ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಕಾರ್ಯಾಧ್ಯಕ್ಷ ಎನ್‌.ಆರ್‌. ವಿಶುಕುಮಾರ್, ‘ಗಾಂಧಿ ಮತ್ತು ಅಂಬೇಡ್ಕರ್ ಜಗತ್ತಿನ ಎರಡು ಕಣ್ಣುಗಳು. ಇಂತಹ ವ್ಯಕ್ತಿಗಳ ಮೇಲೆ ಅನಗತ್ಯ ದ್ವೇಷ ಸಾಧಿಸಬಾರದು’ ಎಂದು ಹೇಳಿದರು.

ವಿಜಯನಗರ ಕಾಲೇಜಿನ ಸ್ನಾತಕೋತ್ತರ ಪದವಿ ವಿದ್ಯಾರ್ಥಿ ಶರಣ ಬಸವ ಅವರು ‘ಗಾಂಧೀಜಿ ಅವರ ತತ್ವಾದರ್ಶಗಳ ಪ್ರಸ್ತುತತೆ’ ಬಗ್ಗೆ ಮಾತನಾಡಿದರು.

ಬಳಿಕ ‘ಗಾಂಧಿ’ ಸಿನಿಮಾ ಪ್ರದರ್ಶಿಸಲಾಯಿತು. ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಚಲನಚಿತ್ರ ವೀಕ್ಷಿಸಿದರು.

ಕೆಂಪೇಗೌಡ ಬಡಾವಣೆ ಡಾಂಬರೀಕರಣಕ್ಕೆ 2 ವರ್ಷ

ಬಿಡಿಎ ನಿರ್ಧಾರಕ್ಕೆ ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯ (ಎನ್‌ಕೆಪಿಎಲ್) ಆರು ಬ್ಲಾಕ್‌ಗಳ ರಸ್ತೆಗಳ ಡಾಂಬರೀಕರಣಕ್ಕೆ ಎರಡು ವರ್ಷ ಕಾಲಾವಧಿ ನಿಗದಿಪಡಿಸಿ ಟೆಂಡರ್ ಕರೆದಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ವಿರುದ್ಧ ಎನ್‌ಕೆಪಿಎಲ್ ಮುಕ್ತ ವೇದಿಕೆ ಆಕ್ರೋಶ ವ್ಯಕ್ತಪಡಿಸಿದೆ.

‘ಕೆಂಪೇಗೌಡ ಬಡಾವಣೆಗೆ ಮೂಲಸೌಕರ್ಯ ಕಲ್ಪಿಸುವಲ್ಲಿ ಪ್ರಾಧಿಕಾರವು ವಿಳಂಬ ನೀತಿ ಅನುಸರಿಸುತ್ತಿದೆ. ಹತ್ತು ವರ್ಷಗಳಿಂದ ಮೂಲಸೌಕರ್ಯ ಕೊರತೆಯಿಂದ ನಿವೇಶನಗಳ ಮಾಲೀಕರು ಮನೆಗಳನ್ನು ಕಟ್ಟಿಕೊಳ್ಳಲು ಆಗುತ್ತಿಲ್ಲ. ಬಿಡಿಎ ಕೇವಲ ಸುಳ್ಳು ಭರವಸೆಗಳನ್ನು ನೀಡಿದೆ. ಡಾ.ಶಿವರಾಮ ಕಾರಂತ ಬಡಾವಣೆ ಮಾದರಿಯಲ್ಲೇ ಎನ್‌ಕೆಪಿಎಲ್ ಬಡಾವಣೆಯ ರಸ್ತೆಗಳ ಡಾಂಬರೀಕರಣಕ್ಕೆ ಬಹು ಏಜೆನ್ಸಿ ವಿಧಾನ ಅಳವಡಿಸಿಕೊಳ್ಳಬೇಕು’ ಎಂದು ವೇದಿಕೆ ಅಧ್ಯಕ್ಷ ಚನ್ನಬಸವರಾಜ ಆಗ್ರಹಿಸಿದ್ದಾರೆ.

ಶಿವರಾಮ ಕಾರಂತ ಬಡಾವಣೆ ನಿರ್ಮಾಣ ಯೋಜನೆಯಲ್ಲಿ ಒಂಬತ್ತು ಏಜೆನ್ಸಿಗಳನ್ನು (ಪ್ರತಿ ಬ್ಲಾಕ್‌ಗೆ ಒಂದು) ಬಿಡಿಎ ಬಳಸಿತ್ತು. ಇದರಿಂದ ಕಾಮಗಾರಿ ಬೇಗ ಪೂರ್ಣಗೊಂಡಿತ್ತು. ಆದರೆ, ಕೆಂಪೇಗೌಡ ಬಡಾವಣೆಗೆ ಈ ಮಾದರಿಯನ್ನು ಬಳಸದಿರುವುದು ಸಂಶಯಕ್ಕೆ ಎಡೆಮಾಡಿ ಕೊಟ್ಟಿದೆ ಎಂದು ತಿಳಿಸಿದ್ದಾರೆ.

ಆರು ಬ್ಲಾಕ್‌ಗಳ ರಸ್ತೆಗಳ ಡಾಂಬರೀಕರಣವನ್ನು ಒಂದೇ ಟೆಂಡರ್‌ನಡಿ ಮಾಡಲು ಮುಂದಾಗಿದೆ. ವಿಧಾನಸಭೆ ಅರ್ಜಿ ಸಮಿತಿ ಸಭೆಯಲ್ಲಿ, ‘ಕೆಂಪೇಗೌಡ ಬಡಾವಣೆಯಲ್ಲಿ ಮೂಲ ಸೌಕರ್ಯ ಒದಗಿಸುವ ಕಾಮಗಾರಿ ಶೇಕಡ 80ರಷ್ಟು ಪೂರ್ಣಗೊಂಡಿದೆ’ ಎಂದು ಬಿಡಿಎ ಅಧಿಕಾರಿಗಳು ನೀಡಿರುವ ಹೇಳಿಕೆಯ ಸತ್ಯಾಸತ್ಯತೆ ಪರಿಶೀಲಿಸಬೇಕಿದೆ. ಡಾಂಬರೀಕರಣಕ್ಕೆ ಎರಡು ವರ್ಷ ಸಮಯ ನಿಗದಿಪಡಿಸಿರುವುದು ಸರಿಯಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸುಧಾ, ಮಯೂರ ಓದಿರಿ

ನೈಋತ್ಯ ರೈಲ್ವೆ
ಇ-ಟೆಂಡರು ಸೂಚನೆ ಸಂ. 42 UBL 2024-25
ದಿನಾಂಕ: 19.02.2025
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು (ಐಆರ್‌ಇಪಿಎಸ್) ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗ: ಗದಗ–ಹೊಟಗಿ (ಜಿಡಿಜಿ–ಹೆಚ್‌ಜಿ) ವಿಭಾಗ: ಮುಗಲೊಲ್ಲಿ – ಜಾಡರಮಕುಂಟಿ (ಎಂಜಿಹೆಚ್–ಜೆಆರ್‌ಕೆಟಿ) ವಿಭಾಗದಲ್ಲಿ ಬ್ರಿಡ್ಜ್ ಸಂ. 54 ಡೌನ್ ಮತ್ತು ತಡವಾಳ – ಸುಲೇರ್‌ಜವಳಗಿ (ಟಿವಿಎಲ್–ಎಸ್‌ಎಲ್‌ಜಿಐ) ವಿಭಾಗದಲ್ಲಿ ಬ್ರಿಡ್ಜ್ ಸಂ. 96 ಡೌನ್ ಅನ್ನು ಓಆರ್‌ಎನ್ 3 ಅಡಿಯಲ್ಲಿ ಆರ್‌ಹೆಚ್ ಗಿರ್ಡರ್ / ಕಟ್ ಮತ್ತು ಕವರ್ ಮಾದರಿಯಲ್ಲಿ ಪ್ರೀಕಾಸ್ಟ್ ಆರ್‌ಸಿಸಿ ಸೆಗ್ಮೆಂಟಲ್ ಬಾಕ್ಸ್‌ಗಳಿಂದ ಪುನರ್‌ನಿರ್ಮಾಣ ಮಾಡುವುದು.	ರೂ. 1,43,23,507.00
2	ಹುಬ್ಬಳ್ಳಿ ವಿಭಾಗ: ಬಾದಾಮಿ ಗುಡ್ ಶೆಡ್‌ನಲ್ಲಿ ಲೇಬರ್, ಮರ್ಚಂಟ್ ಮತ್ತು ಸಿಜಿಎಸ್‌ಆರ್ ಕೊಠಡಿಗಳ ನಿರ್ಮಾಣ ಮತ್ತು ಕುಡಿಯುವ ನೀರಿನ ಸೌಲಭ್ಯಗಳು.	ರೂ. 51,37,824.00
3	ಹುಬ್ಬಳ್ಳಿ ವಿಭಾಗ: ವರಿಷ್ಠ ಸೆಕ್ಷನಲ್ ಇಂಜಿನಿಯರ್ / ಬ್ರಿಡ್ಜ್‌ಗಳು / ಹುಬ್ಬಳ್ಳಿ ವ್ಯಾಪ್ತಿಯಲ್ಲಿ ಬರುವ ಇಂಡಿ ರೋಡ್ (ಐಡಿಆರ್) ನಿಲ್ದಾಣದಲ್ಲಿ ಬ್ರಿಡ್ಜ್ ನಂ. 69/ಬಿ, ಗದಗ–ಹೊಟಗಿ (ಜಿಡಿಜಿ–ಹೆಚ್‌ಜಿ) ವಿಭಾಗದಲ್ಲಿ ಎಲ್‌ಸಿ ನಂ. 80 & ಎಲ್‌ಸಿ ನಂ. 81, ಗದಗ–ಹೊಸಪೇಟೆ (ಜಿಡಿಜಿ–ಹೆಚ್‌ಪಿಟಿ) ವಿಭಾಗದಲ್ಲಿ ಕೊಪ್ಪಳ (ಕೆಬಿಎಲ್) ಯಾರ್ಡ್‌ನ ಬ್ರಿಡ್ಜ್ ಮತ್ತು ಗದಗ – ವಾಡಿ (ಜಿಡಿಜಿ–ಡಬ್ಲ್ಯೂಎಡಿಐ) ವಿಭಾಗದಲ್ಲಿ ಬ್ರಿಡ್ಜ್ ನಂ. 26 ರ ಅಪ್ರೋಚ್‌ಗಳಲ್ಲಿ ಬೋ ಸ್ಟ್ರಿಂಗ್ ಗಿರ್ಡರ್‌ಗಳನ್ನು ಒಳಗೊಂಡ ಎತ್ತರದ ಗೇಜ್‌ಗಳ ವ್ಯವಸ್ಥೆಯನ್ನು ಮಾಡುವುದು (ಒಟ್ಟು ಬ್ರಿಡ್ಜ್‌ಗಳು 6 ನಂ.)	ರೂ. 80,54,740.00
4	ಹುಬ್ಬಳ್ಳಿ ವಿಭಾಗ: ವಾಸ್ಕೋ–ಡ–ಗಾಮಾದಲ್ಲಿರುವ ಮೆಕ್ಯಾನೈಜ್ಡ್ ಲಾಂಡ್ರಿಯಲ್ಲಿ 30 ಕೆಎಲ್‌ಡಿ ಸಾಮರ್ಥ್ಯದ ಪ್ರಸ್ತಾವಿತ ಇಟಿಪಿ ಯ ನಿರ್ಮಾಣ (ನಿರ್ವಹಣೆಯ ಅವಧಿ 24 ತಿಂಗಳುಗಳು).	ರೂ. 28,64,071.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **20.03.2025, 11:00 ಗಂಟೆಯವರೆಗೆ**
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ ಹುಬ್ಬಳ್ಳಿ
PUB/808/AAMO/PRB/SWR/2024-25
South Western Railway - SWR | @SWRRLY | SWRRLY

ನಗರದಲ್ಲಿ ಇಂದು

ಘಟಿಕೋತ್ಸವ: ಉಪಸ್ಥಿತಿ: ಡಾ.ಶರಣಪ್ರಕಾಶ ಪಾಟೀಲ, ಮುಖ್ಯ ಅತಿಥಿಗಳು: ಕೆ. ಶಿವನ್, ರಾಜಲಕ್ಷ್ಮಿ ಮೆನನ್, ಗೌರವ ಅತಿಥಿ: ಡಾ.ಎಸ್. ಸಚ್ಚಿದಾನಂದ, ಅಧ್ಯಕ್ಷತೆ: ಡಾ. ರಮೇಶ್ ಕೃಷ್ಣ ಕೆ., ಆಯೋಜನೆ ಹಾಗೂ ಸ್ಥಳ: ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಕೆ.ಆರ್. ರಸ್ತೆ, ಬೆಳಿಗ್ಗೆ 8.30

ಪುಸ್ತಕ ಮೇಳ: ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟ, ಸಂವಾದ ಗೋಷ್ಠಿಗಳು: ‘ದೃಶ್ಯ ಮತ್ತು ಮುದ್ರಣ ಮಾಧ್ಯಮಗಳ ಜವಾಬ್ದಾರಿ’, ‘ಸಮಕಾಲೀನ ಪ್ರಕಾಶನ ಕ್ಷೇತ್ರದ ಸವಾಲುಗಳು’, ‘ನಾಯಕತ್ವ–ಇಂದು ಮತ್ತು ನಾಳೆ’ ಹಾಗೂ ‘ನೆಲಮೂಲದಿಂದ ಅಂತರಿಕ್ಷದವರೆಗೆ’, ಕವಿಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ: ವಿಧಾನಸಭೆ ಸಚಿವಾಲಯ, ಸ್ಥಳ: ವಿಧಾನಸೌಧ ಆವರಣ, ಬೆಳಿಗ್ಗೆ 10ರಿಂದ

ರಾಷ್ಟ್ರೀಯ ವಿಜ್ಞಾನ ದಿನ ಉಪನ್ಯಾಸ: ಪ್ರೊ.ಕೆ.ಎನ್. ಬಾಲಾಜಿ, ಪ್ರೊ.ಸಿ.ಎಸ್. ಅರವಿಂದ, ಬಿ.ಎಸ್. ಬಂದೋಡ್ಕರ್, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಬೆಳಿಗ್ಗೆ 10

ರಾಜ್ಯಮಟ್ಟದ ವಿಚಾರಸಂಕಿರಣ: ಉದ್ಘಾಟನೆ: ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಕೆ.ಬಿ. ಕೋಳಿವಾಡ, ಮುಖ್ಯ ಅತಿಥಿಗಳು: ಎಚ್‌.ಪಿ. ಸಂದೇಶ್, ಎ.ಟಿ. ರಾಮಸ್ವಾಮಿ, ಆಯೋಜನೆ: ಕರ್ನಾಟಕ ಭ್ರಷ್ಟಾಚಾರ ನಿರ್ಮೂಲನಾ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಳಿಗ್ಗೆ 10.30

ರೈತ ಉತ್ಪಾದಕ ಸಂಸ್ಥೆಗಳ ಮೇಳ: ಉದ್ಘಾಟನೆ: ಎನ್. ಚಲುವರಾಯಸ್ವಾಮಿ, ಅಧ್ಯಕ್ಷತೆ: ಕೃಷ್ಣ ಬೈರೇಗೌಡ, ಆಯೋಜನೆ: ಸಣ್ಣ ರೈತರ ಕೃಷಿ ವ್ಯಾಪಾರ ಒಕ್ಕೂಟ, ಜಲಾನಯನ ಅಭಿವೃದ್ಧಿ ಇಲಾಖೆ, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಸ್ಥಳ: ತೋಟಗಾರಿಕೆ ಮಹಾವಿದ್ಯಾಲಯ, ಜಿ.ಕೆ.ವಿ.ಕೆ., ಬೆಳಿಗ್ಗೆ 10.30

ರಾಷ್ಟ್ರೀಯ ವಿಜ್ಞಾನ ದಿನ: ಯು.ಆರ್. ರಾವ್ ಭವನ ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಉಪಸ್ಥಿತಿ: ಎನ್.ಎಸ್ ಭೋಸರಾಜು, ಮುಖ್ಯ ಅತಿಥಿ: ಎ.ಎಸ್. ಕಿರಣ್‌ಕುಮಾರ್, ಆಯೋಜನೆ: ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಸ್ಥಳ: ಜವಾಹರಲಾಲ್ ನೆಹರು ತಾರಾಲಯ, ಚೌಡಯ್ಯ ರಸ್ತೆ, ಬೆಳಿಗ್ಗೆ 11

ರಾಜ್ಯ ಮಟ್ಟದ ಯುವಜನೋತ್ಸವ ಉದ್ಘಾಟನೆ: ರಂದೀಪ್ ಡಿ., ಅಧ್ಯಕ್ಷತೆ: ಪ್ರೊ.ಲಿಂಗರಾಜ ಗಾಂಧಿ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಸಂಜೆ 4

ಸಂತೋಷ್ ಹೆಗ್ಡೆ

‘ರಸ ತರಂಗ’ ಸಂಸ್ಕೃತಿ ಸಂಭ್ರಮ: ಅತಿಥಿಗಳು: ಮಧುರ ರವಿಕುಮಾರ್, ದುಷ್ಯಂತ ಜಿ.ಆರ್., ಆಯೋಜನೆ: ಕೂಡ್ಲು ಶ್ಯಾನುಭೋಗ ಸಂಗೀತ ಟ್ರಸ್ಟ್, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

‘ನೆಲದ ಮಾತು ಬೇರೆ’ ಪುಸ್ತಕ ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಕೃತಿ ಬಗ್ಗೆ ಮಾತು: ರಾಜಶೇಖರ ಮಠಪತಿ, ಉಪಸ್ಥಿತಿ: ಸುಬ್ಬು ಹೊಲೆಯಾರ್, ಸತ್ಯಮಂಗಲ ಮಹಾದೇವ, ಆಯೋಜನೆ ಹಾಗೂ ಸ್ಥಳ: ಶೇಷಾದ್ರಿಪುರಂ ಸಂಜೆ ಕಾಲೇಜು, ಶೇಷಾದ್ರಿಪುರ, ಸಂಜೆ 6

ಸಾಹಿತ್ಯ ಸಹವಾಸ: ಚಂದ್ರಶೇಖರ ಕಂಬಾರ ಅವರ ಕವಿತೆ ಗಾಯನ ಹಾಗೂ ‘ಮಾರಿಕಾಡು’ ನಾಟಕ ಪ್ರದರ್ಶನ, ಉಪಸ್ಥಿತಿ: ಚಂದ್ರಶೇಖರ ಕಂಬಾರ, ಆಯೋಜನೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

I studied at CSULA California State, USA would like to meet or talk to the one who studied there. Davanagere 9986244128

JOB OPPORTUNITIES

Drivers

REQUIRED PERSONAL high-end Car Driver with 3 years experience located around JP Nagar Bangalore Mob 9845283838

Graphic Designers

WANTED MALE Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 9845579620

Teachers/ Professors

ACHIEVE SCHOOL, 17th Main Road, Near SLV, BDA Complex, Siddanna Layout, Banashankari Stage II, Bengaluru- 560070 Mob: 91642-22288 Requires TEACHERS 1 SANSKRIT- High school 2 MATHS- Primary 3.HINDI: Middle and HighSchool 4 SS: Middle School 5 ENGLISH- High School 6 OFFICE POST

Multiple Vacancy

IMMEDIATELY REQUIRED for Karnataka, Maharashtra and Telangana Lift irrigation and Water Resource Projects Asst Manager Civil Mechanical Engineer, Electrical Engineer. Kindly Contact PVR Projects Ltd pvrplblr@gmail.com hrdpvrpl@pvrpl.co.in adminhyd@pvrpl.co.in Ph: 040 23418080/ 9008826378

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE BUYING

Industrial & Factory

General

WANTED KIADB Allotted Industrial Plot 0.25 acre to 2.00 acre Land Out Rate Purchase/Joint Venture at Harohalli, Dabaspet, Doddabllapura, IT Park, Hardware Park,Aerospace. Verna Developers, MG-Road, BLR 9353128035/ 9620253180

Sites

Koramangala

WANTED 2400 sq.ft. plot / site in Koramangala, HSR or Haralur area. Brokers excuse. Sellers contact at 9740852908 between 9am-5pm.

REAL ESTATE SELLING

Agricultural Land Converted

Mysore

2 ACRE, 20 gunta land Mysore 40ft Road sale. Price 2500 per sft. Contact. 9380586105

PROPERTY CORNER

SALE CHAMRAJPET COMMERCIAL BUILDING 18,000 SFT, RENTAL INCOME 7.5 LACS SALE PRICE 12.50 CRORES Call: 96322-37557/ 96065-47557

Commerical

Kanakapura Road

2 WAREHOUSES Available in Jakkasandra 3rd Phase Bangalore Tenant Occupied Genuine buyers Contact- 9606154546/ 9019851332

Sites

Vishweshwariah Layout

BDA 60X40 Site for sale. South facing Rs. 3.5Cr. Immediate Sale. Brokers Excuse. Contact:- 9448455164.

PERSONAL

Change of Name

I, NAVYASHREE.R has changed my daughter's name from Nainikaa Rao aged 9 years to Nainikaa N Vaghme vide affidavit dated 24th February 2025 before P. Anuradha from Bangalore.

I, MYTHILI. R, R/at #31, 1st Cross, Manjunatha Layout, T.C.Palya, K.R.Puram, Bengaluru- 560036, have changed my name to A. MYTHILI vide affidavit dated 27.02.2025, before notary A. Gerard, Bangalore. Henceforth I shall be known as A. MYTHILI only.

CHANGE OF NAME
I, **Mithun Gopalakrishna**, S/o Gopalakrishna, residing at "Aravind Residency", G2, 1st Main, 6th Cross, Appa Reddypalya, Indiranagar , Bangalore - 560038, have changed my name to **MITHUN REDDY GOPALAKRISHNA** vide affidavit dated 27-02-2025, sworn before Notary Gangaraju.B.N, Bangalore.

CHANGE OF NAME
I, **Nalini Kumari B** Spouse of **No. 2596931N, RANK: Ex Havildar, Name: Lakshmipathi K**, R/at No. 46, BBMP 30, Nisarga Nilaya, 1st Main Road, K.G. Colony, GM Palya, New Thippasandra Post, Bangalore- 560075, have changed my name from **Nalini Kumari B** to **NALINI L PATHI date of birth 15-05-1978,** vide affidavit dated 26-02-2025, before Notary A.R. Muneer Ahmed, Bangalore.

Lost

LOST
I, **A. N. VANITHA,** R/at No.402 5th Floor, 60ft Road, Doddanakkundi, Marathalli, Bangalore-560037, have lost original sale deed book no bearing document Khata **No.103, No.140, No.102 & 139 Survey No-190,191. Sale Deed Book No-1-363-2020-21, 1-364-2020** While travelling. Finders please contact: **8951519695.**

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH Classifieds More value, more impact ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164

₹7,500 ಕನಿಷ್ಠ ಪಿಂಚಣಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ₹7,500 ಪಿಂಚಣಿ ಹಾಗೂ ಭತ್ಯೆ, ವೈದ್ಯಕೀಯ ಸೌಲಭ್ಯ ನೀಡುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಪಿಎಸ್‌–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆಯ ಸದಸ್ಯರು ರಿಚ್ಮಂಡ್ ವೃತ್ತದಲ್ಲಿರುವ ಭವಿಷ್ಯ ನಿಧಿ ಪ್ರಾದೇಶಿಕ ಆಯುಕ್ತರ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

‘ಇಪಿಎಸ್‌–95 ಯೋಜನೆಗೆ ಒಳಪಟ್ಟ ನಿವೃತ್ತ ನೌಕರರು ₹1 ಸಾವಿರದಿಂದ ₹3 ಸಾವಿರದವರೆಗೆ ಪಿಂಚಣಿ ಪಡೆಯುತ್ತಿದ್ದು, ಕುಟುಂಬ ನಿರ್ವಹಣೆ ದುಸ್ತರವಾಗಿದೆ’ ಎಂದು ಪ್ರತಿಭಟನಕಾರರು ಬೇಸರವ್ಯಕ್ತಪಡಿಸಿದರು.

‘ನಿವೃತ್ತಿಯಾದ ನೌಕರರಿಗೆ ಆರು ತಿಂಗಳೊಳಗೆ ಪಿಂಚಣಿ ಹೆಚ್ಚಿಸುವಂತೆ 2022ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ಆದೇಶವನ್ನು ಇಪಿಎಫ್‌ಒ ಅಧಿಕಾರಿಗಳು ಜಾರಿಗೊಳಿಸಿಲ್ಲ. ಕೇಂದ್ರದ ಮೇಲೆ ಒತ್ತಡ ಹೇರುವಂತೆ ಕೇಂದ್ರ ಕಾರ್ಮಿಕ, ಉದ್ಯೋಗ ಸಚಿವ ಮನ್ಸುಖ್ ಮಾಂಡವೀಯ, ರಾಜ್ಯ ಖಾತೆ ಸಚಿವೆ ಶೋಭಾ ಕರಂದ್ಲಾಜೆಗೆ ಫ್ಯಾಕ್ಸ್ ಮೂಲಕ ಮನವಿ ಪತ್ರ ಕಳುಹಿಸಲು ಅಧಿಕಾರಿಗಳಿಗೆ ಕೋರಲಾಯಿತು’ ಎಂದರು.

ನಿವೃತ್ತ ನೌಕರರ ಸಂಘದ ಅಧ್ಯಕ್ಷ ನಂಜುಂಡೇಗೌಡ, ಎನ್‌ಎಸಿ ಅಧ್ಯಕ್ಷ ಜಿಎಸ್‌ಎಂ ಸ್ವಾಮಿ, ಶಂಕರ್ ಕುಮಾರ್, ವೇಲೂರು ಅಮರ್, ನಾಗರಾಜು, ರುಕ್ಮಿಶ್, ಕೃಷ್ಣಮೂರ್ತಿ ಪ್ರತಿಭಟನೆ ನೇತೃತ್ವ ವಹಿಸಿದ್ದರು.

‘ಬಹು ಮಾದರಿ ಸಾರಿಗೆ ಹಬ್’ಗೆ ಭೂಮಿ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳದಲ್ಲಿ ಬಹು ಮಾದರಿ ಸಾರಿಗೆ ‘ಹಬ್’ ನಿರ್ಮಿಸಲು ಬಿಎಂಆರ್‌ಸಿಎಲ್‌ಗೆ ಕೆಐಎಡಿಬಿಯ 45 ಎಕರೆ ಜಮೀನನ್ನು ಶೀಘ್ರ ಹಸ್ತಾಂತರಿಸಲು ಶುಕ್ರವಾರ ನಡೆಯುವ ಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ನಿರ್ಧಾರ ಕೈಗೊಳ್ಳಬೇಕು ಎಂದು ಒತ್ತಾಯಿಸಿ ರಾಜಾಜಿನಗರ ಶಾಸಕ ಎಸ್. ಸುರೇಶ್ ಕುಮಾರ್ ಪತ್ರ ಬರೆದಿದ್ದಾರೆ.

ಹೆಬ್ಬಾಳದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ಸ್ವಾಧೀನದಲ್ಲಿರುವ ಜಮೀನನ್ನು ನೀಡುವಂತೆ ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ. ಜಮೀನಿನ ದರವನ್ನು ಭರಿಸಲು ಬಿಎಂಆರ್‌ಸಿಎಲ್ ಸಿದ್ಧವಿದೆ. ಆದರೆ ಜಮೀನು ವರ್ಗಾಯಿಸಲು ನಗರಾಭಿವೃದ್ಧಿ ಮತ್ತು ಕೈಗಾರಿಕಾ ಇಲಾಖೆಗಳು ವಿಳಂಬ ಮಾಡುತ್ತಿವೆ ಎಂದು ಸುರೇಶ್ ಕುಮಾರ್ ದೂರಿದ್ದಾರೆ.

ಜಮೀನು ಒದಗಿಸಿಕೊಟ್ಟರೆ ಬಹು ಹಂತದ ಕಾರು ಪಾರ್ಕಿಂಗ್, ಆಧುನಿಕ ಡಿಪೊ ಮತ್ತು ಇತರ ಸಂಬಂಧಿತ ಮೂಲಸೌಕರ್ಯಗಳು ಇಲ್ಲಿ ನಿರ್ಮಾಣಗೊಳ್ಳಲಿವೆ. ಮೆಟ್ರೊ ನೀಲಿ, ಕಿತ್ತಳೆ, ಕೆಂಪು ಮಾರ್ಗಗಳು ಇಲ್ಲಿ ಸಂಪರ್ಕಿಸುತ್ತವೆ. ಭೂಸ್ವಾಧೀನ ವಿಳಂಬವಾದರೆ ಸಮಯ ಮತ್ತು ವೆಚ್ಚ ಮಿತಿ ಮೀರಲಿದೆ ಎಂದಿದ್ದಾರೆ. ರಿಯಲ್ ಎಸ್ಟೇಟ್ ಲಾಬಿಗೆ ಮಣಿಯದೇ ಜಮೀನು ಹಸ್ತಾಂತರಕ್ಕೆ ನಿರ್ಧಾರ ಕೈಗೊಳ್ಳಬೇಕು. ಜಮೀನು ಬಿಟ್ಟುಕೊಟ್ಟಿರುವವರಿಗೆ ಕೂಡಲೇ ಪರಿಹಾರ ನಿಗದಿಪಡಿಸಿ, ನೀಡಬೇಕು ಎಂದು ಅವರು ಪತ್ರದಲ್ಲಿ ಆಗ್ರಹಿಸಿದ್ದಾರೆ.

ಸಚಿವಾಲಯ ಸಹಕಾರ ಸಂಘಕ್ಕೆ ಆಯ್ಕೆ

ಬೆಂಗಳೂರು: ಸಚಿವಾಲಯ ಸಹಕಾರ ಸಂಘಕ್ಕೆ 2025-2030ನೇ ಅವಧಿಗೆ ಅಧ್ಯಕ್ಷರಾಗಿ ಎಚ್. ಹನುಮೇಗೌಡ ಮತ್ತು ಉಪಾಧ್ಯಕ್ಷರಾಗಿ ಎಚ್.ಸಿ. ಗೀತಾ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಆಡಳಿತ ಮಂಡಳಿಯ 13 ನಿರ್ದೇಶಕರ ಸ್ಥಾನಗಳಿಗೆ ಫೆ. 16ರಂದು ನಡೆದ ಚುನಾವಣೆಯಲ್ಲಿ ಹನುಮೇಗೌಡ ನೇತೃತ್ವದ ತಂಡ 11 ಸ್ಥಾನಗಳನ್ನು ಪಡೆದಿತ್ತು.

ಎಚ್. ಹನುಮೇಗೌಡ ಎಚ್. ಸಿ. ಗೀತಾ

ಸಂಘದ ಬೈ–ಲಾ ಪ್ರಕಾರ ಆಡಳಿತ ಮಂಡಳಿಯಿಂದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಆಯ್ಕೆ ನಡೆಯಿತು.

ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಬೆಟ್ಟಹಲಸೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಶ್ರೀನಿವಾಸ್. ಬಿ.ಎನ್ (ಪಂಚಮಿ), ಉಪಾಧ್ಯಕ್ಷರಾಗಿ ಶಿವಕುಮಾರ್.ಟಿ.ಪಿ ಆಯ್ಕೆಯಾದರು.

ನಿರ್ದೇಶಕರಾದ ನಾರಾಯಣಗೌಡ ಬಿ.ಎಸ್, ಮುನಿವೆಂಕಟೇಗೌಡ ಎಚ್.ಎಸ್, ಮಂಜುನಾಥ್ ಬಿ.ಎನ್, ನಾಗೇಶ್ ಬಿ.ಎನ್, ಅಕ್ಕಯಮ್ಮ ತಿರುಮುಳಪ್ಪ, ವೆಂಕಟೇಶ್, ಕಾಮಾಕ್ಷಮ್ಮ, ಶಶಿಕಲಾ ದೇವನಾಥಗೌಡ, ರಾಮಮೂರ್ತಿ, ಕಾಂಗ್ರೆಸ್ ಮುಖಂಡರಾದ ದಾನೇಗೌಡ, ಬಿ.ಕೆ.ಮಂಜುನಾಥಗೌಡ, ಮಹೇಶ್ ಕುಮಾರ್, ಬಿ.ಎಂ.ನಾಗೇಶ್, ಬಿ.ಆರ್. ಪ್ರವೀಣ್, ಬಿ.ಕೆ. ರವೀಂದ್ರನಾಥಗೌಡ ಇತರರು ಅಭಿನಂದಿಸಿದರು.

ಸಾಹಿತಿ, ಚಿತ್ರ ಕಲಾವಿದರಿಗೆ ಪ್ರಶಸ್ತಿ

ರಾಜರಾಜೇಶ್ವರಿನಗರ: ಮಲ್ಲತ್ತ ಹಳ್ಳಿಯ ವಾಸುದೇವ ಚಾರಿಟಬಲ್ ಟ್ರಸ್ಟ್ ವತಿಯಿಂದ ದಿವಂಗತ ಹೊಂಬಣ್ಣ, ಮುನಿರಂಗಮ್ಮ, ವಾಸುದೇವ ಸ್ಮರಣಾರ್ಥ ಸಾಹಿತಿ ಮತ್ತು ಚಿತ್ರ ಕಲಾವಿದರಿಗೆ ಪ್ರಶಸ್ತಿ ನೀಡಲಿದೆ.

ಆಸಕ್ತ ಕಥೆಗಾರರು ಕಥಾಸಂಕನದ ಮೂರು ಕೃತಿಗಳನ್ನು ಏಪ್ರಿಲ್ 10ರೊಳಗೆ ತಲುಪಿಸಬೇಕು. 35 ವರ್ಷದ ಒಳಗಿನ ಚಿತ್ರ ಕಲಾವಿದರು ವಿವರ, ಭಾವಚಿತ್ರದ ಜೊತೆಗೆ ಆಧಾರ್ ಕಾರ್ಡ್ ಪ್ರತಿ ಕಳುಹಿಸಬೇಕು. ಪ್ರಶಸ್ತಿ ಪತ್ರದೊಂದಿಗೆ ತಲಾ ₹5 ಸಾವಿರ ನಗದು ನೀಡಲಾಗುತ್ತದೆ ಎಂದು ಅಧ್ಯಕ್ಷ ಎಚ್. ತುಕಾರಾಂ ತಿಳಿಸಿದ್ದಾರೆ.

ವಿಳಾಸ: ಎಚ್.ತುಕಾರಾಂ, ಅಧ್ಯಕ್ಷ, ವಾಸುದೇವ ಚಾರಿಟಬಲ್ ಟ್ರಸ್ಟ್, ಕನ್ಯಾಕುಮಾರಿ ವಿದ್ಯಾಸಂಸ್ಥೆ ಹತ್ತಿರ, ನಂ.198, ಬಾಲಗಂಗಾಧರನಗರ, ಮಲ್ಲತ್ತಹಳ್ಳಿ ಬೆಂಗಳೂರು-560056 ಮೊಬೈಲ್: 9740999993.

PARAS

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾರ್ಯಾರಂಭ

ಸರಕು ಸಾಗಣೆಗೆ ಟರ್ಮಿನಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಅತ್ಯಂತ ದೊಡ್ಡ ಸರಕು ಸಾಗಣೆ ಟರ್ಮಿನಲ್ ಬೆಂಗಳೂರಿನ ಕೆಂಪೇಗೌಡ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ (ಕೆಐಎಎಲ್) ಕಾರ್ಯಾರಂಭ ಮಾಡಿದೆ.

'ಕೆಐಎಎಲ್ ಮತ್ತು ಮೆನ್ಜೀಸ್ ಏವಿಯೇಷನ್‌ನ ಸಹಯೋಗದಲ್ಲಿ ನಿರ್ಮಾಣವಾಗಿರುವ ಈ ಟರ್ಮಿನಲ್, ವಿಮಾನದ ಮೂಲಕ ಸರಕು ಸಾಗಣೆ ಪ್ರಕ್ರಿಯೆಯನ್ನು ತ್ವರಿತಗೊಳಿಸಲು ನೆರವಾಗಲಿದೆ. ಜಾಗತಿಕ ಮಟ್ಟದ ಸರಕು ಸಾಗಣೆ ಕ್ಷೇತ್ರದಲ್ಲಿ ಇದು ಮಹತ್ವದ ಸ್ಥಾನ ಪಡೆಯಲಿದೆ' ಎಂದು ವಿಮಾನ ನಿಲ್ದಾಣದ ಮುಖ್ಯ ಕಾರ್ಯಾಚರಣೆ ಅಧಿಕಾರಿ ಸತ್ಯಕಿ ರಘುನಾಥ್ ಹೇಳಿದರು.

'ಈ ಟರ್ಮಿನಲ್‌ನ ಮೂಲಕ ವಿಮಾನ ನಿಲ್ದಾಣದ ಸರಕು ಸಾಗಣೆ ಸಾಮರ್ಥ್ಯ ಹೆಚ್ಚಾಗಿದೆ. ಈ ಆರ್ಥಿಕ ವರ್ಷದ ಅಂತ್ಯದ ವೇಳೆಗೆ 5 ಲಕ್ಷ ಟನ್‌ಗಳಿಗಿಂತಲೂ ಹೆಚ್ಚು ಸರಕು ಸಾಗಣೆ ಮಾಡುವ ಗುರಿ ಹಾಕಿಕೊಳ್ಳಲಾಗಿದೆ' ಎಂದರು.

ಮೆನ್ಜೀಸ್ ಏವಿಯೇಷನ್‌ನ ಏಷ್ಯಾ ವಿಭಾಗದ ಉಪಾಧ್ಯಕ್ಷ ಚಾರ್ಲ್ಸ್ ವೈಲಿ, 'ಇಂದಿನ ಬೇಡಿಕೆಯ ಪೂರೈಕೆಗಷ್ಟೇ ಅಲ್ಲದೆ, ಭವಿಷ್ಯದ ಅಗತ್ಯಗಳನ್ನು ಗಮನದಲ್ಲಿ ಇರಿಸಿಕೊಂಡು ನೂತನ ಕಾರ್ಗೊ ಟರ್ಮಿನಲ್ ಅನ್ನು ವಿನ್ಯಾಸ ಗೊಳಿಸಲಾಗಿದೆ. 2029ರ ವೇಳೆಗೆ ವಾರ್ಷಿಕ ಸರಕು ಸಾಗಣೆ ಬೇಡಿಕೆ ಪ್ರಮಾಣವು 5.85 ಲಕ್ಷ ಟನ್ ದಾಟುವ ನಿರೀಕ್ಷೆ ಇದೆ' ಎಂದರು.

ನೂತನ ಸರಕು ಸಾಗಣೆ ಟರ್ಮಿನಲ್

ಏಳು ಆರೋಪಿಗಳು ಕಸ್ಟಡಿಗೆ

ಹೈದರ್ ಅಲಿ ಕೊಲೆ ಪ್ರಕರಣ: ಹಳೇ ವೈಷಮ್ಯದಿಂದ ಕೃತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೆಪಾಳ್ಯದ ನಿವಾಸಿ, ರೌಡಿಶೀಟರ್ ಹೈದರ್ ಅಲಿ(38) ಕೊಲೆ ಪ್ರಕರಣದ ಸಂಬಂಧ ಏಳು ಆರೋಪಿಗಳನ್ನು ಬಂಧಿಸಿರುವ ಅಶೋಕನಗರ ಠಾಣೆಯ ಪೊಲೀಸರು, ಹೆಚ್ಚಿನ ವಿಚಾರಣೆಗಾಗಿ ತಮ್ಮ ಕಸ್ಟಡಿಗೆ ಪಡೆದುಕೊಂಡಿದ್ದಾರೆ.

ನಯಾಜ್ ಪಾಷಾ, ನಾಜುದ್ದೀನ್, ರಿಜ್ವಾನ್, ಮತೀನ್, ಸದ್ದಾಂ, ದರ್ಶನ್ ಅಲಿಯಾಸ್ ಶಿವದರ್ಶನ್, ರಾಹಿದ್, ವಸೀಂ ಬಂಧಿತ ಆರೋಪಿಗಳು.

ಎಲ್ಲ ಆರೋಪಿಗಳನ್ನೂ ನ್ಯಾಯಾಧೀಶರ ಎದುರು ಹಾಜರು ಪಡಿಸಲಾಗಿದ್ದು, ವಿಚಾರಣೆಗಾಗಿ ಮತ್ತೆ ಕಸ್ಟಡಿಗೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಂಧಿತರ ಪೈಕಿ ನಾಲ್ವರು ಶಿವಮೊಗ್ಗ ಹಾಗೂ ಮೂವರು ಆನೆಪಾಳ್ಯ, ಬೈಯ-ಪ್ಪನಹಳ್ಳಿಯ ನಿವಾಸಿಗಳು. ಬಂಧಿತರ ಪೈಕಿ ಮೂವರು ರೌಡಿಶೀಟರ್‌ಗಳು ಆಗಿದ್ದಾರೆ. ಕೃತ್ಯದಲ್ಲಿ ಇನ್ನೂ ಹಲವರು ಭಾಗಿಯಾಗಿರುವ ಶಂಕೆ ವ್ಯಕ್ತವಾಗಿದ್ದು, ಅವರಿಗಾಗಿ ಹುಡುಕಾಟ ನಡೆಸಲಾ ಗುತ್ತಿದೆ ಎಂದು ಮೂಲಗಳು ಹೇಳಿವೆ.

'ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಹೈದರ್ ಅಲಿ ಹಾಗೂ ನಾಜುದ್ದೀನ್ ತಂಡದ ಮಧ್ಯೆ ವೈಷಮ್ಯ ಬೆಳೆದಿತ್ತು. ಆನೆಪಾಳ್ಯದ ಸುತ್ತಮುತ್ತ ನಡೆಯುತ್ತಿರುವ ಕಾನೂನುಬಾಹಿರ ಚಟುವಟಿಕೆಗಳು ತಮ್ಮ ಹಿಡಿತದಲ್ಲೇ ಇರಬೇಕೆಂದು ಎರಡು ಗುಂಪುಗಳು ಜಿದ್ದು ಸಾಧಿಸಿದ್ದವು. ಈ ವಿಚಾರಕ್ಕೆ ಗಲಾಟೆ ಸಹ ನಡೆದಿತ್ತು. ನಂತರ ಹೈದರ್ ಅಲಿಯ ಕೊಲೆಗೆ ಸಂಚು ರೂಪಿಸಲಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಧ್ಯರಾತ್ರಿ ಹೊಂಚು ಹಾಕಿ ಕೃತ್ಯ: ಜಿಮ್ ಮಾಲೀಕನೂ ಆಗಿರುವ ಸ್ನೇಹಿತನ ಜತೆಗೆ ಶುಕ್ರವಾರ ಮಧ್ಯರಾತ್ರಿವರೆಗೂ ಅಶೋಕನಗರ ಪೊಲೀಸ್ ಠಾಣಾ ವ್ಯಾಪ್ತಿಯ ಪಬ್‌ವೊಂದರಲ್ಲಿ ಹೈದರ್ ಅಲಿ ಪಾರ್ಟಿ ನಡೆಸಿದ್ದ. ಹೊರಗೆ ಬರುವುದನ್ನೇ ಆರೋಪಿಗಳು ಕಾದಿದ್ದರು. ಹೊರಗೆ ಬರುತ್ತಿದ್ದಂತೆಯೇ ಬೈಕ್‌ನಲ್ಲಿ ಹಿಂಬಾಲಿಸಿಕೊಂಡು ಹೋಗಿ ಫುಟ್‌ಬಾಲ್ ಮೈದಾನ ಬಳಿ ಮಾರಕಾಸ್ತ್ರಗಳಿಂದ ಕೊಚ್ಚಿ, ಕೊಲೆ ಮಾಡಿ ಪರಾರಿ ಆಗಿದ್ದರು. ಅದೇ ವೇಳೆ ಕಾರಿನಲ್ಲಿ ಬಂದಿದ್ದ ಇನ್ನೂ ಕೆಲವು ಆರೋಪಿಗಳು ಮೈದಾನ ಬಳಿ ಕಾದಿದ್ದರು.

ಕೊಲೆಯಾದ ಹೈದರ್ ವಿರುದ್ಧವೂ ಈ ಹಿಂದೆ ಅಶೋಕನಗರ ಠಾಣೆಯಲ್ಲಿ ರೌಡಿಪಟ್ಟಿ ತೆರೆಯಲಾಗಿತ್ತು. ಆತನ ವಿರುದ್ಧ ವಿವಿಧ ಠಾಣೆಗಳಲ್ಲಿ 11 ಪ್ರಕರಣಗಳು ದಾಖಲಾಗಿದ್ದವು.

ಚುನಾವಣೆಗೆ ಸ್ಪರ್ಧಿಸಲು ಸಿದ್ಧತೆ: ಸದ್ಯದಲ್ಲೇ ಬಿಬಿಎಂಪಿ ಚುನಾವಣೆ ನಡೆಯಲಿದೆ ಎನ್ನುವ ಮಾಹಿತಿ ತಿಳಿದು ಚುನಾವಣೆಗೆ ಸ್ಪರ್ಧಿಸಲು ಹೈದರ್ ಅಲಿ ಸಿದ್ಧತೆ ನಡೆಸಿದ್ದ. ರಾಜಕೀಯ ಪಕ್ಷವೊಂದರ ಮುಖಂಡರ ಬೆಂಬಲವೂ ಹೈದರ್‌ಗೆ ಇತ್ತು. ಹೀಗಾಗಿ ವಾರ್ಡ್‌ನಲ್ಲಿ ಸಕ್ರಿಯವಾಗಿ ಓಡಾಟ ನಡೆಸುತ್ತಿದ್ದ. ಮತದಾರರನ್ನು ಸೆಳೆಯಲು ಸಾಮಾಜಿಕ ಕಾರ್ಯದ ಹೆಸರಿನಲ್ಲಿ ಕೆಲವು ಕಾರ್ಯಕ್ರಮವನ್ನೂ ಆಯೋಜಿಸಿದ್ದ. ಇದನ್ನು ಗಮನಿಸಿದ್ದ ಮತ್ತೊಬ್ಬ ಮುಖಂಡ, ಹಗೆ ಸಾಧಿಸುತ್ತಿದ್ದ. ಹೈದರ್ ಅಲಿ ಹಾಗೂ ಆ ಮುಖಂಡನ ಮಧ್ಯೆ ಟಿಕೆಟ್ ಪಡೆಯುವ ವಿಚಾರಕ್ಕೂ ವೈಮನಸ್ಸು ಮೂಡಿತ್ತು. ಹಳೇ ದ್ವೇಷದ ಜತೆಗೆ ರಾಜಕೀಯ ವೈಷಮ್ಯವೂ ಕೊಲೆಗೆ ಕಾರಣವಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ' ಎಂದು ಮೂಲಗಳು ಹೇಳಿವೆ.

ಅಶ್ಲೀಲ ಸನ್ನೆ ತೋರಿದ್ದ ಚಾಲಕನ ಬಂಧನ, ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಕ್ಷತಾ ರವಿಕುಮಾರ್ ಅವರಿಗೆ ಅಶ್ಲೀಲವಾಗಿ ಸನ್ನೆ ತೋರಿದ್ದ ಆರೋಪದ ಅಡಿ ಕಾರು ಚಾಲಕ, ವಿಜಯನಗರದ ನಿವಾಸಿ ಹರ್ಷ ಎಂಬುವವರನ್ನು ಚಾಮರಾಜಪೇಟೆ ಠಾಣೆಯ ಪೊಲೀಸರು ಬಂಧಿಸಿ, ಬಿಡುಗಡೆ ಮಾಡಿದ್ದಾರೆ.

ಬುಧವಾರ ಸಂಜೆ ನಾಲ್ಕು ಗಂಟೆಯ ಸುಮಾರಿಗೆ ಬೆಂಗಳೂರು– ಮೈಸೂರು ರಸ್ತೆಯ ಗೋಪಾಲನ್ ಮಾಲ್ ಬಳಿ ಘಟನೆ ನಡೆದಿತ್ತು.

'ಆರೋಪಿಯೇ ಕಾರು ಚಾಲನೆ ಮಾಡುತ್ತಿದ್ದ. ಮಾಲ್ ಎದುರಿನ ರಸ್ತೆಯಲ್ಲಿ ಸಂಚಾರ ನಿಯಮ ಉಲ್ಲಂಘಿಸಿದ್ದನ್ನು ಅಕ್ಷತಾ ಅವರು ಪ್ರಶ್ನೆ ಮಾಡಿದ್ದರು. ಇದರಿಂದ ಸಿಟ್ಟಿಗೆದ್ದ ಚಾಲಕ, ಅಶ್ಲೀಲವಾಗಿ ಸನ್ನೆ ಮಾಡಿಕೊಂಡು ಕಾರು ಚಾಲನೆ ಮಾಡುತ್ತಾ ಮುಂದಕ್ಕೆ ಸಾಗಿದ್ದ. ಅಕ್ಷತಾ ಅವರು ಚಾಮರಾಜಪೇಟೆ ಠಾಣೆಯ ಪೊಲೀಸರಿಗೆ ದೂರು ನೀಡಿದ್ದರು. ದೂರು ಆಧರಿಸಿ, ಚಾಲಕನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಎಕ್ಸ್‌ನಲ್ಲೂ ಪೋಸ್ಟ್: ಆರೋಪಿಯು ಅಶ್ಲೀಲವಾಗಿ ಸನ್ನೆ ಮಾಡುತ್ತಾ ಹೋಗಿದ್ದ ಚಿತ್ರವನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದ ಅಕ್ಷತಾ ಅವರು, ಕ್ರಮಕ್ಕೆ ಆಗ್ರಹಿಸಿದ್ದರು.

'ಠಾಣಾ ಜಾಮೀನಿನ ಮೇಲೆ ಆರೋಪಿಯನ್ನು ಬಿಡುಗಡೆ ಮಾಡಲಾಗಿದೆ. ಆರೋಪಿಗೆ ನೋಟಿಸ್ ನೀಡಿ ಎಚ್ಚರಿಕೆ ಕೊಟ್ಟು ಕಳುಹಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಿಎಂಟಿಸಿ ಬಸ್ ಡಿಕ್ಕಿ: ಮಹಿಳೆಯ ಸ್ಥಿತಿ ಗಂಭೀರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಬಸ್ ನಿಲ್ದಾಣದ ಬಳಿ ರಸ್ತೆ ದಾಟುತ್ತಿದ್ದ ಮಹಿಳೆಗೆ ಬಿಎಂಟಿಸಿ ಬಸ್ ಡಿಕ್ಕಿ ಹೊಡೆದಿದೆ. ಮಹಿಳೆಯ ಸ್ಥಿತಿ ಗಂಭೀರವಾಗಿದೆ.

ಗಾಯಗೊಂಡ ಲಿಂಗಮ್ಮ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ಮನೆಗೆ ತೆರಳಲು ಲಿಂಗಮ್ಮ ಅವರು ರಸ್ತೆ ದಾಟುತ್ತಿದ್ದರು. ಅದೇ ವೇಳೆಗೆ ವೇಗವಾಗಿ ಬಂದ ಬಸ್ ಅವರಿಗೆ ಡಿಕ್ಕಿಯಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಬೆಟ್ಟಿಂಗ್: ಟೆಕಿ ಬಂಧನ

ಪ್ರಜಾವಾಣಿ ವಾರ್ತೆ

ಗೋವಿಂದ ರಾಜು

ಆನೇಕಲ್: ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ ಬುಕ್ಕಿಯೊಬ್ಬನನ್ನು ಆನೇಕಲ್ ತಾಲ್ಲೂಕಿನ ಜಿಗಣಿ ಪೊಲೀಸರು ಗುರುವಾರ ಬಂಧಿಸಿ ಆರೋಪಿಯಿಂದ ಐಫೋನ್ ಸೇರಿದಂತೆ ಆರು ಮೊಬೈಲ್ ಮತ್ತು ₹1ಲಕ್ಷ ನಗದು ವಶಪಡಿಸಿಕೊಂಡಿದ್ದಾರೆ.

ಪಾವಗಡದ ಗೋವಿಂದರಾಜು ಬಂಧಿತ ಆರೋಪಿ.

ಟೆಕಿ ಗೋವಿಂದರಾಜು ಜಿಗಣಿ ಸಮೀಪದ ಬುಕ್ಕಸಾಗರದಲ್ಲಿ ವಾಸವಿದ್ದ, ಚಾಂಪಿಯನ್ ಟ್ರೋಫಿಯಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವೆ ನಡೆದಿದ್ದ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೆಟ್ಟಿಂಗ್ ನಡೆಸಿದ್ದ. ಮನೆಯಲ್ಲಿಯೇ ಕುಳಿತು ಬೆಟ್ಟಿಂಗ್ ನಡೆಸುತ್ತಿದ್ದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಬಂಧಿಸಲಾಗಿದೆ ಎಂದು ಜಿಗಣಿ ಪೊಲೀಸರು ತಿಳಿಸಿದ್ದಾರೆ.

ಆರೋಪಿಯಿಂದ ಆರು ಮೊಬೈಲ್, 50ಕ್ಕೂ ಹೆಚ್ಚು ವಿವಿಧ ಕಂಪನಿಯ ಸಿಮ್ ಕಾರ್ಡ್, ₹1.18ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ. ಬುಕ್ಕಿಯ ಹೆಸರಿನಲ್ಲಿ ಬ್ಯಾಂಕ್ ಖಾತೆಯಲ್ಲಿ ₹11 ಲಕ್ಷ ಹಣವನ್ನು ಫ್ರೀಜ್ ಮಾಡುವಂತೆ ಬ್ಯಾಂಕ್‌ಗೆ ಮಾಹಿತಿ ನೀಡಿ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಗಣಿ ಪೊಲೀಸ್ ಇನ್‌ಸ್ಪೆಕ್ಟರ್ ಮಂಜುನಾಥ್ ತಿಳಿಸಿದ್ದಾರೆ.

ಎಂಜಿನಿಯರಿಂಗ್ ಪದವಿ ಪಡೆದಿದ್ದ ಗೋವಿಂದರಾಜು ಬೆಟ್ಟಿಂಗ್‌ನ್ನು ದಂಧೆಯನ್ನಾಗಿ ಮಾಡಿಕೊಂಡಿದ್ದ. ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದ ಸಂದರ್ಭದಲ್ಲಿ ಬುಕ್ಕಿಗಳೊಂದಿಗೆ ಪರಿಚಯವಾಗಿತ್ತು. ಬಳಿಕ ಗೋವಿಂದರಾಜು ಬೆಟ್ಟಿಂಗ್‌ನ್ನೇ ದಂಧೆಯಾಗಿ ಆರಂಭಿಸಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಿಕ್ಕಬಾಣಾವರ: ಉಚಿತ ಆರೋಗ್ಯ ತಪಾಸಣಾ ಶಿಬಿರ

'ಯುವಕರ ಶಕ್ತಿ ವಿಕಸಿತ ಭಾರತಕ್ಕೆ ನೆರವು'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಯುವಕರ ಶಕ್ತಿ ಮತ್ತು ಸಮರ್ಪಣೆ ವಿಕಸಿತ ಭಾರತದ ದೃಷ್ಟಿಕೋನವನ್ನು ಸಾಕಾರಗೊಳಿಸಲು ಸಹಾಯ ಮಾಡುತ್ತದೆ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಚಿಕ್ಕಬಾಣಾವರದ ಆರ್.ಆರ್. ಇನ್‌ಸ್ಟಿಟ್ಯೂಟ್‌ನಲ್ಲಿ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ 15ನೇ ವರ್ಷದ ಉಚಿತ ಆರೋಗ್ಯ ತಪಾಸಣೆ, ಔಷಧ ವಿತರಣೆ ಹಾಗೂ ರಕ್ತದಾನ ಶಿಬಿರ ಉದ್ಘಾಟಿಸಿ, ಅವರು ಮಾತನಾಡಿದರು.

'ಅಭಿವೃದ್ಧಿ ಹೊಂದಿದ ಭಾರತದ (ವಿಕಸಿತ ಭಾರತ) ದೃಷ್ಟಿಕೋನವನ್ನು ಸಾಕಾರಗೊಳಿಸಲು ಯುವಕರ ಪಾತ್ರ ಮುಖ್ಯ. ನಿಮ್ಮ ಶಕ್ತಿ, ನಾವೀನ್ಯ ಮತ್ತು ಸಮರ್ಪಣೆ ಮುಂದಿನ ವರ್ಷಗಳಲ್ಲಿ ಪ್ರಧಾನ ಮಂತ್ರಿಯವರ ವಿಕಸಿತ ಭಾರತ ದೃಷ್ಟಿಯನ್ನು ಸಾಕಾರಗೊಳಿಸುತ್ತದೆ' ಎಂದರು.

'ಶ್ರದ್ಧೆಯಿಂದ ಓದಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಿ. ನಿಮ್ಮ ತಂದೆತಾಯಿಗಷ್ಟೆ ಅಲ್ಲ, ದೇಶಕ್ಕೆ ಹಾಗೂ ಹೆತ್ತವರಿಗೆ ಕೀರ್ತಿ ತನ್ನಿ' ಎಂದು ಹೇಳಿದರು.

ಶಾಸಕ ಎಸ್. ಮುನಿರಾಜು, ಆರ್. ಆರ್. ಇನ್‌ಸ್ಟಿಟ್ಯೂಟ್‌ನ ಸಂಸ್ಥಾಪಕ ರಾಜಾರೆಡ್ಡಿ, ಕಾರ್ಯದರ್ಶಿ ಅನಿಲ್ ಕುಮಾರ್, ಸಿಇಒ ಕಿರಣ್ ರೆಡ್ಡಿ, ಪ್ರಾಂಶುಪಾಲ ಎನ್.ಎಂ. ರಾಘವೇಂದ್ರ, ಸಿದ್ಧಾರ್ಥ, ಲಯನ್ ಮನೋಜ್ ಕುಮಾರ್, ಲಯನ್ ರಾಘವೇಂದ್ರ, ದಾಸರಹಳ್ಳಿ ಮಂಡಲ ಅಧ್ಯಕ್ಷ ಮೇದರಹಳ್ಳಿ ಸೋಮಶೇಖರ್ ಉಪಸ್ಥಿತರಿದ್ದರು.


ಆರೋಗ್ಯ ಶಿಬಿರ ಉದ್ಘಾಟನೆ ಸಂದರ್ಭದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರೊಂದಿಗೆ ಶಾಸಕ ಮುನಿರಾಜು ಹಾಗೂ ಕಾಲೇಜಿನ ಸಿಬ್ಬಂದಿ ಉಪಸ್ಥಿತರಿದ್ದರು

5 ಲಕ್ಷಕ್ಕಿಳಿದ ಮೆಟ್ರೊ ಪ್ರಯಾಣಿಕರ ಸಂಖ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಪ್ರಯಾಣ ದರ ಹೆಚ್ಚಳವಾದ ಬಳಿಕ ಇಳಿದ ಪ್ರಯಾಣಿಕರ ಸಂಖ್ಯೆ ಏರಿಕೆಯಾಗುತ್ತಿಲ್ಲ. ಮಹಾಶಿವರಾತ್ರಿಯ ದಿನವಾದ ಬುಧವಾರ 5.20 ಲಕ್ಷಕ್ಕೆ ಇಳಿದಿದೆ.

ದರ ಏರಿಕೆಗಿಂತ ಮೊದಲು ಒಂದು ತಿಂಗಳು ವಾರದ ದಿನಗಳಲ್ಲಿ ಸರಾಸರಿ ಪ್ರಯಾಣಿಕರ ಸಂಖ್ಯೆ 8.5 ಲಕ್ಷ ಸರಾಸರಿ ಇತ್ತು. ದರ ಏರಿಸಿದ ಬಳಿಕ ಪ್ರತಿದಿನ ಸರಾಸರಿ 1.20 ಲಕ್ಷದಷ್ಟು ಕಡಿಮೆಯಾಗಿತ್ತು. ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಮಹಿಳಾ ಪ್ರೀಮಿಯರ್ ಲೀಗ್ ನಡೆಯುತ್ತಿದ್ದು, ಪಂದ್ಯ ವೀಕ್ಷಿಸಲು ಜನರು ಭಾರಿ ಸಂಖ್ಯೆಯಲ್ಲಿ ಬರುತ್ತಿರುವುದರಿಂದ 'ನಮ್ಮ ಮೆಟ್ರೊ' ಪ್ರಯಾಣಿಕರ ಸಂಖ್ಯೆ ಸ್ವಲ್ಪ ಮಟ್ಟಿನಲ್ಲಿ ಚೇತರಿಸಿಕೆ ಕಂಡಿತ್ತು. ಮಂಗಳವಾರ 7.82 ಲಕ್ಷ ಜನರು ಪ್ರಯಾಣಿಸಿದ್ದರು. ಭಾನುವಾರ ಮತ್ತು ರಜಾ ದಿನಗಳಲ್ಲಿ 7 ಲಕ್ಷದ ಆಸುಪಾಸು ಪ್ರಯಾಣಿಕರ ಸಂಖ್ಯೆ ಇರುತ್ತಿತ್ತು. ಪ್ರಯಾಣ ದರ ಏರಿಕೆಯಾದ ಮೇಲೆ ಈ ಸರಾಸರಿಯು 5.25 ಲಕ್ಷಕ್ಕೆ ಇಳಿದಿದೆ. ಸೋಮವಾರದಿಂದ ಶುಕ್ರವಾರ ದವರೆಗೆ ಸಂಚರಿಸುವವರ ಪ್ರಮಾಣ 7.74 ಲಕ್ಷದಲ್ಲಿದೆ.

ಮೆಟ್ರೊ ದರವನ್ನು ಹೆಚ್ಚಳ ಮಾಡಿ ಫೆ. 9ರಂದು ಜಾರಿಗೆ ತರಲಾಗಿತ್ತು. ಶೇ 100ರವರೆಗೆ ಅಧಿಕಗೊಂಡಿದ್ದ ರಿಂದ ಪ್ರಯಾಣಿಕರು ಮೆಟ್ರೊ ಬಿಟ್ಟು ಬೇರೆ ಸಾರಿಗೆಯಲ್ಲಿ ಸಂಚರಿಸ ತೊಡಗಿದರು. ಇದರಿಂದ ಮೆಟ್ರೊ ಪ್ರಯಾಣಿಕರ ಪ್ರಮಾಣ ಶೇ 15ರಷ್ಟು ಕಡಿಮೆಯಾಗಿತ್ತು. ಬಳಿಕ ಬಿಎಂಆರ್‌ಸಿಎಲ್ ಕೆಲ ಸ್ಟೇಜ್‌ಗಳಿಗೆ ದರ ಇಳಿಸಿತ್ತು.

'ಸರ್ವಾಂಗೀಣ ಅಭಿವೃದ್ಧಿ: ಸರ್ಕಾರಕ್ಕೆ ವರದಿ'



ಬೆಂಗಳೂರು: ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆ ಅಭಿವೃದ್ಧಿ, ಅರಣ್ಯೀಕರಣ, ಕುಡಿಯುವ ನೀರಿನ ವ್ಯವಸ್ಥೆಯನ್ನು ಇನ್ನಷ್ಟು ಉತ್ತಮಗೊಳಿಸುವ ನಿಟ್ಟಿನಲ್ಲಿ ವರದಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸುವುದಾಗಿ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ ತಿಳಿಸಿದ್ದಾರೆ.

ಇದಕ್ಕಾಗಿ ಆಯೋಗದ ಜಿಲ್ಲಾ ಮಟ್ಟದ ಸಮಿತಿಗಳನ್ನು ಬಲವರ್ಧ-ನೆಗೊಳಿಸಿ, ಅಭಿವೃದ್ಧಿ ಕಾರ್ಯದಲ್ಲಿ ಸಮಿತಿಗಳನ್ನು ಸಕ್ರಿಯವಾಗಿ ತೊಡಗಿ-ಸಿಕೊಳ್ಳಲಾಗುವುದು ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಹಿಂದೆ ಕಲ್ಯಾಣ ಕರ್ನಾಟಕ ಭಾಗದಲ್ಲಿ 'ಬಿಲ್ಡ್ ಆಪರೇಟ್ ಟ್ರಾನ್ಸ್‌ಫರ್' ಆಧಾರದಲ್ಲಿ ಗ್ರಾಮೀಣ ರಸ್ತೆಗಳನ್ನು ನಿರ್ಮಿಸಲು ಸಲಹೆ ನೀಡಿದ್ದೆ. ಹೆಚ್ಚು ಖರ್ಚು ಇಲ್ಲದೆ ₹240 ಕೋಟಿ ವೆಚ್ಚದಲ್ಲಿ ರಸ್ತೆಗಳನ್ನು ನಿರ್ಮಿಸಲಾಗಿತ್ತು. ಈಗಲೂ ಅದೇ ಮಾದರಿಯಲ್ಲಿ ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ರಸ್ತೆಗಳನ್ನು ನಿರ್ಮಿಸಬೇಕಾಗಿದೆ' ಎಂದರು.

ಹವಾಮಾನ ವೈಪರೀತ್ಯದಿಂದ ಹಲವು ಸಮಸ್ಯೆಗಳು ಆಗುತ್ತಿವೆ. ಕಲಬುರಗಿ ಜಿಲ್ಲೆಯಲ್ಲಿ ಶೇ 6ರಷ್ಟು ಮಾತ್ರ ಅರಣ್ಯವಿದೆ. ಆಳಂದದಲ್ಲಿ ಶೇ 1ರಷ್ಟು ಮಾತ್ರ ಅರಣ್ಯ ಇದೆ. ರಾಜ್ಯದಲ್ಲಿ ಕಾಡಿನ ಪ್ರಮಾಣ ಹೆಚ್ಚಿಸುವ ಅಗತ್ಯವಿದೆ. ಇದಕ್ಕಾಗಿ ಸಂಘ–ಸಂಸ್ಥೆಗಳು, ವಿದ್ಯಾರ್ಥಿಗಳ ಸಹಯೋಗವನ್ನು ಪಡೆಯಬೇಕಾಗಿದೆ. ಅರಣ್ಯ ಬೆಳೆಸುವ ಸಲುವಾಗಿ ಭೂಸುಧಾರಣಾ ಕಾಯ್ದೆಗೂ ತಿದ್ದುಪಡಿ ತರಬೇಕಾಗಿದೆ. ಈ ಕುರಿತು ಚರ್ಚೆ ಆಗಬೇಕಾಗಿದೆ ಎಂದು ಹೇಳಿದರು.

ಮುಂದಿನ ಆರ್ಥಿಕ ವರ್ಷದಲ್ಲಿ ಬಜೆಟ್ ಮಂಡಿಸುವುದಕ್ಕೂ ಮೊದಲೇ ರಾಜ್ಯದ ಆರ್ಥಿಕ, ಸಾಮಾಜಿಕ ಮತ್ತು ಇತರ ಪ್ರಮುಖ ವಲಯಗಳನ್ನು ಗಮನ-ದಲ್ಲಿಟ್ಟುಕೊಂಡು ಸರ್ಕಾರಕ್ಕೆ ಆಯೋಗ ವಿಸ್ತೃತ ವರದಿಯೊಂದನ್ನು ಸಲ್ಲಿಸಲಿದೆ ಎಂದು ಪಾಟೀಲ ತಿಳಿಸಿದರು.

3ಂಗಳಲ್ಲೇ ₹110 ಕೋಟಿ ವಂಚನೆ

ಒಂದನೇ ಪುಟದಿಂದ...

'ಹಿಂದೆಂದಿಗಿಂತಲೂ ಹೆಚ್ಚಿನ ಸೈಬರ್ ವಂಚನೆ ಪ್ರಕರಣಗಳು ಮೊದಲ ಬಾರಿಗೆ ಜನವರಿಯಲ್ಲಿ ದಾಖಲಾಗಿವೆ' ಎಂದು ಮೂಲಗಳು ತಿಳಿಸಿವೆ.

'ಈಗ ಸೈಬರ್ ಕಳ್ಳರು ವಂಚನೆ ವಿಧಾನವನ್ನು ಬದಲಾವಣೆ ಮಾಡಿಕೊಂಡಿದ್ದಾರೆ. ಕೃತಕ ಬುದ್ಧಿಮತ್ತೆಯ (ಎ.ಐ) ಮಿಮಿಕ್ರಿ, ಒಎಲ್‌ಎಕ್ಸ್, ಬ್ಯಾಂಕ್ ವಹಿವಾಟಿನ ಒನ್ ಟೈಂ ಪಾಸ್‌ವರ್ಡ್(ಒಟಿಪಿ) ಪಡೆದು ವಂಚನೆ ಮಾಡುತ್ತಿದ್ದ ಪ್ರಕರಣಗಳು ಕಳೆದ ವರ್ಷ ಹೆಚ್ಚಿದ್ದವು. ಹೂಡಿಕೆಯತ್ತ ಜನರು ಹೆಚ್ಚಿನ ಆಕರ್ಷಣೆ ತೋರುತ್ತಿದ್ದು ಅದನ್ನೇ ವಂಚಕರೂ ಬಂಡವಾಳ ಮಾಡಿಕೊಂಡಿದ್ದಾರೆ. ಹೆಚ್ಚು ಲಾಭ ಗಳಿಕೆಯ ಆಮಿಷ ಒಡ್ಡಲು ಆರಂಭದಲ್ಲಿ ಹೂಡಿಕೆದಾರರ ಖಾತೆಗೆ ಸ್ವಲ್ಪ ಹಣ ಹಾಕಿ, ನಂತರ ಮೋಸ ಮಾಡುತ್ತಿದ್ದಾರೆ. ಈ ರೀತಿಯ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚಾಗಿವೆ. ಹೂಡಿಕೆ ಹೆಸರಿನಲ್ಲಿ ಜನವರಿಯಲ್ಲಿ ₹70 ಕೋಟಿ ವಂಚನೆ ನಡೆದಿದೆ. ಪ್ರಕರಣಗಳು ದಾಖಲಾದ ಸಂಖ್ಯೆ ಗಮನಿಸಿದರೆ ಫೆಬ್ರುವರಿಯಲ್ಲೂ ಅದಕ್ಕಿಂತ ಹೆಚ್ಚಿನ ಮೊತ್ತದ ವಂಚನೆ ನಡೆದಿರುವ ಸಾಧ್ಯತೆಯಿದೆ' ಎಂದು ಸೈಬರ್ ಅಪರಾಧ ಠಾಣೆಯ ಅಧಿಕಾರಿ-ಯೊಬ್ಬರು ಮಾಹಿತಿ ನೀಡಿದರು.

'ಕಳೆದ ವರ್ಷ 'ಡಿಜಿಟಲ್ ಅರೆಸ್ಟ್' ಪ್ರಕರಣಗಳು ಹೆಚ್ಚು ದಾಖಲಾಗಿದ್ದವು. ರಾಜ್ಯದಲ್ಲಿ ಕಳೆದ ವರ್ಷ 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಸೈಬರ್ ವಂಚಕರು ₹135 ಕೋಟಿ ದೋಚಿದ್ದರು. ಬೆಂಗಳೂರು ನಗರದಲ್ಲೇ 512 ಪ್ರಕರಣಗಳು ವರದಿಯಾಗಿದ್ದವು. ಇದರಿಂದ ₹62 ಕೋಟಿ ಕಳೆದುಕೊಂ-ಡಿದ್ದರು. ಈ ವರ್ಷದ ಜನವರಿಯಲ್ಲಿ ಯಾವುದೇ ಡಿಜಿಟಲ್ ಅರೆಸ್ಟ್ ಪ್ರಕರಣಗಳು ದಾಖಲಾಗಿಲ್ಲ' ಎಂದು ಮೂಲಗಳು ತಿಳಿಸಿವೆ.

'ದೂರು ದಾಖಲಿಗೆ ಸೀಮಿತ'

'ಸೈಬರ್ ವಂಚನೆಗೆ ಒಳಗಾದರೆ ದೂರು ನೀಡಲು ಸಹಾಯವಾಣಿ 1930 ಆರಂಭಿಸಲಾಗಿದೆ. ಸೈಬರ್ ವಂಚನೆಗೆ ಒಳಗಾದವರು ತಕ್ಷಣವೇ ಆ ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡುತ್ತಿದ್ದಾರೆ. ಹಣ ಕಳೆದುಕೊಂಡವರಿಂದ ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ, ಬ್ಯಾಂಕ್ ಖಾತೆ ವಿವರ ಸೇರಿದಂತೆ ಇತರೆ ವಿವರಗಳನ್ನು ಪಡೆದುಕೊಳ್ಳುವ ಸೈಬರ್ ಪೊಲೀಸರು, ಹಣ ವರ್ಗಾವಣೆಯನ್ನು ಸ್ಥಗಿತ ಮಾಡುವುದಾಗಿ ಹೇಳುತ್ತಾರೆ. ಆದರೆ, ನಮಗೆ ಹಣ ಮಾತ್ರ ವಾಪಸ್ ಬರುತ್ತಿಲ್ಲ' ಎಂದು ಹಲವು ದೂರುದಾರರು ನೋವು ತೋಡಿಕೊಂಡಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆರೋಗ್ಯ ಅಧಿಕಾರಿ (ಸಾಆ)ರವರ ಕಛೇರಿ, ನೆಲಮಹಡಿ, ಅನೆಕ್ಸ್–2 ಕಟ್ಟಡ, ಎನ್. ಆರ್. ಚೌಕ, ಬೆಂಗಳೂರು – 560 002.

ಸಂ: ಬಿಬಿಎಂಪಿ/2024–25/ಇಂಡ್0079 ದಿನಾಂಕ: 27.02.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರು, ಅರ್ಹ ಬಿಡ್ಡುದಾರರಿಂದ **"ನಮ್ಮ ಕ್ಲಿನಿಕ್‌ಗಳಿಗಾಗಿ 100 ಸಂಖ್ಯೆಯ 43 ಇಂಚಿನ ಎಲ್‌ಇಡಿ ಟಿ.ವಿ.ಗಳನ್ನು ಪೂರೈಸಲು"** ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಉಲ್ಲೇಖ ಸಂಖ್ಯೆ	ಬಿಬಿಎಂಪಿ/2024–25/ಇಂಡ್0079/ಕರೆ–3
ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲು ಪ್ರಾರಂಭಿಕ ದಿನಾಂಕ:	27.02.2025 ರಿಂದ
ಪೂರ್ವಭಾವಿ ಸಭೆ ದಿನಾಂಕ ಮತ್ತು ಸ್ಥಳ	01.03.2025 ರ 11.00 ಗಂಟೆಗೆ. ವಿಶೇಷ ಆಯುಕ್ತರು (ಆರೋಗ್ಯ) ರವರ ಕಛೇರಿ, 3ನೇ ಮಹಡಿ, ಅನೆಕ್ಸ್–3 ಕಟ್ಟಡ, ಎನ್.ಆರ್.ಚೌಕ, ಬೆಂಗಳೂರು–560002.
ಕೆಪಿಪಿ ಪೋರ್ಟಲ್‌ನಲ್ಲಿ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ:	01.03.2025 ರ ಸಂಜೆ 5.00 ಗಂಟೆಯವರೆಗೆ
ಕೆಪಿಪಿ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:	06.03.2025 ರ ಸಂಜೆ 5.00 ಗಂಟೆಯವರೆಗೆ
ಕೆಪಿಪಿ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:	07.03.2025 ರ ಸಂಜೆ 5.10 ಗಂಟೆಗೆ
ಮಾದರಿ ಸಲ್ಲಿಕೆಯ ಪ್ರದರ್ಶನದ ದಿನಾಂಕ ಮತ್ತು ಸಮಯ	ತಾಂತ್ರಿಕ ಬಿಡ್ ತೆರೆದ ನಂತರ ತಿಳಿಸಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ https://kppp.karnataka.gov.in ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಮುಖ್ಯ ಆರೋಗ್ಯ ಅಧಿಕಾರಿ(ಸಾಆ).

ಕೋಲಾರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.ಕೋಲಾರ

ಎನ್ ಹೆಚ್ – 75, ಹುತ್ತೂರು ಅಂಚೆ, ಕೋಲಾರ – 563102

ಕ.ಸಂ.ಕೋಹಾಒ/ಶೇ.ತಾಂ./ಇ ಟೆಂಡರ್/ರಾ.ವಿ/11103/2024–25 ದಿನಾಂಕ:21.02.2025

ಇ– ಟೆಂಡರ್ ಪ್ರಕಟಣೆ

ಕೋಲಾರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಕೋಲಾರ ಎನ್.ಹೆಚ್–75, ಹುತ್ತೂರು ಅಂಚೆ, ಕೋಲಾರ–563102. ರವರಿಂದ ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರ ರಾಸುಗಳಿಗೆ (**ಮಿಶ್ರ ತಳಿ ಹೈನುರಾಸುಗಳು ಮತ್ತು ಪಡ್ಡೆಗಳು, ಸ್ಥಳೀಯ ಹೈನುರಾಸುಗಳು ಮತ್ತು ಎಮ್ಮೆಗಳು**) ಗುಂಪು ವಿಮಾ ಸೌಲಭ್ಯವನ್ನು ಒಂದು ವರ್ಷದ ಅವಧಿಗೆ ಆಸಕ್ತಿಯುಳ್ಳ ಮತ್ತು IRDAI ನಲ್ಲಿ ನೋಂದಣಿಯಾಗಿರುವ ಅರ್ಹ ಜೀವ ವಿಮಾ ಕಂಪನಿಗಳಿಂದ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ಗಳನ್ನು ಇ-ಟೆಂಡರ್ ಮೂಲಕ ಅಹ್ವಾನಿಸಲಾಗಿದೆ.

ವಿವರಗಳು ಈ ಕೆಳಕಂಡಂತಿವೆ

ಕ್ರ.ಸಂ	ಸಾಮಗ್ರಿ ವಿವರ	ಪರಿಮಾಣ
1	ಇ–ಟೆಂಡರ್ ಲಭಿಸುವ ದಿನಾಂಕ ಮತ್ತು ಸಮಯ	ದಿನಾಂಕ: 27.02.2025 ರಿಂದ 28.03.2025 ಸಂಜೆ 5:30
2	ಟೆಂಡರ್ ಬಗ್ಗೆ ಸ್ಪಷ್ಟನೆ/ ಆಕ್ಷೇಪಣೆ ಪಡೆಯುವ ಕೊನೆಯ ದಿನಾಂಕ: ಮತ್ತು	ದಿನಾಂಕ: 13.03.2025 ರಂದು ಸಂಜೆ 5:30 ಗಂಟೆಯವರೆಗೆ.
3	ಟೆಂಡರ್ ಸಲ್ಲಿಸುವ / ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	ದಿನಾಂಕ: 28.03.2025 ರಂದು ಸಂಜೆ 5:30 ಗಂಟೆಯ ಒಳಗೆ.
4	ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ:02.04.2025 ರಂದು ಬೆಳಗ್ಗೆ 10.00 ಗಂಟೆಯ ನಂತರ.
5	ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	ದಿನಾಂಕ: 05.04.2025 ರಂದು ಬೆಳಗ್ಗೆ 10.00 ಗಂಟೆಯ ನಂತರ
6	ತಾಂತ್ರಿಕ / ವಾಣಿಜ್ಯ ಟೆಂಡರ್‌ಗಳನ್ನು ತೆರೆಯುವ ಸ್ಥಳ	ಕೋಲಾರ ಜಿಲ್ಲಾ ಸಹಕಾರ ಹಾಲು ಒಕ್ಕೂಟದ ಮಂಡಳಿ ಸಭಾಂಗಣ ಕೋಲಾರ ಡೇರಿ, ಎನ್.ಹೆಚ್.–75, ಹುತ್ತೂರು ಅಂಚ, ಕೋಲಾರ–563102.

ಟೆಂಡರ್ ಸಂಬಂಧ ನೀಡಬೇಕಾದ ಅರ್ಜಿ ಶುಲ್ಕ, ಇ.ಎಂ.ಡಿ ಮೊತ್ತ, ಭದ್ರತಾ ಠೇವಣೆ ಹಾಗೂ ಟೆಂಡರ್ ಷರತ್ತು ನಿಬಂಧನೆಗಳಿಗಾಗಿ ವೆಬ್‌ಸೈಟ್ https;//www.kppp.karnataka.gov.in ನಲ್ಲಿ ಲಭ್ಯವಿರುತ್ತದೆ.

ಸಹಿ/– ವ್ಯವಸ್ಥಾಪಕ ನಿರ್ದೇಶಕರು, (ಕೋಲಾರ ಹಾಲು ಒಕ್ಕೂಟ), ಇ–ಟೆಂಡರ್ ಅಹ್ವಾನ ಪ್ರಾಧಿಕಾರ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ – 562110.

ಸಂಖ್ಯೆ: ಬಿಐಎಎಪಿಎ/ಟಿಪಿ/ಭೂಉಬ/118/2024–25/3127 ದಿನಾಂಕ: 27–02–2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ವ್ಯವಸಾಯ'** ಭೂಉಪಯೋಗ ವಲಯದಿಂದ **'ವಾಣಿಜ್ಯ'** ಭೂಉಪಯೋಗ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಮೆ॥ ಶ್ರೀ ಶ್ರೀನಿವಾಸ ಟ್ರಸ್ಟ್ ಪರವಾಗಿ ಅಧಿಕೃತ ಸಹಿದಾರರಾದ ಶ್ರೀ ದೊಡ್ಡವೀರಯ್ಯ ಸುಧಾಕರ್	ದೇವನಹಳ್ಳಿ	ಕಸಬಾ	ಕೆಂಪತಿಮ್ಮನಹಳ್ಳಿ	61/1	1–33	ವ್ಯವಸಾಯ	ವಾಣಿಜ್ಯ
2		ದೇವನಹಳ್ಳಿ	ಕಸಬಾ	ಕೆಂಪತಿಮ್ಮನಹಳ್ಳಿ	61/3	1–00	ವ್ಯವಸಾಯ	ವಾಣಿಜ್ಯ
3	ಶ್ರೀಮತಿ ಎ ರುಕ್ಕಮ್ಮ ಕೋಂ ಲೇ॥ ಬಿ ಗೋಪಾಲ್‌ಗೌಡ	ದೇವನಹಳ್ಳಿ	ಕಸಬಾ	ಕೆಂಪತಿಮ್ಮನಹಳ್ಳಿ	64/3	1–33	ವ್ಯವಸಾಯ	ವಾಣಿಜ್ಯ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು, ಸದರಿ ಜಮೀನುಗಳ ಪರಿಸರದಲ್ಲಿ ವಸತಿ / ವಸತಿಯೇತರ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನುಗಳ ಪರಿಸರದಲ್ಲಿ ವಾಣಿಜ್ಯ ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ ವಾಣಿಜ್ಯ ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ ವಾಣಿಜ್ಯ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ ಅಲ್ಲದೇ, ಪ್ರಸ್ತಾಪಿತ ಜಮೀನುಗಳಲ್ಲಿ ವಾಣಿಜ್ಯ ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಜಮೀನುಗಳನ್ನು **'ವ್ಯವಸಾಯ ಭೂಉಪಯೋಗ ವಲಯ'** ದಿಂದ **'ವಾಣಿಜ್ಯ ಭೂಉಪಯೋಗ ವಲಯಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾ.ಪ್ರ/5333/2024–25

ಸ್ಪರ್ಧೆಯಲ್ಲಿ ಎಲ್ಲಾ ವಯೋಮಾನದವರಿಗೆ ಅವಕಾಶ

ಪೊಲೀಸ್ ಓಟಕ್ಕೆ ಹತ್ತು ಸಾವಿರ ಮಂದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಇಲಾಖೆ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸಹಯೋಗದಲ್ಲಿ ಮಾರ್ಚ್ 9ರಂದು ಹಮ್ಮಿಕೊಂಡಿರುವ ಪೊಲೀಸ್ ಓಟ(ಕೆಎಸ್‌ಪಿ ರನ್)ದಲ್ಲಿ ಪಾಲ್ಗೊಳ್ಳಲು ಹತ್ತು ಸಾವಿರಕ್ಕೂ ಅಧಿಕ ಮಂದಿ ನೋಂದಣಿ ಮಾಡಿಸಿಕೊಂಡಿದ್ದಾರೆ.

ಪೊಲೀಸ್ ಪ್ರಧಾನ ಕಚೇರಿಯಲ್ಲಿ ಗುರುವಾರ ಓಟದ ಸ್ಪರ್ಧಿಗಳಿಗೆ ನೀಡುವ ಟೀ ಶರ್ಟ್, ಕಿರುಹೊತ್ತಿಗೆ ಹಾಗೂ ವಿಜೇತರಿಗೆ ನೀಡುವ ಪದಕಗಳನ್ನು ಅನಾವರಣಗೊಳಿಸಿದ ಬಳಿಕ ಸುದ್ದಿಗೋ-ಷ್ಠಿಯಲ್ಲಿ ಮಾತನಾಡಿದ ರಾಜ್ಯ ಪೊಲೀಸ್ ಮಹಾ ನಿರ್ದೇಶಕ (ಡಿಜಿ–ಐಜಿಪಿ) ಅಲೋಕ್ ಮೋಹನ್, 'ನಮ್ಮ ಪೊಲೀಸ್ ನಮ್ಮ ಹೆಮ್ಮೆ' ಎಂಬ ಘೋಷವಾಕ್ಯದಡಿ ರಾಜ್ಯದ ಜನರ ಸುರಕ್ಷತೆಗಾಗಿ ಶ್ರಮಿಸು-ತ್ತಿರುವ ಪೊಲೀಸರಿಗೆ ಗೌರವ ಸೂಚಿಸಲು ಈ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ' ಎಂದರು.

'ಹಸಿರು ಬೆಂಗಳೂರು, ಡ್ರಗ್ಸ್ ಮುಕ್ತ ಕರ್ನಾಟಕ, ಸೈಬರ್ ಅಪರಾಧಗಳ ಬಗ್ಗೆ ಮತ್ತು ವೃದ್ಧರು ಕ್ರಿಯಾಶೀಲ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಕುರಿತು ಅರಿವು ಮೂಡಿಸಲಾಗುತ್ತದೆ. ಪ್ರತಿಯೊಬ್ಬ ಸ್ಪರ್ಧಿಗೂ ಟೀ ಶರ್ಟ್, ಪದಕ ನೀಡಲಾಗುವುದು' ಎಂದು ತಿಳಿಸಿದರು.

ಬೆಳಿಗ್ಗೆ 6.30ಕ್ಕೆ 5 ಕಿ.ಮೀ. ಹಾಗೂ 7.30ಕ್ಕೆ 10 ಕಿ.ಮೀ. ಓಟ ಆರಂಭವಾಗಲಿದೆ. ಎರಡೂ ಓಟಗಳು ವಿಧಾನಸೌಧದಿಂದ ಆರಂಭವಾಗಿ, ಕಬ್ಬನ್ ಪಾರ್ಕ್‌ನಲ್ಲಿ ಸಂಚರಿಸಲಿವೆ. 10 ಕಿ.ಮೀ. ಓಟದ ವಿಜೇತರಿಗೆ ಮೊದಲ ಬಹುಮಾನ ₹1 ಲಕ್ಷ ನಗದು, ಎರಡನೇ ಬಹುಮಾನ ₹50 ಸಾವಿರ ನಗದು ಹಾಗೂ ತೃತೀಯ ಬಹುಮಾನ ₹30 ಸಾವಿರ ನಗದು ಇದೆ. 5 ಕಿ.ಮೀ. ಓಟದ ವಿಜೇತರಿಗೆ ಪ್ರಥಮ ಬಹುಮಾನ ₹40 ಸಾವಿರ ನಗದು, ದ್ವಿತೀಯ ₹20 ಸಾವಿರ ನಗದು, ತೃತೀಯ ₹10 ಸಾವಿರ ನಗದು ಹಾಗೂ ನಾಲ್ಕನೇ ಬಹುಮಾನ ₹5 ಸಾವಿರ ನಗದು ಇದೆ. ಹಿರಿಯ ನಾಗರಿಕರು ಹಾಗೂ ಅಂಗವಿಕಲರಿಗೂ ಪ್ರತ್ಯೇಕ ಬಹುಮಾನಗಳಿವೆ ಎಂದು ವಿವರ ನೀಡಿದರು.

ಮಣಿಪಾಲ್ ಆಸ್ಪತ್ರೆ ವೈದ್ಯಕೀಯ ಸಿಬ್ಬಂದಿ ಸ್ಪರ್ಧಿಗಳ ಆರೋಗ್ಯ ತಪಾಸಣೆ ಮಾಡುವರು. ಸ್ಪರ್ಧೆಗೆ ಬಿಎಂಆರ್‌ಸಿಎಲ್ ಹಾಗೂ ಯುವಜನಸೇವೆ ಇಲಾಖೆ ಸಹ ಕೈ ಜೋಡಿಸಿವೆ. ಎಸ್‌ಬಿಐ ಬೆಂಗಳೂರು ವಲಯದ ಪ್ರಧಾನ ವ್ಯವಸ್ಥಾಪಕಿ ಜೂಹಿ ಸ್ಮಿತಾ ಸಿನ್ಹಾ, ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ಕೆಎಸ್‌ಆರ್‌ಪಿ ಎಡಿಜಿಪಿ ಉಮೇಶ್ ಕುಮಾರ್, ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್, ಎನ್‌ಐಬಿಯ ನಾಗರಾಜ ಅಡಿಗ, ಕೆಎಸ್‌ಆರ್‌ಪಿ ಐಜಿಪಿ ಸಂದೀಪ್ ಪಾಟೀಲ್ ಹಾಜರಿದ್ದರು.

ಪೊಲೀಸ್ ಓಟದಲ್ಲಿ ಪಾಲ್ಗೊಳ್ಳುವವರಿಗೆ ನೀಡುವ ಟೀ ಶರ್ಟ್ ಅನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ (ಮಧ್ಯದಲ್ಲಿ ಇರುವವರು) ಅನಾವರಣ ಮಾಡಿದರು. ಬಿ.ದಯಾನಂದ, ಜೂಹಿ ಸ್ಮಿತಾ ಸಿನ್ಹಾ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ಮಾ.4ರವರೆಗೂ ನೋಂದಣಿ'

'ಪೊಲೀಸರು, ಎಸ್‌ಬಿಐ ಸಿಬ್ಬಂದಿ ಹಾಗೂ ಸಾರ್ವಜನಿಕರ ವಿಭಾಗಗಳಲ್ಲಿ ಓಟ ಇರಲಿದೆ. 5 ಕಿ.ಮೀ ಹಾಗೂ 10 ಕಿ.ಮೀ. ಪ್ರತ್ಯೇಕ ಓಟವಿದ್ದು, ಮೊದಲ, ಎರಡನೇ ಹಾಗೂ ಮೂರನೇ ಸ್ಥಾನ ಪಡೆದವರಿಗೆ ನಗದು ಬಹುಮಾನ ಇದೆ. ಆಸಕ್ತರು ನೋಂದಣಿ (https://www.mysamay.in/public/event/info/d3d94823-4396-40d7-bd76-d553a5f50a60) ಮಾಡಿಕೊಳ್ಳಲು ಮಾರ್ಚ್ 4ರವರೆಗೆ ಅವಕಾಶವಿದೆ' ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ತಿಳಿಸಿದರು.

2 ತಿಂಗಳಾದರೂ ಸಿಗದ ವೇತನ

ಎನ್‌ಎಚ್‌ಎಂ ಅಡಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ನೌಕರರಿಗೆ ಸಂಕಷ್ಟ

• ಜಿ.ಶಿವಕುಮಾರ

ದಾವಣಗೆರೆ: ರಾಷ್ಟ್ರೀಯ ಆರೋಗ್ಯ ಮಿಷನ್ (ಎನ್‌ಎಚ್‌ಎಂ) ಅಡಿ ರಾಜ್ಯದ ವಿವಿಧೆಡೆ ಆರೋಗ್ಯ ಇಲಾಖೆಯಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ಎರಡು ತಿಂಗಳಿಂದ ವೇತನ ಪಾವತಿಯಾಗಿಲ್ಲ. ಇದರಿಂದಾಗಿ ಇದೇ ಉದ್ಯೋಗ ನಂಬಿರುವ ಸಾವಿರಾರು ಸಿಬ್ಬಂದಿಯ ಜೀವನ ಸಂಕಷ್ಟಮಯವಾಗಿದೆ.

ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 28,000 ಜನ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಬೊಕ್ಕಸ ಬರಿದಾಗಿರುವುದಾಗಿ ಹೇಳಿ ಇವರಿಗೆ ಜನವರಿ ತಿಂಗಳ ಸಂಬಳ ನೀಡಿಲ್ಲ. ಫೆಬ್ರುವರಿಯ ವೇತನ ಕೊಡುವುದೂ ಅನುಮಾನ ಎಂದು ಹೇಳಲಾಗುತ್ತಿದೆ.

‘ನಮಗೆ ಬೇರೆ ಯಾವ ಮೂಲಗಳಿಂದಲೂ ಆದಾಯ ಇಲ್ಲ. ತಿಂಗಳ ಸಂಬಳದಲ್ಲೇ ಸಂಸಾರ ನಿಭಾಯಿಸಬೇಕು. ಎರಡು ತಿಂಗಳಿಂದ ವೇತನ ಬಾರದ್ದರಿಂದ ಮನೆ ಬಾಡಿಗೆ ಕಟ್ಟಿಲ್ಲ. ದಿನಸಿ ಕೊಂಡುಕೊಳ್ಳಲೂ ಕೈಯಲ್ಲಿ ಕಾಸಿಲ್ಲ. ಸಣ್ಣ ಪುಟ್ಟ ಖರ್ಚಿಗೆ ಹಣ ಬೇಕೆಂದರೆ ಸಂಬಂಧಿಕರು ಹಾಗೂ ಸ್ನೇಹಿತರ ಬಳಿ ಅಂಗಲಾಚಬೇಕಿದೆ. ನಮ್ಮ ಬದುಕು ಯಾತನಾಮಯವಾಗಿದೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ನೌಕರರೊಬ್ಬರು ‘ಪ್ರಜಾವಾಣಿ’ ಎದುರು ಅಳಲು ತೋಡಿಕೊಂಡರು.

‘ಸಂಬಳ ಹೆಚ್ಚಿಸುವುದು ಒತ್ತಟ್ಟಿಗಿರಲಿ, ಈಗ ತಿಂಗಳ ವೇತನವನ್ನೂ ಸರಿಯಾಗಿ ಕೊಡುತ್ತಿಲ್ಲ. ಎನ್‌ಎಚ್‌ಎಂ ಅಡಿ ಕಾರ್ಯ ನಿರ್ವಹಿಸುವವರ ಸೇವೆಯನ್ನು ಕಾಯಂಗೊಳಿಸುವುದಾಗಿ ಕಾಂಗ್ರೆಸ್ ಪಕ್ಷ ವಿಧಾನಸಭೆ ಚುನಾವಣೆಗೂ ಮುನ್ನ ಹೇಳಿತ್ತು. ಪ್ರಣಾಳಿಕೆಯಲ್ಲೂ ಇದನ್ನು ಸೇರ್ಪಡೆ ಮಾಡಿತ್ತು. ಆದರೆ ಈಗ ಮಾತು ತಪ್ಪಿದೆ. ನೌಕರರ ವೇತನಕ್ಕಾಗಿ ಇಟ್ಟಿದ್ದ ನಿಧಿಯನ್ನು ಸರ್ಕಾರ ಅನ್ಯ ಉದ್ದೇಶಕ್ಕೆ ಬಳಸಿಕೊಂಡಿದೆ. ಇದರಿಂದ ನಾವು ಪರಿತಪಿಸುವಂತಾಗಿದೆ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ನೌಕರರೊಬ್ಬರು ದೂರಿದರು.

‘ನಮಗೆ ಈಗ ಸಿಗುತ್ತಿರುವ ಸಂಬಳದಲ್ಲಿ ಜೀವನ ನಿರ್ವಹಣೆ ಕಷ್ಟ. ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವಂತೆ ಆಗ್ರಹಿಸಿ ಹಲವು ಬಾರಿ ಹೋರಾಟ ನಡೆಸಿದರೂ ಸರ್ಕಾರ ನಮ್ಮ ಮನವಿಗೆ ಕಿವಿಗೊಟ್ಟಿಲ್ಲ. ತಿಂಗಳ ಕೊನೆಯಲ್ಲೇ ಸಂಬಳ ಪಾವತಿಸಬೇಕೆಂಬ ನಿಯಮವಿದೆ. ಆದರೂ ಇದರ ಪಾಲನೆಯಾಗುತ್ತಿಲ್ಲ’ ಎಂದು ದಾವಣಗೆರೆ ಜಿಲ್ಲಾ ಕ್ಷಯರೋಗ ಕೇಂದ್ರದಲ್ಲಿ ಸಂದರ್ಶಕರಾಗಿರುವ ಸುರೇಶ್‌ಕುಮಾರ್ ಕೋಟೆ ಬೇಸರ ವ್ಯಕ್ತಪಡಿಸಿದರು.

‘ಹಿಂದೆಂದೂ ಈ ರೀತಿಯ ಸಮಸ್ಯೆಯಾಗಿರಲಿಲ್ಲ. ಅನುದಾನದ ಕೊರತೆಯಿಂದಾಗಿ ಈ ಬಾರಿ ಸಮಯಕ್ಕೆ ಸರಿಯಾಗಿ ನೌಕರರಿಗೆ ಸಂಬಳ ನೀಡುವುದಕ್ಕೆ ಆಗಿಲ್ಲ. ನಮ್ಮ ಜಿಲ್ಲೆಯಲ್ಲಷ್ಟೇ ಅಲ್ಲ, ರಾಜ್ಯದ ಎಲ್ಲಾ ಕಡೆಯೂ ಈ ಸಮಸ್ಯೆಯಾಗಿದೆ. ಇದೀಗ ಅನುದಾನ ಬಿಡುಗಡೆಯಾಗಿದೆ. ಇನ್ನು ನಾಲ್ಕೈದು ದಿನಗಳಲ್ಲಿ ನೌಕರರ ಬಾಕಿ ವೇತನ ಪಾವತಿಸುತ್ತೇವೆ’ ಎಂದು ದಾವಣಗೆರೆ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಸ್.ಷಣ್ಮುಖಪ್ಪ ತಿಳಿಸಿದರು.

> **ಸರ್ಕಾರವೇ ನಮ್ಮನ್ನು ಸಾಲಗಾರರನ್ನಾಗಿ ಮಾಡುತ್ತಿದೆ. ನೌಕರರನ್ನು ಕಡಿಮೆ ಸಂಬಳಕ್ಕೆ ದುಡಿಸಿಕೊಳ್ಳಲಾಗುತ್ತಿದೆ**
> **ಹಾಲಸ್ವಾಮಿ ಎನ್.ಸಿ**
> ದಾವಣಗೆರೆ ಜಿಲ್ಲಾ ಘಟಕದ ಅಧ್ಯಕ್ಷ, ಎನ್‌ಎಚ್‌ಎಂ ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರ ಸಂಘ

> **ಈ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ಶೀಘ್ರವೇ ವೇತನ ಪಾವತಿಗೆ ಕ್ರಮ ವಹಿಸುವಂತೆ ಸೂಚಿಸುತ್ತೇನೆ**
> **ಆಯನೂರು ಮಂಜುನಾಥ್**
> ಗೌರವಾಧ್ಯಕ್ಷ, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನೌಕರರ ಸಂಘ

₹14,488 ಕೋಟಿ ‘ಪರಿಶಿಷ್ಟರ ಮೀಸಲು ನಿಧಿ’ಗೆ ಕನ್ನ: ಆರೋಪ

ಪ್ರಜಾವಾಣಿ ವಾರ್ತೆ

ಕೋಟಾ ಶ್ರೀನಿವಾಸ ಪೂಜಾರಿ

ಮಂಡ್ಯ: ‘ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ₹14,488 ಕೋಟಿಯನ್ನು ಮುಂಬರುವ ಬಜೆಟ್‌ನಲ್ಲಿ ಮತ್ತೆ ದುರ್ಬಳಕೆ ಮಾಡಲು ರಾಜ್ಯ ಸರ್ಕಾರ ಹೊಂಚು ಹಾಕಿದೆ. ಗ್ಯಾರಂಟಿ ಯೋಜನೆಗಳಿಗಾಗಿ ‘ದಲಿತರ ಮೀಸಲು ನಿಧಿ’ಯನ್ನು ಬಳಸಿಕೊಳ್ಳುವುದನ್ನು ಖಂಡಿಸಿ ಪ್ರತಿ ಜಿಲ್ಲೆಯಲ್ಲೂ ‘ಜನಾಂದೋಲನ’ ಹಮ್ಮಿಕೊಂಡಿದ್ದೇವೆ’ ಎಂದು ಸಂಸದ ಕೋಟಾ ಶ್ರೀನಿವಾಸ ಪೂಜಾರಿ ತಿಳಿಸಿದರು.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಈ ಸರ್ಕಾರದ ದಲಿತ ವಿರೋಧಿ ನೀತಿಯನ್ನು ಒಪ್ಪುವುದಿಲ್ಲ. ಸದನದ ಹೊರಗೆ ಮತ್ತು ಒಳಗೆ ಹೋರಾಟ ತೀವ್ರಗೊಳಿಸುತ್ತೇವೆ. ಜನರು ಪ್ರತಿ ತಾಲ್ಲೂಕಿನಲ್ಲೂ ಬೀದಿಗಿಳಿದು ಪ್ರತಿಭಟಿಸಲಿದ್ದಾರೆ’ ಎಂದರು.

‘2023 ಮತ್ತು 2024ರಲ್ಲಿ ‘ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ’ಯಿಂದ ₹14,282 ಕೋಟಿಯನ್ನು ಗ್ಯಾರಂಟಿ ಅನುಷ್ಠಾನಕ್ಕಾಗಿ ಕಾಂಗ್ರೆಸ್ ಸರ್ಕಾರ ದುರ್ಬಳಕೆ ಮಾಡಿಕೊಂಡಿದೆ. ಅಲ್ಪಸಂಖ್ಯಾತರಿಗೆಂದೇ ಬಜೆಟ್‌ನಲ್ಲಿ ಪ್ರತ್ಯೇಕವಾಗಿ ಸಾವಿರಾರು ಕೋಟಿ ರೂಪಾಯಿ ಅನುದಾನ ತೆಗೆದಿರಿಸಲಾಗಿದೆ. ಆದರೆ, ಸರ್ಕಾರ ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ಆ ಹಣ ಮುಟ್ಟುವುದಿಲ್ಲ. ದಲಿತರ ಕಾಲೊನಿಗಳಿಗೆ, ಆದಿವಾಸಿ ಹಾಡಿಗಳಿಗೆ ಮೂಲಸೌಕರ್ಯ ಕಲ್ಪಿಸಿಲ್ಲ. ಈ ಸರ್ಕಾರ ದಲಿತ ದ್ರೋಹಿ ಅಲ್ಲದೆ ಮತ್ತೇನು? ಎಂದು ಕೇಳಿದರು.

‘ಅಂಬೇಡ್ಕರ್, ಆದಿಜಾಂಬವ, ತಾಂಡಾ, ಬೋವಿ, ವಾಲ್ಮೀಕಿ ಹಾಗೂ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಗಳು ಸರ್ಕಾರದ ಹಣಕಾಸಿನ ನೆರವಿಲ್ಲದೆ ಸೊರಗಿವೆ. ಸಾರಿಗೆ–ಸಂಬಳಕ್ಕೂ ಕಾಸಿಲ್ಲದೆ ದಿವಾಳಿ ಸ್ಥಿತಿಯಲ್ಲಿವೆ’ ಎಂದು ಅವರು ದೂರಿದರು.

ಈಶಾ ಯೋಗ ಕೇಂದ್ರದ ಕಾರ್ಯಕ್ರಮ

‘ಆಹ್ವಾನದ ಮೇರೆಗೆ ಡಿಕೆಶಿ ಭಾಗಿ’

ಪ್ರಜಾವಾಣಿ ವಾರ್ತೆ

ಸಂತೋಷ ಲಾಡ್

ಹುಬ್ಬಳ್ಳಿ: ‘ಸದ್ಗುರು ಜಗ್ಗಿ ವಾಸುದೇವ್ ಅವರ ಆಹ್ವಾನದ ಮೇರೆಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈಶಾ ಯೋಗ ಕೇಂದ್ರದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಾರೆ’ ಎಂದು ಸಚಿವ ಸಂತೋಷ ಲಾಡ್ ಹೇಳಿದರು.

‘ಸದ್ಗುರು ಸಿದ್ಧಾಂತದ ಬಗ್ಗೆ ತಕರಾರು ಇಲ್ಲ. ಆದರೆ, ಕಾರ್ಯಕ್ರಮದಲ್ಲಿ ರಾಜಕೀಯದ ಕುರಿತು ಅವರು ಮಾತನಾಡಿದ್ದು ಸರಿಯಲ್ಲ. ಅವರ ಹೇಳಿಕೆ ಖಂಡನೀಯ’ ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

‘ಈಶಾ ಯೋಗ ಕೇಂದ್ರದ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಡಿ.ಕೆ.ಶಿವಕುಮಾರ್ ಅವರು ವೇದಿಕೆ ಹಂಚಿಕೊಂಡ ಬಗ್ಗೆ ನಾನು ಹೆಚ್ಚೇನೂ ಮಾತನಾಡಲ್ಲ’ ಎಂದರು.

‘ಮುಂಬರುವ ಚುನಾವಣೆಯಲ್ಲಿ ನಾಯಕತ್ವ ನನ್ನದೇ’ ಎಂಬ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಡಿ.ಕೆ.ಶಿವಕುಮಾರ್ ಯಾಕೆ ಹಾಗೆ ಮಾತನಾಡಿದ್ದಾರೆ ಎಂಬುದು ಗೊತ್ತಿಲ್ಲ. ಅವರ ಹೇಳಿಕೆ ಬಗ್ಗೆ ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ. ಯಾವ ಸಮಯದಲ್ಲಿ ಯಾರು ಏನು ಮಾತನಾಡುತ್ತಾರೆ ಎಂಬುದು ಅರ್ಥ ಆಗಲ್ಲ’ ಎಂದರು.

‘ದೇಶದಲ್ಲಿ ಯಾವುದೇ ರಾಜಕೀಯ ಪಕ್ಷ, ನಾಯಕರು ಶಾಶ್ವತವಲ್ಲ. ಜನ ಮತ್ತು ಸಂವಿಧಾನ ಮಾತ್ರ ಶಾಶ್ವತ. ಆದರೆ, ಸಂವಿಧಾನಕ್ಕೆ ಬಿಜೆಪಿ ಧಕ್ಕೆ ತರುತ್ತಿದೆ’ ಎಂದು ಅವರು ತಿಳಿಸಿದರು.

‘ಡಿಕೆಶಿಯನ್ನು ಪಕ್ಷದಿಂದ ಹೊರಹಾಕಲಿ’

ಜಗದೀಶ ಶೆಟ್ಟರ್

‘ಕೆಪಿಸಿಸಿ ಅಧ್ಯಕ್ಷ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ತತ್ವ, ಸಿದ್ಧಾಂತದ ವಿರುದ್ಧವಾಗಿದ್ದರೆ, ಅವರನ್ನು ಪಕ್ಷದಿಂದ ಹೊರಗೆ ಹಾಕಲಿ’ ಎಂದು ಸಂಸದ ಜಗದೀಶ ಶೆಟ್ಟರ್ ಸವಾಲು ಹಾಕಿದರು.

‘ಡಿ.ಕೆ.ಶಿವಕುಮಾರ್ ಅವರು ಮಹಾಕುಂಭಮೇಳ, ಈಶಾ ಯೋಗ ಕೇಂದ್ರದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ದೊಡ್ಡಸ್ತಿಕೆ ಅಲ್ಲ. ಇದು ಸರಿ ಇರದಿದ್ದರೆ, ಅವರನ್ನು ಪಕ್ಷದಿಂದ ಉಚ್ಚಾಟಿಸಲಿ’ ಎಂದು ಅವರು ತಿಳಿಸಿದರು.

‘ಹಿಂದೂಗಳ ಮೇಲೆ ದ್ವೇಷ ಇರುವ ಕಾರಣಕ್ಕೆ ಕಾಂಗ್ರೆಸ್ ಉದ್ಧಾರ ಆಗಿಲ್ಲ. ಹಿಂದೂಗಳಿಲ್ಲದೆ ಕಾಂಗ್ರೆಸ್ ರಾಜಕಾರಣ ಮಾಡುವುದು, ಅದರ ಹಣೆಬರಹ. ಹಿಂದೂಗಳನ್ನು ಕೀಳಾಗಿ ಕಾಣುವುದೇ ಕಾಂಗ್ರೆಸ್ ಅವನತಿಗೆ ಕಾರಣ’ ಎಂದರು.

‘ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ಅವರ ಹೇಳಿಕೆ ಹಿಂದೂ ವಿರೋಧಿ ಆಗಿದೆ. ಕಾಂಗ್ರೆಸ್‌ನ ಸಾಕಷ್ಟು ನಾಯಕರು ಕೂಡ ಕುಂಭಮೇಳದಲ್ಲಿ ಭಾಗವಹಿಸಿದ್ದಾರೆ. ರಾಜಕಾರಣ ಮತ್ತು ಧರ್ಮಕ್ಕೆ ಯಾವುದೇ ಕಾರಣಕ್ಕೂ ತಳಕು ಹಾಕಬಾರದು’ ಎಂದರು.

ಪಾದಯಾತ್ರೆ ಮಾಡಿದ 103 ವರ್ಷದ ವೃದ್ಧೆ

ಪಾರ್ವತಮ್ಮ

ಚಿಕ್ಕಮಗಳೂರು: 103 ವರ್ಷದ ವೃದ್ಧೆಯೊಬ್ಬರು ಧರ್ಮಸ್ಥಳಕ್ಕೆ ಪಾದಯಾತ್ರೆ ಮಾಡಿದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ತುಮಕೂರು ಜಿಲ್ಲೆಯ ತಿಪಟೂರಿನ ಪಾರ್ವತಮ್ಮ ಅವರು ಸೋಮವಾರ ರಾತ್ರಿ ಮೂಡಿಗೆರೆ ತಾಲ್ಲೂಕಿನ ಬಣಕಲ್ ಬಳಿ ರಸ್ತೆಯಲ್ಲಿ ಪಾದಯಾತ್ರೆ ತೆರಳುತ್ತಿದ್ದಾಗ ಸ್ಥಳೀಯರು ಮೊಬೈಲ್ ಫೋನ್‌ನಲ್ಲಿ ವಿಡಿಯೊ ಚಿತ್ರೀಕರಿಸಿಕೊಂಡಿದ್ದಾರೆ.

‘ಸೈನಿಕರಿಗೆ ಒಳ್ಳೆಯದಾಗ ಬೇಕು. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಮಾಡಿರುವ ಕಾನೂನು ಎಲ್ಲಾ ರಾಜ್ಯಗಳಲ್ಲೂ ಜಾರಿಯಾಗಬೇಕು. ಮೋದಿ ಪ್ರಧಾನಿಯಾದ ಬಳಿಕ ದೇಶಕ್ಕೆ ಒಳ್ಳೆಯದಾಗುತ್ತಿದೆ. ಇನ್ನೂ ಒಳ್ಳೆಯದಾಗಬೇಕು. ಅದಕ್ಕಾಗಿ ಪಾದಯಾತ್ರೆ ಮಾಡುತ್ತಿದ್ದೇನೆ’ ಎಂದು ಪಾರ್ವತಮ್ಮ ಹೇಳಿದ್ದು ವಿಡಿಯೊದಲ್ಲಿದೆ.

ಗಣಿತ ಬದಲು ಇಂಗ್ಲಿಷ್ ಪ್ರಶ್ನೆಪತ್ರಿಕೆ ವಿತರಣೆ

ಬಂಟ್ವಾಳ (ದಕ್ಷಿಣ ಕನ್ನಡ): ಎಸ್‌ಎಸ್‌ಎಲ್‌ಸಿ ಪೂರ್ವಸಿದ್ಧತಾ ಪರೀಕ್ಷೆಯಲ್ಲಿ ತಾಲ್ಲೂಕಿನ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆಯ 50 ವಿದ್ಯಾರ್ಥಿಗಳಿಗೆ ಗುರುವಾರ ನಡೆಯಬೇಕಿದ್ದ ಗಣಿತ ಪ್ರಶ್ನೆಪತ್ರಿಕೆ ಬದಲಾಗಿ ಶುಕ್ರವಾರ ನಡೆಯಬೇಕಿದ್ದ ದ್ವಿತೀಯ ಭಾಷೆ ಇಂಗ್ಲಿಷ್‌ನ ಪ್ರಶ್ನೆಪತ್ರಿಕೆ ನೀಡಲಾಗಿತ್ತು.

ವಿದ್ಯಾರ್ಥಿಗಳು ಕೂಡಲೇ ಪರೀಕ್ಷಾ ಕೊಠಡಿಯಲ್ಲಿದ್ದ ಶಿಕ್ಷಕರಿಗೆ ತಿಳಿಸಿದರು. ಈ ಬಗ್ಗೆ ಬಿಇಒ ಮತ್ತು ಡಿಡಿಪಿಐಗೆ ಮಾಹಿತಿ ನೀಡಿ, ಬಳಿಕ ಗಣಿತ ಪ್ರಶ್ನೆ ಪತ್ರಿಕೆ ತರಿಸಿ ಪರೀಕ್ಷೆ ನಡೆಸಲಾಯಿತು ಎಂದು ವಿದ್ಯಾರ್ಥಿಗಳು ದೂರಿದ್ದಾರೆ.

ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಸಮಯಕ್ಕೆ ಸರಿಯಾಗಿ ಗಣಿತ ಪರೀಕ್ಷೆ ನಡೆಯಿತು. ಪೂರ್ವಸಿದ್ಧತಾ ಪರೀಕ್ಷೆಗೆ ಪ್ರತಿ ವಿದ್ಯಾರ್ಥಿಯಿಂದ ತಲಾ ₹50 ವಸೂಲಿ ಮಾಡಲು ಇಲಾಖೆಯಿಂದ ಮೌಖಿಕವಾಗಿ ತಿಳಿಸಲಾಗಿದೆ ಎಂಬ ಆರೋಪವೂ ಕೇಳಿ ಬಂದಿದ್ದು, ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೆಪತ್ರಿಕೆ ಬದಲಾಗಿ, ದ್ವಿತೀಯ ಭಾಷೆ ಇಂಗ್ಲಿಷ್ ವಿಷಯದ ಪ್ರಶ್ನೆ ಪತ್ರಿಕೆಗಳನ್ನು ಕವರ್‌ನಲ್ಲಿ ಹಾಕಿ ಸೀಲ್ ಮಾಡಲಾಗಿತ್ತು. ಪ್ರಶ್ನೆಪತ್ರಿಕೆ ಮುದ್ರಣಕ್ಕೆ ನೀಡಿದ್ದ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಆಗಿರುವ ಪ್ರಮಾದ ಇದಾಗಿದ್ದು, ಅವರಿಗೆ ಸೂಚನೆ ನೀಡಲಾಗಿದೆ. ವಿಷಯ ಗಮನಕ್ಕೆ ಬಂದ ತಕ್ಷಣ ಎಲ್ಲವನ್ನೂ ಸರಿಪಡಿಲಾಗಿದೆ’ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

ತುಮಕೂರು ಸಿದ್ಧಗಂಗಾ ಮಠದಲ್ಲಿ ಸಿದ್ಧಲಿಂಗೇಶ್ವರ ರಥೋತ್ಸವ ಗುರುವಾರ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು

ಸಂಭ್ರಮದ ಸಿದ್ಧಗಂಗೆ ರಥೋತ್ಸವ

ಪ್ರಜಾವಾಣಿ ವಾರ್ತೆ

ತುಮಕೂರು: ನಾಡಿನ ಪ್ರಸಿದ್ಧ ಸಿದ್ಧಗಂಗಾ ಮಠದಲ್ಲಿ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ಗುರುವಾರ ಸಿದ್ಧಲಿಂಗೇಶ್ವರ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ನಾಡಿನ ವಿವಿಧ ಭಾಗಗಳಿಂದ ಬಂದಿದ್ದ ಭಕ್ತರು ಸುಡು ಬಿಸಿಲನ್ನೂ ಲೆಕ್ಕಿಸದೆ ರಥ ಎಳೆದು ಹರಕೆ ತೀರಿಸಿದರು. ರಥಕ್ಕೆ ಹೂವು, ಹಣ್ಣು, ದವನ ಅರ್ಪಿಸಿ ಭಕ್ತಿ ಸಮರ್ಪಿಸಿದರು. ಸಿದ್ಧಲಿಂಗೇಶ್ವರ ಸ್ವಾಮಿ ಹಾಗೂ ತ್ರಿವಿಧ ದಾಸೋಹಿ ಲಿಂಗೈಕ್ಯ ಶಿವಕುಮಾರ ಸ್ವಾಮೀಜಿ ಜೈಘೋಷಗಳು ಮೊಳಗಿದವು.

ಸಂಪ್ರದಾಯದಂತೆ ಪ್ರತಿ ವರ್ಷ ಶಿವರಾತ್ರಿ ಮರುದಿನ ರಥೋತ್ಸವ ನಡೆಯುತ್ತದೆ. ಶಿವರಾತ್ರಿಗೆ ನಾಡಿನ ವಿವಿಧ ಜಿಲ್ಲೆಗಳಿಂದ ಅಪಾರ ಸಂಖ್ಯೆಯ ಜನಸಮೂಹ ಮಠಕ್ಕೆ ಬಂದು ಸೇರುತ್ತದೆ. ಶಿವರಾತ್ರಿ ಜಾಗರಣೆಯಲ್ಲಿ ಪಾಲ್ಗೊಂಡು ಬೆಳಿಗ್ಗೆ ರಥೋತ್ಸವಕ್ಕೂ ಸಾಕ್ಷಿಯಾಗುತ್ತಾರೆ.

ಮಠದಲ್ಲಿ ಬೆಳಿಗ್ಗೆಯಿಂದಲೇ ವಿವಿಧ ಧಾರ್ಮಿಕ ವಿಧಿ, ವಿಧಾನಗಳು ನೆರವೇರಿದ ನಂತರ ರಥಕ್ಕೆ ಪೂಜೆ ಸಲ್ಲಿಸಲಾಯಿತು. ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ರಥೋತ್ಸವಕ್ಕೆ ಚಾಲನೆ ನೀಡಿದರು. ಕಿರಿಯ ಸ್ವಾಮೀಜಿ ಶಿವಸಿದ್ಧೇಶ್ವರ ಸ್ವಾಮೀಜಿ ನೆರವಾದರು.

ರಥವನ್ನು ಅಭೂತಪೂರ್ಣ ವಸ್ತ್ರಗಳು, ಸುವರ್ಣ ಕಲಶಗಳು, ಧಾರ್ಮಿಕ ಲಾಂಛನಗಳಾದ ಮಕರ, ತೋರಣ, ಕಲಶ, ಕನ್ನಡಿ ಹಾಗೂ ವಿವಿಧ ಬಗೆಯ ಪುಷ್ಪ ಮಾಲೆಗಳಿಂದ ಅಲಂಕರಿಸಲಾಗಿತ್ತು.

ರಥ ಸಾಗಿದ ಮಾರ್ಗದುದ್ದಕ್ಕೂ ನಂದಿಧ್ವಜ, ಕರಡಿ ಮಜಲು, ನಾದಸ್ವರ, ವೀರಗಾಸೆ, ಪಟ ಕುಣಿತ, ಡೋಲು ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳ ಪ್ರದರ್ಶನ ರಥೋತ್ಸವಕ್ಕೆ ಮೆರುಗು ನೀಡಿದವು.

ಪೋಕ್ಸೊ ಪ್ರಕರಣ ಹಿಂದಕ್ಕೆ: ನ್ಯಾಯಾಲಯದ ತೀರ್ಮಾನ ಬಾಕಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬಸ್ ನಿರ್ವಾಹಕ ಮಹಾದೇವ ಹುಕ್ಕೇರಿ ಅವರ ವಿರುದ್ಧ ಹಾಕಲಾದ ಪೋಕ್ಸೊ ಪ್ರಕರಣವನ್ನು ಹಿಂಪಡೆಯುವ ವಿಷಯ ಈಗ ಜಿಲ್ಲಾ ಪೋಕ್ಸೊ ನ್ಯಾಯಾಲಯದ ಅಂಗಳ ಸೇರಿದೆ.

‘ಬಸ್‌ನಲ್ಲಿ ಬಾಲಕಿ ಮತ್ತು ಬಸ್ ನಿರ್ವಾಹಕ ನಡುವೆ ಜಗಳ ನಡೆದಿತ್ತು. ಬಾಲಕಿ ತನ್ನ ಮೇಲೆ ಲೈಂಗಿಕ ದೌರ್ಜನ್ಯ ಆಗಿದೆ ಎಂದು ಭಾವಿಸಿದ್ದಳು. ಮಾರಿಹಾಳ ಪೊಲೀಸ್ ಠಾಣೆಯಲ್ಲಿ ನಿರ್ವಾಹಕನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಲಾಗಿತ್ತು. ಇದು ತಪ್ಪು ಕಲ್ಪನೆಯಿಂದ ಕೂಡಿದ್ದು, ಪ್ರಕರಣ ಹಿಂಪಡೆಯುತ್ತೇವೆ’ ಎಂದು ಬಾಲಕಿ ಚಿಕ್ಕಮ್ಮ ಲಿಖಿತ ಹೇಳಿಕೆ ನೀಡಿದ್ದಾರೆ.

‘ಬಾಲಕಿ, ಆಕೆಯ ಪಾಲಕರು ಮತ್ತು ದೂರುದಾರರನ್ನು ಸಮಕ್ಷಮ ವಿಚಾರಣೆ ನಡೆಸಿ, ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಈ ಮೊದಲೇ ಎಫ್‌ಐಆರ್ ದಾಖಲಾದ ಕಾರಣ, ಪ್ರಕರಣವನ್ನು ನೇರವಾಗಿ ಹಿಂಪಡೆಯಲು ಆಗದು. ಕಾನೂನು ಪ್ರಕಾರ, ತನಿಖಾಧಿಕಾರಿ ಎಲ್ಲ ವಿವರಗಳನ್ನು ಜಿಲ್ಲಾ ಪೋಕ್ಸೊ ನ್ಯಾಯಾಲಯಕ್ಕೆ ಸಲ್ಲಿಸಬೇಕು. ನ್ಯಾಯಾಲಯವು ನಿರ್ಧಾರ ಪ್ರಕಟಿಸುತ್ತದೆ’ ಎಂದು ತನಿಖಾಧಿಕಾರಿ ರಘು ತಿಳಿಸಿದರು.

‘ಕಾನೂನು ಪ್ರಕಾರ, ನಿಯಮಗಳನ್ನು ಪೂರೈಸಿದ ತನಿಖಾಧಿಕಾರಿಯು ವರದಿಯನ್ನು ನ್ಯಾಯಾಲಯಕ್ಕೆ ಒಪ್ಪಿಸಬೇಕು. ನ್ಯಾಯಾಧೀಶರ ಪರಿಶೀಲನೆ ಬಳಿಕವೇ ಪ್ರಕರಣ ಹಿಂಪಡೆಯಬೇಕೋ ಅಥವಾ ತನಿಖಾಧಿಕಾರಿಗಳ ವರದಿಯನ್ನು ಪ್ರಶ್ನಿಸಬೇಕೋ ಎಂಬ ನಿರ್ಧಾರ ಪ್ರಕಟವಾಗಲಿದೆ’ ಎಂದು ವಕೀಲರೊಬ್ಬರು ತಿಳಿಸಿದರು.

ಫೆಬ್ರುವರಿ 21ರಂದು ಬೆಳಗಾವಿಯಿಂದ ಸಣ್ಣ ಬಾಳೇಕುಂದರಿ ಗ್ರಾಮಕ್ಕೆ ಹೊರಟಿದ್ದ ಬಸ್‌ನಲ್ಲಿ ಗಲಾಟೆ ನಡೆದಿತ್ತು.

‘ಬಿ’ ಖಾತಾ: ಹೆಚ್ಚುವರಿ ಶುಲ್ಕ ರದ್ದು

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ದಾವಣಗೆರೆ: ಅನಧಿಕೃತ ಬಡಾವಣೆಗಳಲ್ಲಿನ ನಿವೇಶನ ಹಾಗೂ ಮನೆಗಳಿಗೆ ‘ಇ- ಆಸ್ತಿ’ ಸೃಜಿಸಿ ‘ಬಿ’ ಖಾತಾ ನೀಡಲು ಅಭಿವೃದ್ಧಿ ಮತ್ತು ಸುಧಾರಣೆಯ ಹೆಸರಲ್ಲಿ ಪಡೆಯುತ್ತಿದ್ದ ₹10,000 ಶುಲ್ಕವನ್ನು ಮಹಾನಗರ ಪಾಲಿಕೆ ರದ್ದುಪಡಿಸಿ ಆದೇಶಿಸಿದೆ.

ರಾಜ್ಯ ಸರ್ಕಾರದ ‘ಬಿ’ ಖಾತಾ ನೀಡುವ ಅಭಿಯಾನ ಪ್ರಗತಿಯಲ್ಲಿರುವ ಸಂದರ್ಭದಲ್ಲಿಯೇ ದಾವಣಗೆರೆ ಮಹಾನಗರ ಪಾಲಿಕೆಯು ಅರ್ಜಿದಾರರಿಂದ ಹೆಚ್ಚುವರಿ ಶುಲ್ಕ ಪಡೆಯುತ್ತಿರುವ ಕುರಿತು ‘ಪ್ರಜಾವಾಣಿ’ ಫೆ.26ರ ಸಂಚಿಕೆಯಲ್ಲಿ- ‘ಬಿ’ ಖಾತಾ: ಹೆಚ್ಚುವರಿ ಶುಲ್ಕ ಎಂಬ ಶೀರ್ಷಿಕೆಯಡಿ ವರದಿ ಪ್ರಕಟಿಸಿತ್ತು.

ರಾಜ್ಯದ ಯಾವುದೇ ನಗರ, ಸ್ಥಳೀಯ ಸಂಸ್ಥೆಗಳಲ್ಲಿ ‘ಅಭಿವೃದ್ಧಿ ಮತ್ತು ಸುಧಾರಣೆ ಶುಲ್ಕ’ದ ಹೆಸರಿನಲ್ಲಿ ಆಕರಿಸದ ಶುಲ್ಕವನ್ನು ದಾವಣಗೆರೆಯಲ್ಲಿ ಅಧಿಕೃತ ಬಡಾವಣೆಗಳಲ್ಲಿನ ನಿವೇಶನಗಳಿಗೆ ಹೊಸದಾಗಿ ಬಾಗಿಲು ಸಂಖ್ಯೆ ನೀಡುವ ಹೆಸರಿನಲ್ಲಿ ಆಕರಿಸಲಾಗುತ್ತಿದೆ ಎಂಬ ಬಗ್ಗೆ ಗಮನ ಸೆಳೆದಿತ್ತು.

‘ಅನಧಿಕೃತ ಆಸ್ತಿಗಳಿಗೆ ‘ಬಿ’ ಖಾತಾ ಸೃಜಿಸಲು ನಗರ ಸ್ಥಳೀಯ ಸಂಸ್ಥೆ ನಿಗದಿಪಡಿಸಿದ ಶುಲ್ಕವನ್ನು ಮಾತ್ರ ಪಾವತಿಸಬೇಕು. ಬೇರೆ ಯಾವುದೇ ಶುಲ್ಕವನ್ನು ಪಾವತಿಸುವ ಅಗತ್ಯವಿಲ್ಲ. ಈಗಾಗಲೇ ಹೆಚ್ಚುವರಿ ಶುಲ್ಕ ಪಾವತಿಸಿದವರು ರಸೀದಿ ಜೊತೆಗೆ ಮನವಿ ಸಲ್ಲಿಸಿದರೆ ಶುಲ್ಕ ಮರಳಿಸಲಾಗುವುದು’ ಎಂದು ಮಹಾನಗರ ಪಾಲಿಕೆ ಆಯುಕ್ತೆ ರೇಣುಕಾ ಅವರು ತಿಳಿಸಿದ್ದಾರೆ.

ಹೃದಯಾಘಾತ: ಶಿಕ್ಷಕ ಸಾವು

ಭರತ ಶಿಂಧೆ

ಕಾಗವಾಡ (ಬೆಳಗಾವಿ ಜಿಲ್ಲೆ): ಮಂಗಸೂಳಿ ಗ್ರಾಮದ ಸರ್ಕಾರಿ ಎಂಆರ್‌ಎಂ ಕೆಪಿಎಸ್ ಪ್ರೌಢಶಾಲೆ ಆವರಣದಲ್ಲಿ ಶಿಕ್ಷಕ ಭರತ ಶಿಂಧೆ (47) ಕುಸಿದು ಬಿದ್ದು, ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ‘ಇವರು ರಾಯಬಾಗ ತಾಲ್ಲೂಕಿನ ಬಿರಡಿ ಗ್ರಾಮದವರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಮತ್ತು ಪುತ್ರಿ ಇದ್ದಾರೆ.

ರಾಷ್ಟ್ರೀಯ ತೋಟಗಾರಿಕಾ ಮೇಳಕ್ಕೆ ಚಾಲನೆ • ಮೌಲ್ಯವರ್ಧಿತ ಉತ್ಪನ್ನಗಳ ಪ್ರದರ್ಶನ, ಮಾರಾಟಕ್ಕೆ ವೇದಿಕೆ

ಆಧುನಿಕ ಬೇಸಾಯದ ಭರಪೂರ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೋಟಗಾರಿಕೆ ಕ್ಷೇತ್ರದಲ್ಲಿನ ಸಂಶೋಧನೆಗಳ ಬಗ್ಗೆ ಮಾಹಿತಿ ನೀಡುವ ಮಳಿಗೆಗಳು, ತರಕಾರಿ ಹಾಗೂ ಹಣ್ಣಿನ ಬೆಳೆಗಳ ಬಗ್ಗೆ ಮಾಹಿತಿ ಪಡೆದುಕೊಳ್ಳುತ್ತಿದ್ದ ರೈತರು, ಮೌಲ್ಯವರ್ಧಿತ ಉತ್ಪನ್ನಗಳು ವೀಕ್ಷಿಸಲು ಕುತೂಹಲದಿಂದ ಸಾಲುಗಟ್ಟಿ ನಿಂತ ಸಾರ್ವಜನಿಕರು...

ಇವು ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐಐಎಚ್‌ಆರ್) ಆವರಣದಲ್ಲಿ ಗುರುವಾರದಿಂದ ಆರಂಭವಾದ 'ರಾಷ್ಟ್ರೀಯ ತೋಟಗಾರಿಕೆ ಮೇಳ–2025'ರ ಮೊದಲ ದಿನ ಕಂಡು ಬಂದ ದೃಶ್ಯಗಳು.

ಕೊಬ್ಬರಿ ಪೇಸ್ಟ್, ಚಿಪ್ಸ್ ಸೇರಿದಂತೆ ತೆಂಗು ಮತ್ತು ಕೊಬ್ಬರಿಗೆ ಸಂಬಂಧಿಸಿದ ಹಲವಾರು ಮೌಲ್ಯವರ್ಧಿತ ಉತ್ಪನ್ನಗಳು ಮೇಳದಲ್ಲಿ ರೈತರ ಗಮನ ಸೆಳೆದವು. ತಮಿಳುನಾಡಿನ ಕೃಷಿ ವಿಶ್ವವಿದ್ಯಾಲಯದ ಮಳಿಗೆಯಲ್ಲಿ ಬಾಳೆ ಮತ್ತು ಸಪೋಟ ಹಣ್ಣುಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಇದರಲ್ಲಿ ಹೆಚ್ಚು ಇಳುವರಿ ನೀಡುವ ಸಪೋಟ ತಳಿಯೊಂದು ಎಲ್ಲರ ಗಮನ ಸೆಳೆಯುತ್ತಿದೆ. ನೋಡಲು ಕ್ರಿಕೆಟ್ ಬಾಲ್‌ನಂತೆ ಭಾಸವಾಗುತ್ತದೆ ಈ ಸಪೋಟ ಹಣ್ಣು. ಇದನ್ನು ಸಾರ್ವಜನಿಕರು ಕುತೂಹಲದಿಂದ ವೀಕ್ಷಿಸುತ್ತಿದ್ದುದು ಕಂಡುಬಂತು.

ಮೊದಲ ದಿನ ರೈತರು, ಶಾಲಾ–ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಸಾವಿರಾರು ಜನ ಮೇಳದಲ್ಲಿ ಭಾಗವಹಿಸಿದ್ದರು. ತಮಿಳುನಾಡು, ಆಂಧ್ರಪ್ರದೇಶ, ಕೇರಳ, ಛತ್ತೀಸಗಢ, ಗೋವಾ ಸೇರಿ ಹಲವಾರು ರಾಜ್ಯಗಳ ಕೃಷಿ ಮತ್ತು ತೋಟಗಾರಿಕಾ ಶಿಕ್ಷಣ ಸಂಸ್ಥೆಗಳು ಸಂಶೋಧಿಸಿರುವ ಹೊಸ ತಳಿ ಮತ್ತು ತಂತ್ರಜ್ಞಾನಗಳು ಗಮನ ಸೆಳೆದವು.

ತಾಕಿನಲ್ಲೂ ಮಾಹಿತಿ: ಐಐಎಚ್‌ಆರ್ ಅಭಿವೃದ್ಧಿ ಪಡಿಸಿರುವ ಹಣ್ಣಿನ ಬೆಳೆಗಳು, ಔಷಧೀಯ ಮತ್ತು ಸಂಶೋಧನಾ ಬೆಳೆಗಳನ್ನು ತಾಕುಗಳಲ್ಲಿ ಸಮೃದ್ಧವಾಗಿ ಬೆಳೆಸಲಾಗಿದೆ. ವಿಷಯಾಧಾರಿತವಾಗಿ ವಿಂಗಡಿಸಿದ ತಾಕುಗಳು, ಪ್ರತಿ ತಾಕುಗಳಿಗೆ ಜೋಡಿಸಿದ್ದ ನಾಮಫಲಕಗಳು ರೈತರಿಗೆ ಯಾವುದೇ ಗೊಂದಲವಿಲ್ಲದಂತೆ ತಾಕಿನ ಬಳಿಗೆ ತೆರಳಲು ನೆರವಾಗುತ್ತಿದ್ದವು. ಪ್ರತಿ ತಾಕಿಗೂ ಒಬ್ಬೊಬ್ಬ ಉಸ್ತುವಾರಿಯನ್ನು ನೇಮಿಸಲಾಗಿದ್ದು, ರೈತರು ಅವರಿಂದ ಮಾಹಿತಿ ಪಡೆದರು.

ಐಐಎಚ್‌ಆರ್ ಆವರಣದಲ್ಲಿ ಬೆಳೆದಿರುವ ವಿವಿಧ ಬಗೆಯ ಹಣ್ಣು ಮತ್ತು ತರಕಾರಿ ಬೆಳೆಗಳ ಬಗ್ಗೆಯೂ ರೈತರು ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಳ್ಳುತ್ತಿದ್ದರು. ಐಐಎಚ್‌ಆರ್‌ನ ಮಳಿಗೆಗಳಲ್ಲೂ ಪ್ರದರ್ಶನ ಮತ್ತು ಮಾಹಿತಿಯ ವ್ಯವಸ್ಥೆ ಮಾಡಲಾಗಿದೆ.

ಕೃಷಿಯಲ್ಲಿ ಕಾರ್ಮಿಕರ ಕೊರತೆ ನೀಗಿಸುವಂತಹ ಯಂತ್ರೋಪಕರಣಗಳ ಬಗ್ಗೆ ರೈತರು ವಿಚಾರಿಸುತ್ತಿದ್ದರು. ರೈತರ ಅಗತ್ಯಕ್ಕೆ ತಕ್ಕಂತೆ ಸಿದ್ಧಪಡಿಸಲಾದ ಹತ್ತಾರು ಉಪಯುಕ್ತ ಯಂತ್ರೋಪಕರಣಗಳು ಮೇಳದ ಮತ್ತೊಂದು ಆಕರ್ಷಣೆ. ಒಟ್ಟು 250ಕ್ಕೂ ಹೆಚ್ಚು ಮಳಿಗೆಗಳು ಮೇಳದಲ್ಲಿವೆ. ಫುಡ್ ಕೋರ್ಟ್ ವ್ಯವಸ್ಥೆಯೂ ಇದೆ.

ವಿವಿಧ ಬಗೆಯ ಸಾವಯವ ಹಾಗೂ ಜೈವಿಕ ಗೊಬ್ಬರದ ಮಳಿಗೆಗಳ ಮುಂದೆ ರೈತರ ಗುಂಪು– ಗುಂಪಾಗಿ ಸೇರಿದ್ದರು. ಸೋಲಾರ್ ಆಧಾರಿತ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ಹೇಗೆ? ಇದನ್ನು ಅಳವಡಿಸಿಕೊಂಡರೆ ರೈತರು ಯಾವ ರೀತಿಯ ಲಾಭಗಳಾಗುತ್ತವೆ ಎಂಬುದರ ಬಗ್ಗೆ ರೈತರು ಕಂಪನಿಯ ಪ್ರತಿನಿಧಿಗಳಿಂದ ಮಾಹಿತಿ ಪಡೆದುಕೊಳ್ಳುತ್ತಿದ್ದರು.

ರಾಷ್ಟ್ರೀಯ ತೋಟಗಾರಿಕಾ ಮೇಳದಲ್ಲಿ ಪ್ರದರ್ಶಿಸಲಾದ ವಿವಿಧ ಸಸಿಗಳನ್ನು ವಿದ್ಯಾರ್ಥಿಗಳು ವೀಕ್ಷಿಸಿದರು

ವಿದ್ಯಾರ್ಥಿಗಳು ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಂಡರು –ಪ್ರಜಾವಾಣಿ ಚಿತ್ರಗಳು

ಅಣಬೆ ಮೌಲ್ಯವರ್ಧನೆಯಿಂದ ಯಶಸ್ಸು ಕಂಡ ಮಹಿಳೆ

ಮಹಿಳೆಯೊಬ್ಬರು ಅಣಬೆ ಮೌಲ್ಯವರ್ಧನೆ ಮೂಲಕ ಯಶಸ್ವಿ ಉದ್ಯಮಿಯಾಗಿದ್ದಾರೆ. ಕೇರಳದ ಕೊಲ್ಲಂ ಜಿಲ್ಲೆಯ ತಾಜುನ್ನೀಸ ಅವರು 12 ವರ್ಷಗಳ ಹಿಂದೆ ಅಣಬೆ ಕೃಷಿ ಪ್ರಾರಂಭಿಸಿದರು. ಆದಾಯವೂ ತಕ್ಕ ಮಟ್ಟಿಗೆ ಇತ್ತು. ಎರಡು ವರ್ಷಗಳಿಂದ ಅಣಬೆಯ ಮೌಲ್ಯವರ್ಧನೆಗೆ ಕೈ ಹಾಕಿ ಯಶಸ್ವಿಯಾಗಿದ್ದಾರೆ.

'ನಾನು ಅಣಬೆ ಮಿಶ್ರಣ ಪುಡಿ, ಪ್ರೊಟೀನ್ ಪುಡಿಯ ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದೇನೆ. ಇದಕ್ಕೆ ಕೇರಳ ಸರ್ಕಾರದ 'ಆ್ಯಗ್ರೊ ಬ್ರ್ಯಾಂಡ್'ನಿಂದ ಅಂಗೀಕಾರವೂ ಸಿಕ್ಕಿದೆ. ನಮ್ಮ ಕಂಪನಿಯ ಮೂಲಕ ಅಣಬೆಗೆ ಸಂಬಂಧಿಸಿದ ಏಳು ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದೇವೆ' ಎಂದು ತಾಜುನ್ನೀಸ ವಿವರಿಸಿದರು.

'ಒಣ ಅಣಬೆಗಳನ್ನು 20 ನಿಮಿಷ ಬಿಸಿ ನೀರಿನಲ್ಲಿ ಹಾಕಿದರೆ ತಾಜಾ ಅಣಬೆಯಾಗಿ ಮಾರ್ಪಡುತ್ತವೆ. ಇದನ್ನು ಮಿಕ್ಸಿಯಲ್ಲಿ ಹಾಕಿ ಪುಡಿ ಮಾಡಿ ನೀರಿನಲ್ಲಿ ಬೆರೆಸಿ ಕುಡಿಯಬಹುದು. ಹೆಲ್ತ್ ಮಿಕ್ಸ್ ಪುಡಿಯಲ್ಲಿ ಆಹಾರ ಧಾನ್ಯಗಳ ಪುಡಿ, ಬಾಳೆಹಣ್ಣಿನ ಪುಡಿ ಸೇರಿಸಿ ವಿಟಮಿನ್ ಡಿ ಪ್ರಮಾಣವನ್ನು ಹೆಚ್ಚಿಸಲಾಗಿದೆ. ಇದನ್ನು ಎಲ್ಲರೂ ಸೇವನೆ ಮಾಡಬಹುದು' ಎಂದರು.

ಅಣಬೆಯ ಮೌಲ್ಯವರ್ಧಿತ ಉತ್ಪನ್ನಗಳನ್ನು ಪ್ರದರ್ಶಿಸಿದ ತಾಜುನ್ನೀಸ

ಮೇಳಕ್ಕೆ ಚಾಲನೆ ನೀಡಿದ ಸಚಿವೆ

ಹೆಸರಘಟ್ಟ: ಇಲ್ಲಿನ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ ಆಯೋಜಿಸಿರುವ ಮೂರು ದಿನಗಳ ರಾಷ್ಟ್ರೀಯ ತೋಟಗಾರಿಕಾ ಮೇಳವನ್ನು ಕೇಂದ್ರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ಗುರುವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 'ರೈತರು ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಬೇಕು. 2047ರೊಳಗೆ ಭಾರತ ವಿಶ್ವಕ್ಕೆ ಆಹಾರ ಪೂರೈಕೆ ಮಾಡುವ ದೊಡ್ಡ ರಾಷ್ಟ್ರವಾಗಿ ಬೆಳೆಯಬೇಕು. ಈ ನಿಟ್ಟಿನಲ್ಲಿ ಉತ್ಕೃಷ್ಟ ತಳಿಗಳು, ನವೀನ ತಂತ್ರಜ್ಞಾನಗಳನ್ನು ರೈತರು ಅಳವಡಿಸಿಕೊಳ್ಳಬೇಕು. ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳು ಹಾಗೂ ಸಂಸ್ಥೆಗಳು ಕೃಷಿ ಕ್ಷೇತ್ರವನ್ನು ಬಲಿಷ್ಠಗೊಳಿಸಬೇಕು' ಎಂದು ಕರೆ ನೀಡಿದರು.

'ಸುರಕ್ಷಿತ ಮತ್ತು ಗುಣಮಟ್ಟದ ಆಹಾರ ಉತ್ಪಾದನೆಗೆ ಹೆಚ್ಚು ಆದ್ಯತೆ ನೀಡಬೇಕಿದೆ. ರೆಡಿ ಟು ಈಟ್, ರೆಡಿ ಟು ಕುಕ್ ಉತ್ಪನ್ನಗಳಿಗೆ ವಿದೇಶಗಳಲ್ಲಿ ಹೆಚ್ಚು ಬೇಡಿಕೆ ಇದೆ. ನಮ್ಮ ರೈತರು ಇಂತಹ ಮೌಲ್ಯವರ್ಧಿತ ಉತ್ಪನ್ನಗಳ ಉತ್ಪಾದನೆಗೆ ಹೆಚ್ಚು ಆದ್ಯತೆ ನೀಡಬೇಕು' ಎಂದರು. ನೀತಿ ಆಯೋಗದ ಸದಸ್ಯ ರಮೇಶ್ ಚಂದ್, ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ, ಐಐಎಚ್‌ಆರ್ ನಿರ್ದೇಶಕ ತುಷಾರ್ ಕಾಂತಿ ಬೆಹರಾ, ಶಾಸಕ ಸಿ.ಬಿ. ಸುರೇಶ್ ಬಾಬು ಉಪಸ್ಥಿತರಿದ್ದರು.

ರಾಷ್ಟ್ರೀಯ ತೋಟಗಾರಿಕಾ ಮೇಳದಲ್ಲಿ ಪ್ರದರ್ಶಿಸಿರುವ ಹಣ್ಣುಗಳನ್ನು ಶೋಭಾ ಕರಂದ್ಲಾಜೆ ವೀಕ್ಷಿಸಿದರು. ಎಸ್.ವಿ. ಸುರೇಶ, ಶಾಸಕ ಸಿ.ಬಿ. ಸುರೇಶ್‌ಬಾಬು, ತುಷಾರ್ ಕಾಂತಿ ಬೆಹೆರಾ ಉಪಸ್ಥಿತರಿದ್ದರು

ಸುದ್ದಿ 2 ನಿಮಿಷ

'ಸುಧಾರಣೆಗೆ ಪೈ ಸಲಹೆ ನೀಡಲಿ'

ಬೆಂಗಳೂರು: 'ವಿನಾ ಕಾರಣ ಟೀಕಿಸುವುದನ್ನು ಬಿಟ್ಟು ನಗರದ ವ್ಯವಸ್ಥೆ ಸುಧಾರಣೆಗೆ ಉದ್ಯಮಿ ಮೋಹನದಾಸ್ ಪೈ ಸಲಹೆ ನೀಡಲಿ. ಪದೇ ಪದೇ ಹೀಗೆ ಮಾತನಾಡುತ್ತಿರುವ ಅವರ ಮನಸ್ಸಿನಲ್ಲಿ ಏನಿದೆಯೋ ಗೊತ್ತಿಲ್ಲ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪೈ ಕೂಡ ಬೆಂಗಳೂರಿನಿಂದಲೇ ಲಾಭ ಮಾಡಿಕೊಂಡಿರುವವರು. ಈಗ ಅವರು ಇಲ್ಲಿಂದ ಹುಬ್ಬಳ್ಳಿಗಾಗಲಿ, ಮೈಸೂರಿಗಾಗಲಿ ಹೋಗಲು ತಯಾರಿಲ್ಲ' ಎಂದರು.

'ಸಂಚಾರ ದಟ್ಟಣೆ ಕೇವಲ ಬೆಂಗಳೂರಿನ ಸಮಸ್ಯೆಯಲ್ಲ. ಲಂಡನ್, ಸ್ಯಾನ್ ಫ್ರಾನ್ಸಿಸ್ಕೊ, ಚೆನ್ನೈ ಎಲ್ಲ ಕಡೆಗಳಲ್ಲೂ ಈ ಸಮಸ್ಯೆಯಿದೆ. ಈ ಬಗ್ಗೆ ಪೈ ಯಾಕೆ ಮಾತನಾಡುವುದಿಲ್ಲ? ಲಂಡನ್‌ನಲ್ಲಿ ನಾನೇ ಒಂದೂವರೆ ಮೈಲುದ್ದದ ಸಂಚಾರ ದಟ್ಟಣೆಯಲ್ಲಿ ಸಿಲುಕಿದ್ದೆ. ಸ್ಯಾನ್ ಫ್ರಾನ್ಸಿಸ್ಕೊದಲ್ಲಿ 15–20 ಮೈಲಿ ಸಂಚಾರ ದಟ್ಟಣೆ ಸೃಷ್ಟಿ ಆಗಿದ್ದಿದೆ' ಎಂದರು.

'ಬೆಂಗಳೂರು 'ಗ್ರೋಯಿಂಗ್ ಸಿಟಿ'ಯ ಜತೆಗೆ 'ಗ್ಲೋಬಲ್ ಸಿಟಿ' ಕೂಡ ಆಗಿದೆ. ಹೀಗಾಗಿಯೇ ಕರ್ನಾಟಕದ ಸಮಗ್ರ ಅಭಿವೃದ್ಧಿ ನಮ್ಮ ಆದ್ಯತೆ. ಮೋದಿ ಸರ್ಕಾರ ಏನು ಮಾಡಿದರೂ ಸರಿ, ಸಿದ್ದರಾಮಯ್ಯ ಸರ್ಕಾರ ಮಾಡಿದ್ದೆಲ್ಲವೂ ತಪ್ಪು ಎನ್ನುವುದಲ್ಲ. ಇಂತಹ ಟೀಕೆಗಳಿಂದ ಪೈ ದೊಡ್ಡ ಮನುಷ್ಯ ಆಗುವುದಿಲ್ಲ' ಎಂದರು.

'ಕುಡಿಯುವ ಉದ್ದೇಶಕ್ಕೆ ಆಲಮಟ್ಟಿ ಅಣೆಕಟ್ಟೆಯಿಂದ ತೆಲಂಗಾಣಕ್ಕೆ 1.24 ಟಿಎಂಸಿ ಅಡಿ ನೀರು ಬಿಟ್ಟಿರುವುದರಲ್ಲಿ ತಪ್ಪೇನಿಲ್ಲ ಎಂದು ಪ್ರತಿಕ್ರಿಯಿಸಿದರು.

ಮಾರ್ಚ್ 3 ರಿಂದ ಧರಣಿ

ಬೆಂಗಳೂರು: ಕಾರ್ಮಿಕ ಮತ್ತು ಜನ ವಿರೋಧಿ ನೀತಿಗಳನ್ನು ಕೈ ಬಿಡುವಂತೆ ಹಾಗೂ ಕಾರ್ಮಿಕ ವರ್ಗದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಸಿಐಟಿಯು ನೇತೃತ್ವದಲ್ಲಿ ಮಾರ್ಚ್ 3ರಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಹೋರಾತ್ರಿ ಧರಣಿ ಹಮ್ಮಿಕೊಳ್ಳಲಾಗಿದೆ.

'ಜನಪರ ಪರ್ಯಾಯ ಆರ್ಥಿಕ ನೀತಿಗಳ ಜಾರಿಗೆ ಒತ್ತಾಯಿಸಿ ಮಾರ್ಚ್ 3ರಿಂದ 7ರವರೆಗೆ ಸಾಮೂಹಿಕ ಮತ ಪ್ರದರ್ಶನ ನಡೆಸಲು ಸಿಐಟಿಯು ರಾಜ್ಯ ಸಮಿತಿಯು ತೀರ್ಮಾನಿಸಿದೆ. ಮಾರ್ಚ್ 3ರಂದು ಗ್ರಾಮ ಪಂಚಾಯಿತಿ ಕಾರ್ಮಿಕರು, 4ರಂದು ಅಕ್ಷರ ದಾಸೋಹ ಕಾರ್ಮಿಕರು, 5ರಂದು ಕಟ್ಟಡ ನಿರ್ಮಾಣ ಕಾರ್ಮಿಕರು, 6ರಂದು ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕಾಯಂ ಹಾಗೂ ಗುತ್ತಿಗೆ ಕಾರ್ಮಿಕರು, ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಅಸಂಘಟಿತ ಕಾರ್ಮಿಕರು, ಆಟೊ, ಟ್ಯಾಕ್ಸಿ ಚಾಲಕರು ಮತ್ತು 7ರಂದು ಅಂಗನವಾಡಿ ಕಾರ್ಮಿಕರು ಅಹೋರಾತ್ರಿ ಧರಣಿಯಲ್ಲಿ ಭಾಗವಹಿಸಲಿದ್ದಾರೆ' ಎಂದು ಸಿಐಟಿಯು ರಾಜ್ಯ ಅಧ್ಯಕ್ಷ ಎಸ್.ವರಲಕ್ಷ್ಮೀ ತಿಳಿಸಿದ್ದಾರೆ.

ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ಸಾರಿಗೆ ಕಾರ್ಮಿಕರ ಕಲ್ಯಾಣ ಮಂಡಳಿಗೆ ₹ 500 ಕೋಟಿ ಅನುದಾನ ಹಾಗೂ ಕಲ್ಯಾಣ ಯೋಜನೆಗಳನ್ನು ಜಾರಿ ಮಾಡಬೇಕು. ದಿನಗೂಲಿ ನೌಕರರಿಗೆ ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆಯನ್ನು ಶೇಕಡ 90 ನೀಡುತ್ತಿದ್ದು, ಅದನ್ನು ಶೇಕಡ 100ಕ್ಕೆ ಏರಿಸಬೇಕು. ಹಳೆ ಪಿಂಚಣಿ ಸೌಲಭ್ಯ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಹಂತ ಹಂತವಾಗಿ ಕೆಕೆಆರ್‌ಡಿಬಿಗೆ ಹಣ ಬಿಡುಗಡೆ: ಅಜಯ್ ಸಿಂಗ್

ಪ್ರಜಾವಾಣಿ ವಾರ್ತೆ

ಅಜಯ್ ಸಿಂಗ್

ಬೆಂಗಳೂರು: 'ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ (ಕೆಕೆಆರ್‌ಡಿಬಿ) ಒದಗಿಸಿರುವ ₹ 5 ಸಾವಿರ ಕೋಟಿಯನ್ನು ರಾಜ್ಯ ಸರ್ಕಾರ ಹಂತ ಹಂತವಾಗಿ ಬಿಡುಗಡೆ ಮಾಡಲಿದೆ. ₹ 750 ಕೋಟಿ ಬಿಡುಗಡೆಗೆ ಪ್ರಕ್ರಿಯೆ ನಡೆದಿದೆ' ಎಂದು ಕೆಕೆಆರ್‌ಡಿಬಿ ಅಧ್ಯಕ್ಷ ಅಜಯ್ ಸಿಂಗ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮಂಡಳಿ ವತಿಯಿಂದ ₹2,600 ಕೋಟಿ ವೆಚ್ಚವಾಗಿದೆ. ಮಾರ್ಚ್ ಅಂತ್ಯದೊಳಗೆ ₹ 3 ಸಾವಿರ ಕೋಟಿ ಖರ್ಚಾಗಲಿದೆ. ಸರ್ಕಾರ ಹಂಚಿಕೆ ಮಾಡಿದ ಎಲ್ಲ ಅನುದಾನವನ್ನು ವೆಚ್ಚ ಮಾಡುತ್ತೇವೆ' ಎಂದರು.

'ಮಂಡಳಿಯು ಹಣ ವೆಚ್ಚ ಮಾಡಲು ರಾಜ್ಯಪಾಲರ ಅನುಮತಿ ಅಗತ್ಯವಿದೆ. ಕಳೆದ ಆಗಸ್ಟ್ 17ರಂದು ಅನುಮತಿ ಸಿಕ್ಕಿದೆ. ಈಗ ಹಣ ಬಿಡುಗಡೆ ಪ್ರಕ್ರಿಯೆ ನಡೆದಿದೆ' ಎಂದೂ ಹೇಳಿದರು.

'ಹೊಸ 18 ತಾಲ್ಲೂಕುಗಳು ಆಗಿವೆ. ಅವುಗಳಿಗೆ ಮಿನಿ ವಿಧಾನಸೌಧ ಕಟ್ಟಡಗಳನ್ನು ನಿರ್ಮಿಸಲಾಗಿದೆ. 'ಕಲ್ಯಾಣ ಪಥ' ಎಂಬ ಹೊಸ ಯೋಜನೆ ಅನುಷ್ಠಾನಗೊಳ್ಳಬೇಕಿದೆ. ಈ ಯೋಜನೆಯಲ್ಲಿ ₹ 1 ಸಾವಿರ ಕೋಟಿ ವೆಚ್ಚದಲ್ಲಿ 30 ಕಿ.ಮೀ ರಸ್ತೆ ಅಭಿವೃದ್ಧಿ ಮಾಡಬೇಕಿದೆ. ಎಲ್ಲ ಕಾಮಗಾರಿಗಳಿಗೆ ಹಿಂದಿನ ವರ್ಷಗಳ ಬಾಕಿ ಮತ್ತು ಪ್ರಸಕ್ತ ಸಾಲಿನ ಅನುದಾನವನ್ನು ಖರ್ಚು ಮಾಡಲಾಗುವುದು' ಎಂದರು.

'ಬಿಜೆಪಿಗರಿಗೆ ಅರ್ಹತೆ, ನೈತಿಕತೆ ಇಲ್ಲ'

'ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿರುವ ಸಂವಿಧಾನದ 371ಜೆ ಸೆಕ್ಷನ್ ಅನ್ನು ತಿರಸ್ಕರಿಸಿದ್ದ ಬಿಜೆಪಿಯವರಿಗೆ, ಈಗ ಆ ಭಾಗಕ್ಕೆ ಹಂಚಿಕೆಯಾದ ಅನುದಾನದ ಬಗ್ಗೆ ಮಾತನಾಡುವ ಅರ್ಹತೆಯೂ ಇಲ್ಲ, ನೈತಿಕತೆಯೂ ಇಲ್ಲ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಕೆಕೆಆರ್‌ಡಿಬಿಗೆ ಅನುದಾನ ಬಿಡುಗಡೆ ಮಾಡದ ಬಗ್ಗೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು 'ಎಕ್ಸ್' ಖಾತೆಯಲ್ಲಿ ಮಾಡಿದ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ಪ್ರಿಯಾಂಕ್, 'ಈ ಭಾಗಕ್ಕೆ ಬಿಜೆಪಿ ದ್ರೋಹ ಬಗೆದಿದ್ದು ಐತಿಹಾಸಿಕ ಸತ್ಯ' ಎಂದಿದ್ದಾರೆ.

'ಹಿಂದುಳಿದ ಪ್ರದೇಶದ ಜನರ ಏಳಿಗೆಯನ್ನು ಸಾರಾಸಗಟಾಗಿ ತಿರಸ್ಕರಿಸಿದವರು ನಮಗೆ ಪಾಠ ಮಾಡುವ ಅಗತ್ಯವಿಲ್ಲ. ಕಲ್ಯಾಣ ಕರ್ನಾಟಕಕ್ಕೆ ನಿಮ್ಮ ಸರ್ಕಾರ ಮಾಡಿದ ಲೂಟಿಯ ದ್ರೋಹದ ಬಗ್ಗೆ ತನಿಖೆ ನಡೆಯುತ್ತಿದೆ. ಎಲ್ಲ ಇಲಾಖೆಯಲ್ಲೂ, ಎಲ್ಲ ವಿಷಯಗಳಲ್ಲೂ ಮೂಗು ತೂರಿಸುತ್ತೇನೆಂದು ಹೇಳುವ ಬಿಜೆಪಿಗರೇ, ನನ್ನನ್ನು ಸರ್ಕಾರದ ವಕ್ತಾರನಾಗಿ ಮುಖ್ಯಮಂತ್ರಿ ನೇಮಿಸಿದ್ದಾರೆ. ನಿಮ್ಮ ಸುಳ್ಳುಗಳನ್ನು ಭೇದಿಸುವುದು ನನ್ನ ಜವಾಬ್ದಾರಿ' ಎಂದಿದ್ದಾರೆ.

ಪ್ರಿಯಾಂಕ್ ಖರ್ಗೆ ಮೌನವೇಕೆ: ಅಶೋಕ

ಬೆಂಗಳೂರು: 'ಖರ್ಗೆ ಕುಟುಂಬ ಮನಸ್ಸು ಮಾಡಿದರೆ ಬಿಜೆಪಿ ಕಾರ್ಯಕರ್ತರು ಕಲಬುರಗಿ ಜಿಲ್ಲೆಗೆ ಕಾಲು ಇಡುವುದಕ್ಕೂ ಬಿಡುವುದಿಲ್ಲ ಎಂದು ಸವಾಲು ಹಾಕುತ್ತೀರಲ್ಲ, ಅದರ ಬದಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸವಾಲು ಹಾಕಿ ಕಲ್ಯಾಣ ಕರ್ನಾಟಕಕ್ಕೆ ಸರ್ಕಾರದ ಅನುದಾನ ತಲುಪುವಂತೆ ಮಾಡಿ' ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಕುಟುಕಿದ್ದಾರೆ.

'ಪ್ರಜಾವಾಣಿ'ಯಲ್ಲಿ ಪ್ರಕಟವಾದ 'ಕಲ್ಯಾಣಕ್ಕೆ ತಲುಪದ ಹಣ' ವರದಿಯನ್ನು ಉಲ್ಲೇಖಿಸಿ ಅವರು 'ಎಕ್ಸ್' ಮೂಲಕ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. 'ಕಲ್ಯಾಣ ಕರ್ನಾಟಕ ವಿರೋಧಿ ಸರ್ಕಾರ' ಎಂದೂ ಟೀಕಿಸಿದ್ದಾರೆ.

'ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರೇ, ಸಂಬಂಧಪಡದ ವಿಷಯಗಳಿಗೆಲ್ಲಾ ಅನವಶ್ಯವಾಗಿ ಮೂಗು ತೂರಿಸುವ ತಾವು, ಕಲ್ಯಾಣ ಕರ್ನಾಟಕಕ್ಕೆ ಬರಬೇಕಾದ ಅನುದಾನದ ವಿಷಯದಲ್ಲಿ ಮೌನವಾಗಿರುವುದೇಕೆ' ಎಂದು ಪ್ರಶ್ನಿಸಿದ್ದಾರೆ.

ಇಂಧನ ದಕ್ಷತೆ ಹೆಚ್ಚಿಸಲು ಕ್ರಮ • ವಿದ್ಯುತ್ ವೆಚ್ಚವೂ ಕಡಿಮೆಯಾಗಲಿದೆ

'ಬಿಎಲ್‌ಡಿಸಿ ಫ್ಯಾನ್ ಬಳಸಿ, ವಿದ್ಯುತ್ ಉಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಧನ ದಕ್ಷತೆ ಹೆಚ್ಚಿಸಲು, ಕಡಿಮೆ ವಿದ್ಯುತ್ ಬಳಸುವ ಬಿಎಲ್‌ಡಿಸಿ ಫ್ಯಾನ್ ಅನ್ನು ಬೆಸ್ಕಾಂ ಗುರುವಾರ ಬಿಡುಗಡೆ ಮಾಡಿದೆ.

ಬ್ಯೂರೋಆಫ್‌ಎನರ್ಜಿಎಫಿಷಿಯನ್ಸಿ (ಬಿಇಇ), ಕರ್ನಾಟಕ ನವೀಕರಿಸಬಹುದಾದ ಇಂಧನಗಳ ಅಭಿವೃದ್ಧಿ ನಿಗಮ (ಕ್ರೆಡಲ್) ಸಹಭಾಗಿತ್ವದಲ್ಲಿ ಬೆಸ್ಕಾಂನ ಬೇಡಿಕೆ ನಿರ್ವಹಣಾ ವಿಭಾಗದ (ಡಿಎಸ್‌ಎಂ) ವತಿಯಿಂದ ಬಿಎಲ್‌ಡಿಸಿ ಸೀಲಿಂಗ್ ಫ್ಯಾನ್ ಅನ್ನು ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ಎನ್.ಶಿವಶಂಕರ್ ಅನಾವರಣಗೊಳಿಸಿದರು.

ಎನ್.ಶಿವಶಂಕರ್ ಮಾತನಾಡಿ, 'ಬೇಸಿಗೆ ಆರಂಭದಲ್ಲೇ ಬಿಎಲ್‌ಡಿಸಿ ಫ್ಯಾನ್‌ಗಳನ್ನು ಬಿಡುಗಡೆ ಮಾಡಿ, ಬಳಕೆಗೆ ಗ್ರಾಹಕರನ್ನು ಉತ್ತೇಜಿಸಲಾಗುತ್ತಿದೆ. ಸಾಮಾನ್ಯ ಫ್ಯಾನ್‌ಗಳಿಗಿಂತ ಅತಿ ಕಡಿಮೆ ವಿದ್ಯುತ್ ಬಳಕೆಯಾಗುವಂತೆ ಈ ಫ್ಯಾನ್‌ಗಳನ್ನು ವಿನ್ಯಾಸಗೊಳಿಸಲಾಗಿದೆ. ಗ್ರಾಹಕರ ವಿದ್ಯುತ್ ವೆಚ್ಚವನ್ನೂ ಕಡಿಮೆ ಮಾಡಲಿದೆ. ಸುಸ್ಥಿರ ಹಾಗೂ ಇಂಧನ ದಕ್ಷತೆಯ ಭವಿಷ್ಯಕ್ಕೆ ಇದು ಮಹತ್ವದ ಹೆಜ್ಜೆ' ಎಂದರು.

'ಬಿಇಇ, ಕ್ರೆಡಲ್, ಎನರ್ಜಿ ಎಫಿಷಿಯೆನ್ಸಿ ಸರ್ವೀಸಸ್ ಲಿಮಿಟೆಡ್ (ಇಇಎಸ್‌ಸಿ) ಹಾಗೂ ಇನ್ನಿತರ ಪಾಲುದಾರರ ಪ್ರೋತ್ಸಾಹದಿಂದ ಈ ಉತ್ಪನ್ನ ಹೊರಬಂದಿದೆ. ವಿದ್ಯುತ್ ಬಳಕೆಯಲ್ಲಿ ಜಾಗೃತಿ ಹಾಗೂ ಸುಸ್ಥಿರ ನಾಳೆಗಾಗಿ, ನಾವು ಒಂದಾಗಿ ನಡೆಯಬೇಕಿದೆ' ಎಂದು ಹೇಳಿದರು.

ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಮಾತನಾಡಿ, 'ಒಂದು ಯುನಿಟ್ ವಿದ್ಯುತ್ ಉಳಿಸಿದರೆ, ಎರಡು ಯುನಿಟ್ ವಿದ್ಯುತ್ ಉತ್ಪಾದಿಸಿದಂತೆ' ಎಂದರು.

ಪಿಡಬ್ಲ್ಯುಸಿ ಭಾರತದ ಕ್ಲೀನ್ ಎನರ್ಜಿ ವಿಭಾಗದ ಮುಖ್ಯಸ್ಥ ರಾಜೀವ್ ರಲ್ಹಾನ್ ಮಾತನಾಡಿ, 'ಹಳೆಯ ತಂತ್ರಜ್ಞಾನದ ಫ್ಯಾನ್‌ಗಳಿಗೆ ಹೋಲಿಸಿದರೆ ಬಿಎಲ್‌ಡಿಸಿ ಫ್ಯಾನ್ ಬಳಕೆಯಿಂದ ಶೇಕಡ 50ರಷ್ಟು ವಿದ್ಯುತ್ ಉಳಿತಾಯವಾಗಲಿದೆ' ಎಂದು ತಿಳಿಸಿದರು.

ಇಇಎಸ್‌ಎಲ್ ರಾಜ್ಯ ಮುಖ್ಯಸ್ಥ ದೀಪಕ್ ಸಹನಿ, ಬೆಸ್ಕಾಂ ತಾಂತ್ರಿಕ ನಿರ್ದೇಶಕ ಎಚ್.ಜೆ. ರಮೇಶ್, ಬೆಸ್ಕಾಂ ಡಿಎಸ್‌ಎಂ ಪ್ರಧಾನ ವ್ಯವಸ್ಥಾಪಕ ರಮೇಶ್ ವಿ.ಎಸ್., ಪಿಎಂಎಸ್ ನಿರ್ದೇಶಕ ಅಮೇಯ ಸುಬೋಧ್ ಉದ್ಧಾಂವ್ಕರ್ ಉಪಸ್ಥಿತರಿದ್ದರು.

ಬೆಸ್ಕಾಂ ಅಧಿಕೃತ ಜಾಲತಾಣದಲ್ಲಿನ ಇಇಎಸ್‌ಎಲ್ ಲಿಂಕ್ https://eeslmart.in/fan?affiliateid=13285 ಅಥವಾ ವೆಬ್‌ಸೈಟ್: eeslmart.in ಮೂಲಕ ಆನ್‌ಲೈನ್‌ನಲ್ಲಿ ಫ್ಯಾನ್ ಖರೀದಿಸಬಹುದಾಗಿದೆ. 5 ಸ್ಟಾರ್ ಪ್ರಮಾಣೀಕೃತ ಬಿಎಲ್‌ಡಿಸಿ ಸೀಲಿಂಗ್ ಫ್ಯಾನ್ ದರ ₹2,699 ಎಂದು ಪ್ರಕಟಣೆ ತಿಳಿಸಿದೆ.

ಮಾರ್ಚ್ 8ರಿಂದ ಕಲಾ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೋಗ್ರಫಿ (ಎಂಎಪಿ) ಸಂಸ್ಥೆಯು ತನ್ನ ಕೇಂದ್ರದಲ್ಲಿ ಮಾರ್ಚ್ 8ರಿಂದ ಜೂನ್ 15ರವರೆಗೆ 'ಅಂಚುಗಳಲ್ಲಿ ಅಂತ್ಯವಾಗದ ನಾವು' ಎಂಬ ಶೀರ್ಷಿಕೆಯಡಿ ಕಲಾ ಪ್ರದರ್ಶನ ಹಮ್ಮಿಕೊಂಡಿದೆ.

ಕಲಾವಿದ ರವಿಕುಮಾರ್ ಕಾಶಿ ಅವರ ಕಲಾಕೃತಿಗಳು ಇಲ್ಲಿ ಪ್ರದರ್ಶನ ಕಾಣಲಿವೆ. ಕಾಗದಗಳಲ್ಲಿ ವಿವಿಧ ಕಲಾಕೃತಿಗಳನ್ನೂ ಅವರು ರೂಪಿಸಿದ್ದಾರೆ. ಕಾಗದಗಳ ಸಾಂಪ್ರದಾಯಿಕ ಬಳಕೆ ಮತ್ತು ಉದ್ದೇಶವನ್ನು ಮೀರಿ, ಮರುಕಲ್ಪಿಸಿದ್ದಾರೆ. ಅವುಗಳ ಪ್ರದರ್ಶನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಚಾಲಕನ ಸಮಯ ಪ್ರಜ್ಞೆ ತಪ್ಪಿದ ಅನಾಹುತ

ಪ್ರಜಾವಾಣಿ ವಾರ್ತೆ

ಮೂಡಿಗೆರೆ: ಧರ್ಮಸ್ಥಳದಿಂದ ಶಿವಮೊಗ್ಗಕ್ಕೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ನ ಸ್ಟಿಯರಿಂಗ್ ರಾಡ್ ಚಾರ್ಮಾಡಿ ಘಾಟಿ ತಿರುವಿನಲ್ಲಿ ತುಂಡಾಗಿದ್ದು, ಚಾಲಕನ ಸಮಯ ಪ್ರಜ್ಞೆಯಿಂದ ದೊಡ್ಡ ಅನಾಹುತ ತಪ್ಪಿದೆ.

ಶಿವರಾತ್ರಿ ಅಂಗವಾಗಿ ಶಿವಮೊಗ್ಗ ಘಟಕದಿಂದ ಧರ್ಮಸ್ಥಳಕ್ಕೆ ವಿಶೇಷ ಬಸ್ ಬಿಡಲಾಗಿತ್ತು. ಗುರುವಾರ ಧರ್ಮಸ್ಥಳದಿಂದ ವಾಪಸ್ ಶಿವಮೊಗ್ಗಕ್ಕೆ ಹೋಗುತ್ತಿದ್ದ ಬಸ್‌ನಲ್ಲಿ 63 ಮಂದಿ ಪ್ರಯಾಣಿಕರಿದ್ದರು. ಸ್ವಲ್ಪ ಮುಂದೆ ಸಾಗಿದ್ದರೂ ಬಸ್ ಪ್ರಪಾತಕ್ಕೆ ಬೀಳುತ್ತಿತ್ತು. ಆದರೆ, ಚಾಲಕನ ಸಮಯಪ್ರಜ್ಞೆ ಮತ್ತು ಚಾಲನಾ ಕೌಶಲದಿಂದ ಅನಾಹುತ ಸಂಭವಿಸಲಿಲ್ಲ ಎಂದು ಬಸ್‌ನಲ್ಲಿದ್ದ ಪ್ರಯಾಣಿಕರು ತಿಳಿಸಿದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಬದಲಿ ಬಸ್ ಮೂಲಕ ಪ್ರಯಾಣಿಕರನ್ನು ಶಿವಮೊಗ್ಗಕ್ಕೆ ಕಳುಹಿಸಿ ಕೊಡಲಾಯಿತು.

ಅಮೆರಿಕದ ನೀತಿ ವಿರೋಧಿಸಿ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದಲ್ಲಿ ಲಿಂಗತ್ವ ಅಲ್ಪಸಂಖ್ಯಾತ ವಿರೋಧಿ ನೀತಿಯನ್ನು ಜಾರಿ ಮಾಡುತ್ತಿರುವುದನ್ನು ವಿರೋಧಿಸಿ ಲಿಂಗತ್ವ ಮತ್ತು ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಕಾರ್ಯಕರ್ತೆ ಅಕ್ಕೈ ಪದ್ಮಸಾಲಿ, ಟ್ರಾನ್ಸ್‌ಗರ್ಲ್ಸ್ ಜೆಂಡರ್ ಹಕ್ಕುಗಳ ಕಾರ್ಯಕರ್ತೆ ರಕ್ಷಿತಾ ಮಲ್ಲಿಕಾರ್ಜುನ ಮತ್ತು ಇಂಟರ್‌ಸೆಕ್ಸ್ ಸಮುದಾಯದ ಹಕ್ಕುಗಳ ಕಾರ್ಯಕರ್ತೆ ಎಂ.ಎಸ್. ಅಬೇದಾ ಬೇಗಂ ಪತ್ರ ಬರೆದಿದ್ದಾರೆ.

'ಇಂದು ಜಗತ್ತಿನ ವಿವಿಧ ದೇಶಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರ ಹಕ್ಕುಗಳಿಗಾಗಿ ನಡೆಯುವ ಹೋರಾಟಕ್ಕೆ ಅಮೆರಿಕದಲ್ಲಿ ಕ್ವೀರ್ ಮತ್ತು ಟ್ರಾನ್ಸ್‌ಜೆಂಡರ್ ಕಾರ್ಯಕರ್ತರು ನಡೆಸಿದ್ದ ಹೋರಾಟ ಸ್ಫೂರ್ತಿಯಾಗಿದೆ. ಆದರೆ, ನೀವು ಲಿಂಗತ್ವ ಅಲ್ಪಸಂಖ್ಯಾತರನ್ನು ದೂರ ಇಡುವ ಕಾನೂನು ತರುತ್ತಿರುವುದು ದಿಗಿಲು ಹುಟ್ಟಿಸಿದೆ. ಇದು ಟ್ರಾನ್ಸ್‌ಜೆಂಡರ್‌ಗಳ ಜೀವಿಸುವ ಹಕ್ಕನ್ನೇ ಕಸಿದುಕೊಳ್ಳುವಂತದ್ದಾಗಿದೆ' ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಅಕ್ಕೈ ಪದ್ಮಸಾಲಿ

'ಹುಟ್ಟಿನಿಂದ ಗಂಡು ಅಥವಾ ಹೆಣ್ಣು ಅಲ್ಲದವರಿಗೆ ಸೈನ್ಯದಲ್ಲಿ, ಉದ್ಯೋಗಗಳಲ್ಲಿ ಅವಕಾಶ ನಿರಾಕರಿಸುವ, ಟ್ರಾನ್ಸ್‌ಜೆಂಡರ್ ಶಸ್ತ್ರಚಿಕಿತ್ಸೆ ಕೊನೆಗೊಳಿಸುವ ನಿಮ್ಮ ಕ್ರಮವು ಸಂಕುಚಿತವಾದುದು. ಲಿಂಗತ್ವ ಅಲ್ಪಸಂಖ್ಯಾತರ ಅಸ್ತಿತ್ವವನ್ನೇ ಅಲ್ಲಗಳೆಯುವ ಮೂಲಕ ಕಾನೂನಿನ ರಕ್ಷಣೆ ಇಲ್ಲದಂತೆ ಮಾಡುವ ಕ್ರಮ. ಇದರಿಂದ ಲಿಂಗತ್ವ ಅಲ್ಪಸಂಖ್ಯಾತರು ಇನ್ನಷ್ಟು ಕಿರುಕುಳ, ಹಿಂಸೆ, ಆಕ್ರಮಣಗಳಿಗೆ ತುತ್ತಾಗಲಿದ್ದಾರೆ' ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

'ನಿಮ್ಮ ಹೃದಯಹೀನ ಕ್ರಮಗಳನ್ನು ಸಹಿಸಿಕೊಂಡು ಅಮೆರಿಕದ ಕ್ವೀರ್ ಮತ್ತು ಟ್ರಾನ್ಸ್‌ಜೆಂಡರ್ ಕಾರ್ಯಕರ್ತರು ಸುಮ್ಮನೆ ಕೂರುವುದಿಲ್ಲ. ಹೋರಾಟಕ್ಕೆ ಇಳಿಯುತ್ತಾರೆ ಎಂಬ ವಿಶ್ವಾಸ ನಮಗಿದೆ. ಅವರ ಹೋರಾಟಕ್ಕೆ ನಮ್ಮ ಬೆಂಬಲವಿದೆ' ಎಂದು ತಿಳಿಸಿದ್ದಾರೆ.

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ
ನಂ.30/1, 1ನೇ ಮಹಡಿ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಪ್ರದೇಶ, ವಸಂತನಗರ, ಬೆಂಗಳೂರು–560 051. CIN: U37100KA2021SGC147734
ಇ–ಮೇಲ್ ಐಡಿ: dgm3bswml@gmail.com

ಸಂ: ಉಪ್ರವ್ಯ–3/ಬೆಂಘತ್ಯಾನಿನಿ/ಇಒಐ/01/2024–25 ದಿನಾಂಕ: 27.02.2025

ಆಸಕ್ತಿ ವ್ಯಕ್ತಪಡಿಸಲು ಆಹ್ವಾನ (ಇಒಐ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾಮಗಾರಿಯ ಹೆಸರು: ಚಿಕ್ಕನಾಗಮಂಗಲದಲ್ಲಿರುವ 300 ಟಿಪಿಡಿ ಹಸಿ ತ್ಯಾಜ್ಯ ಸಂಸ್ಕರಣಾ ಘಟಕದ ಕಾರ್ಯಾಚರಣೆ ಹಾಗೂ ನಿರ್ವಹಣೆ.

1. ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ ಚಿಕ್ಕನಾಗಮಂಗಲದಲ್ಲಿರುವ 300 ಟಿಪಿಡಿ ಹಸಿ ತ್ಯಾಜ್ಯ ಸಂಸ್ಕರಣಾ ಘಟಕದ ಕಾರ್ಯಾಚರಣೆ ಹಾಗೂ ನಿರ್ವಹಣೆ ಕಾಮಗಾರಿಗಾಗಿ ಅರ್ಹ ಸಂಸ್ಥೆಗಳು/ಏಜೆನ್ಸಿಗಳು/ವ್ಯಕ್ತಿಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆಗೆ (ಇಒಐ) ಆಹ್ವಾನಿಸುತ್ತಿದೆ.
2. ಈ ಆಸಕ್ತಿ ವ್ಯಕ್ತಪಡಿಸುವಿಕೆ (ಇಒಐ) ಯನ್ನು ಅಂದಾಜುಗಳನ್ನು ತಯಾರಿಸಲು ಮಾರುಕಟ್ಟೆ ದರಗಳನ್ನು ಪಡೆಯಲು ಮಾತ್ರ ಆಹ್ವಾನಿಸಲಾಗಿದೆ.
3. ಇಒಐ ವಿವರಗಳನ್ನು **ದಿನಾಂಕ 28.02.2025ರಿಂದ** ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ನಿಂದ ತೆಗೆದುಕೊಳ್ಳಬಹುದು ಅಥವಾ ಡೌನ್‌ಲೋಡ್ ಮಾಡಿಕೊಳ್ಳಬಹುದು.
4. ಕೆಪಿಪಿ ಪೋರ್ಟಲ್‌ನಲ್ಲಿ ಪ್ರತಿಕ್ರಿಯೆಯನ್ನು ಸ್ವೀಕರಿಸಲು ಕೊನೆಯ ದಿನಾಂಕ (ಗಡುವು): **10.03.2025ರ ಸಂಜೆ 4.00 ಗಂಟೆವರೆಗೆ.**
5. ಕೆಪಿಪಿ ಪೋರ್ಟಲ್ ಮುಖಾಂತರ ಪ್ರತಿಕ್ರಿಯೆಗಳನ್ನು ತೆರೆಯುವ ದಿನಾಂಕ: **11.03.2025ರ ಸಂಜೆ 4.30 ಗಂಟೆ ನಂತರ.**
6. ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂಘತ್ಯಾನಿನಿ, ಇವರು ಸ್ವೀಕರಿಸಿದ ಯಾವುದೇ ಅಥವಾ ಯಾವುದೇ ಕಾರಣ ನೀಡದೇ ಎಲ್ಲಾ ಪ್ರತಿಕ್ರಿಯೆಗಳನ್ನು ಸ್ವೀಕರಿಸುವ/ತಿರಸ್ಕರಿಸುವ ಎಲ್ಲಾ ಹಕ್ಕನ್ನು ಹೊಂದಿರುತ್ತಾರೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–3, ಬೆಂಘತ್ಯಾನಿನಿ
ವಾಸಾಸಂಇ/ವಾ.ಪ್ರ/5341/ಎಂಎಎ/24–25

ರಾಜ್ಯ ನಗರಾಭಿವೃದ್ಧಿ ಇಲಾಖೆಯಿಂದ ಕ್ರಮ

ಪ್ರೀಮಿಯಂ ಎಫ್‌ಎಆರ್: ಅಂತಿಮ ಅಧಿಸೂಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಶೇ 50ರಷ್ಟು ಶುಲ್ಕ ಪಾವತಿಸಿ ಶೇ 60ರಷ್ಟು ಎಫ್‌ಎಆರ್
- ಪರಿಷ್ಕೃತ ಮಾಸ್ಟರ್ ಪ್ಲಾನ್ ವಲಯ ನಿಯಮಗಳ ಬದಲು
- ಹೆಚ್ಚುವರಿ ಅಂತಸ್ತು ನಿರ್ಮಿಸಲು ಅವಕಾಶ

ಬೆಂಗಳೂರು: ನಿವೇಶನದ ಮಾರ್ಗಸೂಚಿ ದರದ ಶೇಕಡ 50ರಷ್ಟು ಶುಲ್ಕ ಪಾವತಿಸಿಕೊಂಡು, ಶೇ 60ರವರೆಗೂ ಪ್ರೀಮಿಯಂ ಎಫ್‌ಎಆರ್ ನೀಡಲು ಅವಕಾಶ ಕಲ್ಪಿಸುವ ಅಧಿಸೂಚನೆಯನ್ನು ನಗರಾಭಿವೃದ್ಧಿ ಇಲಾಖೆ ಹೊರಡಿಸಿದೆ.

'ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ –2015'ರ ಸೆಕ್ಷನ್ 13–ಇಗೆ ತಿದ್ದುಪಡಿ ತರಲಾಗಿದ್ದು, ಪ್ರೀಮಿಯಂ ಎಫ್‌ಎಆರ್‌ಗಾಗಿ ಪರಿಷ್ಕೃತ ಮಾಸ್ಟರ್ ಪ್ಲಾನ್–2015ರ ವಲಯ ನಿಯಮಗಳನ್ನು ಬದಲಾಯಿಸಲಾಗಿದೆ. ಜನವರಿ 4ರಂದು ಕರಡು ಅಧಿಸೂಚನೆ ಹೊರಡಿಸಲಾಗಿತ್ತು. ಸಾರ್ವಜನಿಕರ ಆಕ್ಷೇಪಣೆಯನ್ನು ಪರಿಗಣಿಸಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.

ನಕ್ಷೆ ಅನುಮೋದನೆಗೊಂಡು ಕಟ್ಟಡ ನಿರ್ಮಾಣ ಮಾಡಿರುವವರು ಹಾಗೂ ನಿರ್ಮಿಸುತ್ತಿರುವವರು 'ಪ್ರೀಮಿಯಂ ಎಫ್‌ಎಆರ್' ಪಡೆದು ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಬಹುದಾಗಿದೆ.

9 ಮೀಟರ್‌ನಿಂದ 12 ಮೀಟರ್‌ವರೆಗಿನ ಅಗಲದ ರಸ್ತೆ ಹೊಂದಿರುವ ಕಟ್ಟಡಗಳ ನಿರ್ಮಿತ ಪ್ರದೇಶಕ್ಕೆ ಅನುಗುಣವಾಗಿ ಶೇ 20ರಷ್ಟು ಪ್ರೀಮಿಯಂ ಎಫ್‌ಎಆರ್ ನೀಡಲಾಗುತ್ತದೆ. 12 ಮೀಟರ್‌ನಿಂದ 18 ಮೀಟರ್ ಅಗಲದ ರಸ್ತೆ ಹೊಂದಿರುವ ಕಟ್ಟಡಗಳಿಗೆ ಶೇ 40 ಹಾಗೂ 18 ಮೀಟರ್‌ಗೂ ಹೆಚ್ಚಿನ ಅಗಲದ ರಸ್ತೆ ಹೊಂದಿರುವ ಕಟ್ಟಡಗಳು ಶೇ 60ರಷ್ಟು ಗರಿಷ್ಠ ಪ್ರೀಮಿಯಂ ಎಫ್‌ಎಆರ್ ಪಡೆಯಬಹುದು.

ಪ್ರೀಮಿಯಂ ಎಫ್‌ಎಆರ್ ಜೊತೆಗೆ ಟಿಡಿಆರ್ ಅನ್ನೂ ಪಡೆಯಬಹುದಾಗಿದೆ ಎಂದು ನಿಯಮಗಳಲ್ಲಿ ವಿವರಿಸಲಾಗಿದೆ.

ಪ್ರೀಮಿಯಂ ಎಫ್‌ಎಆರ್ ಪಡೆದರೂ, ಕಟ್ಟಡದ ಅನುಮೋದಿತ ವಿಸ್ತೀರ್ಣಕ್ಕಿಂತ ಶೇ 40ರಷ್ಟು ಮಾತ್ರ ಹೆಚ್ಚುವರಿಯಾಗಿ ನಿರ್ಮಿಸಬಹುದು. ಉಳಿದಿದ್ದನ್ನು ಟಿಡಿಆರ್ ಪಡೆಯುವುದಕ್ಕೆ ಅವಕಾಶವಿದ್ದು, ಇದನ್ನು ಮಾರಾಟ ಮಾಡಿಕೊಳ್ಳುವುದಕ್ಕೆ ಹೊಸ ನಿಯಮದಲ್ಲಿ ಅನುವು ಮಾಡಿಕೊಡಲಾಗಿದೆ.

ಕಟ್ಟಡ ನಿರ್ಮಿಸುವವರು ಮಾರ್ಗಸೂಚಿ ದರದನ್ವಯ ಶುಲ್ಕ ಪಾವತಿಸಿ ಪ್ರೀಮಿಯಂ ಎಫ್‌ಎಆರ್‌ಗಳನ್ನು ಸ್ಥಳೀಯ ಯೋಜನಾ ಪ್ರಾಧಿಕಾರದಿಂದ ಪಡೆದುಕೊಳ್ಳಬಹುದು. ಈ ಮೂಲಕ ಕಟ್ಟಡದ ನಿವೇಶನದ ಅಳತೆಗೆ ನಿಗದಿಪಡಿಸಿದ ಎಫ್‌ಎಆರ್‌ಗಿಂತ ಹೆಚ್ಚುವರಿ ಅಂತಸ್ತುಗಳನ್ನು ನಿರ್ಮಿಸಿಕೊಳ್ಳಬಹುದು. ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡುವ ಸಕ್ಷಮ ಪ್ರಾಧಿಕಾರದ ಅನುಮೋದಿತ ಮಾಸ್ಟರ್ ಪ್ಲಾನ್‌ನ ವಲಯ ನಿಯಮಗಳ ಅನ್ವಯವೇ ಪ್ರೀಮಿಯಂ ಎಫ್‌ಎಆರ್‌ಗೆ ಅನುಮತಿ ನೀಡಲಾಗುತ್ತದೆ ಎಂದು ಅಧಿಸೂಚನೆಯಲ್ಲಿ ವಿವರಿಸಲಾಗಿದೆ.

'ಈಗಾಗಲೇ ಅಕ್ರಮವಾಗಿ ನಿರ್ಮಿಸಲಾಗಿರುವ ಅಂತಸ್ತುಗಳಿಗೆ ಪ್ರೀಮಿಯಂ ಎಫ್‌ಎಆರ್ ಅನ್ವಯವಾಗಲಿದೆಯೇ ಎಂಬುದು ಅಧಿಸೂಚನೆಯಲ್ಲಿ ಸ್ಪಷ್ಟವಾಗಿಲ್ಲ' ಎಂದು ರಿಯಲ್ ಎಸ್ಟೇಟ್ ಉದ್ಯಮಿಗಳು ಹೇಳುತ್ತಿದ್ದಾರೆ.

ಲಿಂಗತ್ವ ಅಲ್ಪಸಂಖ್ಯಾತ ಮಕ್ಕಳಿಗೆ ಬಾಲಮಂದಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿಷನ್ ವಾತ್ಸಲ್ಯ ಯೋಜನೆಯಡಿ ರಕ್ಷಣೆ ಮತ್ತು ಪೋಷಣೆಯ ಅಗತ್ಯವಿರುವ ಲಿಂಗತ್ವ ಅಲ್ಪಸಂಖ್ಯಾತ ಮಕ್ಕಳಿಗೆ ಬಾಲಮಂದಿರವನ್ನು ಪ್ರಾರಂಭಿಸಲಾಗಿದೆ ಎಂದು ಜಿಲ್ಲಾಧಿಕಾರಿ ಜಿ. ಜಗದೀಶ ತಿಳಿಸಿದರು.

ಬೆಂಗಳೂರಿನಲ್ಲಿ ಲಿಂಗತ್ವ ಅಲ್ಪಸಂಖ್ಯಾತ ಮಕ್ಕಳಿಗಾಗಿ ಎರಡು ಬಾಲಮಂದಿರಗಳನ್ನು ಪ್ರಾರಂಭಿಸಲಾಗಿದೆ. ಇದು ದೇಶದಲ್ಲೇ ಮೊದಲು ಎಂದು ಅವರು ಅಧಿಕಾರಿಗಳ ಸಭೆಯಲ್ಲಿ ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಕ್ಕಳ ರಕ್ಷಣಾ ನಿರ್ದೇಶನಾಲಯವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಯೋಗದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳ ಮೂಲಕ 'ಮಿಷನ್ ವಾತ್ಸಲ್ಯ' ಯೋಜನೆಯಡಿ, ರಕ್ಷಣೆ ಮತ್ತು ಪೋಷಣೆ ಅಗತ್ಯವಿರುವ ಮಕ್ಕಳಿಗಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಲಿಂಗತ್ವ ಅಲ್ಪಸಂಖ್ಯಾತ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಬಾಲಮಂದಿರಗಳನ್ನು ಪ್ರಾರಂಭಿಸಲು ಸರ್ಕಾರ ಅನುಮೋದನೆ ನೀಡಿದೆ ಎಂದು ಮಾಹಿತಿ ನೀಡಿದರು.

ಲಿಂಗತ್ವ ಅಲ್ಪಸಂಖ್ಯಾತ ಮಕ್ಕಳಿಗೆ ಪಾಲನೆ, ಪೋಷಣೆ ಹಾಗೂ ಪುನರ್ವಸತಿ ಅವಶ್ಯಕತೆ ಇದ್ದರೆ, ಬಾಲಮಂದಿರಗಳಿಗೆ ದಾಖಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೆಂಗಳೂರು ನಗರ ಕೇಂದ್ರ, ಕಿದ್ವಾಯಿ ಆಸ್ಪತ್ರೆ ಹಿಂಭಾಗ. ದೂರವಾಣಿ: 080-29523458 ಅನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಸಿದ್ದರಾಮಪ್ಪ ಉಪಸ್ಥಿತರಿದ್ದರು.

‘ದೊಡ್ಡ ಲೀಡರ್‌ಗಳಿಗೆಲ್ಲ ಉತ್ತರ ಕೊಡಲ್ಲ’

ಈಶಾ ಯೋಗ ಕೇಂದ್ರಕ್ಕೆ ಭೇಟಿ: ಬಿಜೆಪಿ ಸ್ವಾಗತಕ್ಕೆ ತಲೆ ಕೆಡಿಸಿಕೊಳ್ಳುವುದಿಲ್ಲ – ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ



ಡಿ.ಕೆ. ಶಿವಕುಮಾರ್

ಬೆಂಗಳೂರು: ‘ಈಶಾ ಯೋಗಕೇಂದ್ರದ ಶಿವರಾತ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ನನ್ನ ಸ್ವಂತ ನಿರ್ಧಾರ. ಹೈಕಮಾಂಡ್, ದೊಡ್ಡ ಲೀಡರ್‌ಗಳ ಮಾತಿಗೆ ಉತ್ತರ ಕೊಡಲು ಹೋಗುವುದಿಲ್ಲ. ಸಾವಿರ ಜನ ವಿರೋಧ ಮಾಡಲಿ, ನನ್ನ ನಂಬಿಕೆ ನನಗೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ‘ಸದ್ಗುರು ಜಗ್ಗಿ ವಾಸುದೇವ್ ಮೈಸೂರಿನವರು, ಕಾವೇರಿ ಹೋರಾಟದಲ್ಲೂ ಭಾಗವಹಿಸಿದ್ದರು. ಅವರು ರಾಹುಲ್ ಗಾಂಧಿ ಬಗ್ಗೆ ಟೀಕಿಸಿದ್ದ ಮಾಹಿತಿ ಇಲ್ಲ. ಈ ಕುರಿತು ನನ್ನ ನಡೆಯ ವಿರುದ್ಧ ಟ್ವೀಟ್ ಮಾಡಿದ್ದ ‘ರಾಷ್ಟ್ರ ನಾಯಕರ’ ಮಾತಿಗೆ ಮನ್ನಣೆ ಕೊಡುವುದಿಲ್ಲ’ ಎಂದು ಪರೋಕ್ಷವಾಗಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪಿ.ವಿ. ಮೋಹನ್ ಅವರ ಹೆಸರು ಹೇಳದೆ ಟೀಕಿಸಿದರು.

ಕಾಂಗ್ರೆಸ್ ಪಕ್ಷದಲ್ಲಿ ದಿನೇ ದಿನೇ ಒಳಜಗಳ ಜಾಸ್ತಿ ಆಗುತ್ತಿದೆ. ಮುಂದಿನ ದಿನಗಳಲ್ಲಿ ಕ್ಷಿಪ್ರ ರಾಜಕೀಯ ಬೆಳವಣಿಗೆ ಆಗಲಿದೆ ಎಂದು ನಾನು ಈ ಹಿಂದೆಯೇ ಹೇಳಿದ್ದೇನೆ

ಬಿ.ವೈ. ವಿಜಯೇಂದ್ರ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

‘ಧರ್ಮ, ಆಚರಣೆ ಅವರವರ ನಂಬಿಕೆ. ನಾನು ಹಿಂದೂ ಧರ್ಮದಲ್ಲಿ ಹುಟ್ಟಿದ್ದೇನೆ. ಇತರೆ ಧರ್ಮಗಳ ಬಗ್ಗೆಯೂ ಗೌರವವಿದೆ. ನಮ್ಮ ನಾಯಕ ರಾಹುಲ್ ಗಾಂಧಿ ಅವರೂ ಪರಮ ಶಿವಭಕ್ತ. ಚಿತ್ರದುರ್ಗದ ಮುರುಘಾ ಮಠದಲ್ಲಿ ದೀಕ್ಷೆ ಪಡೆದಿದ್ದರು. ಸಾವಿರ ಜನರು ವಿರೋಧಿಸಿದರೂ, ನನ್ನ ನಂಬಿಕೆ ನನ್ನದು. ಕಾಂಗ್ರೆಸ್ ಟೀಕೆ, ಬಿಜೆಪಿ ಸ್ವಾಗತಕ್ಕೆ ತಲೆ ಕೆಡಿಸಿಕೊಳ್ಳುವುದಿಲ್ಲ. ನಮ್ಮದು ಜಾತಿ ರಾಜಕಾರಣ ಅಲ್ಲ, ನೀತಿ ರಾಜಕಾರಣ’ ಎಂದರು.

‘ನಿಮ್ಮ ಈ ನಡೆಯನ್ನು ಬಿಜೆಪಿ ನಾಯಕರು ಸ್ವಾಗತಿಸಿದ್ದಾರಲ್ಲ’ ಎಂಬ ಸುದ್ದಿಗಾರರ ಪ್ರಶ್ನೆಗೆ, ‘ಬಿಜೆಪಿಯವರು ಸ್ವಾಗತಿಸುವುದೂ ಬೇಡ, ಬೇರೆ ಯಾರೂ ಸ್ವಾಗತಿಸುವುದು ಬೇಡ. ನೀವು (ಮಾಧ್ಯಮಗಳು) ಇದನ್ನು ಹೆಚ್ಚು ಚರ್ಚೆ ಮಾಡುವುದೂ ಬೇಡ. ಇದು ನನ್ನ ವೈಯಕ್ತಿಕ ವಿಚಾರ’ ಎಂದು ಹೇಳಿದರು.

ಎಸ್.ಎಂ. ಕೃಷ್ಣ ಅವರು ಪಾಂಚಜನ್ಯ ಯಾತ್ರೆ ಕೈಗೊಂಡಾಗ, ಪಾಂಚಜನ್ಯವನ್ನು ಆರ್‌ಎಸ್‌ಎಸ್ ಸರಕು ಎಂಬಂತೆ ಕೆಲವರು ಸೋನಿಯಾ ಗಾಂಧಿ ಅವರಿಗೆ ದೂರು ನೀಡಿದ್ದರು. ನದಿ, ಭೂಮಿಗೆ ಜಾತಿ, ಧರ್ಮದ ಭೇದವಿಲ್ಲ. ಹಿಂದೂಗಳನ್ನು ಬಿಜೆಪಿ ಗುತ್ತಿಗೆ ಪಡೆದಿಲ್ಲ. ಹಾಗಾದರೆ, ಅವರು ಏಕೆ ವಕ್ಫ್ ಮಂಡಳಿ ರದ್ದು ಮಾಡಲಿಲ್ಲ ಎಂದು ಪ್ರಶ್ನಿಸಿದರು.

ಕಾಂಗ್ರೆಸ್‌ನಲ್ಲಿ ಕರಿಬೆಕ್ಕಿನ ಕಾಟ: ಅಶೋಕ

‘ಡಿ.ಕೆ.ಶಿವಕುಮಾರ್ ಅವರು ಮಹಾಕುಂಭ ಮೇಳ ಮತ್ತು ಈಶಾ ಯೋಗಕೇಂದ್ರದ ಶಿವರಾತ್ರಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಬಗ್ಗೆ ನಡೆಯುತ್ತಿರುವ ಚರ್ಚೆ ಕಾಂಗ್ರೆಸ್ ಪಕ್ಷದ ಆಂತರಿಕ ವಿಚಾರ. ಆದರೆ, ಕಾಂಗ್ರೆಸ್‌ನಲ್ಲಿ ಕರಿ ಬೆಕ್ಕಿನ ಕಾಟ ಹೆಚ್ಚಾಗಿದೆ. ಅದರ ಬಗ್ಗೆ ಶಿವಕುಮಾರ್ ಅವರೇ ಉತ್ತರಿಸಬೇಕು’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

‘ಅಧಿಕಾರವನ್ನು ಒದ್ದು ಕಿತ್ತುಕೊಳ್ಳುತ್ತೇನೆ ಎಂದು ಶಿವಕುಮಾರ್ ಹೇಳಿದಾಗಲೇ ಎಲ್ಲರೂ ಸುಮ್ಮನಿದ್ದರು. ಪಕ್ಷದೊಳಗಿನ ಆಂತರಿಕ ಕಚ್ಚಾಟ ಎಂದು ಎಲ್ಲರಿಗೂ ಗೊತ್ತಾಗಿದೆ. ಇದು ಮುಖ್ಯಮಂತ್ರಿ ಬದಲಾಗುವ ಲಕ್ಷಣ. ಸಿದ್ದರಾಮಯ್ಯ ದುರ್ಬಲರಾಗಿದ್ದಾರೆ. ಆದ್ದರಿಂದ ತಾವೇ ಮಾಸ್ ಲೀಡರ್ ಎಂಬ ಸಂದೇಶವನ್ನು ಶಿವಕುಮಾರ್ ನೀಡಿದ್ದಾರೆ’ ಎಂದರು.

ಡಿಕೆಶಿ ಬಿಜೆಪಿ ಸೇರುವ ಚರ್ಚೆ ಆಗಿಲ್ಲ: ಬೊಮ್ಮಾಯಿ

ಡಿ.ಕೆ.ಶಿವಕುಮಾರ್ ಬಿಜೆಪಿ ಸೇರುವ ಕುರಿತು ಬಿಜೆಪಿಯಲ್ಲಿ ಯಾವುದೇ ಚರ್ಚೆ ನಡೆದಿಲ್ಲ. ಆದರೆ, ರಾಜಕೀಯ ಬೆಳವಣಿಗೆಗಳು ಕ್ಷಿಪ್ರವಾಗಿಯೇ ಆಗುತ್ತದೆ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸದ್ಗುರು ಆಯೋಜಿಸಿದ್ದ ಶಿವರಾತ್ರಿ ವಿಶೇಷ ಕಾರ್ಯಕ್ರಮದಲ್ಲಿ ಶಿವಕುಮಾರ್ ಭಾಗಿಯಾಗಿದ್ದಕ್ಕೆ ರಾಜಕೀಯ ಅರ್ಥ ಕಲ್ಪಿಸುವ ಅಗತ್ಯವಿಲ್ಲ. ಕಾಂಗ್ರೆಸ್‌ನಲ್ಲಿ ಬೇರೆ ಬೇರೆ ವ್ಯಾಖ್ಯಾನ ನಡೆಯುತ್ತಿರುವುದು ಅವರ ಪಕ್ಷದ ವಿಚಾರ. ಅದು ಆ ಪಕ್ಷದ ಅಪನಂಬಿಕೆ ಮತ್ತು ಗೊಂದಲದ ಸಂಕೇತ. ಅಪನಂಬಿಕೆ ಇರುವುದರಿಂದಲೇ ಅಪಸ್ವರವೂ ಇದೆ’ ಎಂದರು.

ಬಿ.ಎಸ್‌.ಯಡಿಯೂರಪ್ಪ ಅವರ ನಿವಾಸದ ಆವರಣದಲ್ಲಿ ನಡೆದ ವೀರಶೈವ–ಲಿಂಗಾಯತ ನಾಯಕರ ಸಭೆಯಲ್ಲಿ ಎಂ.ಪಿ.ರೇಣುಕಾಚಾರ್ಯ ಮಾತನಾಡಿದರು

ಯಡಿಯೂರಪ್ಪ ನಿವಾಸದಲ್ಲಿ ವೀರಶೈವ–ಲಿಂಗಾಯತರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಬಣದ ನಾಯಕ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಅವರು ಶುಕ್ರವಾರ ವೀರಶೈವ- ಲಿಂಗಾಯತ ಪ್ರಮುಖರ ಸಭೆ ನಡೆಸಿದರು.

ಯಡಿಯೂರಪ್ಪ ಅವರ ನಿವಾಸದ ಆವರಣದಲ್ಲಿ ನಡೆದ ಈ ಸಭೆಯಲ್ಲಿ ಹಿರಿಯ ಮಟ್ಟದ ನಾಯಕರು ಯಾರೂ ಇರಲಿಲ್ಲ. ಯಡಿಯೂರಪ್ಪ ಅವರ ಜನ್ಮದಿನಕ್ಕೆ ಶುಭಕೋರಲು ಬಂದಿದ್ದ ನಾಯಕರು ಅನೌಪಚಾರಿಕವಾಗಿ ಸಭೆ ನಡೆಸಿದರು. ಮುಂಬರುವ ದಿನಗಳಲ್ಲಿ ರಾಜ್ಯದ ವಿವಿಧೆಡೆ ವೀರಶೈವ–ಲಿಂಗಾಯತ ಸಮುದಾಯಕ್ಕೆ ಸೇರಿದ ಯಡಿಯೂರಪ್ಪ ಅಭಿಮಾನಿಗಳ ಸಭೆ ನಡೆಸುವುದಾಗಿ ರೇಣುಕಾಚಾರ್ಯ ಇದೇ ವೇಳೆ ಪ್ರಕಟಿಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ರೇಣುಕಾಚಾರ್ಯ ಅವರು, ಯಡಿಯೂರಪ್ಪ ಅವರು ಬಿಜೆಪಿಯ ಅಗ್ರಮಾನ್ಯ ನಾಯಕ. ಅಷ್ಟು ದೊಡ್ಡ ನಾಯಕ ಬಿಜೆಪಿಯಲ್ಲಿ ಯಾರೂ ಇಲ್ಲ. ಜನರು ಅವರ ಮುಖ ನೋಡಿ ಬಿಜೆಪಿಯನ್ನು ಗೆಲ್ಲಿಸಿದ್ದಾರೆ. ಆದರೆ, ಇತ್ತೀಚೆಗೆ ಕೆಲ ದುಷ್ಟಶಕ್ತಿಗಳು, ಒಳಪಂಗಡದ ಹೆಸರಿನಲ್ಲಿ ಸಮಾಜವನ್ನು ಒಡೆಯುವ ಪ್ರಯತ್ನ ಮಾಡುತ್ತಿದ್ದಾರೆ ಎಂದರು.

ಯಡಿಯೂರಪ್ಪ ಅವರ ಪರವಾಗಿ ಒಗ್ಗಟ್ಟು ಪ್ರದರ್ಶಿಸಲು ರಾಜ್ಯದ ವಿವಿಧೆಡೆ ಸಭೆಗಳನ್ನು ನಡೆಸಲಾಗುವುದು. ಇದರಲ್ಲಿ ಪಕ್ಷದ ಯಾವುದೇ ದೊಡ್ಡ ನಾಯಕರು ಭಾಗವಹಿಸುವುದಿಲ್ಲ. ಸಮುದಾಯಕ್ಕೆ ಸೇರಿದ ಯಡಿಯೂರಪ್ಪ ಅಭಿಮಾನಿಗಳು ಮಾತ್ರ ಭಾಗವಹಿಸುತ್ತಾರೆ ಎಂದರು.

‘ಶುಕ್ರವಾರ ಬೆಳಿಗ್ಗೆ 11ಕ್ಕೆ ದಾಬಸ್ ಪೇಟೆಯಲ್ಲಿ, ಮಧ್ಯಾಹ್ನ 1 ಗಂಟೆಗೆ ತುಮಕೂರಿನಲ್ಲಿ ಸಭೆ ನಡೆಸುತ್ತೇವೆ. ಮಾರ್ಚ್ 1ರಂದು ದಾವಣಗೆರೆ, ಚಿತ್ರದುರ್ಗ, ಹಾವೇರಿ ಜಿಲ್ಲೆಗಳ ಅಭಿಮಾನಿಗಳ ಸಭೆಗಳು ದಾವಣಗೆರೆಯಲ್ಲಿ ನಡೆಯಲಿವೆ’ ಎಂದು ಹೇಳಿದರು.

‘ಅಂತಿಮವಾಗಿ ಬೆಂಗಳೂರಿನಲ್ಲಿ ಮಾರ್ಚ್ 4ರಂದು ದೊಡ್ಡ ಮಟ್ಟದ ಸಭೆ ನಡೆಸಲಾಗುವುದು. ಈ ಸಭೆಗಳಲ್ಲಿ ಉದ್ಯಮಿಗಳು, ನಿವೃತ್ತ ಅಧಿಕಾರಿಗಳು, ವಕೀಲರು ಮತ್ತು ಇತರರು ಭಾಗವಹಿಸುತ್ತಾರೆ. ಈ ಸಭೆಗಳಿಗೆ ತಗಲುವ ವೆಚ್ಚವನ್ನು ಆಯಾ ಭಾಗದ ನಾಯಕರೇ ಭರಿಸುತ್ತಾರೆ. ಬೆಂಗಳೂರಿನಲ್ಲಿ ನಡೆಯುವ ಸಭೆಯಲ್ಲಿ ಸ್ವಾಮೀಜಿಗಳು ಭಾಗವಹಿಸುತ್ತಾರೆ. ಅಲ್ಲಿ ಪ್ರಮುಖ ನಿರ್ಣಯ ತೆಗೆದುಕೊಳ್ಳಲಾಗುವುದು’ ಎಂದು ರೇಣುಕಾಚಾರ್ಯ ತಿಳಿಸಿದರು.

ತುಹಿನ್ ಪಾಂಡೆ ಸೆಬಿ ಮುಖ್ಯಸ್ಥ

ನವದೆಹಲಿ(ಪಿಟಿಐ): ಹಿರಿಯ ಅಧಿಕಾರಿ ಹಾಗೂ ಹಣಕಾಸು ಕಾರ್ಯದರ್ಶಿ ತುಹಿನ್ ಕಾಂತಾ ಪಾಂಡೆ ಅವರನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಮುಖ್ಯಸ್ಥರನ್ನಾಗಿ ಕೇಂದ್ರ ಸರ್ಕಾರ ಗುರುವಾರ ನೇಮಕ ಮಾಡಿದೆ.

ತುಹಿನ್ ಕಾಂತಾ ಪಾಂಡೆ

ಒಡಿಶಾ ಕೇಡರ್‌ನ 1987ನೇ ಬ್ಯಾಚ್‌ನ ಐಎಎಸ್ ಅಧಿಕಾರಿ ಆಗಿರುವ ಪಾಂಡೆ ಅವರು ಸೆಬಿಯ 11ನೇ ಮುಖ್ಯಸ್ಥರಾಗಲಿದ್ದಾರೆ. ಅವರ ಅಧಿಕಾರಾವಧಿ ಮೂರು ವರ್ಷ ಇರಲಿದೆ.

ಸೆಬಿ ಹಾಲಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಅವರ ಅಧಿಕಾರಾವಧಿ ಶುಕ್ರವಾರ ಕೊನೆಗೊಳ್ಳಲಿದೆ.

ರಾಷ್ಟ್ರಪತಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಪತ್ರ

‘ಗಡಿ ಸಮಸ್ಯೆ: ವಿಶೇಷಾಧಿಕಾರಿ ನೇಮಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಳಗಾವಿ ಸೇರಿದಂತೆ ರಾಜ್ಯದ ಯಾವುದೇ ಭಾಗದಲ್ಲಿ ದಾಖಲಾಗುವ ಅಂತರರಾಜ್ಯ ಗಲಭೆಗಳನ್ನು ಸಮರ್ಥವಾಗಿ ಹತ್ತಿಕ್ಕಲು ಸಂವಿಧಾನವೇ ಅವಕಾಶ ಕಲ್ಪಿಸಿದ್ದು, ಕೇಂದ್ರ ಸರ್ಕಾರವು ವಿಶೇಷಾಧಿಕಾರಿಯನ್ನು ನೇಮಿಸಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಆಗ್ರಹಿಸಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಈ ಕುರಿತು ಪತ್ರ ಬರೆದಿರುವ ಅವರು, ‘ಗಡಿ ಪ್ರದೇಶಗಳಲ್ಲಿ ವಾಸಿಸುವ ಭಾಷಾ ಅಲ್ಪಸಂಖ್ಯಾತರು, ಬಹುಸಂಖ್ಯಾತರೊಂದಿಗೆ ಸಾಮರಸ್ಯದ ಜೀವನ ನಡೆಸುವಲ್ಲಿ ಕೇಂದ್ರ ಸರ್ಕಾರದ ಜವಾಬ್ದಾರಿಯನ್ನು ಸಂವಿಧಾನದ 350 (ಬಿ) ವಿಧಿಯಲ್ಲಿ ಉಲ್ಲೇಖಿಸಲಾಗಿದೆ ಅದರಂತೆ ಕೇಂದ್ರ ಸರ್ಕಾರವು ವಿಶೇಷಾಧಿಕಾರಿಯನ್ನು ನೇಮಿಸಬೇಕಿದೆ’ ಎಂದಿದ್ದಾರೆ.

ಪುರುಷೋತ್ತಮ ಬಿಳಿಮಲೆ

‘ನೇಮಕಗೊಳ್ಳುವ ವಿಶೇಷಾಧಿಕಾರಿಯು ಗಡಿ ಭಾಗಗಳಲ್ಲಿ ಭಾಷಾ ಅಲ್ಪಸಂಖ್ಯಾತರು ಎದುರಿಸುತ್ತಿರುವ ಸಮಸ್ಯೆಗಳ ಕುರಿತಂತೆ ಕೂಲಂಕಷವಾಗಿ ಅಧ್ಯಯನ ನಡೆಸಬೇಕು. ಸಮಸ್ಯೆವಾರು ವಿವರಗಳನ್ನು ಸಿದ್ಧಪಡಿಸಿ, ರಾಷ್ಟ್ರಪತಿ ಅವರಿಗೆ ಸಲ್ಲಿಸಬೇಕು. ರಾಷ್ಟ್ರಪತಿ ಅವರು ಅದನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಮಂಡಿಸಲು ನಿರ್ದೇಶಿಸಬಹುದಾಗಿದ್ದು, ಕೇಂದ್ರ ಸರ್ಕಾರವು ವರದಿಯ ಆಧಾರದಲ್ಲಿ ಉಭಯ ರಾಜ್ಯಗಳ ಗಡಿ ಹಿಂಸಾಚಾರಗಳನ್ನು ಹತ್ತಿಕ್ಕುವಲ್ಲಿ ಕ್ರಮ ವಹಿಸಬೇಕು’ ಎಂದು ಒತ್ತಾಯಿಸಿದ್ದಾರೆ.

ಕರ್ನಾಟಕ-ಮಹಾರಾಷ್ಟ್ರ ಗಡಿ ಭಾಗದ ಗಲಭೆ ಬಗ್ಗೆ ಪತ್ರದಲ್ಲಿ ಉಲ್ಲೇಖಿಸಿರುವ ಅವರು, ‘ಅಲ್ಲಿನ ಸಮಸ್ಯೆ ಮೇಲ್ನೋಟಕ್ಕೆ ಕಾಣುವುದಕ್ಕಿಂತಲೂ ತೀವ್ರವಾಗಿದ್ದು, ಎರಡೂ ರಾಜ್ಯಗಳ ಆಡಳಿತ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿಯಾಗುವ ಜತೆಗೆ ಹಿಂಸಾಚಾರಕ್ಕೆ ಕಾರಣವಾಗುತ್ತಿದೆ. ಈ ಅರ್ಥಹೀನ ಗಲಭೆಗಳಿಗೆ ಇತಿಶ್ರೀ ಹಾಡಲು ಕೇಂದ್ರ ಸರ್ಕಾರ ಕೂಡಲೇ ಮುಂದಾಗಬೇಕು’ ಎಂದೂ ಅವರು ಪತ್ರದಲ್ಲಿ ಆಗ್ರಹಿಸಿದ್ದಾರೆ.

ಎರಡು ಮಸೂದೆ ಸರ್ಕಾರಕ್ಕೆ ವಾಪಸ್

ಒಂದನೇ ಪುಟದಿಂದ...

ಸೌಹಾರ್ದ ಸಹಕಾರಿ ಮಸೂದೆಗೆ ಸಂಬಂಧಿಸಿದಂತೆ, ಅಧಿಕಾರಿಗಳು ನೀಡಿದ ಸ್ಪಷ್ಟನೆಗಳು ತೃಪ್ತಿಕರವಾಗಿಲ್ಲ. ಎಲ್ಲ ಸುಸ್ತಿದಾರರಿಗೆ ಮತದಾನದ ಹಕ್ಕು ನೀಡುವ ಬದಲು, ಅವರು ಮತದಾನ ಮಾಡದಂತೆ ತಡೆಯಲು ಸರಿಯಾದ ವಿಧಾನವನ್ನು ಜಾರಿಗೆ ತರಬೇಕು’ ಎಂದು ರಾಜ್ಯಪಾಲರು ಸಲಹೆ ನೀಡಿದ್ದಾರೆ ಎನ್ನಲಾಗಿದೆ.

ಕೋಲಾರ: ನಿಲ್ಲದ ಕಾಂಗ್ರೆಸ್ ಜಗಳ

ಪ್ರಜಾವಾಣಿ ವಾರ್ತೆ

ಕೋಲಾರ: ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ ಮತ್ತು ಸ್ವಪಕ್ಷೀಯ ಶಾಸಕರ ವಿರುದ್ಧ ಕಾಂಗ್ರೆಸ್ ಪರಿಶಿಷ್ಟ ಶಾಸಕರ ವಾಗ್ದಾಳಿ ಮುಂದುವರಿದಿದೆ.

‘ಜಿಲ್ಲೆಯ ಇಬ್ಬರು ಶಾಸಕರು ಸಚಿವ ಬೈರತಿ ಸುರೇಶ್ ಅವರಿಗೆ ತಪ್ಪು ಮಾಹಿತಿ ನೀಡಿ ದಾರಿ ತಪ್ಪಿಸುತ್ತಿದ್ದಾರೆ. ಸಚಿವರು ಕೂಡ ಆ ಶಾಸಕರನ್ನು ಮೇಧಾವಿಗಳು, ಬುದ್ಧಿವಂತರು ಎಂದು ಭಾವಿಸಿ ಆದ್ಯತೆ ನೀಡುತ್ತಿದ್ದಾರೆ. ಹೀಗಾಗಿ ಜಿಲ್ಲೆಯಲ್ಲಿ ಅಭಿವೃದ್ಧಿ ಕುಂಠಿತವಾಗುತ್ತಿದೆ’ ಎಂದು ಬಂಗಾರಪೇಟೆ ಕಾಂಗ್ರೆಸ್ ಶಾಸಕ ಎಸ್.ಎನ್.ನಾರಾಯಣಸ್ವಾಮಿ ಮತ್ತೆ ವಾಗ್ದಾಳಿ ಮುಂದುವರೆಸಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲಾ ಉಸ್ತುವಾರಿ ಸಚಿವರು ಈವರೆಗೆ ಶಾಸಕರನ್ನು ಕರೆದು ಚರ್ಚಿಸಿಲ್ಲ, ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಕಳೆದ ಬಜೆಟ್‌ನಲ್ಲೂ ಚರ್ಚಿಸಲಿಲ್ಲ, ಈ ಬಾರಿ ಬಜೆಟ್‌ಗೂ ಸಲಹೆ ಪಡೆದಿಲ್ಲ’ ಎಂದು ಹರಿಹಾಯ್ದರು.

ಉಸ್ತುವಾರಿ ಸಚಿವರ ಬದಲಾವಣೆ ನನ್ನ ಉದ್ದೇಶವಲ್ಲ. ನಾನು ಹೇಳಿದ ತಕ್ಷಣ ಬದಲಾವಣೆಯೂ ಆಗಲ್ಲ. ಆ ಸಾಮರ್ಥ್ಯವೂ ನನ್ನ ಬಳಿ ಇಲ್ಲ. ಗಾಳಿಗೆ ಗುದ್ದಿ ಮೈನೋಯಿಸಿಕೊಳ್ಳುವುದಿಲ್ಲ

ಎಸ್.ಎನ್.ನಾರಾಯಣಸ್ವಾಮಿ

ಕಾಂಗ್ರೆಸ್ ಶಾಸಕ

‘ಸಚಿವರು ವ್ಯಕ್ತಿಗತವಾಗಿ ಒಳ್ಳೆಯವರು. ಜಿಲ್ಲೆಯ ರಾಜಕಾರಣದ ಬಗ್ಗೆ ಮಾತನಾಡುವಾಗ ಕನಿಷ್ಠ ಪಕ್ಷ ಎಲ್ಲಾ ಶಾಸಕರನ್ನು ವಿಶ್ವಾಸಕ್ಕೆ ಪಡೆಯಬೇಕು. ಜಿಲ್ಲೆಯ ಅಭಿವೃದ್ಧಿ ವಿಚಾರದಲ್ಲಿ ಸಲಹೆ ಪಡೆಯಬೇಕಿತ್ತು. ಪರಿಶಿಷ್ಟರಿಗೆ ಮೀಸಲಿಟ್ಟ ಅನುದಾನದಲ್ಲಿ ನಡೆಸಿದ ಜನಪರ ಉತ್ಸವದ ಮುನ್ನ ಎಲ್ಲಾ ಪರಿಶಿಷ್ಟ ಶಾಸಕರ ಸಲಹೆ ಪಡೆಯಬೇಕಿತ್ತು. ಈ ವಿಚಾರದಲ್ಲಿ ಕೆಜಿಎಫ್ ಶಾಸಕಿ, ಸಹೋದರಿ ರೂಪಕಲಾ ಹೇಳಿದ್ದು ಸರಿಯಾಗಿದೆ’ ಎಂದು ಹರಿಹಾಯ್ದರು.

‘ನಾನು ಗುಂಪುಗಾರಿಕೆ ಮಾಡುವುದಿಲ್ಲ. ಎಲ್ಲರಿಗೂ ಹೊಂದಾಣಿಕೆ ಮಾಡಿಕೊಂಡು ಹೋಗುವ ವ್ಯಕ್ತಿ. ನಾನು ಅಭಿವೃದ್ಧಿಪರ, ಜನರ ಪರ. ಜನರಿಗೆ ಅನ್ಯಾಯವಾದರೆ ಧ್ವನಿ ಎತ್ತುತ್ತೇನೆ’ ಎಂದು ತಿಳಿಸಿದರು.

‘ಡಿಸಿಸಿ ಬ್ಯಾಂಕ್‌ನಂತೆ ಕೋಚಿಮುಲ್ ಅವ್ಯವಹಾರಗಳನ್ನೂ ತನಿಖೆ ಮಾಡಬೇಕು. ಈ ಬಗ್ಗೆ ಸಚಿವರು ಗಮನ ಹರಿಸಬೇಕು, ಮಲತಾಯಿ ಧೋರಣೆ ಮಾಡಬಾರದು. ಕೋಚಿಮುಲ್ ಹಾಗೂ ಡಿಸಿಸಿ ಬ್ಯಾಂಕ್ ರೈತರ, ಬಡವರ ಸಂಸ್ಥೆಗಳು’ ಎಂದರು.

‘ಅರ್ಹತೆ ಇಲ್ಲದ ಗುತ್ತಿಗೆದಾರನಿಗೆ ಗೋಲ್ಡನ್ ಡೇರಿ ನಿರ್ಮಾಣದ ಗುತ್ತಿಗೆ ನೀಡಲಾಗಿದೆ. ಸೋಲಾರ್ ಘಟಕದ ಜಾಗಕ್ಕೆ ಸರ್ಕಾರದ ಅನುಮತಿ ಪಡೆದಿಲ್ಲ. ಹಾಲು ಒಕ್ಕೂಟದವರು ಈ ಕ್ಷೇತ್ರವನ್ನು ಮೂರು ಭಾಗ ಮಾಡಿದ್ದು ಇವರಿಗೆ ಅಧಿಕಾರ ಕೊಟ್ಟವರಾರು, ಯಾರನ್ನು ಕೇಳಿ ಭಾಗ ಮಾಡಿದರು’ ಎಂದು ಪ್ರಶ್ನಿಸಿದರು.

ಸಂಭ್ರಮದ ‘ನಂದಿ’ ರಥೋತ್ಸವ

ಚಿಕ್ಕಬಳ್ಳಾಪುರ: ಭೋಗ ನಂದೀಶ್ವರ, ಯೋಗ ನಂದೀಶ್ವರನ ರಥ ಎಳೆದ ಭಕ್ತರು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ನಂದಿ ಗ್ರಾಮದ ಭೋಗ ನಂದೀಶ್ವರ ದೇಗುಲದ ಆವರಣದಲ್ಲಿ ಗುರುವಾರ ಭೋಗ ನಂದೀಶ್ವರ ಮತ್ತು ಯೋಗ ನಂದೀಶ್ವರ ಜೋಡಿ ರಥೋತ್ಸವದ ಶ್ರದ್ಧೆ, ಭಕ್ತಿ ಮತ್ತು ಅದ್ದೂರಿಯಿಂದ ನೆರವೇರಿತು.

ಸಹಸ್ರಾರು ಭಕ್ತರ ಉಪಸ್ಥಿತಿ ಮತ್ತು ಜಯಘೋಷಗಳಲ್ಲಿ ರಥೋತ್ಸವ ಜರುಗಿತು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಮತ್ತು ಶಾಸಕ ಪ್ರದೀಪ್ ಈಶ್ವರ್ ರಥಕ್ಕೆ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು. ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ, ಜಿ.ಪಂ ಸಿಇಒ ಪ್ರಕಾಶ್ ನಿಟ್ಟಾಲಿ ಹಾಜರಿದ್ದರು. ರಥಗಳಲ್ಲಿ ಯೋಗ ನಂದೀಶ್ವರ, ಭೋಗನಂದೀಶ್ವರಸ್ವಾಮಿ, ಗಿರಿಜಾಂಬ, ಅಂಬಿಕಾ ಮತ್ತು ಗಣಪತಿಯ ಉತ್ಸವ ಮೂರ್ತಿ ಪ್ರತಿಷ್ಠಾಪಿಸಲಾಗಿತ್ತು.

ದೇವಾಲಯದ ಆವರಣದಿಂದ ರಥವು ಮುಂದಡಿ ಇಡುತ್ತಿದ್ದಂತೆ ಜಯಘೋಷಗಳು ಮೊಳಗಿದವು. ಕೇಸರಿ ಧ್ವಜ, ಹೂವುಗಳಿಂದ ಶೃಂಗಾರಗೊಂಡ ರಥಗಳನ್ನು ಭಕ್ತರು ದೇವಸ್ಥಾನದ ಸುತ್ತ ಎಳೆದರು. ಈ ವೇಳೆ ಭಕ್ತರು ರಥಗಳಿಗೆ ಬಾಳೆ ಹಣ್ಣು, ದವನ ಎಸೆಯುವ ಮೂಲಕ ಭಕ್ತಿ ಸಮರ್ಪಿಸಿದರು. ರಥೋತ್ಸವ ಆರಂಭಕ್ಕೂ ಮುನ್ನವೇ ದೇಗುಲದ ಆವರಣದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು.

ಚಿಕ್ಕಬಳ್ಳಾಪುರದ ನಂದಿ ಗ್ರಾಮದಲ್ಲಿ ಯೋಗ ನಂದೀಶ್ವರ ಮತ್ತು ಭೋಗ ನಂದೀಶ್ವರ ರಥೋತ್ಸವ ಸಂಭ್ರಮದಿಂದ ನಡೆಯಿತು

ದಾರಿಯುದ್ದಕ್ಕೂ ಮಜ್ಜಿಗೆ, ಪಾನಕ ವಿತರಣೆ

ರಥೋತ್ಸವದ ಅಂಗವಾಗಿ ಕಳೆದ ವರ್ಷ ಭಕ್ತರಿಗೆ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಆದರೆ ಈ ಬಾರಿ ಊಟದ ವ್ಯವಸ್ಥೆ ಇರಲಿಲ್ಲ.

ಕೆಲವು ಭಕ್ತರು ಸ್ವಯಂ ಪ್ರೇರಿತರಾಗಿ ತಮ್ಮ ಮನೆಗಳ ಮುಂಭಾಗ ಹಣ್ಣು, ನೀರು ಮತ್ತು ಉಪಾಹಾರದ ವ್ಯವಸ್ಥೆ ಮಾಡಿದ್ದರು. ಚಿಕ್ಕಬಳ್ಳಾಪುರದಿಂದ ನಂದಿ ಗ್ರಾಮಕ್ಕೆ ಸಾಗುವ ರಸ್ತೆಗಳ ಅಲ್ಲಲ್ಲಿ ವಿವಿಧ ಗ್ರಾಮಗಳ ಜನರು ಮಜ್ಜಿಗೆ, ಪಾನಕ ವಿತರಿಸಿದರು.

ಶಿವರಾತ್ರಿ ಉಪವಾಸ ನಿರತ ಭಕ್ತರು ಬೆಳಿಗ್ಗೆಯಿಂದಲೇ ದೇವಸ್ಥಾನಕ್ಕೆ ಭೇಟಿ ದರ್ಶನ ಪಡೆಯುತ್ತಿದ್ದರು. ಶಿವರಾತ್ರಿಯ ಜಾಗರಣೆಯಲ್ಲಿ ಜಿಲ್ಲೆ, ಹೊರ ಜಿಲ್ಲೆಗಳು ಹಾಗೂ ನೆರೆಯ ಆಂಧ್ರಪ್ರದೇಶ, ತಮಿಳುನಾಡಿನಿಂದಲೂ ಭಕ್ತರು ಪಾಲ್ಗೊಳ್ಳುವರು. ರಾತ್ರಿ ಜಾಗರಣೆ ಪೂರ್ಣಗೊಳಿಸಿ ಬೆಳಿಗ್ಗೆ ರಥೋತ್ಸವದ ಮುಗಿಸಿ ತಮ್ಮ ಊರಿನ ಹಾದಿ ಹಿಡಿಯುವರು. ಹೀಗೆ ನಂದಿ ಜಾತ್ರೆಗೆ ಭಕ್ತರ ದಂಡೇ ಹರಿದು ಬಂದಿತ್ತು. ಹರಕೆ ಹೊತ್ತ ಭಕ್ತರು ದೇವರಿಗೆ ಮುಡಿ ಕೊಟ್ಟರು.

ವಾರದಲ್ಲಿ ಟಿಡಿಆರ್ ಠೇವಣಿ ಇಡಿ

ಒಂದನೇ ಪುಟದಿಂದ...

ಹಿರಿಯ ವಕೀಲ ದೇವದತ್ತ ಕಾಮತ್ ಕೋರಿಕೆಯ ಮೇರೆಗೆ, ಮುಂದಿನ ವಿಚಾರಣೆಯಂದು ಮುಖ್ಯ ಕಾರ್ಯದರ್ಶಿ ಮತ್ತು ವಿಶೇಷ ಭೂಸ್ವಾಧೀನ ಅಧಿಕಾರಿಯ ಕಡ್ಡಾಯ ಹಾಜರಾತಿಗೆ ಪೀಠ ವಿನಾಯಿತಿ ನೀಡಿತು. ಆದಾಗ್ಯೂ, ಬಿಬಿಎಂಪಿ ಮತ್ತು ಬಿಡಿಎ ಆಯುಕ್ತರು ಹಾಜರಿರಬೇಕು ಎಂದು ಸ್ಪಷ್ಟಪಡಿಸಿತು.

ರಸ್ತೆ ವಿಸ್ತರಣೆ ಉದ್ದೇಶಕ್ಕಾಗಿ ಬಳಕೆಯಾಗುವ 15.36 ಎಕರೆ ಭೂಮಿಗೆ ಪರಿಹಾರವಾಗಿ ₹3,014 ಕೋಟಿ ಮೊತ್ತದ ಟಿಡಿಆರ್ ನೀಡಬೇಕು ಎಂದು ಸುಪ್ರೀಂಕೋರ್ಟ್ ಡಿಸೆಂಬರ್‌ನಲ್ಲಿ ಆದೇಶ ನೀಡಿತ್ತು. ಸಣ್ಣ ಜಾಗಕ್ಕೆ ಭಾರಿ ಮೊತ್ತವನ್ನು ಪಾವತಿಸಬೇಕಾದ ಹೊರೆಯಿಂದ ತಪ್ಪಿಸಿಕೊಳ್ಳಲು ಸುಗ್ರೀವಾಜ್ಞೆಯ ಆಸರೆ ಪಡೆಯಲು ಸರ್ಕಾರ ತೀರ್ಮಾನಿಸಿತ್ತು. ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ–1996 ಕ್ಕೆ ಸಂಬಂಧಪಟ್ಟ ಸಿವಿಲ್ ಮೇಲ್ಮನವಿಯನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ಸರ್ಕಾರವು ಇತ್ತೀಚೆಗೆ ಮೇಲ್ಮನವಿ ಸಲ್ಲಿಸಿತ್ತು.

ಬ್ಲಿಟ್ಜ್ ಎಫ್‌ಸಿ ತಂಡಕ್ಕೆ ಗೆಲುವು

ಬೆಂಗಳೂರು: ವಿವೇಕ್ ಸಿಂಗ್ ಅವರ ಆಟದ ಬಲದಿಂದ ಬ್ಲಿಟ್ಜ್ ಎಫ್‌ಸಿ ತಂಡವು ಬಿಡಿಎಫ್‌ಎ ಎ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3–2 ಗೋಲುಗಳಿಂದ ಬಿಟಿಎಂ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಬ್ಲಿಟ್ಜ್ ಪರ 33ನೇ ಮತ್ತು 73ನೇ ನಿಮಿಷದಲ್ಲಿ ವಿವೇಕ್ ಮತ್ತು 69ನೇ ನಿಮಿಷದಲ್ಲಿ ಟೆನ್ಜಿನ್ ವೋಸರ್ ಅವರು ಗೋಲು ಹೊಡೆದರು. ಅಮಿತ್ ಕುಮಾರ್ (36ನೇ) ಮತ್ತು ಆಯುಷ್ ಡೇವಿಡ್ (78ನೇ) ಅವರು ಬಿಟಿಎಂ ಪರ ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಡಿವೈಇಎಸ್ ಎಫ್‌ಸಿ ತಂಡವು 2–1 ಗೋಲುಗಳಿಂದ ಅಕೌಂಟೆಂಟ್ ಜನರಲ್ ಆಫೀಸ್ ರಿಕ್ರಿಯೇಷನ್ ಕ್ಲಬ್ (ಎಜೀಸ್) ತಂಡವನ್ನು ಸೋಲಿಸಿತು.

ಡಿವೈಇಎಸ್ ಪರ ಸಂತೋಷ (11ನೇ) ಮತ್ತು ಸೆಬಾಸ್ಟಿನ್ ರಾಜ್ (76 ನೇ) ಗೋಲು ಗಳಿಸಿದರು. ಎಜೀಸ್ ಪರ ಏಕೈಕ ಗೋಲನ್ನು ಮಂಜು ನಂಜನಗೂಡು (80+4ನೇ) ದಾಖಲಿಸಿದರು.

ಶುಕ್ರವಾರದ ಪಂದ್ಯದಲ್ಲಿ ಬೆಂಗಳೂರು ಡ್ರೀಮ್ ಯುನೈಟೆಡ್ ಎಫ್‌ಸಿ ಮತ್ತು ರೂಟ್ಸ್ ಎಫ್‌ಎಸ್ (ಬೆಳಿಗ್ಗೆ 11); ವಿಜಯನಗರ ಎಫ್‌ಸಿ ಮತ್ತು ಆರ್‌ಡಬ್ಲ್ಯುಎಫ್ ಎಫ್‌ಸಿ (ಮಧ್ಯಾಹ್ನ 1.30) ಮುಖಾಮುಖಿಯಾಗಲಿವೆ.

‘ಸೆಸ್ಕ್‌ಗೆ ‘ಎ’ ಶ್ರೇಣಿ’

ಮೈಸೂರು: ‘ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು (ಸೆಸ್ಕ್) ವಿದ್ಯುತ್ ಪೂರೈಕೆ, ಸುರಕ್ಷತೆ, ಕಾರ್ಯಕ್ಷಮತೆಗಾಗಿ ‘ಪವರ್ ಫೈನಾನ್ಸ್ ಕಾರ್ಪೊರೇಷನ್’ (ಪಿಎಫ್‌ಸಿ) ನೀಡುವ ರ‍್ಯಾಂಕಿಂಗ್‌ನಲ್ಲಿ ‘ಎ’ ಶ್ರೇಣಿ ಪಡೆದಿದ್ದು, ಈ ಶ್ರೇಯಾಂಕ ಗಳಿಸಿದ ರಾಜ್ಯದ ಮೊದಲ ನಿಗಮ ಆಗಿದೆ’ ಎಂದು ನಿಗಮದ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ತಿಳಿಸಿದರು.

ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ನಿಗಮವು ‘ಬಿ’ ಶ್ರೇಣಿಯಿಂದ ಮೊದಲ ಸ್ಥಾನಕ್ಕೆ ಜಿಗಿಯಲು ವ್ಯವಸ್ಥಾಪಕರು, ಅಧಿಕಾರಿಗಳು, ಎಂಜಿನಿಯರ್‌ಗಳು, ಲೇನ್‌ಮನ್ ಹಾಗೂ ಸಿಬ್ಬಂದಿ ಶ್ರಮ ಕಾರಣ’ ಎಂದು ಪ್ರಶಂಸಿಸಿದರು.

ನಂದಿ ಬೆಟ್ಟಕ್ಕೆ ರೋಪ್ ವೇ ಪ್ರಶ್ನಿಸಿದ ಪಿಐಎಲ್: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿಬೆಟ್ಟಕ್ಕೆ ರೋಪ್ ವೇ ಸೌಲಭ್ಯ ಕಲ್ಪಿಸಲು ಮುಂದಾಗಿರುವ ನಿರ್ಧಾರವನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ, ‘ವಿಶ್ವ ಮಾನವ ಹಕ್ಕುಗಳ ಸೇವಾ ಪ್ರತಿಷ್ಠಾನ’ದ ಅಧ್ಯಕ್ಷ ಸಿ.ಡಿ.ಕಿರಣ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಏಪ್ರಿಲ್ 8ಕ್ಕೆ ಮುಂದೂಡಿತು. ಪ್ರಕರಣದಲ್ಲಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ಕಾರ್ಯದರ್ಶಿ ಸೇರಿದಂತೆ ಒಟ್ಟು 11 ಜನರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಅರ್ಜಿಯಲ್ಲಿ ಏನಿದೆ?: ‘ರೋಪ್ ವೇ ನಿರ್ಮಾಣಕ್ಕಾಗಿ ನಂದಿ ಬೆಟ್ಟದ ಸರ್ವೆ ನಂಬರ್ 3ರ ಹಾಗೂ ಅರ್ಕಾವತಿ ನದಿಯ ಬಫರ್ ಝೋನ್‌ನಲ್ಲಿರುವ ಎರಡು ಎಕರೆ ಜಮೀನನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಖಾಸಗಿ ಕಂಪನಿಯೊಂದಕ್ಕೆ ಗುತ್ತಿಗೆ ನೀಡಲಾಗಿದೆ. ಇದು ಕರ್ನಾಟಕ ಉದ್ಯಾನವನಗಳ ಸಂರಕ್ಷಣಾ ಕಾಯ್ದೆ–1975ಕ್ಕೆ ವಿರುದ್ಧವಾಗಿದೆ. ಜೀವವೈವಿಧ್ಯ, ಪರಿಸರ ವ್ಯವಸ್ಥೆಗೆ ಮಾರಕವಾಗಿರುವ ಈ ಏಕಪಕ್ಷೀಯ ಮತ್ತು ಕಾನೂನಿನ ನಿಯಮಗಳನ್ನು ಉಲ್ಲಂಘಿಸಿದ ಅಧಿಸೂಚನೆಯನ್ನು ರದ್ದುಗೊಳಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

‘ರೋಪ್ ವೇ ನಿರ್ಮಾಣದಿಂದ ಸ್ಥಳೀಯ ಪರಿಸರದ ಮೇಲೆ ಉಂಟಾಗುವ ಪ್ರಭಾವ ಏನೆಂಬುದನ್ನು ಅರಿಯಲು ತಜ್ಞರ ಸಮಿತಿ ರಚಿಸಿ ವರದಿ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು ಮತ್ತು ನಂದಿ ಬೆಟ್ಟದ ಅನನ್ಯ ಸೂಕ್ಷ್ಮ ಪರಿಸರವನ್ನು ರಕ್ಷಿಸಲು ಈ ಪ್ರದೇಶವನ್ನು, ವಿಶ್ವ ಪರಿಸರಾತ್ಮಕ ಕಾನೂನುಗಳ ಆಧಾರದಡಿ ಪಾರಂಪರಿಕ ತಾಣ ಎಂದು ಘೋಷಿಸಲು ಸರ್ಕಾರ ಶಿಫಾರಸು ಮಾಡಬೇಕು’ ಎಂದು ಮನವಿ ಮಾಡಲಾಗಿದೆ.

‘ನದಿಗಳ ಶಾಶ್ವತ ರಕ್ಷಣೆಯನ್ನು ಖಚಿತಪಡಿಸುವ ನಿಟ್ಟಿನಲ್ಲಿ ಮತ್ತು ಪರಿಣಾಮಕಾರಿಯಾದ ಮಾಲಿನ್ಯ ನಿವಾರಣೆ ದೃಷ್ಟಿಯಿಂದ ಅರ್ಕಾವತಿ ಮತ್ತು ಕುಮದ್ವತಿ ನದಿಗಳ ಸಂರಕ್ಷಣೆ ಮಾಡಬೇಕಿದೆ. ಇದಕ್ಕಾಗಿ ಈ ನದಿಗಳ ಪುನಶ್ಚೇತನಗೊಳಿಸಲು ಜಲಾನಯನ ಪ್ರಾಧಿಕಾರ ರಚಿಸಲು ನಿರ್ದೇಶಿಸಬೇಕು’ ಎಂದೂ ಕೋರಲಾಗಿದೆ’ ಎಂದೂ ಅರ್ಜಿದಾರರು ಕೋರಿದ್ದಾರೆ.

ಕೇಸ್ ವಾಪಸು: ಸರ್ಕಾರಕ್ಕೆ ನೋಟಿಸ್

ಬೆಂಗಳೂರು: ಹಾಲಿ ಕೇಂದ್ರ–ರಾಜ್ಯ ಸಚಿವರು, ಮಾಜಿ ಸಚಿವರು, ಹಾಲಿ ಮತ್ತು ಮಾಜಿ ಶಾಸಕರು, ಕನ್ನಡಪರ ಹೋರಾಟಗಾರರು, ರೈತ ಮುಖಂಡರು, ವಿವಿಧ ಸಂಘಟನೆಗಳ ಪದಾಧಿಕಾರಿಗಳ ವಿರುದ್ಧ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 60 ಕ್ರಿಮಿನಲ್ ಪ್ರಕರಣ ಹಿಂಪಡೆಯುವುದನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ಗಿರೀಶ್ ಭಾರದ್ವಾಜ್ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವೆಂಕಟೇಶ್ ಪಿ.ದಳವಾಯಿ ವಾದ ಆಲಿಸಿದ ನ್ಯಾಯಪೀಠ, ‘ಪ್ರಕರಣ ಗಂಭೀರವಾಗಿದೆ ಎಂಬುದನ್ನು ಮೇಲ್ನೋಟಕ್ಕೇ ಮನದಟ್ಟು ಮಾಡುವಲ್ಲಿ ಅರ್ಜಿದಾರರು ಯಶಸ್ವಿಯಾಗಿದ್ದಾರೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿತು. ಪ್ರತಿವಾದಿಗಳಾದ ರಾಜ್ಯ ಸರ್ಕಾರ, ಪ್ರಾಸಿಕ್ಯೂಷನ್, ಕಾನೂನು ಮತ್ತು ಪೊಲೀಸ್ ಇಲಾಖೆಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಮಾರ್ಚ್ 17ಕ್ಕೆ ಮುಂದೂಡಿತು.

ಗ್ಯಾರಂಟಿ ಯೋಜನೆ ಅನುಷ್ಠಾನಕ್ಕೆ ರಚಿಸಿರುವ ಸಮಿತಿ ಸದಸ್ಯರಿಗೆ ಸೌಲಭ್ಯ

ಸಂಪುಟ ದರ್ಜೆ ಸ್ಥಾನಮಾನ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ರಚನೆ ಮಾಡಲಾಗಿರುವ ಸಮಿತಿ ಸದಸ್ಯರಿಗೆ ಸಂಪುಟ ದರ್ಜೆ ಸ್ಥಾನಮಾನ ನೀಡಿರುವುದನ್ನು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬಿಜೆಪಿಯ ಮಾಜಿ ಶಾಸಕ ಪಿ.ರಾಜೀವ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ, ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಎಂ.ಅರುಣ್ ಶ್ಯಾಮ್, ‘ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗೆ ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಕ ಮಾಡಲಾಗಿದೆ. ಇದು ಸಂವಿಧಾನದ 164 (1ಎ) ವಿಧಿಗೆ ವಿರುದ್ಧವಾಗಿದೆ’ ಎಂದು ಆಕ್ಷೇಪಿಸಿದರು.

ವಾದ ಆಲಿಸಿದ ನ್ಯಾಯಪೀಠ, ‘ಅರ್ಜಿದಾರರ ವಾದದಲ್ಲಿ ಸತ್ಯಾಂಶ ಇದ್ದರೆ, ಸರ್ಕಾರದ ಕ್ರಮ ಸ್ವಾಗತಾರ್ಹವಲ್ಲ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಸೇರಿದಂತೆ ಇತರೆ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಮಾರ್ಚ್ 27ಕ್ಕೆ ಮುಂದೂಡಲಾಗಿದೆ.

ಕೆಲಸದ ಒತ್ತಡ ಜಾಸ್ತಿಯಾದರೆ ನಿದ್ರೆ ಸಹಜ: ಹೈಕೋರ್ಟ್

ಬೆಂಗಳೂರು: ಕರ್ತವ್ಯ ನಿರ್ವಹಣೆ ಸಮಯದಲ್ಲಿ ನಿದ್ರೆ ಮಾಡಿದ್ದ ಆರೋಪದಡಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾನ್‌ಸ್ಟೆಬಲ್‌ವೊಬ್ಬರನ್ನು ಸೇವೆಯಿಂದ ಅಮಾನತುಪಡಿಸಿದ್ದ; ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

‘ಅಮಾನತು ಆದೇಶ ರದ್ದುಪಡಿಸಬೇಕು’ ಎಂದು ಕೋರಿ ಕೊಪ್ಪಳ ವಿಭಾಗದ ಕುಕನೂರು ಡಿಪೊದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾನ್‌ಸ್ಟೆಬಲ್ ಚಂದ್ರಶೇಖರ್ (33) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಪುರಸ್ಕರಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲರಾದ ರವಿ ಹೆಗಡೆ ಮತ್ತು ವಿನಯ ಕುಮಾರ್ ಭಟ್, ‘ನಿಗಮದಲ್ಲಿ ಮೂವರು ಕಾನ್‌ಸ್ಟೆಬಲ್‌ಗಳು ತಲಾ 8 ಗಂಟೆಯಂತೆ 24 ಗಂಟೆ ಕೆಲಸ ಮಾಡುತ್ತಾರೆ. ಹೆಚ್ಚಿನ ಕಾರ್ಯಭಾರ ಇದ್ದ ಕಾರಣ ಚಂದ್ರಶೇಖರ್ ಅವರನ್ನು ದುಪ್ಪಟ್ಟು ಕರ್ತವ್ಯ ನಿರ್ವಹಣೆಗಾಗಿ (ಡಬಲ್ ಡ್ಯೂಟಿ) ನಿರಂತರ 16 ಗಂಟೆಗಳ ಕಾಲ ಎರಡು ಪಾಳಿಯಲ್ಲಿ ಕೆಲಸ ಮಾಡಲು ಸೂಚಿಸಲಾಗಿತ್ತು. ಇದು 60 ದಿನಗಳವರೆಗೆ ಮುಂದುವರೆದಿತ್ತು’ ಎಂಬ ಅಂಶವನ್ನು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಟ್ಟಿದ್ದರು.

ಈ ವಾದವನ್ನು ಪರಿಗಣಿಸಿರುವ ನ್ಯಾಯಪೀಠ, ‘ನಿದ್ರೆಯ ಕೊರತೆಯಾದಲ್ಲಿ ಯಾವುದೇ ಮನುಷ್ಯ ಎಲ್ಲಿಯಾದರೂ ನಿದ್ರೆಗೆ ಜಾರುತ್ತಾನೆ. ಕೆಲಸ ಮತ್ತು ಜೀವನದ ನಡುವಿನ ಸಮತೋಲನದ ಪ್ರಮುಖ ಅಂಶವೆಂದರೆ ನಿದ್ರೆ ಮತ್ತು ವಿರಾಮ. ಉದ್ಯೋಗಿಯು ತನ್ನ ಸಾಮರ್ಥ್ಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕೆಲಸ ಮಾಡಿದರೆ ಅನಾಯಾಸವಾಗಿ ನಿದ್ರೆ ಆವರಿಸುವುದು ಸಹಜ’ ಎಂದು ಹೇಳಿದೆ.

ಪ್ರಕರಣವೇನು?: ‘ಚಂದ್ರಶೇಖರ್ ಅವರು 2024ರ ಏಪ್ರಿಲ್ 23ರಂದು ತಮ್ಮ ಕರ್ತವ್ಯ ನಿರ್ವಹಣೆ ಅವಧಿಯಲ್ಲಿ ನಿದ್ರೆ ಮಾಡುತ್ತಿದ್ದರು’ ಎಂದು ಆರೋಪಿಸಲಾದ ಹಾಗೂ ಚಂದ್ರಶೇಖರ್ ನಿದ್ರೆ ಮಾಡುತ್ತಿದ್ದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಪ್ರಸಾರವಾಗಿತ್ತು. ಈ ಬಗ್ಗೆ ಚಂದ್ರಶೇಖರ್ ಅವರಿಂದ ವಿವರಣೆ ದಾಖಲಿಸಿಕೊಂಡಿದ್ದ ಸಂಬಂಧಿಸಿದ ಪ್ರಾಧಿಕಾರವು ಅವರನ್ನು ಸೇವೆಯಿಂದ ಅಮಾನತುಗೊಳಿಸಿತ್ತು.

ಸಿನಿಮಾ ಪುರವಣಿ

ವಿಜಯ ರಾಘವೇಂದ್ರ

‘ಪ್ರಯೋಗಾತ್ಮಕ ಪಾತ್ರಗಳ ಆಯ್ಕೆ ಗೆಲುವಿನ ಸೂತ್ರ’

ನಿರಂತರವಾಗಿ ಸಿನಿಮಾಗಳಲ್ಲಿ ತೊಡಗಿಸಿಳ್ಳುವುದಕ್ಕೆ ಪತ್ನಿಯೇ ಸ್ಫೂರ್ತಿ, ಚೈತನ್ಯ ಎನ್ನುತ್ತಾರೆ ನಟ ವಿಜಯ ರಾಘವೇಂದ್ರ. ಇತ್ತೀಚೆಗೆ ಅವರು ಹೆಚ್ಚು ಪೊಲೀಸ್ ಪಾತ್ರಗಳಲ್ಲೇ ಕಾಣಿಸಿಕೊಳ್ಳುತ್ತಿದ್ದು, ಅವರು ನಟಿಸಿರುವ ‘ಎಫ್‌ಐಆರ್ 6 ಟು 6’ ಇಂದು (ಫೆ.28) ತೆರೆಕಾಣುತ್ತಿದೆ. ಈ ಸಂದರ್ಭದಲ್ಲಿ ಅವರೊಂದಿಗೆ ಮಾತುಕತೆ...

ಅಭಿಲಾಷ್ ಪಿ.ಎಸ್.

- **ವಿಭಿನ್ನ ಪಾತ್ರಗಳಲ್ಲಿ ನಿರಂತರವಾಗಿ ಸಿನಿಮಾ ಮಾಡುತ್ತಿದ್ದೀರಿ?**

ಈ ಹೊತ್ತಿನಲ್ಲಿ ನಾನು ನಿರ್ಮಾಪಕರಿಗೆ, ನಿರ್ದೇಶಕರಿಗೆ ಹಾಗೂ ಪ್ರೇಕ್ಷಕರಿಗೆ ಧನ್ಯವಾದಗಳನ್ನು ತಿಳಿಸಬಹುದಷ್ಟೇ. ಸಿನಿಮಾ ಬಿಡುಗಡೆಯಾಗಿ ಅದು ಗೆದ್ದರೂ, ಗೆಲ್ಲದಿದ್ದರೂ ಹೊಸ ಹೊಸ ಅವಕಾಶ ನೀಡುತ್ತಿರುತ್ತಾರೆ. ಮತ್ತೊಂದು ಹೊಸ ಸಿನಿಮಾ ಬಂದಾಗ ಪ್ರೇಕ್ಷಕರು ಅಷ್ಟೇ ಪ್ರೋತ್ಸಾಹಿಸುತ್ತಾರೆ. ‘ಮಾಲ್ಗುಡಿ ಡೇಸ್’, ‘ರಾಘು’, ‘ಕದ್ದಚಿತ್ರ’, ‘ಕೇಸ್ ಆಫ್ ಕೊಂಡಾಣ’ ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ವಿಭಿನ್ನವಾದ ಪಾತ್ರಗಳನ್ನು ನಿಭಾಯಿಸಿದೆ. ‘ಭಿನ್ನವಾದ ಪಾತ್ರದ ಪ್ರಯೋಗಕ್ಕೆ ವಿಜಯ ರಾಘವೇಂದ್ರ ಸೂಕ್ತ’ ಎಂದು ನಿರ್ದೇಶಕರು ಅಂದುಕೊಂಡಾಗ ಅಲ್ಲೇ ನಮ್ಮ ಗೆಲುವಿದೆ.

- **ಪತ್ನಿ ಸ್ಪಂದನಾ ಅವರನ್ನು ಕಳೆದುಕೊಂಡ ಬಳಿಕ...**

ಆಕೆಯನ್ನು ಕಳೆದುಕೊಳ್ಳುವುದಕ್ಕಿಂತ ಮುಂಚೆಯೂ ನಿರಂತರವಾಗಿ ಸಿನಿಮಾಗಳನ್ನು ಮಾಡುತ್ತಿದ್ದೆ. ಈಗಲೂ ಮಾಡುತ್ತಿದ್ದೇನೆ. ನಾನು ಹೀಗೆಯೇ ಸಿನಿಮಾಗಳನ್ನು ಮಾಡುತ್ತಿರಬೇಕು ಎನ್ನುವ ಅಭಿಲಾಷೆಯೂ ಅವಳದ್ದಾಗಿತ್ತು. ಸಿನಿಮಾ, ಕಿರುತೆರೆಯಲ್ಲಿ ಇಷ್ಟಪಟ್ಟು ಮಾಡುವ ಕೆಲಸಗಳನ್ನು ಮಾಡುತ್ತಲೇ ಇರಬೇಕು ಎನ್ನುವ ಮನಃಸ್ಥಿತಿ ನನ್ನದು. ಇದಕ್ಕೂ ಸ್ಪಂದನಾಳೇ ಸ್ಫೂರ್ತಿ. ನೋವನ್ನು ಮರೆಯುವುದಕ್ಕೆ ಸಿನಿಮಾಗಳನ್ನು ಮಾಡುತ್ತಿದ್ದೇನೆ ಎನ್ನುವ ಕಾಳಜಿಯ ಮಾತುಗಳೂ ನಿಜ. ಆದರೆ ಸಿನಿಮಾ ಎನ್ನುವುದು ನೋವನ್ನು ಮರೆಯುವುದಕ್ಕೆ ಮಾಡುವ ಕೆಲಸವಲ್ಲ. ಅದು ಮರೆಯುವಂಥ ನೋವೂ ಅಲ್ಲ. ಅದನ್ನು ಜೊತೆಯಲ್ಲೇ ಇಟ್ಟುಕೊಂಡು ಚೈತನ್ಯವಾಗಿ ಕಾಣುತ್ತಿದ್ದೇನೆ.

- **ಎಫ್‌ಐಆರ್ 6 ಟು 6 ಸಿನಿಮಾ ‘ಮ್ಯಾಕ್ಸ್’ ಸಿನಿಮಾ ಜಾನರ್‌ನಂತಿದೆ ಅಲ್ಲವೇ?**

ಹೌದು. ಇದೂ ಒಂದು ರಾತ್ರಿಯಲ್ಲಿ ನಡೆಯುವ ಕಥೆ. ಅಷ್ಟೇ ವೇಗವನ್ನು ಕಥೆ ಹೊಂದಿದೆ. ಕಥೆಯಲ್ಲಿ ಒಂದು ಮುಖ್ಯವಾದ ಪಾತ್ರ ಪೊಲೀಸ್ ಅಧಿಕಾರಿಯದ್ದು. ‘ಗರುಡ’ ಎನ್ನುವುದು ನನ್ನ ಪಾತ್ರದ ಹೆಸರು. ಈತ ಕೋಪಿಷ್ಠ. ಆ ಅಧಿಕಾರಿ ಹಾಗೂ ಖಳನಾಯಕನ ನಡುವೆ ನಡೆಯುವ ಘರ್ಷಣೆ, ಈ ಮುಖ್ಯ ಕಥೆಗೆ ಪೂರಕವಾಗಿದೆ. ಮುಖ್ಯ ಕಥೆಗೆ ಹಲವಾದ ಸನ್ನಿವೇಷಗಳು ಪ್ರಭಾವ ಬೀರುತ್ತವೆ. ಇತ್ತೀಚೆಗೆ ಪೊಲೀಸ್ ಪಾತ್ರದಲ್ಲಿ ನನ್ನನ್ನು ನೋಡಿ ಜನ ಮೆಚ್ಚಿಕೊಂಡಿದ್ದಾರೆ. ಇದರ ಎಲ್ಲಾ ಶ್ರೇಯ ‘ಸೀತಾರಾಮ್ ಬಿನೋಯ್’ ತಂಡಕ್ಕೆ ಸಲ್ಲಬೇಕು. ಇಂತಹ ಪಾತ್ರ ಸಿಕ್ಕಾಗ ಜವಾಬ್ದಾರಿಯುತವಾಗಿ ನಿಭಾಯಿಸಬೇಕು. ನನಗೆ ಇಂತಹ ಪಾತ್ರಗಳಿಗೆ ಸ್ಫೂರ್ತಿ ನನ್ನ ಮಾವ (ಸ್ಪಂದನಾ ತಂದೆ ಬಿ.ಕೆ. ಶಿವರಾಂ). ಹೀಗಾಗಿ ನನಗೆ ಪೊಲೀಸ್ ಪಾತ್ರ ಒಗ್ಗಿದೆ.

- **ವಾರಕ್ಕೆ ಎಂಟು–ಹತ್ತು ಸಿನಿಮಾಗಳು ಬಿಡುಗಡೆ ಆಗುತ್ತಿವೆ. ಇದಕ್ಕೆ ಕಡಿವಾಣ ಹೇಗೆ?**

ಇದರಿಂದ ಪ್ರೇಕ್ಷಕರು ಗೊಂದಲಕ್ಕೀಡಾಗುತ್ತಿರುವುದು ನಿಜ. ಈ ವಿಚಾರದ ಬಗ್ಗೆ ನನ್ನ ದೃಷ್ಟಿಕೋನದಲ್ಲಿ ಮಾತನಾಡುವುದು ಎಷ್ಟು ಸರಿ, ಎಷ್ಟು ತಪ್ಪು ಎನ್ನುವ ವಿಚಾರ ಬರುತ್ತದೆ. ನಾನು ಮೊದಲು ಒಬ್ಬ ಪ್ರೇಕ್ಷಕನಾಗಿ ಯೋಚನೆ ಮಾಡುತ್ತೇನೆ. ಪ್ರೇಕ್ಷಕನ ದೃಷ್ಟಿಯಿಂದ ನೋಡಿದಾಗ, ‘ಈ ಸಣ್ಣ ಅವಧಿಯಲ್ಲಿ ಯಾವ ಸಿನಿಮಾ ನೋಡುವುದು, ಬಿಡುವುದು ಹಾಗೂ ಗುಣಮಟ್ಟವನ್ನು ಹೇಗೆ ನಿರ್ಧಾರ ಮಾಡುವುದು’ ಎನ್ನುವ ಗೊಂದಲ ಸೃಷ್ಟಿಯಾಗುತ್ತದೆ. ಚಿತ್ರರಂಗದ ದೃಷ್ಟಿಯಿಂದ ನೋಡಿದಾಗ ‘ಕನ್ನಡ ಚಿತ್ರರಂಗ ಬಹಳ ಕ್ರಿಯಾಶೀಲವಾಗಿದೆ’ ಎಂದೆನಿಸುತ್ತದೆ. ನಾವು ಈ ಸಂದರ್ಭದಲ್ಲಿ ಗುಣಮಟ್ಟದ ಬಗ್ಗೆ ಹೆಚ್ಚು ಯೋಚನೆ ಮಾಡಬೇಕಿದೆ. ಚಿತ್ರರಂಗವೂ ಕೊಂಚ ಯೋಚಿಸಿ ಹೆಜ್ಜೆ ಇಡಬೇಕು. ಜನ ಯಾವ ಸಿನಿಮಾಗಳನ್ನು ಇಷ್ಟಪಡುತ್ತಿದ್ದಾರೆ, ಎಷ್ಟು ಸ್ಪರ್ಧೆಯಿದೆ?, ಕಥೆ ಗುಣಮಟ್ಟ, ತಯಾರಿಕೆ ಗುಣಮಟ್ಟ ಹೇಗಿದೆ? ಮುಂತಾದುವುಗಳನ್ನೂ ಯೋಚನೆ ಮಾಡಬೇಕಿದೆ. ಬಹುಪಾಲು ಜನ ಇದನ್ನು ಮಾಡುತ್ತಿಲ್ಲ.

- **ನಿಮ್ಮ ಮುಂದಿನ ಪ್ರಾಜೆಕ್ಟ್‌ಗಳು...**

ಕಿಶೋರ್ ಮೂಡುಬಿದಿರೆ ಅವರು ನಿರ್ದೇಶಿಸಿದ ‘ರಿಪ್ಪನ್ ಸ್ವಾಮಿ’ ತೆರೆಗೆ ಬರಲು ಸಜ್ಜಾಗಿದೆ. ಕಳೆದ ವರ್ಷವೇ ಇದರ ಶೂಟಿಂಗ್ ಪೂರ್ಣಗೊಂಡಿದ್ದು ಏಪ್ರಿಲ್‌ನಲ್ಲಿ ಇದು ತೆರೆಗೆ ಬರಲಿದೆ. ಪಿ.ಸಿ. ಶೇಖರ್ ಅವರ ಒಂದು ಚಿತ್ರ, ವಸಂತ ಕುಮಾರ್ ಅವರು ನಿರ್ದೇಶಿಸುತ್ತಿರುವ ‘ರುದ್ರಾಭಿಷೇಕಂ’ ಚಿತ್ರದ ಚಿತ್ರೀಕರಣ ನಡೆಯುತ್ತಿದೆ. ‘ಪೆದ್ರೊ’, ‘ವಾಘಚಿಪಾಣಿ’ ನಿರ್ದೇಶಿಸಿದ ನಟೇಶ್ ಹೆಗಡೆ ಮತ್ತು ಗಣೇಶ್ ಹೆಗಡೆ ನಿರ್ದೇಶನದ ಒಂದು ಚಿತ್ರ ಮಾಡಿದ್ದೇನೆ. ಇದರ ಶೂಟಿಂಗ್ ಪೂರ್ಣಗೊಂಡಿದೆ. ‘ಸೀತಾರಾಮ್ ಬಿನೋಯ್’ ಸಿನಿಮಾದ ಸೀಕ್ವೆಲ್ ಬರಲಿದೆ. ಇದರ ಶೂಟಿಂಗ್ ಇನ್ನೂ ಆರಂಭವಾಗಿಲ್ಲ. ಜೊತೆಗೆ ಒಂದು ಸ್ಕ್ರಿಪ್ಟ್ ಒಪ್ಪಿಕೊಂಡಿದ್ದೇನೆ.

ಸಾತ್ವಿಕಾ, ಸಂತೋಷ್

ಕನಸೊಂದು ಶುರುವಾಗಿದೆ ಚಿತ್ರಕ್ಕೆ ಡಾರ್ಲಿಂಗ್, ಯೋಗಿ ಸಾಥ್

‘ಸಹಾರಾ’ ಸಿನಿಮಾ ಮೂಲಕ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದ ನಿರ್ದೇಶಕ ಮಂಜೇಶ್ ಮತ್ತೊಂದು ಸಿನಿಮಾ ಮೂಲಕ ಪ್ರೇಕ್ಷಕರೆದುರಿಗೆ ಬರಲಿದ್ದಾರೆ.

ಅವರು ಆ್ಯಕ್ಷನ್ ಕಟ್ ಹೇಳಿರುವ ಸಸ್ಪೆನ್ಸ್ ಥ್ರಿಲ್ಲರ್ ಕಥೆಯ ‘ಕನಸೊಂದು ಶುರುವಾಗಿದೆ’ ಸಿನಿಮಾ ಮಾರ್ಚ್ 7ರಂದು ಬಿಡುಗಡೆಯಾಗಲಿದೆ. ಇತ್ತೀಚೆಗೆ ಈ ಚಿತ್ರದ ಟ್ರೇಲರ್ ಅನ್ನು ನಟರಾದ ಡಾರ್ಲಿಂಗ್ ಕೃಷ್ಣ ಹಾಗೂ ‘ಲೂಸ್ ಮಾದ’ ಯೋಗಿ ಬಿಡುಗಡೆ ಮಾಡಿದರು. ಸಾಹಸ ನಿರ್ದೇಶಕ ಥ್ರಿಲರ್ ಮಂಜು ಕೂಡಾ ಸಾಥ್ ನೀಡಿದರು.

‘ಇದು ನನ್ನ ಎರಡನೆ ಸಿನಿಮಾ. ಸಣ್ಣಕಥೆಯಿಂದ ಶುರುವಾದ ಪಯಣ ಇದು. ಅಂದುಕೊಂಡಿರುವುದಕ್ಕಿಂತ ಬಜೆಟ್ ಹೆಚ್ಚಾಗಿದೆ. ‘ಕನಸೊಂದು ಶುರುವಾಗಿದೆ’ ಎಂದಾಕ್ಷಣ ಪುನೀತ್ ಅವರ ಹಾಡು ನೆನಪಾಗುತ್ತದೆ. ನೈಜ ಘಟನೆ ಇಟ್ಟುಕೊಂಡು ಈ ಸಿನಿಮಾ ಹೆಣೆಯಲಾಗಿದೆ’ ಎಂದರು ಮಂಜೇಶ್.

ಕೆಕೆಆರ್ ಮೀಡಿಯಾ ಬ್ಯಾನರ್‌ನಡಿ ಲಕ್ಷ್ಮೀಕಾಂತ್ ರೆಡ್ಡಿ ನಿರ್ಮಿಸಿರುವ ಈ ಸಿನಿಮಾದಲ್ಲಿ ಸಂತೋಷ್ ಬಿಲ್ಲವ ನಾಯಕನಾಗಿ ನಟಿಸಿದ್ದಾರೆ. ಇದು ಅವರ ಚೊಚ್ಚಲ ಸಿನಿಮಾ. ಜೋಡಿಯಾಗಿ ಸಾತ್ವಿಕಾ ನಟಿಸಿದ್ದು, ಥ್ರಿಲ್ಲರ್ ಮಂಜು, ಕುರಿ ಸುನಿಲ್, ರಶ್ಮಿ, ರಾಜು ಕಾಲ್ಕುಣಿ, ಕೃಷ್ಣಮೂರ್ತಿ ಕನಕಪುರ, ನಾಗರತ್ನ ಭಟ್ ತಾರಾಬಳಗದಲ್ಲಿದ್ದಾರೆ. ಬೆಂಗಳೂರು, ಕುಂದಾಪುರ ಮತ್ತು ಕುಣಿಗಲ್ ಸುತ್ತಮುತ್ತಲ ಭಾಗದಲ್ಲಿ ಚಿತ್ರೀಕರಣ ನಡೆದಿದೆ. ಲೋಕೇಂದ್ರ ಸೂರ್ಯ ಛಾಯಾಚಿತ್ರಗ್ರಹಣ, ಸೂರಜ್ ಜೋಯಿಸ್ ಸಂಗೀತ, ದೀಪಕ್ ಸಿ.ಎಸ್. ಗೌಡ ಸಂಕಲನವಿದೆ. ❖

ರವಿಚಂದ್ರನ್ ಹೊಸ ಸಿನಿಮಾ ಪ್ಯಾರ್


ರವಿಚಂದ್ರನ್

ಎಸ್. ಸುಪ್ರೀತ್ ನಿರ್ದೇಶನದ, ರವಿಚಂದ್ರನ್ ಮುಖ್ಯಭೂಮಿಕೆಯಲ್ಲಿರುವ ಹೊಸ ಚಿತ್ರದ ಶೀರ್ಷಿಕೆ ಇತ್ತೀಚೆಗೆ ಅನಾವರಣಗೊಂಡಿತು. ಚಿತ್ರಕ್ಕೆ ‘ಪ್ಯಾರ್’ ಎಂದು ಹೆಸರಿಡಲಾಗಿದ್ದು, ಭರತ್ ಹಾಗೂ ರಾಶಿಕಾ ಶೆಟ್ಟಿ ನಾಯಕ, ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ಎಸ್.ಎಂ. ಪ್ರೊಡಕ್ಷನ್ಸ್ ಲಾಂಛನದಲ್ಲಿ ಎಚ್. ಎಸ್. ನಾಗಶ್ರೀ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಸುಪ್ರೀತ್ ಕಥೆ, ಚಿತ್ರಕಥೆ ಬರೆದಿದ್ದಾರೆ.

‘ಪ್ರೀತಿಯ ಒಂದು ಭಾವನಾತ್ಮಕ ಪಯಣ’ ಎಂಬ ಅಡಿಬರಹ ಚಿತ್ರಕ್ಕಿದೆ. ‘ಪ್ರೀತಿಗೆ ಇರುವ ಬೆಲೆಯೇ ಬೇರೆ ಎಂದು ಈ ಚಿತ್ರದ ಮೂಲಕ ಹೇಳಹೊರಟಿದ್ದಾರೆ. ನಾನಿಲ್ಲಿ ನಾಯಕಿಯ ತಂದೆಯಾಗಿ ಕಾಣಿಸಿಕೊಳ್ಳುತ್ತಿದ್ದೇನೆ’ ಎಂದು ಪಾತ್ರದ ಬಗ್ಗೆ ರವಿಚಂದ್ರನ್ ಚುಟುಕಾಗಿ ಹೇಳಿದರು.

‘ಈಗಾಗಲೇ ಶೇ 80ರಷ್ಟು ಶೂಟಿಂಗ್ ಪೂರ್ಣಗೊಂಡಿದೆ. ಪ್ರೀತಿ ಪ್ರೇಮದ ಕಥೆಯ ಜೊತೆಗೆ ತಂದೆ ಮಗಳ ನಡುವಿನ ಭಾವನಾತ್ಮಕ ಸಂಬಂಧ ತೆರೆದಿಡುವಂಥ ಭಿನ್ನವಾದ ಕಥೆಯುಳ್ಳ ಸಿನಿಮಾವಿದು. ಕಾಶ್ಮೀರ, ರಾಜಸ್ಥಾನ, ಅಂಡಮಾನ್ ದ್ವೀಪ, ಮಂಗಳೂರು, ಚಿಕ್ಕಮಗಳೂರು, ಮೈಸೂರು ಹಾಗೂ ಬೆಂಗಳೂರು ಸುತ್ತಮುತ್ತ 70ಕ್ಕೂ ಹೆಚ್ಚು ದಿನಗಳ ಚಿತ್ರೀಕರಣ ನಡೆಸಿದ್ದೇವೆ. ತಂದೆಗೋಸ್ಕರ ಮಗಳು ಯಾವ ರೀತಿ ಪ್ರಾಣವನ್ನೇ ಮುಡಿಪಾಗಿಡುತ್ತಾಳೆ ಎಂಬುವುದನ್ನು ಚಿತ್ರದಲ್ಲಿ ತೋರಿಸಿದ್ದೇವೆ’ ಎಂದರು ಸುಪ್ರೀತ್.

ಚಿತ್ರಕ್ಕೆ ಕೆ.ಎಸ್. ಚಂದ್ರಶೇಖರ್ ಛಾಯಾಚಿತ್ರಗ್ರಹಣ, ಪಳನಿ ಡಿ. ಸೇನಾಪತಿ ಸಂಗೀತ ಸಂಯೋಜನೆಯಿದೆ. ಶ್ರೀನಿವಾಸಮೂರ್ತಿ, ವಿಜಯಸೂರ್ಯ, ಶಂಕರ್ ಅಶ್ವಥ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ❖

ಭರತ್, ರಾಶಿಕಾ ಶೆಟ್ಟಿ

‘ಪಿನಾಕ’ಧರ ಗಣೇಶ್

ಗಣೇಶ್

‘ಕೃಷ್ಣಂ ಪ್ರಣಯ ಸಖಿ’ ಬೆನ್ನಲ್ಲೇ ನಟ ಗಣೇಶ್ ‘ಪಿನಾಕ’ ಎಂಬ ಚಿತ್ರವನ್ನು ಒಪ್ಪಿಕೊಂಡಿದ್ದರು. ಶಿವರಾತ್ರಿಯಂದು ಚಿತ್ರತಂಡ ಚಿತ್ರದ ಹೊಸ ಪೋಸ್ಟರ್ ಬಿಡುಗಡೆ ಮಾಡಿದೆ. ತ್ರಿಶೂಲ ಹಿಡಿದು ಗಣೇಶ್ ಇಲ್ಲಿ ಹೊಸ ಅವತಾರವೆತ್ತಿದ್ದಾರೆ.

ನೃತ್ಯ ನಿರ್ದೇಶಕರಾಗಿ ಗುರುತಿಸಿಕೊಂಡಿರುವ ಬಿ.ಧನಂಜಯ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ‘ಪಿನಾಕ’ ಎಂದರೆ ಶಿವನ ತ್ರಿಶೂಲ. ಇದನ್ನೇ ಶೀರ್ಷಿಕೆಯನ್ನಾಗಿ ಇಡಲಾಗಿದ್ದು, ಗಣೇಶ್ ಅವರು ಈ ಚಿತ್ರದಲ್ಲಿ ‘ಕ್ಷುದ್ರ’ ಹಾಗೂ ‘ರುದ್ರ’ ಎಂಬ ಎರಡು ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ ಎಂದಿದೆ ಚಿತ್ರತಂಡ. ತೆಲುಗು, ಕನ್ನಡ ಸೇರಿದಂತೆ ಅನೇಕ ಭಾಷೆಗಳಲ್ಲಿ ಹಲವು ಚಿತ್ರಗಳನ್ನು ನಿರ್ಮಿಸಿರುವ ಟಿ.ಜಿ. ವಿಶ್ವಪ್ರಸಾದ್ ಸಾರಥ್ಯದ ಪೀಪಲ್ ಮೀಡಿಯಾ ಫ್ಯಾಕ್ಟರಿ ನಿರ್ಮಾಣ ಮಾಡುತ್ತಿರುವ 49ನೇ ಚಿತ್ರವಿದು. ❖

ಮಾರ್ಚ್ 7ಕ್ಕೆ ರಾಕ್ಷಸ ಬಿಡುಗಡೆ

ಪ್ರಜ್ವಲ್ ದೇವರಾಜ್

ನಟ ಪ್ರಜ್ವಲ್ ದೇವರಾಜ್ ನಟನೆಯ ‘ರಾಕ್ಷಸ’ ಸಿನಿಮಾ ಬಿಡುಗಡೆಯನ್ನು ಚಿತ್ರತಂಡ ತಾಂತ್ರಿಕ ಕಾರಣಗಳಿಂದಾಗಿ ಮುಂದೂಡಿದೆ. ಫೆ.28ರಂದು ಬಿಡುಗಡೆಯಾಗಬೇಕಿದ್ದ ಸಿನಿಮಾ ಮಾರ್ಚ್ 7ರಂದು ತೆರೆಕಾಣಲಿದೆ.

ಚಿತ್ರದ ಡಬ್ಬಿಂಗ್ ಇತ್ತೀಚೆಗಷ್ಟೇ ಪೂರ್ಣಗೊಂಡಿದ್ದು, ಜೊತೆಗೆ ಗ್ರಾಫಿಕ್ಸ್ ಕೆಲಸಗಳು ವಿಳಂಬವಾದ ಕಾರಣ ಚಿತ್ರವನ್ನು ಮುಂದೂಡಲಾಗಿದೆ. ಈ ಚಿತ್ರವನ್ನು ‘ಮಮ್ಮಿ’, ‘ದೇವಕಿ’ ಸಿನಿಮಾ ಖ್ಯಾತಿಯ ಲೋಹಿತ್ ನಿರ್ದೇಶಿಸಿದ್ದಾರೆ. ಹಾರರ್ ಜಾನರ್‌ನಲ್ಲಿರುವ ಈ ಚಿತ್ರವು ಭಾವನಾತ್ಮಕ ಕಥೆಯ ಜೊತೆಗೆ ಟೈಮ್ ಲೂಪ್ ಕಾನ್ಸೆಪ್ಟ್‌ನಲ್ಲಿದೆ.

ಪ್ರಜ್ವಲ್ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ಸೋನಲ್ ಮೊಂತೆರೋ, ಶೋಭಾರಾಜ್, ವತ್ಸಲಾ ಮೋಹನ್, ಸಿದ್ದಿಂಗು ಶ್ರೀಧರ್, ಅರ್ನ ರಾಥೋಡ್ ಸೇರಿದಂತೆ ಅನೇಕ ಕಲಾವಿದರು ಅಭಿನಯಿಸಿದ್ದಾರೆ. ‘ರಾಕ್ಷಸ’ ಸಿನಿಮಾದ ಶೇ 80ರಷ್ಟು ಚಿತ್ರೀಕರಣ ರಾಮೋಜಿ ಫಿಲಂ ಸಿಟಿಯಲ್ಲಿ ನಡೆದಿದೆ. ❖

ಫೆಬ್ರುವರಿಗೆ ಸಿನಿಮಾ ಹೆಚ್ಚುವರಿ

ಕಳೆದ ಮೂರು ಶುಕ್ರವಾರಗಳಲ್ಲಿ ಬಿಡುಗಡೆಯಾಗಿದ್ದು ಬರೋಬ್ಬರಿ 26 ಸಿನಿಮಾಗಳು. ಇಂದು (ಫೆ.28) ಮತ್ತೆ 10 ಸಿನಿಮಾಗಳು ರಿಲೀಸ್ ಆಗಿವೆ. ಹೀಗೆ ಕಳೆದ 28 ದಿನಗಳಲ್ಲಿ ಒಟ್ಟು 36 ಸಿನಿಮಾಗಳು ಬಿಡುಗಡೆಗೊಂಡಿವೆ. ಜ.31ರಂದು ಎಂಟು ಸಿನಿಮಾಗಳು ತೆರೆಕಂಡಿದ್ದವು. ಹೀಗೆ ನೋಡಿದರೆ ಜ.31ರಿಂದ ಫೆ.28ರವರೆಗೆ 44 ಸಿನಿಮಾಗಳು ರಿಲೀಸ್ ಆಗಿವೆ. ಪ್ರತಿ ವರ್ಷದ ಫೆಬ್ರುವರಿಯಲ್ಲಿ ಇದೇ ರೀತಿ ಹೆಚ್ಚು ಸಿನಿಮಾಗಳು ಬಿಡುಗಡೆಯಾಗುವುದು ಸಾಮಾನ್ಯ ಎಂಬಂತಾಗಿದೆ. ಇಂದು ಬಿಡುಗಡೆಯಾ ಗುತ್ತಿರುವ ಸಿನಿಮಾಗಳ ವಿವರ ಇಲ್ಲಿದೆ...

ಎಫ್‌ಐಆರ್ 6 ಟು 6

ಕೆ.ವಿ.ರಮಣರಾಜ್ ನಿರ್ದೇಶನದ ಈ ಚಿತ್ರದಲ್ಲಿ ವಿಜಯ ರಾಘವೇಂದ್ರ ನಾಯಕನಾಗಿ ನಟಿಸಿದ್ದಾರೆ. ಸಸ್ಪೆನ್ಸ್ ಥ್ರಿಲ್ಲರ್ ಜಾನರ್‌ನ ಈ ಚಿತ್ರವನ್ನು ಭಾಗ್ಯ ರಮೇಶ್ ನಿರ್ಮಾಣ ಮಾಡಿದ್ದಾರೆ. ಒಂದೇ ರಾತ್ರಿಯಲ್ಲಿ ನಡೆಯುವ ಆ್ಯಕ್ಷನ್, ಥ್ರಿಲ್ಲಿಂಗ್ ಕಥೆಯಿದು. ಪೊಲೀಸ್ ಅಧಿಕಾರಿಯಾಗಿ ವಿಜಯ ರಾಘವೇಂದ್ರ ಬಣ್ಣಹಚ್ಚಿದ್ದಾರೆ. ಚಿತ್ರಕ್ಕೆ ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನವಿದೆ. ಚಿತ್ರದಲ್ಲಿ ಸಿರಿರಾಜ್, ಸ್ವಾತಿ, ಯಶಾ ಶೆಟ್ಟಿ ನಾಯಕಿಯರು. ಯಶ್ ಶೆಟ್ಟಿ ಖಳನಾಯಕನಾಗಿ ಕಾಣಿಸಿಕೊಂಡಿದ್ದಾರೆ. ನಾಗೇಂದ್ರ ಅರಸ್ ಸಂಕಲನ, ಎಂ.ಎಸ್. ತ್ಯಾಗರಾಜ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ನಾಗವಲ್ಲಿ ಬಂಗಲೆ

ಈ ಚಿತ್ರವನ್ನು ಹಂಸ ವಿಷನ್ಸ್ ಲಾಂಛನದಲ್ಲಿ ನೆ.ಲ.ಮಹೇಶ್ ಮತ್ತು ನೇವಿ ಮಂಜು ನಿರ್ಮಿಸಿದ್ದಾರೆ. ಕವಿ ರಾಜೇಶ್ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರಕ್ಕೆ ರೋಹನ್ ದೇಸಾಯಿ ಸಂಗೀತ, ಜೆ.ಎಂ. ಪ್ರಹ್ಲಾದ್ ಅವರ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಯಿದೆ. ನೆ.ಲ.ನರೇಂದ್ರಬಾಬು, ಯಶ್, ತೇಜಸ್ವಿನಿ, ನೇವಿ ಮಂಜು, ರೂಪಶ್ರೀ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಶಭಾಷ್ ಬಡ್ಡಿಮಗ್ನೆ

ರಾಜ್‌ಕುಮಾರ್ ಅವರ ಸಿನಿಮಾ ಡೈಲಾಗ್ ಈ ಚಿತ್ರದ ಶೀರ್ಷಿಕೆಯಾಗಿದೆ. ಕಿಶನ್ ಪ್ರೊಡಕ್ಷನ್ ಅಡಿಯಲ್ಲಿ ಚೈತ್ರಾ ಪ್ರಕಾಶ್ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಬಿ.ಎಸ್.ರಾಜಶೇಖರ್ ನಿರ್ದೇಶನದ ಜೊತೆಗೆ ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ಪ್ರಮೋದ್ ಶೆಟ್ಟಿ ನಾಯಕರಾಗಿ ನಟಿಸಿರುವ ಈ ಚಿತ್ರದಲ್ಲಿ ಆದ್ಯಾ ಪ್ರಿಯಾ ನಾಯಕಿ. ಸಾಮ್ರಾಟ್ ಶೆಟ್ಟಿ, ಕಾವ್ಯ ಪ್ರಕಾಶ್, ರವಿತೇಜ, ಮಿತ್ರ, ಮೂಗು ಸುರೇಶ್, ಶಂಕರ್ ಅಶ್ವಥ್, ಪ್ರಕಾಶ್ ತುಮ್ಮಿನಾಡು ತಾರಾಬಳಗದಲ್ಲಿದ್ದಾರೆ. ಆಲಸಿಯಾಗಿರುವ ಪೊಲೀಸ್ ಅಧಿಕಾರಿಯೊಬ್ಬನ ಕಥೆ ಇದಾಗಿದ್ದು, ಆತನು ಕರ್ತವ್ಯಕ್ಕಿಂತ ವೈಯಕ್ತಿಕ ಬದುಕಿನಲ್ಲಿ ಹೆಚ್ಚು ಆಸಕ್ತಿಯುಳ್ಳವ. ಈತನ ಠಾಣಾ ವ್ಯಾಪ್ತಿಯಲ್ಲಿ ಅಪರಾಧವೊಂದು ನಡೆದಾಗ ಅದನ್ನು ಹೇಗೆ ತನಿಖೆ ಮಾಡುತ್ತಾನೆ ಎಂಬುದನ್ನು ಹಾಸ್ಯಲೇಪಿತ ಕಥೆಯಲ್ಲಿ ನೀಡಲಾಗಿದೆ.

ಅರಿವಝಗನ್ ವೆಂಕಟಾಚಲಂ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿರುವ, ಆದಿ ಪಿನಿಸೆಟ್ಟಿ ನಟನೆಯ ಪ್ಯಾನ್ ಇಂಡಿಯಾ ಸಿನಿಮಾ **‘ಶಬ್ದ’**, **‘ವಿರಾಮದ ನಂತರ’** ಹಾಗೂ **‘ಸೈಕಲ್’** ಸಿನಿಮಾಗಳೂ ತೆರೆಕಂಡಿವೆ. ❖

ಸರೋವರ್, ಸೌಂದರ್ಯ

ಮಾಂಕ್ ದಿ ಯಂಗ್

ಮಾಸ್ಚಿತ್ ಸೂರ್ಯ ನಿರ್ದೇಶನದ ಈ ಚಿತ್ರದಲ್ಲಿ ಸರೋವರ್, ಸೌಂದರ್ಯ ಗೌಡ ನಾಯಕ–ನಾಯಕಿಯಾಗಿ ನಟಿಸಿದ್ದಾರೆ. ಕೆ.ಆರ್. ಜಿ ಸ್ಟುಡಿಯೊಸ್ ಈ ಸಿನಿಮಾ ವಿತರಣೆ ಮಾಡುತ್ತಿದ್ದು, ಸೈನ್ಸ್ ಫಿಕ್ಷನ್ ಜಾನರ್‌ನಲ್ಲಿ ಈ ಸಿನಿಮಾವಿದೆ. ಬಬ್ಲೂ ಪೃಥ್ವಿರಾಜ್ ಅವರು ಈ ಚಿತ್ರದ ವಿಶೇಷ ಪಾತ್ರದಲ್ಲಿ ಅಭಿನಯಿಸಿದ್ದು, ಉಷಾ ಭಂಡಾರಿ, ಪ್ರಣಯಮೂರ್ತಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ರಾಜೇಂದ್ರನ್, ವಿನಯ್‌ಬಾಬು ರೆಡ್ಡಿ ಶೆಟ್ಟಿಹಳ್ಳಿ, ಗೋಪಿಚಂದ್, ಲಾಲ್ ಚಂದ್ ಖತಾರ್ ಮತ್ತು ಸರೋವರ್ ಸೇರಿ ಚಿತ್ರವನ್ನು ನಿರ್ಮಿಸಿದ್ದಾರೆ. ಕಾರ್ತಿಕ್ ಶರ್ಮಾ ಛಾಯಾಚಿತ್ರಗ್ರಹಣ, ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನ ಚಿತ್ರಕ್ಕಿದೆ.

ರಾಣಿ ವರದ್

1990’s

ನಂದಕುಮಾರ್ ಸಿ.ಎಂ. ನಿರ್ದೇಶಿಸಿರುವ ಈ ಸಿನಿಮಾ ಮನಸ್ಸು ಮಲ್ಲಿಗೆ ಕಂಬೈನ್ಸ್ ಲಾಂಛನದಲ್ಲಿ ನಿರ್ಮಾಣವಾಗಿದೆ. ಅರುಣ್, ರಾಣಿ ವರದ್ ನಾಯಕ, ನಾಯಕಿಯಾಗಿ ನಟಿಸಿದ್ದಾರೆ. 90ರ ಕಾಲಘಟ್ಟದ ಪ್ರೇಮಕಥೆಯನ್ನು ಚಿತ್ರ ಹೊಂದಿದ್ದು, ಮಹಾರಾಜ ಚಿತ್ರಕ್ಕೆ ಸಂಗೀತ ನೀಡಿದ್ದಾರೆ. ಹಾಲೇಶ್ ಛಾಯಾಚಿತ್ರಗ್ರಹಣ, ಕೃಷ್ಣ ಸಂಕಲನ, ಅಶೋಕ್ ಸಾಹಸ ನಿರ್ದೇಶನ ಹಾಗೂ ಸಾದಿಕ್ ಸರ್ದಾರ್ ನೃತ್ಯ ನಿರ್ದೇಶನ ಚಿತ್ರಕ್ಕಿದೆ.

ವಿಕಾಶ್ ಉತ್ತಯ್ಯ, ರಾಧಾ ಭಗವತಿ

ಅಪಾಯವಿದೆ ಎಚ್ಚರಿಕೆ

‘ಅಣ್ಣಯ್ಯ’ ಧಾರಾವಾಹಿ ಮೂಲಕ ಗುರುತಿಸಿಕೊಂಡಿರುವ ವಿಕಾಶ್ ಉತ್ತಯ್ಯ ನಟನೆಯ ಸಿನಿಮಾ ಇದಾಗಿದೆ. ಅಭಿಜಿತ್ ತೀರ್ಥಹಳ್ಳಿ ಕಥೆ ಬರೆದು ನಿರ್ದೇಶಿಸಿದ್ದಾರೆ. ಸಸ್ಪೆನ್ಸ್ ಥ್ರಿಲ್ಲರ್ ಚಿತ್ರದಲ್ಲಿ ಹಾರರ್ ಅಂಶವೂ ಇದೆ. ವಿಕಾಶ್ ಉತ್ತಯ್ಯ, ಮಿಥುನ್ ತೀರ್ಥಹಳ್ಳಿ, ರಾಘವ್ ಕೊಡಚಾದ್ರಿ ಮುಖ್ಯಭೂಮಿಕೆಯಲ್ಲಿರುವ ಚಿತ್ರವನ್ನು ವಿ.ಜಿ. ಮಂಜುನಾಥ್ ಮತ್ತು ಪೂರ್ಣಿಮಾ ಎಂ. ಗೌಡ ನಿರ್ಮಾಣ ಮಾಡಿದ್ದಾರೆ. ಸುನಾದ್ ಗೌತಮ್ ಛಾಯಾಚಿತ್ರಗ್ರಹಣ, ಸಂಗೀತ ಚಿತ್ರಕ್ಕಿದೆ. ‘ಅಮೃತಧಾರೆ’ ಖ್ಯಾತಿಯ ರಾಧಾ ಭಗವತಿ ತಾರಾಬಳಗದಲ್ಲಿದ್ದಾರೆ.

ಪ್ರತ್ಯರ್ಥ

ಕಾರ್ಕಳ ಮೂಲದ ಅರ್ಜುನ್ ಕಾಮತ್ ನಿರ್ದೇಶಿಸಿರುವ ಈ ಚಿತ್ರ ಇನ್ವೆಸ್ಟಿಗೇಷನ್ ಥ್ರಿಲ್ಲರ್ ಕಥಾಹಂದರ ಹೊಂದಿದೆ. ಈ ಚಿತ್ರಕ್ಕೆ ಅರ್ಜುನ್ ಕಾಮತ್ ಹಾಗೂ ರಾಮ್ ಸೇರಿ ಕಥೆ ಚಿತ್ರಕಥೆ ಬರೆದಿದ್ದಾರೆ. ನಾಯಕರಾಗಿ ರಾಮ್, ಅಕ್ಷಯ್ ಕಾರ್ಕಳ ನಟಿಸಿದ್ದಾರೆ. ನಾಯಕಿಯಾಗಿ ಶೃತಿ ಚಂದ್ರಶೇಖರ್ ಅಭಿನಯಿಸಿದ್ದಾರೆ. ಸುಮನ್ ತಲ್ವಾರ್, ನವೀನ್ ಡಿ. ಪಡೀಲ್, ರಮೇಶ್ ಭಟ್, ದೀಪಕ್ ರೈ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸ್ಯಾಂಡಲ್ ವುಡ್ ಸಂಸ್ಥೆಯ ನಾಗೇಶ್ ಎಂ. ಹಾಗೂ ವಿಶಿಷ್ಟ ಫಿಲ್ಮ್ ಸಂಸ್ಥೆಯ ಜಯ್ ಆರ್ ಪ್ರಭು ಈ ಚಿತ್ರ ನಿರ್ಮಾಣ ಮಾಡಿದ್ದಾರೆ.

ದೇಸಿ ಕತೆ–ಕಾವ್ಯವೂ ಆ್ಯನಿಮೇಷನ್‌ಗೆ ಬರಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅವತಾರ್', 'ಇಂಡಿಯಾನಾ ಜೋನ್ಸ್', ಟ್ರಾನ್ಸ್‌ಫಾರ್ಮರ್ಸ್‌ನಂತಹ ಅತಿಮಾನುಷ ಶಕ್ತಿಯ ಸಿನಿಮಾಗಳಿಗೆ ಭಾರತೀಯರು ಈವರೆಗೆ ಆ್ಯನಿಮೇಷನ್, ವಿಎಫ್‌ಎಕ್ಸ್ ಸೇವೆ ಒದಗಿಸಿದ್ದು ಸಾಕು. ನಮ್ಮಲ್ಲಿಯೇ ಹೇರಳವಾಗಿರುವ ಅತಿಮಾನುಷ ಕತೆಗಳು, ಪುರಾಣಗಳು, ಜನಪದ ಕತೆ–ಕಾವ್ಯಗಳನ್ನು ಆ್ಯನಿಮೇಷನ್ ಮೂಲಕ ಪರದೆ ಮೇಲೆ ತರುವ ಪ್ರಯತ್ನವಾಗಬೇಕು...'

'ಕತೆಗಳನ್ನು ಆ್ಯನಿಮೇಷನ್, ವಿಎಫ್‌ಎಕ್ಸ್, 3ಡಿ ಆಯಾಮಗಳಲ್ಲಿ ಕಟ್ಟಿಕೊಡುವಂತಹ ಸೃಜನಶೀಲ ತಂತ್ರಜ್ಞರು ಇದ್ದಾರೆ. ಆದರೆ, ಆಗ ಭಾರತದಲ್ಲಿ ಅಂತಹ ತಂತ್ರಜ್ಞಾನವಿರಲಿಲ್ಲ, ನಮ್ಮ ತಂತ್ರಜ್ಞರ ಕೈಗೆ ಅವು ಎಟುಕುತ್ತಲೂ ಇರಲಿಲ್ಲ. ಆದರೀಗ ಸ್ಥಿತಿ ಬದಲಾಗಿದೆ. ತಂತ್ರಜ್ಞಾನ ಮನೆ ಬಾಗಿಲವರೆಗೆ ಬಂದಿದೆ, ಅದನ್ನು ಬಳಸಿಕೊಳ್ಳುವಂತಹ ಸೃಜನಶೀಲ ತಂತ್ರಜ್ಞರೂ...'

'ನಿಜದ ರೇಸಿಂಗ್‌ನ ಅನುಭವ ನೀಡುವ ನೀಡ್ ಫಾರ್ ಸ್ಪೀಡ್, ಫೋರ್ಜಾ, ಜಿಟಿಎ ಮೊದಲಾದ ಡಿಜಿಟಲ್ ಗೇಮ್‌ಗಳು ವಿಶ್ವದಾದ್ಯಂತ ಹೆಸರಾಗಿವೆ. ನಮ್ಮ ಕರಾವಳಿಯ ಕಂಬಳ, ತಮಿಳಿನ ಜಲ್ಲಿಕಟ್ಟು, ಕುಸ್ತಿಗಳನ್ನೂ ಅಷ್ಟೇ ಕರಾರುವಾಕ್ಕಾಗಿ ಡಿಜಿಟಲ್ ಗೇಮಿಂಗ್‌ಗೆ ಇಳಿಸುವ ಕೆಲಸ ಏಕಾಗಬಾರದು...'

ಆ್ಯನಿಮೇಷನ್, ಡಿಜಿಟಲ್ ಪ್ರದರ್ಶನ ಕಲೆ, ಗೇಮಿಂಗ್ ಕ್ಷೇತ್ರದಲ್ಲಿನ ಆಗುಹೋಗುಗಳು ಮತ್ತು ಮುಂದೆ ಸಾಗಬೇಕಾಗಿರುವ ಹಾದಿಯ ಬಗ್ಗೆ ಚರ್ಚಿಸಲು ರಾಜ್ಯ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆ, ಕಿಯೋನಿಕ್ಸ್ ಸಹಯೋಗದಲ್ಲಿ ಆಯೋಜಿಸಲಾಗಿರುವ 'ಬೆಂಗಳೂರು ಗೆಫೆಕ್ಸ್–2025' ಮೂರು ದಿನಗಳ ಮೇಳದ ಉದ್ಘಾಟನಾ ವೇದಿಕೆಯಲ್ಲಿ ಗುರುವಾರ ಕೇಳಿಬಂದ ಮಾತುಗಳಿವು.

ಮೇಲೆ ಚರ್ಚಿಸಲಾದ ಎಲ್ಲ ವಿಷಯಗಳಲ್ಲೂ ಹೊಸ ಹಾದಿ ತುಳಿಯಲು ಸರ್ಕಾರ ಮತ್ತು ಉದ್ಯಮ ಕ್ಷೇತ್ರ ಪರಸ್ಪರ ಸಹಕಾರದಲ್ಲಿ ಕೆಲಸ ಮಾಡಬೇಕು ಎಂಬ ಅಭಿಮತದೊಂದಿಗೆ ಉದ್ಘಾಟನಾ ಕಾರ್ಯಕ್ರಮಕ್ಕೆ ತೆರೆಬಿತ್ತು.

ನಗರದ ಲಲಿತ್ ಅಶೋಕ್ ಹೋಟೆಲ್‌ನಲ್ಲಿ ಇದೇ ಮಾರ್ಚ್ 1ರವರೆಗೆ ಮೇಳ ನಡೆಯಲಿದೆ. ವಿವಿಧ ವಿಭಾಗಗಳಲ್ಲಿ ಆಯೋಜಿಸಲಾಗಿರುವ ಸ್ಪರ್ಧೆಗಳಲ್ಲಿ ಭಾಗವಹಿಸಲು ದೇಶದ ವಿವಿಧೆಡೆಯಿಂದ ಬಂದಿರುವ ತಂತ್ರಜ್ಞರು ಮತ್ತು ಕಲಾವಿದರು ಮೇಳದಲ್ಲಿ ಕಿಕ್ಕಿರಿದು ತುಂಬಿದ್ದರು. ಸ್ಪರ್ಧೆಯ ಭಾಗವಾಗಿ ಗುರುವಾರ ಪ್ರದರ್ಶಿಸಿದ ಹಲವು ಆ್ಯನಿಮೇಟೆಡ್ ದೃಶ್ಯಾವಳಿಗಳು, ವಿಎಫ್‌ಎಕ್ಸ್ ಕಲಾಕೃತಿಗಳು ನೋಡುಗರ ಕಣ್ಸೆಳೆದವು. 3ಡಿ ಮತ್ತು 4ಡಿ ಆಯಾಮದ ಅನುಭವ ನೀಡುವ ಕಿರುಚಿತ್ರಗಳು, ದೃಶ್ಯಾವಳಿಗಳಿಗೆ ಅಪಾರ ಮೆಚ್ಚುಗೆ ವ್ಯಕ್ತವಾಯಿತು.

'ಕರ್ನಾಟಕದಿಂದಲೇ ಆರಂಭ'

'ಕೇಂದ್ರ ಸರ್ಕಾರದ ಕೌಶಲ ಭಾರತ, ಡಿಜಿಟಲ್ ಭಾರತ, ವಿಕಸಿತ ಭಾರತ ಮೊದಲಾದ ಮಹತ್ವಾಕಾಂಕ್ಷಿ ಯೋಜನೆಗಳೆಲ್ಲಾ ಕರ್ನಾಟಕದಲ್ಲೇ ಆರಂಭವಾಗುತ್ತವೆ. ವಿಜ್ಞಾನ, ತಂತ್ರಜ್ಞಾನ ಮತ್ತು ಆಧುನಿಕತೆಯನ್ನು ಅಳವಡಿಸಿಕೊಳ್ಳುವಲ್ಲಿ ರಾಜ್ಯವು ಸದಾ ಮುಂದಿನ ಸಾಲಿನಲ್ಲಿ ಇರುತ್ತದೆ' ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

'ದೇಶದಲ್ಲಿ ಡಿಜಿಟಲ್ ಗೇಮಿಂಗ್ ಕ್ಷೇತ್ರ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. 2024ರೊಂದರಲ್ಲೇ ಸುಮಾರು 2.30 ಕೋಟಿ ಹೊಸ ಗೇಮರ್‌ಗಳು ಸೇರ್ಪಡೆಯಾಗಿದ್ದಾರೆ. ಒಟ್ಟು ಗೇಮರ್‌ಗಳ ಸಂಖ್ಯೆ 59 ಕೋಟಿಯ ಗಡಿ ದಾಟಿದೆ. ಇದರಲ್ಲಿ ನಮ್ಮದೇ ಆಟಗಳನ್ನು, ಕತೆಗಳನ್ನು ಸೇರಿಸಲು ಇರುವ ಅವಕಾಶ ಎಷ್ಟಿದೆ ಎಂಬುದನ್ನು ಈ ಸಂಖ್ಯೆಗಳೇ ಹೇಳುತ್ತವೆ' ಎಂದರು.

'ಕೇಂದ್ರ ಸರ್ಕಾರವು ಶೇ 28ರಷ್ಟು ಜಿಎಸ್‌ಟಿ ಹೇರಿದ್ದರೂ ಈ ಕ್ಷೇತ್ರ ಗಣನೀಯ ಪ್ರಗತಿ ಸಾಧಿಸಿದೆ. ರಾಜ್ಯದಲ್ಲೇ ಈ ಕ್ಷೇತ್ರದ 300ಕ್ಕೂ ಹೆಚ್ಚು ಕಂಪನಿಗಳಿವೆ. ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿರುವ ಎಲ್ಲ ಸಹಕಾರವನ್ನು ರಾಜ್ಯ ಸರ್ಕಾರ ನೀಡಲಿದೆ. ಕೇಂದ್ರವೂ ನೀಡಬೇಕು' ಎಂದರು.

ಈ ಕ್ಷೇತ್ರದ ಅಭಿವೃದ್ಧಿಗೆ ರಾಜ್ಯ ಸರ್ಕಾರವು ಹಿಂದಿನ ಬಜೆಟ್‌ನಲ್ಲಿ ₹300 ಕೋಟಿ ಘೋಷಿಸಿತ್ತು. ಮುಂದೆಯೂ ಅಂತಹ ಸಹಕಾರ ಸರ್ಕಾರದಿಂದ ಸಿಗಲಿದೆ
ಶರತ್ ಬಚ್ಚೇಗೌಡ, ಅಧ್ಯಕ್ಷ, ಕಿಯೋನಿಕ್ಸ್

ಕೇಂದ್ರ ಸರ್ಕಾರವೂ ಈ ಕ್ಷೇತ್ರಕ್ಕೆ ಪೂರಕವಾಗಿ ಮುಂಬೈನಲ್ಲಿ ಏಪ್ರಿಲ್ 1ರಂದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕ್ರಿಯೇಟಿವ್ ಟೆಕ್ನಾಲಜಿ (ಐಐಸಿಟಿ) ಆರಂಭಿಸುತ್ತಿದೆ
ಸಂಜಯ್ ಜಾಜು, ಕಾರ್ಯದರ್ಶಿ, ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ

ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲೂ ಆ್ಯನಿಮೇಷನ್ ಅವಶ್ಯಕತೆ ಇದ್ದು, ಅದಕ್ಕಾಗಿ ವಿದೇಶಗಳನ್ನು ಅವಲಂಬಿಸಿದ್ದೆವು. ಈಗ ಬೆಂಗಳೂರಿನಲ್ಲೇ ಅದು ಸಾಧ್ಯವಾಗುತ್ತಿದೆ
ಕಿರಣ್ ಮಜುಂದಾರ್ ಷಾ, ಬಯೊಕಾನ್ ಅಧ್ಯಕ್ಷೆ

ಉತ್ಕೃಷ್ಟ ಮಟ್ಟದ ಆ್ಯನಿಮೇಷನ್ ಮತ್ತು ವಿಎಫ್‌ಎಕ್ಸ್ ಕಲಾಕೃತಿಗಳನ್ನು ಭಾರತದಲ್ಲೇ ಸೃಷ್ಟಿಸುವ ಕೆಲಸ ನಿಧಾನವಾಗಿಯಾದರೂ ಆರಂಭವಾಗಿದೆ
ಬೀರೇನ್ ಘೋಷ್, ಅಧ್ಯಕ್ಷ, ಬೆಂಗಳೂರು ಗೆಫೆಕ್ಸ್

ಹಂಪಿ ಉತ್ಸವ ಇಂದಿನಿಂದ ಆರಂಭ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ವಿಜಯನಗರ ಸಾಮ್ರಾಜ್ಯದ ಗತವೈಭವದ ಸ್ಮರಣೆಯಲ್ಲಿ ಫೆಬ್ರುವರಿ 28 ರಿಂದ ಮಾರ್ಚ್ 2ರವರೆಗೆ 'ಹಂಪಿ ಉತ್ಸವ' ನಡೆಯಲಿದೆ. ಗಾಯತ್ರಿ ಪೀಠ ಸಮೀಪದ ಮೈದಾನದಲ್ಲಿ ನಿರ್ಮಿಸಲಾದ ಪ್ರಧಾನ ವೇದಿಕೆ ಸಹಿತ ಆರು ವೇದಿಕೆಗಳಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.

ಹಂಪಿಯ ಇತಿಹಾಸದ ಮೇಲೆ ಬೆಳಕು ಚೆಲ್ಲುವ ವಿಚಾರಗೋಷ್ಠಿ ಮಾರ್ಚ್ 1ರಂದು ಮಧ್ಯಾಹ್ನ 2.30ಕ್ಕೆ ವಿರೂಪಾಕ್ಷ ದೇವಸ್ಥಾನದ ವೇದಿಕೆಯಲ್ಲಿ ನಡೆಯಲಿದೆ. 'ವಿಜಯನಗರ ವೈಭವ' ಧ್ವನಿಬೆಳಕು ಪ್ರದರ್ಶನ ಮಾರ್ಚ್ 6ರವರೆಗೆ ಇರಲಿದೆ.

ಎತ್ತು, ಕುರಿ, ಶ್ವಾನ ಪ್ರದರ್ಶನ, ಫಲಪುಷ್ಪ, ಸಾವಯವ ವಸ್ತು ಪ್ರದರ್ಶನ, ಚಿತ್ರಸಂತೆ, ಮತ್ಸ್ಯ ಮೇಳ, ಆಹಾರ ಮೇಳ, ಕುಸ್ತಿ, ಹೆಲಿಕಾಪ್ಟರ್‌ನಲ್ಲಿ ಹಂಪಿ ದರ್ಶನ, ದೋಣಿವಿಹಾರದಂತಹ ಹಲವು ಕಾರ್ಯಕ್ರಮಗಳು ಜನರನ್ನು ರಂಜಿಸಲಿವೆ. ಹಂಪಿ ಉತ್ಸವದ ಉದ್ಘಾಟನೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಸಚಿವರು ಪಾಲ್ಗೊಳ್ಳುವರು.

ಮಹಿಳೆ ವಿವಸ್ತ್ರಗೊಳಿಸಿ ಹಲ್ಲೆ

ಪ್ರಜಾವಾಣಿ ವಾರ್ತೆ

ಶಿಕಾರಿಪುರ: ತೋಟದೊಳಗೆ ಮೇಕೆಗಳ ಹಿಂಡು ನುಗ್ಗಿದ್ದ ಕಾರಣಕ್ಕೆ ಅವುಗಳನ್ನು ಮೇಯಿಸುತ್ತಿದ್ದ ಮಹಿಳೆಯೊಬ್ಬರನ್ನು ವಿವಸ್ತ್ರಗೊಳಿಸಿ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ಈಸೂರು ಗ್ರಾಮದಲ್ಲಿ ಭಾನುವಾರ ನಡೆದಿದೆ.

ಪಕ್ಕದ ಚಿಕ್ಕಜೋಗಿಹಳ್ಳಿ ಗ್ರಾಮದ 50 ವರ್ಷದ ದಲಿತ ಮಹಿಳೆ ಹಲ್ಲೆಗೊಳಗಾಗಿದ್ದು, ಅವರನ್ನು ಸ್ಥಳೀಯರು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದರು. ಮೂರು ದಿನಗಳವರೆಗೆ ಚಿಕಿತ್ಸೆ ಪಡೆದು ಅವರು ಮನೆಗೆ ಮರಳಿದ್ದಾರೆ. ಪೊಲೀಸರು ಆರಂಭದಲ್ಲಿ ದೂರು ದಾಖಲಿಸಿಕೊಂಡಿರಲಿಲ್ಲ. ದಲಿತಪರ ಸಂಘಟನೆಗಳ ಮಧ್ಯಪ್ರವೇಶದ ನಂತರ ಫೆ. 25ರಂದು ಶಿಕಾರಿಪುರ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಿಕೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ಹತ್ತಕ್ಕೂ ಹೆಚ್ಚು ಮೇಕೆಗಳು ತೋಟಕ್ಕೆ ನುಗ್ಗಿ ಗಿಡಗಳ ಎಲೆಗಳನ್ನು ಮೇಯ್ದಿದ್ದವು. ತೋಟದ ಮಾಲೀಕ, ರಾಮವಳ್ಳಿ ಶಿವಕುಮಾರ್ ಎಂಬವರ ಮಗ ಅರುಣ್ ಮಹಿಳೆ ಮೇಲೆ ಹಲ್ಲೆ ನಡೆಸಿದ್ದಲ್ಲದೆ, ವಿವಸ್ತ್ರಗೊಳಿಸಿ ಮರಕ್ಕೆ ಕಟ್ಟಿಹಾಕಲು ಯತ್ನಿಸಿದ್ದ. ಆಗ ಮಹಿಳೆ ತಪ್ಪಿಸಿಕೊಂಡು ಓಡಿ ಬಂದಿದ್ದಾರೆ. 'ಆರೋಪಿ, ಬಂಧನಕ್ಕೆ ಬಲೆ ಬೀಸಲಾಗಿದೆ. ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ' ಎಂದು ಶಿಕಾರಿಪುರ ಗ್ರಾಮಾಂತರ ಠಾಣೆ ಪೊಲೀಸರು ತಿಳಿಸಿದ್ದಾರೆ.

11 ವರ್ಷದ ನಂತರ ಕೈದಿ ಬಂಧನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಆಸ್ಪತ್ರೆಯಿಂದ ಪರಾರಿಯಾಗಿ 11 ವರ್ಷ ತಲೆ ಮರೆಸಿಕೊಂಡಿದ್ದ, ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಕೈದಿಯನ್ನು ಸಬರ್ಬನ್ ಪೊಲೀಸರು ಬಂಧಿಸಿದ್ದಾರೆ.

ಕಾನ್‌ಸ್ಟೆಬಲ್ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿದ್ದ ಚಿತ್ತಾಪುರ ತಾಲ್ಲೂಕಿನ ಭಾಗೋಡಿಯ ಅಂಬರೀಶ್ ಕಾಶಿನಾಥ್‌ನನ್ನು ಪತ್ತೆ ಮಾಡುವಲ್ಲಿ ಪೊಲೀಸರು ಕೊನೆಗೂ ಯಶಸ್ವಿಯಾಗಿದ್ದಾರೆ. 'ಅಂಬರೀಶ್‌ನನ್ನು ಮಹಾರಾಷ್ಟ್ರದ ಪುಣೆಯಲ್ಲಿ ಬಂಧಿಸಲಾಗಿದೆ. ನ್ಯಾಯಾಲಯವು ಆತನಿಗೆ ನ್ಯಾಯಾಂಗ ಬಂಧನ ವಿಧಿಸಿದೆ. ಆತ ಪುಣೆಯಲ್ಲಿ ಪೊಲೀಸರ ಮಾಹಿತಿದಾರನಾಗಿದ್ದ' ಎಂದು ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'2009ರಲ್ಲಿ ಅಂಬರೀಶ್ ಲಾರಿ ಚಾಲಕನ ಜತೆಗೆ ಜಗಳವಾಡಿದ್ದ. ವಿಚಾರಣೆಗಾಗಿ ಠಾಣೆಗೆ ಕರೆತರುವ ಮಾರ್ಗದಲ್ಲಿ ಕಾನ್‌ಸ್ಟೆಬಲ್ ಅಶ್ವಿನ್ ಕುಮಾರ್ ಅವರನ್ನು ಕೊಲೆ ಮಾಡಿದ್ದ. 2011ರಲ್ಲಿ ನ್ಯಾಯಾಲಯವು ಅಂಬರೀಶ್‌ಗೆ ಜೀವಾವಧಿ ಶಿಕ್ಷೆ ಹಾಗೂ ₹50 ಸಾವಿರ ದಂಡ ವಿಧಿಸಿತ್ತು. ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಕೈದಿಗಳ ಜತೆಗೆ ಗಲಾಟೆ ಮಾಡಿದ್ದರಿಂದ ಅಂಬರೀಶ್‌ನನ್ನು ವಿಜಯಪುರ ಜೈಲಿಗೆ ಸ್ಥಳಾಂತರಿಸಲಾಗಿತ್ತು' ಎಂದರು.

'2014ರಲ್ಲಿ ಅಂಬರೀಶ್ ಅನಾರೋಗ್ಯದಿಂದ ವಿಜಯಪುರ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದ. ಕಾವಲು ಸಿಬ್ಬಂದಿಯ ಕಣ್ಣು ತಪ್ಪಿಸಿ ಪರಾರಿಯಾಗಿ ತಲೆ ಮರೆಸಿಕೊಂಡಿದ್ದ. ಪುಣೆಯಲ್ಲಿ ಹೆಸರು ಬದಲಿಸಿಕೊಂಡು ಮದುವೆಯೂ ಆಗಿದ್ದ. ಪತ್ನಿಯ ಮೃತ ಸಹೋದರನ ಹೆಸರಿನ ದಾಖಲೆಗಳಿಗೆ ತನ್ನ ಫೋಟೊ ಅಂಟಿಸಿ, ಆಧಾರ್, ಮೊಬೈಲ್ ಸಿಮ್ ಪಡೆದಿದ್ದ. ತನ್ನ ಗೋಪ್ಯತೆ ಕಾಪಾಡಿಕೊಳ್ಳಲು ಪೊಲೀಸರ ಮಾಹಿತಿದಾರನಾಗಿದ್ದ' ಎಂದು ವಿವರಿಸಿದರು.

ಮಹಾಕುಂಭ ಮೇಳಕ್ಕೆ ತೆರಳಿದ್ದ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಾಕುಂಭ ಮೇಳದಲ್ಲಿ ಪಾಲ್ಗೊಂಡು ಕುಟುಂಬ ಸದಸ್ಯರ ಜೊತೆಗೆ ಮರಳುತ್ತಿದ್ದ ಬೆಳಗಾವಿಯ ಸಾಮಾಜಿಕ ಕಾರ್ಯಕರ್ತ ಕಿರಣ ನಿಪ್ಪಾಣಿಕರ (47) ಅವರು ಗುರುವಾರ ವಾರಾಣಸಿಯಲ್ಲಿ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ.

ಕಿರಣ ನಿಪ್ಪಾಣಿಕರ

'ಕಿರಣ ಅವರಿಗೆ ಹೃದಯಾಘಾತವಾದ ತಕ್ಷಣವೇ ಆಸ್ಪತ್ರೆಗೆ ದಾಖಲಿಸಿದರೂ ಪ್ರಯೋಜನವಾಗಲಿಲ್ಲ. ಶುಕ್ರವಾರ (ಫೆ.28) ಅವರ ಮೃತದೇಹವನ್ನು ಬೆಳಗಾವಿಗೆ ತರಲಾಗುವುದು' ಎಂದು ಆಪ್ತರು ತಿಳಿಸಿದ್ದಾರೆ. 'ಫ್ಯಾಸ್ ಫೌಂಡೇಶನ್' ಸಂಘಟನೆ ಮೂಲಕ ಅವರು ಸಮಾಜ ಸೇವೆಯಲ್ಲಿ ತೊಡಗಿದ್ದರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು–2 ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052.

ಸಂಖ್ಯೆ: ಡಿಜಿಎಂ–2/ಬಿಎಸ್‌ಡಬ್ಲ್ಯೂಎಂಎಲ್/ಇಓಐ/01/2024–25 ದಿನಾಂಕ: 27–02–2025

ಆಸಕ್ತಿ ಅಭಿವ್ಯಕ್ತಿಪಡಿಸುವಿಕೆ (ಇಓಐ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1. ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಇವರು ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಆಸಕ್ತಿ ಅಭಿವ್ಯಕ್ತಿಪಡಿಸುವಿಕೆಯನ್ನು, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ, ಬೆಂಗಳೂರು ಪ್ರತಿಷ್ಠಿತ ವಿತರಕರು / ತಯಾರಕರು / ಪೂರೈಕೆದಾರರು / ವ್ಯಕ್ತಿಗಳಿಂದ ಕೆಳಗಿನ ಕೋಷ್ಟಕದಲ್ಲಿ ಸೂಚಿಸಿದಂತೆ ಈ ಕೆಳಗಿನ ಐಟಂಗಳಿಗೆ ದರಗಳನ್ನು ಉಲ್ಲೇಖಿಸಲು ಆಹ್ವಾನಿಸಿದ್ದಾರೆ.
2. ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು.
3. ಆಸಕ್ತಿ ಅಭಿವ್ಯಕ್ತಿಪಡಿಸುವಿಕೆಯನ್ನು **ದಿನಾಂಕ: 07.03.2025 ರಂದು ಸಂಜೆ 16.00 ಗಂಟೆಗೆ** ಮುಂಚಿತವಾಗಿ ಕೆಪಿಪಿ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸಬೇಕು.
4. ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.

ಕ್ರ. ಸಂ.	ಐಟಂ ಸ್ಪೆಸಿಫಿಕೇಷನ್ಸ್	ಘಟಕ	ಪ್ರಮಾಣ
1	ಸುಬ್ಬರಾಯನಪಾಳ್ಯ ತೇವ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ಪೂರ್ವನಿಸ್ಸಹ ವಿಭಾಗದ ಎಲೆಕ್ಟ್ರೋ-ಮೆಕಾನಿಕಲ್ ಉಪಕರಣಗಳ (35MM & 16 MM Trommel) ದುರಸ್ತಿ ದರಗಳು.	No's	1

ಸೂಚನೆ:

1. ಬಿಡ್‌ಅನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **10.03.2025 ರಂದು ಸಂಜೆ 16.30 ಗಂಟೆಗೆ ಉಪ ಪ್ರಧಾನ ವ್ಯವಸ್ಥಾಪಕರು–2 ಬಿಎಸ್‌ಡಬ್ಲ್ಯೂಎಂಎಲ್, ಕಚೇರಿಯಲ್ಲಿ ತೆರೆಯಲಾಗುತ್ತದೆ.**
2. ಮಹತ್ವಾಕಾಂಕ್ಷಿ ಬಿಡ್ಡರ್‌ಗಳು / ವೆಬ್‌ಸೈಟ್: **https://kppp.karnataka.gov.in** ಮೂಲಕ ಭಾಗವಹಿಸುವ ಮೊದಲು ಕೆಪಿಪಿಪಿಯಲ್ಲಿ ನೋಂದಣಿ ಮಾಡದ ಗುತ್ತಿಗೆದಾರರು ನೋಂದಣಿ ಮಾಡಿಕೊಳ್ಳಬೇಕು
3. ಆನ್‌ಲೈನ್ ಬಿಡ್‌ಗಳನ್ನು ಸಲ್ಲಿಸುವ ಮೊದಲು, ಬಿಡ್‌ನೊಂದಿಗೆ ಎಲ್ಲಾ ಅಗತ್ಯ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಲಗತ್ತಿಸಲಾಗಿದೆ ಎಂದು ಬಿಡ್‌ದಾರರು ಖಚಿತಪಡಿಸಿಕೊಳ್ಳಬೇಕು.
4. ಬಿಡ್‌ಗಳಿಗೆ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಭರ್ತಿ ಮಾಡಬೇಕು ಮತ್ತು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು.
5. ಮೇಲಿನ ಐಟಂಗಳ ವಿವರವಾದ ವಿವರಣೆಯನ್ನು ಷೆಡ್ಯೂಲ್–ಬಿನಲ್ಲಿ ಉಲ್ಲೇಖಿಸಲಾಗಿದೆ.
6. **ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ಲಿಮಿಟೆಡ್, ಬೆಂಗಳೂರು** ಯಾವುದೇ ಕಾರಣಗಳನ್ನು ನೀಡದೆ ಟೆಂಡರ್‌ಗಳನ್ನು ಸ್ವೀಕರಿಸುವ / ತಿರಸ್ಕರಿಸುವ ಹಕ್ಕನ್ನು ಹೊಂದಿದೆ.
7. ಕೊರಿಜೆಂಡಮ್‌ಗಳು / ಮಾರ್ಪಾಡುಗಳು / ತಿದ್ದುಪಡಿಗಳು, ಯಾವುದಾದರೂ ಇದ್ದರೆ, ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
8. ಕೆಲಸದ ಹೆಚ್ಚಿನ ವಿವರಗಳನ್ನು **ಉಪ ಪ್ರಧಾನ ವ್ಯವಸ್ಥಾಪಕರು–2, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು–560052** ಕಛೇರಿಯಲ್ಲಿ ಎಲ್ಲಾ ಕೆಲಸದ ದಿನಗಳಲ್ಲಿ **ಬೆಳಿಗ್ಗೆ 10:30 ಗಂಟೆಯಿಂದ ಸಂಜೆ 17:30 ಗಂಟೆಯ ಮಧ್ಯದಲ್ಲಿ ಪಡೆಯಬಹುದು.**
9. ಜಿಓಕೆ ಕೆಪಿಪಿ ಪೋರ್ಟಲ್ **http://KPPP.karnataka.gov.in** ನೋಂದಣಿ ವಿವರಗಳಿಗಾಗಿ ಸಂಪರ್ಕಿಸಿ ಕೆಪಿಪಿಪಿ ಸಹಾಯವಾಣಿ 080–22371090/22340060/22340948.

ವಾಸಾಸಂಇ/ವಾ.ಪ್ರ/5339 ಶಿರಡಿ ಸಾಯಿ/2024–25

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–2, ಬಿಎಸ್‌ಡಬ್ಲ್ಯೂಎಂಎಲ್

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು – 560009

ಸಂ: ಕಾಪಾಅ/ಪಂರಾಇಂವಿ/ಬೆಂಗ್ರಾಂ/ಟೆಂ–35/ತಾಂಶಾ/2024–25 ದಿನಾಂಕ:27.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 35/2024–25 (ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ಮೂರನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ 2024–25 ನೇ ಸಾಲಿನ ಜಿಲ್ಲಾ ಪಂಚಾಯತ್ ಕಾರ್ಯಕ್ರಮ ಲೆಕ್ಕ ಶೀರ್ಷಿಕೆ 3054 ಟಾಸ್ಕ್ ಫೋರ್ಸ್ (ರಸ್ತೆ ನಿರ್ವಹಣೆ) ಅನುದಾನದಡಿ ಅನುಮೋದನೆಗೊಂಡಿರುವ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗೆ ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: **06.03.2025 ಸಂಜೆ 5.00 ಗಂಟೆಯವರೆಗೆ** ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ ಹಾಗೂ ಟೆಂಡರ್ ವಿವರಗಳನ್ನು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ಗ್ರಾಮಾಂತರ, ಬೆಂಗಳೂರು

DIPR/CP/5337/2024-25

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–01.
ದೂರವಾಣಿ ಸಂಖ್ಯೆ: 080–22133370 ಇ–ಮೇಲ್:eepwdbngdn@yahoo.com www.kpwd.gov.in

ಸಂಖ್ಯೆ:ಕಾನಿಇಂ/ಲೋಇ/ಬೆಂವಿ/2024–25/4240 ದಿನಾಂಕ:25.02.2025

ಟೆಂಡರ್ ಪ್ರಕಟಣೆ ಸಂಖ್ಯೆ:44

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ನಂ.01 ದಕ್ಷಿಣ, ನೆಲಮಂಗಲ & ಆನೇಕಲ್ ಉಪವಿಭಾಗಕ್ಕೆ** ಸಂಬಂಧಿಸಿದಂತೆ 05 ಸಂಖ್ಯೆಯ (ರೂ. 7.60 ರಿಂದ 100.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಚೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

ಕಾಮಗಾರಿಯ **ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸೆಸಿಂಗ್ ಶುಲ್ಕವನ್ನು ಕೆಪಿಪಿ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.**

ಕ್ರಸಂ. 01 ರಿಂದ 02
1. ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 05.03.2025 ಸಂಜೆ 4.00 ಗಂಟೆ** ಯವರೆಗೆ.
2. ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 06.03.2025 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಕ್ರಸಂ–03 ರಿಂದ 05ಕ್ಕೆ
1. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 14.03.2025 ಸಂಜೆ 4.00 ಗಂಟೆ** ಯವರೆಗೆ.
2. ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 15.03.2025 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.

ಹೆಚ್ಚಿನ ವಿವರಗಳಿಗಾಗಿ ಈ ಕಚೇರಿಯನ್ನು ಸಂಪರ್ಕಿಸುವುದು.

ವಾಸಸಂಇ/ಸಿಪಿ/ಎಎಎ/5317/2024–25

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋ.ಇ, ಬೆಂಗಳೂರು ವಿಭಾಗ, ಬೆಂಗಳೂರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರು–2 ರವರ ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052.

ಸಂಖ್ಯೆ: ಡಿಜಿಎಂ–2/ಬಿಎಸ್‌ಡಬ್ಲ್ಯೂಎಂಎಲ್/ಇಓಐ/02/2024–25 ದಿನಾಂಕ: 27–02–2025

ಆಸಕ್ತಿ ಅಭಿವ್ಯಕ್ತಿಪಡಿಸುವಿಕೆ (ಇಓಐ) (ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1. ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಇವರು ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಆಸಕ್ತಿ ಅಭಿವ್ಯಕ್ತಿಪಡಿಸುವಿಕೆಯನ್ನು, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ, ಬೆಂಗಳೂರು ಪ್ರತಿಷ್ಠಿತ ವಿತರಕರು / ತಯಾರಕರು / ಪೂರೈಕೆದಾರರು / ವ್ಯಕ್ತಿಗಳಿಂದ ಕೆಳಗಿನ ಕೋಷ್ಟಕದಲ್ಲಿ ಸೂಚಿಸಿದಂತೆ ಈ ಕೆಳಗಿನ ಐಟಂಗಳಿಗೆ ದರಗಳನ್ನು ಉಲ್ಲೇಖಿಸಲು ಆಹ್ವಾನಿಸಿದ್ದಾರೆ.
2. ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು.
3. ಆಸಕ್ತಿ ಅಭಿವ್ಯಕ್ತಿಪಡಿಸುವಿಕೆಯನ್ನು **ದಿನಾಂಕ: 07.03.2025 ರಂದು ಸಂಜೆ 16.00 ಗಂಟೆಗೆ** ಮುಂಚಿತವಾಗಿ ಕೆಪಿಪಿ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸಬೇಕು.
4. ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.

ಕ್ರ. ಸಂ.	ಐಟಂ ಸ್ಪೆಸಿಫಿಕೇಷನ್ಸ್	ಘಟಕ	ಪ್ರಮಾಣ
1	6 ವೀಲರ್ ಟಿಪ್ಪರ್	ಸಂಖ್ಯೆಗಳು	4
2	ಟ್ರ್ಯಾಕ್ಟರ್	ಸಂಖ್ಯೆಗಳು	3
3	ಟಾಟಾ ಹಿಟಾಚಿ ಅಗೆಯುವ ಯಂತ್ರ ಎಸ್–200	ಸಂಖ್ಯೆಗಳು	1
4	ಫ್ರಂಟ್ ಎಂಡ್ ಲೋಡರ್	ಸಂಖ್ಯೆಗಳು	2
5	ಬ್ಯಾಕ್‌ಹೋ ಲೋಡರ್	ಸಂಖ್ಯೆಗಳು	1
6	ವೀಲ್ ಲೋಡರ್	ಸಂಖ್ಯೆಗಳು	1
7	ಹುಕ್ ಲೋಡರ್ ಟಿಪ್ಪರ್	ಸಂಖ್ಯೆಗಳು	1

ಸೂಚನೆ:

1. ಬಿಡ್‌ಅನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **10.03.2025 ರಂದು ಸಂಜೆ 16.30 ಗಂಟೆಗೆ ಉಪ ಪ್ರಧಾನ ವ್ಯವಸ್ಥಾಪಕರು–2 ಬಿಎಸ್‌ಡಬ್ಲ್ಯೂಎಂಎಲ್, ಕಚೇರಿಯಲ್ಲಿ ತೆರೆಯಲಾಗುತ್ತದೆ.**
2. ಮಹತ್ವಾಕಾಂಕ್ಷಿ ಬಿಡ್ಡರ್‌ಗಳು / ವೆಬ್‌ಸೈಟ್: **https://kppp.karnataka.gov.in** ಮೂಲಕ ಭಾಗವಹಿಸುವ ಮೊದಲು ಕೆಪಿಪಿಪಿಯಲ್ಲಿ ನೋಂದಣಿ ಮಾಡದ ಗುತ್ತಿಗೆದಾರರು ನೋಂದಣಿ ಮಾಡಿಕೊಳ್ಳಬೇಕು
3. ಆನ್‌ಲೈನ್ ಬಿಡ್‌ಗಳನ್ನು ಸಲ್ಲಿಸುವ ಮೊದಲು, ಬಿಡ್‌ನೊಂದಿಗೆ ಎಲ್ಲಾ ಅಗತ್ಯ ದಾಖಲೆಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಲಗತ್ತಿಸಲಾಗಿದೆ ಎಂದು ಬಿಡ್‌ದಾರರು ಖಚಿತಪಡಿಸಿಕೊಳ್ಳಬೇಕು.
4. ಬಿಡ್‌ಗಳಿಗೆ ಅಗತ್ಯವಿರುವ ಎಲ್ಲಾ ಮಾಹಿತಿಯನ್ನು ಭರ್ತಿ ಮಾಡಬೇಕು ಮತ್ತು ಆನ್‌ಲೈನ್‌ನಲ್ಲಿ ಸಲ್ಲಿಸಬೇಕು.
5. ಮೇಲಿನ ಐಟಂಗಳ ವಿವರವಾದ ವಿವರಣೆಯನ್ನು ಷೆಡ್ಯೂಲ್–ಬಿನಲ್ಲಿ ಉಲ್ಲೇಖಿಸಲಾಗಿದೆ.
6. **ಬೆಂಗಳೂರು ಘನ ತ್ಯಾಜ್ಯ ನಿರ್ವಹಣಾ ಲಿಮಿಟೆಡ್, ಬೆಂಗಳೂರು** ಯಾವುದೇ ಕಾರಣಗಳನ್ನು ನೀಡದೆ ಟೆಂಡರ್‌ಗಳನ್ನು ಸ್ವೀಕರಿಸುವ / ತಿರಸ್ಕರಿಸುವ ಹಕ್ಕನ್ನು ಹೊಂದಿದೆ.
7. ಕೊರಿಜೆಂಡಮ್‌ಗಳು / ಮಾರ್ಪಾಡುಗಳು / ತಿದ್ದುಪಡಿಗಳು, ಯಾವುದಾದರೂ ಇದ್ದರೆ, ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
8. ಕೆಲಸದ ಹೆಚ್ಚಿನ ವಿವರಗಳನ್ನು **ಉಪ ಪ್ರಧಾನ ವ್ಯವಸ್ಥಾಪಕರು–2, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು–560052** ಕಛೇರಿಯಲ್ಲಿ ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ 10:30 ಗಂಟೆಯಿಂದ ಸಂಜೆ 17:30 ಗಂಟೆಯ ಮಧ್ಯದಲ್ಲಿ ಪಡೆಯಬಹುದು.
9. ಜಿಓಕೆ ಕೆಪಿಪಿ ಪೋರ್ಟಲ್ **http://KPPP.karnataka.gov.in** ನೋಂದಣಿ ವಿವರಗಳಿಗಾಗಿ ಸಂಪರ್ಕಿಸಿ ಕೆಪಿಪಿಪಿ ಸಹಾಯವಾಣಿ 080–22371090/22340060/22340948.

ವಾಸಾಸಂಇ/ವಾ.ಪ್ರ/ಶಿರಡಿ ಸಾಯಿ/5340/2024–25

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–2, ಬಿಎಸ್‌ಡಬ್ಲ್ಯೂಎಂಎಲ್

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಚಾವಿಸನಿನಿ, ಮೈಸೂರು–570017
Telephone No: 0821-2343384

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, CESC, Mysore-570017
Web Site: www.cescmysore.org
E-Mail: gmhrd@cescmysore.org

Company Identity Number[CIN]:- U40109KA2004SGC035177

ಸಂಖ್ಯೆ: ಚಾವಿಸನಿನಿ/ಆ ಮತ್ತು ಮಾಸಂ/02/ಕಿ.ಪ.ನೇ–1/2024–25/30850 ದಿನಾಂಕ: 25.02.2025

ಅಧಿಸೂಚನೆ

ವಿಷಯ : ಚಾವಿಸನಿನಿಯಲ್ಲಿ ಕಿರಿಯ ಪವರ್‌ಮ್ಯಾನ್ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ, ದಾಖಲಾತಿಗಳ ಪರಿಶೀಲನೆಗಾಗಿ ಅರ್ಹ ಅಭ್ಯರ್ಥಿಗಳ ಪಟ್ಟಿಗಳನ್ನು ಪ್ರಕಟಿಸುವ ಹಾಗೂ ದಾಖಲಾತಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಬಗ್ಗೆ.

ಉಲ್ಲೇಖ : ಉದ್ಯೋಗ ಪ್ರಕಟಣೆ ಸಂಖ್ಯೆ: ಕವಿಪ್ರನಿನಿ/ಬಿ16/44953/2023–24(NKK) ದಿನಾಂಕ: 14.10.2024.

****

ಉದ್ಯೋಗ ಪ್ರಕಟಣೆ ಸಂಖ್ಯೆ ಕವಿಪ್ರನಿನಿ/ಬಿ16/44953/2023–24(NKK) ದಿನಾಂಕ:14.10.2024ಕ್ಕೆ ಅನುಗುಣವಾಗಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದಲ್ಲಿ ಕಿರಿಯ ಪವರ್‌ಮ್ಯಾನ್ ಹುದ್ದೆಗಳಿಗೆ ಸೂಚಿತ ರಿಕ್ತ ಸ್ಥಾನಗಳ 1:5 ರ ಅನುಪಾತದಲ್ಲಿ ಹುದ್ದೆವಾರು ಅರ್ಹ ಅಭ್ಯರ್ಥಿಗಳ ಪಟ್ಟಿಗಳನ್ನು, ಕಟ್–ಆಫ್ ಅಂಕಗಳೊಂದಿಗೆ ಚಾವಿಸನಿನಿ ವೆಬ್‌ಸೈಟ್ https://cescmysore.karnataka.gov.in/ ರಲ್ಲಿ ಪ್ರಕಟಿಸಲಾಗಿದೆ. **ಸದರಿ ಪಟ್ಟಿಗಳು ಆಯ್ಕೆ ಪಟ್ಟಿಯಾಗಿರುವುದಿಲ್ಲ ಹಾಗೂ ಆನ್–ಲೈನ್ ಅರ್ಜಿಯಲ್ಲಿ ಅಭ್ಯರ್ಥಿಗಳು ತಿಳಿಸಿರುವ ಮಾಹಿತಿಯ ಅನುಗುಣವಾಗಿ ಪ್ರಕಟಿಸಲಾಗಿದೆ.**

ಸರ್ಕಾರದ Digilocker ತಂತ್ರಾಂಶವನ್ನು ಬಳಸಿಕೊಂಡು ಆನ್‌ಲೈನ್ ಮೂಲಕ ದಾಖಲಾತಿಗಳ ಪರಿಶೀಲನೆಯನ್ನು ನಡೆಸಲು ಉದ್ದೇಶಿಸಲಾಗಿದೆ. ಈ ಸಂಬಂಧವಾಗಿ 1:5ರ ಅನುಪಾತದ ಪಟ್ಟಿಯಲ್ಲಿ ಸೇರಿರುವ ಅಭ್ಯರ್ಥಿಗಳು, ಈ ಕೆಳಗೆ ತಿಳಿಸಿರುವಂತೆ ಸೂಕ್ತ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಂಡು, ದಾಖಲಾತಿಗಳನ್ನು ಕಂಪನಿಯ website ನಲ್ಲಿ ಸೂಕ್ತ ರೀತಿಯಲ್ಲಿ upload ಮಾಡುವಂತೆ ತಿಳಿಸಲಾಗಿದೆ.

1. ದಾಖಲಾತಿ ಪರಿಶೀಲನೆ ಪಟ್ಟಿಯಲ್ಲಿ ಸೇರಿರುವಂತಹ ಎಲ್ಲಾ ಅಭ್ಯರ್ಥಿಗಳು ಮೊದಲಿಗೆ Digilocker ತಂತ್ರಾಂಶದಲ್ಲಿ Register ಮಾಡಿಕೊಂಡು, ತಮ್ಮ ಆಧಾರ್ ಸಂಖ್ಯೆಯೊಂದಿಗೆ Login ಆಗಿ, 10ನೇ ತರಗತಿ, ಜಾತಿ ಪ್ರಮಾಣ ಪತ್ರ, UDID Card ಪ್ರಮಾಣ ಪತ್ರಗಳನ್ನು Issued documents ನಲ್ಲಿ ಪಡೆಯತಕ್ಕದ್ದು (Digilocker ತಂತ್ರಾಂಶದಲ್ಲಿ Register ಮಾಡಿಕೊಂಡು ದಾಖಲಾತಿಗಳನ್ನು Issued documents ನಲ್ಲಿ ಪಡೆಯುವ ವಿಧಾನವನ್ನು ವೆಬ್‌ಸೈಟ್ ನಲ್ಲಿ ತಿಳಿಸಲಾಗಿದೆ).
2. 1:5ರ ಅನುಪಾತದ ಪಟ್ಟಿಯಲ್ಲಿ ಸೇರಿರುವ ಅಭ್ಯರ್ಥಿಗಳು, ಆನ್–ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಕಾರಣಾಂತರಗಳಿಂದ ಭಾವಚಿತ್ರ/ಸಹಿ ತಪ್ಪಾಗಿ ನಮೂದಾಗಿದಲ್ಲಿ, document upload module ನಲ್ಲಿ login ಮಾಡಿದ ಕೂಡಲೇ "ನೀವು ಆನ್ ಲೈನ್ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ತಮ್ಮ ಭಾವಚಿತ್ರ ಮತ್ತು ಸಹಿ ಅಪ್‌ಲೋಡ್ ಮಾಡುವಲ್ಲಿ ಯಾವುದೇ ವ್ಯತ್ಯಾಸ ಉಂಟಾಗಿದೆಯೇ?" ಎಂಬುವುದಕ್ಕೆ "ಹೌದು" ಎಂಬ ಗುಂಡಿಯನ್ನು ಒತ್ತಿ, ತಮ್ಮ ಸರಿಯಾದ ಭಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡತಕ್ಕದ್ದು.
3. 1:5ರ ಅನುಪಾತದ ಪಟ್ಟಿಯಲ್ಲಿ ಸೇರಿರುವ ಅಭ್ಯರ್ಥಿಗಳು, ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ e-sign ಪ್ರಕ್ರಿಯೆ ಪೂರ್ಣಗೊಳಿಸದೇ ಇದ್ದಲ್ಲಿ, document upload module ನಲ್ಲಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವ ಮುನ್ನ ತಮ್ಮ ಆಧಾರ್ ಸಂಖ್ಯೆಯೊಂದಿಗೆ e-sign ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು.
4. Digilockerನ Issued documentsನಲ್ಲಿ ದಾಖಲಾತಿಗಳನ್ನು fetch ಮಾಡಿಕೊಂಡ ನಂತರ, ಚಾವಿಸನಿನಿ ವೆಬ್‌ಸೈಟ್‌ಗೆ ಭೇಟಿ ನೀಡಿ ಅಭ್ಯರ್ಥಿಗಳು ದಾಖಲಾತಿ ಅಪ್‌ಲೋಡ್ ಮಾಡುವ ಸಲುವಾಗಿ ತಿಳಿಸಿರುವ ಲಿಂಕ್ ಅನ್ನು ಒತ್ತಿ, ವೆಬ್‌ಸೈಟ್‌ನಲ್ಲಿ ತಿಳಿಸಿರುವ ಮಾರ್ಗಸೂಚಿಯನ್ನು ಪಾಲಿಸುವುದರೊಂದಿಗೆ, ಅರ್ಜಿಯಲ್ಲಿ ಕೋರಿರುವ ಮೀಸಲಾತಿಗಳಿಗೆ ಅನುಗುಣವಾಗಿ, ದಾಖಲಾತಿಗಳನ್ನು ಸಲ್ಲಿಸುವುದು (Document upload ಮಾಡುವ ವಿಧಾನವನ್ನು ಮತ್ತು ನಮೂನೆಗಳನ್ನು ವೆಬ್‌ಸೈಟ್ ನಲ್ಲಿ ತಿಳಿಸಲಾಗಿದೆ).
5. Digilocker ತಂತ್ರಾಂಶದಲ್ಲಿ ಲಭ್ಯವಿಲ್ಲದೇ ಇರುವಂತಹ ದಾಖಲೆಗಳನ್ನು ಅಭ್ಯರ್ಥಿಗಳು 500 KB ಮೀರದಂತಹ pdf document ಗಳಾಗಿ ಸ್ಕ್ಯಾನ್ ಮಾಡಿಕೊಂಡು ತಂತ್ರಾಂಶದ Document Upload ವಿಭಾಗದಲ್ಲಿ ಸಂಬಂಧಪಟ್ಟ ಮೀಸಲಾತಿ ಮುಂದೆ ಅಪ್‌ಲೋಡ್ ಮಾಡುವುದು.
6. ಅಭ್ಯರ್ಥಿಗಳು ಎಲ್ಲಾ ದಾಖಲಾತಿಗಳನ್ನು ಅಪ್–ಲೋಡ್ ಮಾಡಿದ ನಂತರ, ತಮ್ಮ ಆಧಾರ್ ಸಂಖ್ಯೆಯೊಂದಿಗೆ e-sign ಮಾಡುವುದು. e-sign ಮಾಡುವ ಮುನ್ನ, ತಾವು ಎಲ್ಲಾ ದಾಖಲಾತಿಗಳನ್ನು ನಿಗಧಿತ ನಮೂನೆಗಳಲ್ಲಿ ಅಪ್–ಲೋಡ್ ಮಾಡಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು ಹಾಗೂ ಅದರ ಒಂದು ಮುದ್ರಿತ ಪ್ರತಿಯನ್ನು/ soft-copy ಪಡೆದಿಟ್ಟುಕೊಳ್ಳತಕ್ಕದ್ದು.

ಮುಂದುವರೆದು, ದಾಖಲಾತಿಗಳ ಪರಿಶೀಲನೆಗಾಗಿ, ಎಲ್ಲಾ ಅವಶ್ಯಕ ಮಾಹಿತಿಯನ್ನು ಚಾವಿಸನಿನಿ ವೆಬ್‌ಸೈಟ್ https://cescmysore.karnataka.gov.in/ ನಲ್ಲಿ ಪಡೆಯತಕ್ಕದ್ದು. ದಾಖಲಾತಿ ಅಪ್‌ಲೋಡ್ ಮಾಡಲು ಅಭ್ಯರ್ಥಿಗಳಿಗೆ ಚಾವಿಸನಿನಿ ವೆಬ್‌ಸೈಟ್ https://cescmysore.karnataka.gov.in/ ರಲ್ಲಿ ದಿನಾಂಕ: 27.02.2025 ರಿಂದ 10.03.2025 ರವರೆಗೆ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ದಿನಾಂಕ: 10.03.2025 ರ ನಂತರ ದಾಖಲಾತಿ ಅಪ್‌ಲೋಡ್ ಮಾಡಲು ಅಭ್ಯರ್ಥಿಗಳಿಗೆ ಯಾವುದೇ ರೀತಿಯಲ್ಲಿ ಅವಕಾಶವನ್ನು ನೀಡಲಾಗುವುದಿಲ್ಲ. ನಿಗಧಿತ ಕಾಲಾವಧಿಯೊಳಗೆ ದಾಖಲಾತಿಗಳನ್ನು ಅಪ್‌ಲೋಡ್ ಮಾಡದ ಅಭ್ಯರ್ಥಿಗಳನ್ನು ಗೈರುಹಾಜರೆಂದು ಪರಿಗಣಿಸಿ, ಇವರಿಗೆ ನೇಮಕಾತಿಗೆ ಯಾವುದೇ ಆಸಕ್ತಿಯಿಲ್ಲವೆಂದು ಭಾವಿಸಿ, ನೇಮಕಾತಿ ಪ್ರಕ್ರಿಯೆಯಿಂದ ಅನರ್ಹಗೊಳಿಸಲಾಗುವುದು.

ಪೂರ್ಣಪ್ರಮಾಣದ ದಾಖಲಾತಿಗಳನ್ನು ಸಲ್ಲಿಸುವ ಅಭ್ಯರ್ಥಿಗಳನ್ನು ಮಾತ್ರ ಸಹನಾ ಶಕ್ತಿ ಪರೀಕ್ಷೆಗೆ ಪರಿಗಣಿಸಲಾಗುವುದು. ಸಹನಾ ಶಕ್ತಿ ಪರೀಕ್ಷೆಗೆ ಸಂಬಧಿಸಿದಂತೆ, ಪ್ರತ್ಯೇಕ ಅಧಿಸೂಚನೆ ಮತ್ತು ಮಾರ್ಗಸೂಚಿಗಳನ್ನು ನಂತರದ ದಿನಗಳಲ್ಲಿ ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ ಮತ್ತು ಮಾ.ಸಂ.), ಚಾವಿಸನಿನಿ, ಮೈಸೂರು

DIPR/DDMYS/1360/KSMCA//2024-25

ಮಹಾನಗರ ಪಾಲಿಕೆ, ವಿಜಯಪುರ

ಸಂ:ಮನಪಾ/ಲೋ.ವಿ/ಕಾಅ/ಡಿಎಮ್‌ಎ/ಟಿಎನ್‌ಡಿ/ಇಪ್ರೋ–/2024–25
ದಿನಾಂಕ:25.02.2025

ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ **ಸನ್ 2024–25 ನೇ ಸಾಲಿನ ಮಹಾನಗರ ಪಾಲಿಕೆಯ ಅನುದಾನದಲ್ಲಿನ 06 ಕಾಮಗಾರಿಗಳು ಮತ್ತು ಸ್ವಚ್ಛ ಭಾರತ ಮಿಷನ್ (ನಗರ) 2.0 ರ ಅನುದಾನ (02) ಕಾಮಗಾರಿಗಳು, ಸನ್ 2024–25 ನೇ ಸಾಲಿನ ಪಾಲಿಕೆ ಸಾಮಾನ್ಯ ನಿಧಿಯಡಿ ಶೇ.24.10, ಶೇ. 7.25 ಹಾಗೂ ಶೇ. 5 ರ ಯೋಜನೆಯಲ್ಲಿ (01) ಕಾಮಗಾರಿ ಟೆಂಡರ್ ಕರೆಯಲು ಅನುಮೋದನೆಗಾಗಿ ಸಲ್ಲಿಸಿದೆ.** ಕಾಮಗಾರಿಗಳ ವಿವರ ಕೆಳಗಿನಂತಿವೆ. ಕೆ.ಪಿ.ಡಬ್ಲ್ಯೂಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೋಕ್ಯೂರಮೆಂಟ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್‌ಸೈಟ್ (**https://kppp.karnataka.gov.in**) ನಲ್ಲಿ ಪ್ರಕಟಿಸಲಾಗಿದೆ.

ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 17–03–2025**

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/730/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ (ವಾಣಿಜ್ಯ ತೆರಿಗೆ ಇಲಾಖೆ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಮಲೆನಾಡು ವಿಭಾಗ, ವಾಣಿಜ್ಯ ತೆರಿಗೆ ಭವನ, 60 ಅಡಿ ರಸ್ತೆ, ಗೋಪಾಲಗೌಡ ಬಡಾವಣೆ, ಶಿವಮೊಗ್ಗ–577205
Ph: 08182–258707 / 258708 email: jcctdvosmg@gmai.com

ಸಂ:ವಾತೆಜಂಆ(ಆ):ಮವಿ:ಶಿ:ವಾತೆಪ–1:ಸಿಆರ್–20:24–25 ದಿನಾಂಕ;25.02.2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಮಲೆನಾಡು ವಿಭಾಗ, ಶಿವಮೊಗ್ಗ, ಕಚೇರಿ ಹಾಗೂ ವಿಭಾಗದ ಅಧೀನ ಕಛೇರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ 60 ಸಂಖ್ಯೆಯ ದತ್ತಾಂಶ ನಮೂದಕರನ್ನು ಒದಗಿಸಲು ಅರ್ಹ ಏಜೆನ್ಸಿಗಳಿಂದ ಪ್ರತ್ಯೇಕವಾಗಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಆಹ್ವಾನಿಸುವುದಕ್ಕಾಗಿ ಪ್ರಕಟಣೆಯನ್ನು ನೀಡಲಾಗಿರುತ್ತದೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ:13–03–2025 ಅಪರಾಹ್ನ 5.30 ಗಂಟೆ. ಟೆಂಡರ್ ದಸ್ತಾವೇಜುಗಳನ್ನು website http://eproc.karnataka.gov.in ಮೂಲಕ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೆಳ ಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.,

ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ).
ಡಿ.ಜಿ.ಎಸ್.ಟಿ., ಮಲೆನಾಡು ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/24–25/199/02/1755

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪರು–2 ರವರ ಕಛೇರಿ, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052.

ಸಂಖ್ಯೆ: ಡಿಜಿಎಂ–2/ಬಿಎಸ್‌ಡಬ್ಲ್ಯೂಎಂಎಲ್/ಇಓಐ/03/2024–25 ದಿನಾಂಕ: 27–02–2025

ಆಸಕ್ತಿ ಅಭಿವ್ಯಕ್ತಿಪಡಿಸುವಿಕೆಗಾಗಿ ಆಹ್ವಾನ (ಇಓಐ)
(ಜಿಓಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಉಪ ಪ್ರಧಾನ ವ್ಯವಸ್ಥಾಪಕ–2, ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ಲಿಮಿಟೆಡ್, ವ್ಯವಸ್ಥಾಪಕ ನಿರ್ದೇಶಕರ ಪರವಾಗಿ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ, ಬೆಂಗಳೂರು ಇವರು ದರಗಳನ್ನು ಉಲ್ಲೇಖಿಸಲು ಹೆಸರಾಂತ ವಿತರಕರು / ತಯಾರಕರು / ಪೂರೈಕೆದಾರರು / ವ್ಯಕ್ತಿಗಳಿಂದ ಆಸಕ್ತಿ ಅಭಿವ್ಯಕ್ತಪಡಿಸುವಿಕೆಯನ್ನು "ಲಿಂಗಧೀರನಹಳ್ಳಿ ಸ್ಥಾವರದಲ್ಲಿರುವ 150 ಟಿಪಿಡಿ ಯ ತೇವ ತ್ಯಾಜ್ಯ ಸಂಸ್ಕರಣಾ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆಗೆ ದರಗಳ" ಕಾಮಗಾರಿಗಾಗಿ ಐಟಂಗಳ ದರಗಳನ್ನು ಉಲ್ಲೇಖಿಸಲು ಕೆಪಿಪಿ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾದ ಟೆಂಡರ್ ದಾಖಲೆಗಳನ್ನು ಷೆಡ್ಯೂಲ್–ಬಿ ಯಲ್ಲಿ ಉಲ್ಲೇಖಿಸಲಾಗಿದೆ. ಟೆಂಡರ್‌ದಾರರು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಆಸಕ್ತಿ ಅಭಿವ್ಯಕ್ತಪಡಿಸುವಿಕೆಯನ್ನು ಸಲ್ಲಿಸಬಹುದು (ಅಂದರೆ **https://kppp.karnataka.gov.in**). ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು. ಅಗತ್ಯ ಮಾಹಿತಿಯೊಂದಿಗೆ ಅರ್ಹತಾ ದಾಖಲೆಗಳು / **ದಿನಾಂಕ: 07–03–2025 ರಂದು ಅಥವಾ ಸಂಜೆ 16:00 ಗಂಟೆಗೆ** ಮುಂಚಿತವಾಗಿ ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಕೆಪಿಪಿ ಪೋರ್ಟಲ್ **https://kppp.karnataka.gov.in** ನಲ್ಲಿ ದಾಖಲೆಗಳನ್ನು ಅಪ್‌ಲೋಡ್ ಮಾಡಬೇಕು. ಬಿಡ್ ಅನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ: 10–03–2025 ರಂದು ಸಂಜೆ 16.30 ಗಂಟೆಗೆ ಉಪ ಪ್ರಧಾನ ವ್ಯವಸ್ಥಾಪಕ–2** ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ಕಚೇರಿಯಲ್ಲಿ ತೆರೆಯಲಾಗುತ್ತದೆ. ಯಾವುದೇ ಕೊರಿಜೆಂಡಮ್ / ಅಡೆಂಡಮ್ ಅನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ವಾಸಾಸಂಇ/ವಾ.ಪ್ರ/5338/ ಶಿರಡಿ ಸಾಯಿ/2024–25

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–2, ಬಿಎಸ್‌ಡಬ್ಲ್ಯೂಎಂಎಲ್

ಕರ್ನಾಟಕ ಸರ್ಕಾರ — ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.

ಪ್ರಕಟಣೆ ಸಂ: ಐಎಫ್‌ಟಿ–30/ಜೆಇ/2024–25/3384 ದಿನಾಂಕ:– 24.02.2025

ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ

ವಿಷಯ: ಟೆಂಡರ್ ಅವಧಿ ವಿಸ್ತರಣೆ ಪ್ರಕಟಣೆ ಮಾಡುವ ಬಗ್ಗೆ.
ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ಲೋಇ/ದಾವಿ/ಐ.ಎಫ್.ಟಿ–30/ಜೆಇ/2024–25 ದಿನಾಂಕ: 19.02.2025.

ಈ ಕಚೇರಿ ಪ್ರಕಟಣೆ ಸಂಖ್ಯೆ: ಐಎಫ್‌ಟಿ–30/2024–25 ದಿನಾಂಕ : 19.02.2025ರ ಪ್ರಕಟಣೆಯಲ್ಲಿನ ಕ್ರಸಂ. 3ರ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗೆ ಸಂಬಂಧಿಸಿದಂತೆ ದಿನಾಂಕಗಳನ್ನು ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ಮುಂದೂಡಲಾಗಿದೆ.

(1) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗಧಿಪಡಿಸಿದ ದಿನಾಂಕ : 28.02.2025 ಸಂಜೆ 4.00 ಗಂಟೆಯವರೆಗೆ (2) ಪ್ರಿಬಿಡ್ ಮೀಟಿಂಗ್ ಸ್ಥಳ : ಕಾರ್ಯಪಾಲಕ ಇಂಜಿನಿಯರ್, ಲೋಇ ವಿಭಾಗ, ಪಿ.ಬಿ ರಸ್ತೆ, 27.02.2025 ಬೆಳಿಗ್ಗೆ 11.00 ಗಂಟೆಗೆ (3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 07.03.2025 ಸಂಜೆ 4.00 ಗಂಟೆಯವರೆಗೆ (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 10.03.2025 ಸಂಜೆ 4.30 ಗಂಟೆಯವರೆಗೆ (5) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 13.03.2025 ಸಂಜೆ 4.30 ಗಂಟೆಯವರೆಗೆ

ಉಳಿದಂತೆ ಟೆಂಡರ್ ಪ್ರಕ್ರಿಯೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿವಿಜಿ/791/ ಕೆಎಸ್‌ಎಂಸಿಎ/2024–25

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ

Karnataka One State. Many worlds

(ಕರ್ನಾಟಕ ಸರ್ಕಾರದ ಒಂದು ಅಂಗ ಸಂಸ್ಥೆ)
ಕಾರ್ಯನಿರ್ವಾಹಕ ಕಛೇರಿ, ನೆಲಮಹಡಿ, ಬಿ.ಎಂ.ಟಿ.ಸಿ, ಟಿ.ಟಿ.ಎಂ.ಸಿ ಬಸ್ ನಿಲ್ದಾಣ, ಯಶವಂತಪುರ ವೃತ್ತ, ಬೆಂಗಳೂರು–560022.
ದೂರವಾಣಿ: 080–43344334 ಫ್ಯಾಕ್ಸ್: (080) 43344376, ವೆಬ್‌ಸೈಟ್: www.kstdc.co

ಸಂ: ಕರಾಪ್ರಅನಿ/ಪ್ರೊ/02/2024–25 ದಿನಾಂಕ: 27.02.2025

ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ನಿರ್ವಹಿಸಲಾಗುತ್ತಿರುವ ಹೋಟೆಲ್ ಘಟಕಗಳಿಗೆ ಅವಶ್ಯಕವಿರುವ ದಿನಸಿ ಆಹಾರೋತ್ಪನ್ನ ಮತ್ತು ಇತರೆ ಸರಕು ಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ/ಆಸಕ್ತ ಸೇವಾ ಪೂರೈಕೆದಾರರನ್ನು ಆಯ್ಕೆ ಮಾಡುವ ಕುರಿತು ಟೆಂಡರನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

ಟೆಂಡರ್ ಸಂಖ್ಯೆ: KSTDC/2024-25/IND0030. ವಿವರಣೆ: ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಿಂದ ನಿರ್ವಹಿಸಲಾಗುತ್ತಿರುವ ಹೋಟೆಲ್ ಘಟಕಗಳಿಗೆ ಅವಶ್ಯಕವಿರುವ ದಿನಸಿ ಆಹಾರೋತ್ಪನ್ನ ಮತ್ತು ಇತರೆ ಸರಕು ಸಾಮಗ್ರಿಗಳನ್ನು ಸರಬರಾಜು ಮಾಡಲು ಅರ್ಹ/ಆಸಕ್ತ ಸೇವಾ ಪೂರೈಕೆದಾರರನ್ನು ಆಯ್ಕೆ ಮಾಡುವ ಕುರಿತು. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **17.03.2025, 16.00 ಗಂಟೆ.**

ಆಸಕ್ತ/ಅರ್ಹ ಸೇವಾ ಪೂರೈಕೆದಾರರು ಟೆಂಡರ್ ದಾಖಲೆಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಜಾಲತಾಣ **https://kppp.karnataka.gov.in**ಗೆ ಭೇಟಿ ನೀಡಲು ಕೋರಿದೆ ಹಾಗೂ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **+91 8023010900/01** ಇ–ಮೇಲ್: **hphelpdesk.blr@intarvo.com** ನ್ನು ಸಂಪರ್ಕಿಸುವುದು.

ಸಹಿ/– ಪ್ರಧಾನ ವ್ಯವಸ್ಥಾಪಕರು (ಆಡಳಿತ), ಕ.ರಾ.ಪ್ರ.ಅ.ನಿ.ನಿಯಮಿತ.

ಕೆಂಡ ಹಾಯ್ದು ಹಿಂದಿರುಗಿ ನೋಡಿದಂತೆ...

• ಸಂಧ್ಯಾ ಹೆಗಡೆ

'ಬೂಕರ್' ಇದು ವಿಶ್ವದ ಮೇರು ಸಾಹಿತ್ಯ ಪ್ರಶಸ್ತಿ. ಇಡೀ ಸಾಹಿತ್ಯ ಲೋಕವೇ ಕುತೂಹಲದಿಂದ ನಿರೀಕ್ಷಿಸುವ 'ಬೂಕರ್' ಪ್ರಶಸ್ತಿಯ ಅಂತಿಮ ಪಟ್ಟಿಯಲ್ಲಿ ಈ ಬಾರಿ, ಕನ್ನಡ ಸಾಹಿತಿ ಹಾಸನದ ಬಾನು ಮುಷ್ತಾಕ್ ಅವರ ಸಣ್ಣಕಥೆಗಳ ಅನುವಾದಿತ ಕೃತಿ 'ಹಾರ್ಟ್ ಲ್ಯಾಂಪ್' ಆಯ್ಕೆಯಾಗಿರುವುದು ಕನ್ನಡ ಸಾರಸ್ವತ ಪ್ರಪಂಚದಲ್ಲಿ ಮಿಂಚು ಹರಿಸಿದೆ. ಬಾನು ಅವರ ಆಯ್ದ + ಕಥೆಗಳನ್ನು ದೀಪಾ ಭಸ್ತಿ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. 'ಕನ್ನಡಕ್ಕೆ ಸಂದ ಗೌರವ ಇದು' ಎನ್ನುತ್ತಲೇ ಸಂಭ್ರಮವನ್ನು 'ಪ್ರಜಾವಾಣಿ' ಜೊತೆ ಹಂಚಿಕೊಂಡ ಬಾನು ಮುಷ್ತಾಕ್ ಅವರ ಮನದಾಳದ ಮಾತುಗಳು ಇಲ್ಲಿವೆ.

ಪ್ರಜಾವಾಣಿ ಸಂದರ್ಶನ

ಬಾನು ಮುಷ್ತಾಕ್

• **ನೀವು ಕಥಾಲೋಕಕ್ಕೆ ತೆರೆದುಕೊಂಡ ನೆನಪುಗಳ ಮೆಲುಕು...**

ಜೀವನದ ನಿರಂತರ ಪಯಣದಲ್ಲಿ ಏಳುಬೀಳು, ಸವಾಲುಗಳು, ಕಠಿಣ ಪರೀಕ್ಷೆಗಳು, ಸಾಫಲ್ಯ ಇದ್ದೇ ಇವೆ. ಇವೆಲ್ಲ ಪಯಣದ ಹೆಜ್ಜೆ ಗುರುತುಗಳು ಮತ್ತು ಅಗ್ನಿ ಪರೀಕ್ಷೆಗಳು. ಕೆಂಡ ಹಾಯ್ದು ಇಲ್ಲಿವರೆಗೆ ಬಂದು ನಿಂತು, ಹಿಂದಿರುಗಿ ನೋಡುವ ಸಂದರ್ಭ ಈಗ ದೊರಕಿದೆ. ಕಠಿಣ ಸವಾಲುಗಳನ್ನು ಎದುರಿಸಲು ಜನರೇ ಶಕ್ತಿ ತುಂಬಿದ್ದಾರೆ. ಕೆಲವರು ಅಗ್ನಿಪರೀಕ್ಷೆ ಒಡ್ಡಿರಬಹುದು, ಪಾರಾಗಲು ಜನರೇ ತಮ್ಮ ಕೈಗಳಿಂದ ಎತ್ತಿ ಮುನ್ನಡೆಸಿದ್ದಾರೆ.

• **'ಹಾರ್ಟ್ ಲ್ಯಾಂಪ್'ನ ಹೂರಣ...**

ಆಯಾ ಕಾಲಘಟ್ಟದ ಸವಾಲುಗಳು, ಮಹಿಳೆಯರ ಮೇಲೆ ಬೀರಬಹುದಾದ ಪರಿಣಾಮ, ಸಮಾಜದ ಶೋಷಕ ನಿಲುವು, ಪುರುಷ ಪ್ರಾದಾನ್ಯತೆಯ ಆಕ್ರಮಣ, ಅದನ್ನು ಮೀರುವ ಹೆಣ್ಣು ಮಕ್ಕಳ ಪ್ರಯತ್ನ ಎಲ್ಲವೂ ಭಿನ್ನವಾಗಿ ಸೇರಿಕೊಂಡಿವೆ.

• **ಅನುವಾದದ ಸಂದರ್ಭದಲ್ಲಿ ಕೃತಿಕಾರರ ಮೂಲ ಆಶಯಕ್ಕೆ ಧಕ್ಕೆ ಆಗದಂತೆ ಅಭಿವ್ಯಕ್ತಿಗೊಳಿಸಲು ಸಾಧ್ಯವೇ?**

ಕನ್ನಡದ ಗಡಿ ಮೀರಿ, ಜಗತ್ತಿನ ಅನೇಕ ಭೂ ಭಾಗಗಳ ಸಹೃದಯಿ ಓದುಗರೊಂದಿಗೆ ನನ್ನ ವಿಚಾರಧಾರೆಯ ವಿನಿಮಯ ಇಂಗ್ಲಿಷ್ ಅನುವಾದದಿಂದಾಗಿ ಸಾಧ್ಯವಾಗಿದೆ. ಮೂಲ ಕೃತಿಯಲ್ಲಿರುವ ಅರೇಬಿಕ್, ಉರ್ದು ಪದಗಳು, ಕನ್ನಡ ಸೊಗಡಿನ ಪದಗುಚ್ಛಗಳನ್ನು ಅನುವಾದಕರು ಹಾಗೂ ಪ್ರಕಾಶಕರು ಯಥಾವತ್ ಉಳಿಸಿಕೊಂಡಿದ್ದಾರೆ. ಕೃತಿಯ ಅನುವಾದಿತ ರೂಪದ ಬಗ್ಗೆ ಸಂತೃಪ್ತಿಯಿದೆ.

• **ನಿಮ್ಮ ಕೃತಿ 'ಬೂಕರ್' ಪ್ರಶಸ್ತಿಯ ಅಂತಿಮ ಪಟ್ಟಿಗೆ ಆಯ್ಕೆಯಾಗಬಹುದೆಂಬ ನಿರೀಕ್ಷೆ ಇತ್ತಾ?**

'ಹಾರ್ಟ್ ಲ್ಯಾಂಪ್' ಕೃತಿಯನ್ನು ಅಭಿರುಚಿ ಪ್ರಕಾಶನ ಪ್ರಕಟಿಸಿದೆ. ಪ್ರಕಾಶಕರು 'ಬೂಕರ್'ಗೆ ಕಳುಹಿಸಿದ್ದಾರೆ ಎನ್ನುವ ಮಾಹಿತಿಯೇ ಇರಲಿಲ್ಲ, 'ಲಾಂಗ್ ಲಿಸ್ಟ್' ಘೋಷಣೆ ಆದಾಗಲೇ ನನ್ನ ಅರಿವಿಗೆ ಬಂದಿದ್ದು. ಈ ಪಟ್ಟಿಯಲ್ಲಿರುವ 13 ಕೃತಿಗಳಲ್ಲಿ ಆರು ಕೃತಿಗಳು 'ಶಾರ್ಟ್ ಲಿಸ್ಟ್' ಆಗಿ, ಅವುಗಳಲ್ಲಿ ಒಂದು ಕೃತಿ ಬಹುಮಾನಕ್ಕೆ ಆಯ್ಕೆಯಾಗಿ, ಏಪ್ರಿಲ್ 8ರಂದು ಅದು ಘೋಷಣೆಯಾಗುತ್ತದೆ.

• **ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮುಸ್ಲಿಂ ಮಹಿಳೆಯರ ಪ್ರಮಾಣ ಇಳಿಮುಖವಾದಂತೆ ಅನ್ನಿಸುತ್ತದೆಯೇ?**

ಹಾಗೆನ್ನಲು ಆಗದು. ಮುಸ್ಲಿಂ ಯುವ ಸಮೂಹ ಬರವಣಿಗೆಯಲ್ಲಿ ಭರವಸೆ ಮೂಡಿಸಿದೆ. ಅವರಲ್ಲಿ ಅನೇಕ ಹೆಣ್ಣು ಮಕ್ಕಳೂ ಸೇರಿದ್ದಾರೆ. ಎರಡು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಸಮಾವೇಶವೊಂದರಲ್ಲಿ ಪುಸ್ತಕ ಪ್ರಕಟಿಸಿರುವ ಮುಸ್ಲಿಂ ಬರಹಗಾರರ ಪಟ್ಟಿ ಮಾಡಿದಾಗ 600ಕ್ಕೂ ಹೆಚ್ಚು ಹೆಸರುಗಳು ಇದ್ದವು. ವೈಯಕ್ತಿಕವಾಗಿ ಪ್ರಕಟಗೊಳ್ಳುವ ಕೃತಿಗಳು ವ್ಯವಸ್ಥಿತವಾಗಿ ಓದುಗರ ಕೈ ಸೇರುವ ಕಾರ್ಯ ಆಗಬೇಕಾಗಿರುವ ತುರ್ತು.

• **ಸಾಹಿತ್ಯ ಕ್ಷೇತ್ರದಲ್ಲಿ ಮುಕ್ತ ಅಭಿವ್ಯಕ್ತಿ ಮತ್ತು ಇಂದಿನ ಕಾಲಘಟ್ಟ ಇವನ್ನು ಹೇಗೆ ವಿಶ್ಲೇಷಿಸುವಿರಿ?**

ಸಾಹಿತ್ಯದಲ್ಲಿ ಮುಕ್ತ ಅಭಿವ್ಯಕ್ತಿಗೆ ಯಾವತ್ತೂ ಅವಕಾಶ ಇರಲಿಲ್ಲ. ಪ್ರಭುತ್ವದ ಆಶಯಗಳಿಗೆ, ಸಮಾಜದ ಧೋರಣೆಗಳಿಗೆ ಅನುಗುಣವಾಗಿ ಬರೆಯುವ ಒಂದು ವರ್ಗ ಲಾಗಾಯ್ತಿನಿಂದ ಇದೆ. ಪ್ರಭುತ್ವದ ಆದೇಶಗಳಿಗೆ ಮಣಿಯದೆ, ವೈಚಾರಿಕತೆಯನ್ನು ನಿಷ್ಠುರವಾಗಿ ಅಭಿವ್ಯಕ್ತಿಸಿದ ಅನೇಕ ವ್ಯಕ್ತಿಗಳು ಆಯಾ ಕಾಲದಲ್ಲಿ ಬಂದು ಹೋಗಿದ್ದಾರೆ. ಆ ರೀತಿಯ ಅಭಿವ್ಯಕ್ತಿಯಿಂದಾಗಿ ಕೆಲವರು ಶಿಕ್ಷೆಯನ್ನೂ ಅನುಭವಿಸಿದ್ದಾರೆ. ಇತಿಹಾಸದಲ್ಲಿ ಇವೆಲ್ಲ ಇದ್ದೇ ಇವೆ. ಸಾಕ್ರೆಟಿಸ್‌ಗೆ ವಿಷ ಕುಡಿಸಿಲ್ಲವೇ? ಪ್ರತಿ ಕಾಲದಲ್ಲೂ ಈ ರೀತಿಯ ಅಗ್ನಿಪರೀಕ್ಷೆಗಳು ವೈಚಾರಿಕತೆಯುಳ್ಳ ಸಾಹಿತಿಗಳಿಗೆ ಎದುರಾಗಿವೆ. ಅದನ್ನು ಮೀರಿ ನಿರ್ಭಿಡೆಯಿಂದ ಹೇಳುವ ಸಾಹಿತಿಗಳು ಎಲ್ಲ ಕಾಲದಲ್ಲೂ ಇದ್ದಾರೆ.

• **ಶಿಕ್ಷಣ ಮತ್ತು ತಂತ್ರಜ್ಞಾನದ ಯುಗದಲ್ಲಿ ಸಂಪ್ರದಾಯವಾದಿತನ ಹೆಚ್ಚುತ್ತಿದೆಯೇ?**

ಹೌದು, ಅತಿರೇಕವಾದ ಕೋಮುವಾದ, ಒಂದು ಕೋಮುವಾದ ಇನ್ನೊಂದು ಕೋಮುವಾದಕ್ಕೆ ಉತ್ತೇಜನ ನೀಡುವಂತಹ, ಕೋಮುವಾದವನ್ನೇ ವಿಜೃಂಭಿಸುವ ಪರಿಸ್ಥಿತಿಗೆ ನಾವು ಸಾಕ್ಷಿಗಳಾಗುತ್ತಿದ್ದೇವೆ. ಕೋಮುವಾದ ಹೆಚ್ಚಾದಂತೆ, ಕೆಲವು ರಾಜಕೀಯ ಪಕ್ಷಗಳಿಗೆ, ಕೆಲವರ ರಾಜಕಾರಣಕ್ಕೆ ಅನುಕೂಲವೂ ಆಗಿದೆ. ಹೀಗಾಗಿ, ಕೋಮುವಾದ ಹೆಚ್ಚಿಸುವ ತಂತ್ರಗಾರಿಕೆ, ಸುಳ್ಳು ಸುದ್ದಿ ಹರಡುವಿಕೆ, ಜನರನ್ನು ಒಡೆದು ಮತ ಪಡೆಯುವ ಒಂದು ಪದ್ಧತಿ ಢಾಳಾಗಿ ಗೋಚರಿಸುತ್ತಿದೆ. ಕೆಲವು ರಾಜಕಾರಣಿಗಳು ಪರಸ್ಪರ ವರ್ಗಗಳ ನಡುವೆ ಅಪನಂಬಿಕೆ, ದ್ವೇಷ ಹೆಚ್ಚಿಸುತ್ತ ತಾವು ಲಾಭ ಮಾಡಿಕೊಳ್ಳುತ್ತಿದ್ದಾರೆ.

'ವಚನ ದರ್ಶನ' ಮಿಥ್ಯ–ಸತ್ಯ ಗ್ರಂಥ ಬಿಡುಗಡೆ ಕಾರ್ಯಕ್ರಮದಲ್ಲಿ ಮೂಡಿದ ಒಟ್ಟು ಅಭಿಪ್ರಾಯ

ಲಿಂಗಾಯತಕ್ಕೆ 'ವಚನ ದರ್ಶನ'ದಿಂದ ಅಪಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಒಳ್ಳೆಯ ಹೆಸರು ನೀಡಿ, ಮೇಲ್ನೋಟಕ್ಕೆ ವಚನಗಳನ್ನು ಒಪ್ಪಿದಂತೆ ಮಾಡಿ, ಅದರಡಿ ವರ್ಣ, ವರ್ಗ ತಾರತಮ್ಯದ ಧರ್ಮ ಮುಂದುವರಿಸುವ ಕುತಂತ್ರದ ಭಾಗವಾಗಿರುವ 'ವಚನ ದರ್ಶನ' ಲಿಂಗಾಯತ ಧರ್ಮಕ್ಕೆ, ವಚನಗಳಿಗೆ ಅಪಚಾರ ಎಸಗಿದೆ...'

ಜಾಗತಿಕ ಲಿಂಗಾಯತ ಮಹಾಸಭಾ, ಲಿಂಗಾಯತ ಮಠಾಧಿಪತಿಗಳ ಒಕ್ಕೂಟ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಸೇರಿದಂತೆ ಬಸವ ಪರ ಸಂಘಟನೆಗಳು ಗುರುವಾರ ಹಮ್ಮಿಕೊಂಡಿದ್ದ 'ವಚನ ದರ್ಶನ' ಮಿಥ್ಯ–ಸತ್ಯ ಗ್ರಂಥ ಬಿಡುಗಡೆ ಸಮಾರಂಭದಲ್ಲಿ ವ್ಯಕ್ತವಾದ ಒಟ್ಟಂದದ ಅಭಿಪ್ರಾಯ ಇದು.

'ಆರ್‌ಎಸ್‌ಎಸ್ ಮತ್ತು ಬ್ರಾಹ್ಮಣ್ಯದ ಕುತಂತ್ರದ ಭಾಗವಾಗಿ ವಚನ ದರ್ಶನ ಕೃತಿ ಪ್ರಕಟವಾಗಿತ್ತು. ಅದರಲ್ಲಿರುವ ಮಿಥ್ಯೆಗಳನ್ನು ಇಂದು ಬಿಡುಗಡೆಯಾದ ಕೃತಿಯಲ್ಲಿ ನೀಡಲಾಗಿದೆ' ಎಂದು ಸಭೆ ಪ್ರತಿಪಾದಿಸಿತು.

'ವಚನಗಳು ಅಂದರೆ ಉಪನಿಷತ್ತಿನ ಅನುವಾದ, ವೇದಾಗಮಗಳ ತಾತ್ಪರ್ಯ ಎಂದು ಪ್ರತಿಪಾದಿಸಲು 'ವಚನ ದರ್ಶನ'ದ ಲೇಖಕರು ಹೊರಟಿದ್ದಾರೆ. ಇದು ಲಿಂಗಾಯತರ ಮೇಲೆ ನಡೆದ ದಾಳಿ ಮಾತ್ರವಲ್ಲ, ಪ್ರಜಾತಂತ್ರ ವ್ಯವಸ್ಥೆಯ ಮೇಲಿನ ದಾಳಿ, ಬಹುತ್ವದ ಮೇಲಿನ ದಾಳಿ, ಸಮಾನತೆಯ ತತ್ವದ ಮೇಲಿನ ದಾಳಿ, ಬ್ರಾಹ್ಮಣ್ಯದ ಕಾರ್ಯಸೂಚಿ ಇದು' ಎಂದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಗಣ್ಯರು ಅಭಿಪ್ರಾಯ ಪಟ್ಟರು.

ಸಭೆಯಲ್ಲಿ ಕೇಳಿದ್ದು

ಶೇ 96 ಅಂಕ ಗಳಿಸಿದ ಲಿಂಗಾಯತ ಯುವತಿ ಬದಲಿಗೆ ಶೇ 89 ಅಂಕ ಗಳಿಸಿದವರಿಗೆ ವಿದೇಶಕ್ಕೆ ಹೋಗಲು ಅಧಿಕಾರಿಗಳು ಅವಕಾಶ ನೀಡಿದ್ದರು. 'ಮೀಸಲಾತಿ ಪ್ರಕಾರ ನೀಡಿದ್ದೇವೆ' ಎಂದು ಅಧಿಕಾರಿಗಳು ಹೇಳಿದ್ದರು. 'ಬುದ್ಧಿವಂತಿಕೆಗೆ ಬೆಲೆ ಇಲ್ಲವೇ' ಎಂಬ ಪ್ರಶ್ನೆಗೆ 'ನೀವೇ ಮಾಡಿದ ಕಾನೂನು ನಾವು ಜಾರಿ ಮಾಡಿದ್ದೇವೆ ಎಂದು ಉತ್ತರಿಸಿದ್ದರು. ಇಂಥ ಸಮಸ್ಯೆ ಸರಿಪಡಿಸಲು ನಾವು ಮುಂದಾಗಿದ್ದೇವೆ.

ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸಭಾಪತಿ

ಮೀಸಲಾತಿ ಕಾರಣಕ್ಕಾಗಿ ಉಪ ಜಾತಿ ಬಳಸುವುದು ಹೆಚ್ಚಾಗಿದೆ. ಉಪ ಜಾತಿ ದಾಖಲಿಸುತ್ತಾ ಹೋದರೆ, ಲಿಂಗಾಯತರ ಜನಸಂಖ್ಯೆ ಕಡಿಮೆಯೇ ಆಗಲಿದೆ. ಉಪ ಜಾತಿ ದಾಖಲಿಸುವುದರ ಬದಲು 'ಲಿಂಗಾಯತ' ಎಂದಷ್ಟೇ ದಾಖಲಿಸಿದರೆ ಮಾತ್ರ ಲಿಂಗಾಯತರ ನಿಜ ಸಂಖ್ಯೆ ಸಿಗಲಿದೆ.

ಎಂ.ಬಿ. ಪಾಟೀಲ, ಬೃಹತ್ ಕೈಗಾರಿಕಾ ಸಚಿವ

ಲಿಂಗಾಯತರು ದ್ವಂದ್ವ ಬಿಡಬೇಕು. ಬಸವತತ್ವಕ್ಕೂ ಜೈ, ಕುಂಭಮೇಳಕ್ಕೂ ಜೈ ಎಂದು ಅಲ್ಲಿಗೂ ಇಲ್ಲಿಗೂ ಹೋಗುವುದು ನಿಲ್ಲಬೇಕು. ಸ್ವಾಮೀಜಿಗಳೇ ಹೀಗೆ ಮಾಡುತ್ತಿರುವುದು ವಿಪರ್ಯಾಸ.

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸಾಣೇಹಳ್ಳಿ ಮಠ

ಕೆಲವರು ತಮ್ಮ ಸ್ವಾರ್ಥಕ್ಕಾಗಿ, ಅಸ್ತಿತ್ವಕ್ಕಾಗಿ 'ವೀರಶೈವ' ಬಿಡಲು ತಯಾರಿಲ್ಲ. ನಾವು ಕೆಲವರ ಸ್ವಾರ್ಥಕ್ಕೆ ಹೋರಾಟ ಮಾಡದೇ ಸಮಾಜದ ಅಸ್ತಿತ್ವಕ್ಕಾಗಿ 'ವೀರಶೈವ' ಬಿಡಬೇಕು.

ತೋಂಟದ ಸಿದ್ಧರಾಮ ಸ್ವಾಮೀಜಿ, ಡಂಬಳ–ಗದಗ ತೋಂಟದಾರ್ಯ ಮಠ

ಬಸವಯುಗ ಹತ್ತಿರವಾಗುತ್ತಿದೆ. ನಮ್ಮ ಭಿನ್ನಾಭಿಪ್ರಾಯ ಏನೇ ಇದ್ದರೂ ಎರಡೂ ಸಂಘಟನೆಗಳು ಸೇರಿ 'ವೀರಶೈವ' ಬಿಟ್ಟು 'ಲಿಂಗಾಯತ' ಕಟ್ಟಬೇಕು.

ಬಸವಲಿಂಗ ಪಟ್ಟದ್ದೇವರು, ಭಾಲ್ಕಿ ಹಿರೇಮಠ

ಬರೆಸಿದವರು, ಮುದ್ರಿಸಿದವರು, ಬಿಡುಗಡೆ ಮಾಡಿದವರು ಆರ್‌ಎಸ್‌ಎಸ್‌ನವರು. ಬರೆದವರು, ಬಿಡುಗಡೆಗೆ ಸ್ಥಳ ನೀಡಿದವರು, ಬಿಡುಗಡೆ ಕಾರ್ಯಕ್ರಮದ ಅತಿಥಿಗಳು ಲಿಂಗಾಯತ ಸಮುದಾಯದವರು. ಇದು ವ್ಯವಸ್ಥಿತ ಕುತಂತ್ರ. 'ವಚನ ದರ್ಶನ ಮಿಥ್ಯ–ಸತ್ಯ' ಕೃತಿ ಮೂಲಕ ಸತ್ಯ ತಿಳಿಸಲಾಗಿದೆ ಎಂದು ಸಂಘಟಕರು ತಿಳಿಸಿದರು.

ಗ್ರಂಥ ಸಂಪಾದಕರಾದ ಟಿ.ಆರ್. ಚಂದ್ರಶೇಖರ, ಕೃತಿಕಾರ ವಿಜಯಕುಮಾರ್, ಮುಕ್ತಾ ಬಿ. ಕಾಗಲಿ, ಬಸವಧರ್ಮ ಪೀಠದ ಗಂಗಾಮಾತಾಜಿ, ಬೇಲಿಮಠದ ಶಿವರುದ್ರ ಸ್ವಾಮಿ, ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ಬಿ. ಆರ್.ಪಾಟೀಲ, ಉಪಸ್ಥಿತರಿದ್ದರು.

'ವಚನ ದರ್ಶನ' ಮಿಥ್ಯ–ಸತ್ಯ ಗ್ರಂಥ ಬಿಡುಗಡೆ ಕಾರ್ಯಕ್ರಮದಲ್ಲಿ ಶಂಕರ ಬಿದರಿ, ಗೊ.ರು ಚನ್ನಬಸಪ್ಪ, ಎಂ.ಬಿ ಪಾಟೀಲ, ಬಸವರಾಜ ಹೊರಟ್ಟಿ, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಬಸವಲಿಂಗ ಪಟ್ಟದೇವರು ಸ್ವಾಮೀಜಿ, ತೋಂಟದ ಸಿದ್ದರಾಮ ಸ್ವಾಮೀಜಿ ಮತ್ತು ಗಂಗಾಮಾತಾಜಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ವೀರಶೈವ ಸಾಕು ಲಿಂಗಾಯತವೇ ಬೇಕು

'ವೀರಶೈವ' ಪದ ಇಟ್ಟುಕೊಂಡು ಸಾವಿರ ವರ್ಷ ಹೋರಾಡಿದರೂ ಫಲ ಸಿಗದು. ಲಿಂಗಾಯತವನ್ನಷ್ಟೇ ಮುಂದಿಟ್ಟುಕೊಂಡರೆ ಲಿಂಗಾಯತ ಧರ್ಮಕ್ಕೆ ಪ್ರತ್ಯೇಕ ಮಾನ್ಯತೆ ದೊರೆಯುವ ಕಾಲ ದೂರವಿಲ್ಲ' ಎಂದು ಅತಿಥಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಅವರು, 'ಎಲ್ಲ ಶರಣರ ಫೋಟೊಗಳನ್ನು ಪ್ರತಿ ಜಿಲ್ಲೆಗೆ ಎರಡು ಜೊತೆ ನೀಡಲಿದ್ದೇವೆ. ಜೊತೆಗೆ ಆದಿ ಗುರು ರೇಣುಕಾಚಾರ್ಯರ ಫೋಟೊವನ್ನೂ ಕಳುಹಿಸಲಿದ್ದೇವೆ' ಎಂದರು. ಇದಕ್ಕೆ ಸಭೆಯಲ್ಲಿ 'ನಮ್ಮದು ಬಸವತತ್ವ. ಬೇರೆ ಫೋಟೊ ಬೇಡ' ಎಂದು ವಿರೋಧ ವ್ಯಕ್ತವಾಯಿತು.

'ಮಂಗಳೂರು, ಉಡುಪಿಯಲ್ಲಿ ಇದೇ ಪ್ರಥಮ ಬಾರಿಗೆ ವೀರಶೈವ ಲಿಂಗಾಯತ ಮಹಾಸಭಾದ ಘಟಕ ತೆರೆಯಲಾಗಿದೆ' ಎಂದು ಬಿದರಿ ತಿಳಿಸಿದರು.

'ಘಟಕದ ಆರಂಭಕ್ಕೆ ಸ್ವಾಗತ. ವೀರಶೈವ ಎಂದು ಹೇಳಿಕೊಂಡು ವೇದ, ಆಗಮಗಳನ್ನು ಲಿಂಗಾಯತದ ಒಳಗೆ ತರುವ ಕೆಲಸವಾದರೆ ಅದಕ್ಕೆ ನೀವೇ ಹೊಣೆ' ಎಂದು ಜಾಗತಿಕ ಲಿಂಗಾಯತ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಶಿವಾನಂದ ಜಾಮದಾರ ಹೇಳಿದರು.

ಸಂಸ್ಕೃತ ಮೋಸಗೊಳಿಸುವ ಭಾಷೆ: ಗೊರುಚ

ಸಂಸ್ಕೃತ ಮೋಸಗೊಳಿಸುವ ಭಾಷೆ. ಜನಭಾಷೆಯಲ್ಲಿ ತಿಳಿಸುವಾಗ ಮೋಸ ಮಾಡಲು ಸಾಧ್ಯವಾಗುವುದಿಲ್ಲ ಎಂದು ಸಾಹಿತಿ ಗೊ.ರು. ಚನ್ನಬಸಪ್ಪ ಹೇಳಿದರು.

'ಸಂಸ್ಕೃತವನ್ನು ದೇವಭಾಷೆ, ಎಲ್ಲ ಭಾಷೆಗಳ ಮೂಲಭಾಷೆ ಎಂದೆಲ್ಲ ನಂಬಿಸಿದ್ದಾರೆ. ಅದನ್ನು ಬಿಟ್ಟು ಜನಭಾಷೆಯನ್ನೇ ಬಳಸಬೇಕು' ಎಂದರು.

'ಕೆಪಿಎಸ್‌ಸಿ: ನೇಮಕಾತಿಗೆ ಮರು ಅಧಿಸೂಚನೆ ಹೊರಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಲೋಕಸೇವಾ ಆಯೋಗದಲ್ಲಿನ (ಕೆಪಿಎಸ್‌ಸಿ) ಭ್ರಷ್ಟ ವ್ಯವಸ್ಥೆಯಿಂದಾಗಿ ಲಕ್ಷಾಂತರ ಪದವೀಧರರು ಅವಕಾಶ ವಂಚಿತರಾಗುತಿದ್ದಾರೆ. ಪದೇ ಪದೇ ತಪ್ಪುಗಳನ್ನು ಮಾಡುವ ಮೂಲಕ ಆಯೋಗವು ರಾಜ್ಯದ ವಿದ್ಯಾವಂತ ವರ್ಗದ ವಿಶ್ವಾಸಾರ್ಹತೆ ಕಳೆದುಕೊಂಡಿದೆ' ಎಂದು 'ಇನ್‌ಸೈಟ್ಸ್ ಐಎಎಸ್' ಸಂಸ್ಥಾಪಕ ವಿನಯ್ ಕುಮಾರ್ ಜಿ.ಬಿ. ಅಸಮಾಧಾನ ವ್ಯಕ್ತಪಡಿಸಿದರು.

ಅಖಿಲ ಕರ್ನಾಟಕ ವಿದ್ಯಾರ್ಥಿ ಮತ್ತು ಸಂಶೋಧಕರ ಸಂಘ ಇಲ್ಲಿ ಗುರುವಾರ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೆಪಿಎಸ್‌ಸಿ ನಡೆಸಿದ ಪರೀಕ್ಷೆಯಲ್ಲಿ ಕನ್ನಡ ಭಾಷಾಂತರ ಲೋಪಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿ ಸಂಘಟನೆಗಳು ಮತ್ತು ಕನ್ನಡ ಪರ ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು. ಈ ವೇಳೆ ಸರ್ಕಾರವು ಎರಡು ದಿನಗಳ ಕಾಲಾವಕಾಶವನ್ನು ಪಡೆದುಕೊಂಡಿತ್ತು. ಈಗ ಒಂಬತ್ತು ದಿನಗಳು ಕಳೆದರೂ ಸರ್ಕಾರ ಮೌನ ವಹಿಸಿದೆ. ಜಾಣ ಮೌನವನ್ನು ಮುರಿದು, ಸಮಸ್ಯೆ ಸರಿಪಡಿಸದಿದ್ದರೆ ರಾಜ್ಯದ ಜನರು ದಂಗೆ ಏಳಲಿದ್ದಾರೆ. ನೇಮಕಾತಿ ಸಂಬಂಧ ಮರು ಅಧಿಸೂಚನೆ ಹೊರಡಿಸಲು ಕೆಪಿಎಸ್‌ಸಿ ಕಾರ್ಯಪ್ರವೃತ್ತವಾಗಬೇಕು' ಎಂದು ಆಗ್ರಹಿಸಿದರು.

'ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಮಾದರಿಯನ್ನು ಕೆಪಿಎಸ್‌ಸಿ ಅನುಸರಿಸಬೇಕು. ನೇಮಕಾತಿ ಪ್ರಕ್ರಿಯೆ ಪಾರದರ್ಶಕವಾಗಿರಬೇಕು. ಆಯೋಗದ ಸದಸ್ಯರ ಸಂಖ್ಯೆಯನ್ನು ಕಡಿತಗೊಳಿಸಬೇಕು. ಭಾಷಾಂತರಕ್ಕಾಗಿಯೇ ವಿಶೇಷ ಶಾಖೆಯನ್ನು ಹೊಂದಬೇಕು. ನೇಮಕಾತಿ ಪ್ರಕ್ರಿಯೆ ಯನ್ನು ನಿಗದಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು' ಎಂದು ಒತ್ತಾಯಿಸಿದರು.

ಕರ್ನಾಟಕ ವಿದ್ಯಾರ್ಥಿ ಮತ್ತು ಸಂಶೋಧಕರ ಸಂಘದ ಅಧ್ಯಕ್ಷ ಸಂತೋಷ್ ಮರೂರು, ಕಾರ್ಯಾಧ್ಯಕ್ಷ ಲೋಕೇಶ್ ರಾಮ್, ಪ್ರಧಾನ ಕಾರ್ಯದರ್ಶಿ ಪವನ್ ಮಹಾರಾಜ್, ಮಹಿಳಾ ಕಾರ್ಯದರ್ಶಿ ಪವಿತ್ರಾ ಕೋಲಾರ ಉಪಸ್ಥಿತರಿದ್ದರು.

ಕೆಪಿಎಸ್‌ಸಿ ಯಿಂದ ರಾಜ್ಯದ ಜನರಿಗೆ ಅನ್ಯಾಯವಾಗಿದೆ. ಆಯೋಗದ ಮೇಲೆ ನಂಬಿಕೆ ಬರುವಂತೆ ಕಾರ್ಯಕ್ಷಮತೆಯನ್ನು ಕಾಪಾಡಿಕೊಳ್ಳಬೇಕು

ವಿನಯ್ ಕುಮಾರ್ ಜಿ.ಬಿ

'ಇನ್‌ಸೈಟ್ಸ್ ಐಎಎಸ್' ಸಂಸ್ಥಾಪಕ

'ಬಿಜೆಪಿಗೆ ಮತ್ತೆ ಅಧಿಕಾರ ನಿಶ್ಚಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರಲು ರಾಜ್ಯ ವ್ಯಾಪಿ ಪ್ರವಾಸ ಮಾಡಲು ಸಿದ್ಧನಿದ್ದೇನೆ. ಆ ಮೂಲಕ ಪಕ್ಷವನ್ನು ಬಲಪಡಿಸುತ್ತೇವೆ. ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರುವುದು ಸೂರ್ಯ–ಚಂದ್ರರಷ್ಟೇ ನಿಶ್ಚಿತ' ಎಂದು ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಅಭಿಮಾನಿಗಳು, ಪಕ್ಷದ ನಾಯಕರ ಜತೆ ತಮ್ಮ 83ನೇ ಹುಟ್ಟುಹಬ್ಬ ಆಚರಿಸಿಕೊಂಡ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪ್ರತಿ ಜಿಲ್ಲೆಯಲ್ಲೂ ಕಾರ್ಯಕರ್ತರ ಸಮಾವೇಶ ಮಾಡಿ ಅವರನ್ನು ಹುರಿದುಂಬಿಸುವ ಕೆಲಸ ಮಾಡುತ್ತೇನೆ' ಎಂದು ಹೇಳಿದರು.

ಇದೇ ವೇಳೆ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಯಡಿಯೂರಪ್ಪ ಅವರ ಅವಧಿಯಲ್ಲಿ ಬೆಂಗಳೂರಿನಲ್ಲಿ ಕೈಗೊಂಡಿದ್ದ ಅಭಿವೃದ್ಧಿ ಕಾರ್ಯಗಳಿಗೆ ರಾಜ್ಯ ಸರ್ಕಾರ ತಡೆ ಹಾಕಿದೆ ಎಂದು ದೂರಿದರು.

'ಎರಡು ದಿನಗಳ ಹಿಂದೆ ಬೆಂಗಳೂರು ನಗರದ ಶಾಸಕರು ಮತ್ತು ಸಂಸದ ಸಭೆ ನಡೆಸಿ ಅಭಿವೃದ್ಧಿ ವಿಚಾರವಾಗಿ ಚರ್ಚೆ ನಡೆಸಲಾಗಿತ್ತು. ತಡೆ ಒಡ್ಡಿರುವ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಬೇಕು ಎಂದು ಮುಖ್ಯಮಂತ್ರಿ ಅವರ ಮೇಲೆ ಒತ್ತಡ ಹೇರಲು ತೀರ್ಮಾನಿಸಲಾಗಿತ್ತು. ಮುಖ್ಯಮಂತ್ರಿಯವರನ್ನು ಶುಕ್ರವಾರ ಭೇಟಿ ಮಾಡಿ ಮನವಿ ಪತ್ರ ನೀಡಲಿದ್ದೇವೆ' ಎಂದು ತಿಳಿಸಿದರು.

ಯಡಿಯೂರಪ್ಪ ಅವರ ಜನ್ಮದಿನದ ಪ್ರಯುಕ್ತ ಅವರ ಅಭಿಮಾನಿಗಳು ತಾಲ್ಲೂಕು ಕೇಂದ್ರಗಳು, ಜಿಲ್ಲಾ ಕೇಂದ್ರಗಳಲ್ಲಿ ಆಸ್ಪತ್ರೆಗಳಿಗೆ ಹಣ್ಣು–ಹಂಪಲು ವಿತರಿಸಿದ್ದಾರೆ. ಅಲ್ಲದೇ, ಅವರು ಮುಖ್ಯಮಂತ್ರಿ ಆಗಿದ್ದಾಗ ಜಾರಿ ಮಾಡಿದ್ದ ಭಾಗ್ಯಲಕ್ಷ್ಮಿ ಯೋಜನೆ, ಬೈಸಿಕಲ್ ಯೋಜನೆಗಳ ಫಲಾನುಭವಿಗಳನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ ಎಂದು ವಿಜಯೇಂದ್ರ ತಿಳಿಸಿದರು.

ಮುಂದಿನ ಚುನಾವಣೆಯಲ್ಲಿ ಈ ಭ್ರಷ್ಟ ಸರ್ಕಾರ ತೊಲಗಿಸುವ ಕೆಲಸ ಆಗಬೇಕು. ಪಕ್ಷವನ್ನು ಅಧಿಕಾರಕ್ಕೆ ತರಲು ಶಕ್ತಿ ಮೀರಿ ಕೆಲಸ ಮಾಡುತ್ತೇನೆ

ಬಿ.ಎಸ್.ಯಡಿಯೂರಪ್ಪ

ಬಿಜೆಪಿ ನಾಯಕ

'ಬೌದ್ಧಿಕ ಹಕ್ಕು ರಕ್ಷಣೆಗೆ ಒಪ್ಪಂದ'

ಬೆಂಗಳೂರು: ರಾಜ್ಯದಲ್ಲಿ ಬೌದ್ಧಿಕ ಹಕ್ಕು ಸ್ವತ್ತುಗಳ ಸೃಷ್ಟಿಗೆ ಉತ್ತೇಜನ ನೀಡುವ ಉದ್ದೇಶದಿಂದ ನಾಸ್ಕಾಂ, ಕರ್ನಾಟಕ ನಾವೀನ್ಯ ಮತ್ತು ತಂತ್ರಜ್ಞಾನ ಸೊಸೈಟಿ (ಕೈಟ್ಸ್) ಹಾಗೂ ರಾಜ್ಯ ಸರ್ಕಾರವು ಒಪ್ಪಂದ ಮಾಡಿಕೊಂಡಿವೆ.

ನಗರದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ನಾಸ್ಕಾಂ ಅಧ್ಯಕ್ಷ ರಾಜೇಶ್ ನಂಬಿಯಾರ್ ಅವರು, 'ಬೌದ್ಧಿಕ ಹಕ್ಕು ಉತ್ತೇಜನಾ ಕಾರ್ಯಕ್ರಮ'ದ ಒಪ್ಪಂದ ಪತ್ರಕ್ಕೆ ಸಹಿ ಮಾಡಿದರು.

ಬೌದ್ಧಿಕ ಹಕ್ಕು ಪಡೆಯುವುದರ ಅಗತ್ಯದ ಬಗ್ಗೆ ಜಾಗೃತಿ ಮೂಡಿಸುವುದು, ಅಗತ್ಯವಿರುವ ಪ್ರಯೋಗಾಲಯ ಮತ್ತು ಅಧ್ಯಯನ ಸವಲತ್ತು ಒದಗಿಸುವುದು, ಬೌದ್ಧಿಕ ಹಕ್ಕಿಗಾಗಿ ಅರ್ಜಿ ಸಲ್ಲಿಸುವಲ್ಲಿ ನೆರವು ನೀಡುವುದು, ಈ ಎಲ್ಲ ಕೆಲಸಗಳಿಗೆ ನೀತಿರೂಪಣೆ ಮಟ್ಟದಲ್ಲಿ ಅಗತ್ಯವಿರುವ ನೆರವು ಒದಗಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶಗಳಾಗಿವೆ.

ಕಾರ್ಯಕ್ರಮದಲ್ಲಿ ಸಚಿವ ಪ್ರಿಯಾಂಕ ಖರ್ಗೆ ಮಾತನಾಡಿದರು

ರಾಜೇಶ್ ನಂಬಿಯಾರ್, 'ರಾಜ್ಯ ಸರ್ಕಾರದೊಂದಿಗಿನ ಈ ಒಪ್ಪಂದಕ್ಕೆ ಸಹಿ ಹಾಕಿರುವುದು ಭಾರತೀಯರ ಬೌದ್ಧಿಕ ಹಕ್ಕುಗಳ ರಕ್ಷಣೆಯಲ್ಲಿ ಮಹತ್ವದ ಮೈಲಿಗಲ್ಲಾಗಲಿದೆ. ಇದು ಕರ್ನಾಟಕ ಮಾತ್ರವಲ್ಲದೆ, ಭಾರತಕ್ಕೂ ಜಾಗತಿಕ ಮಟ್ಟದಲ್ಲಿ ಮಹತ್ವದ ಸ್ಥಾನ ತಂದುಕೊಡಲಿದೆ' ಎಂದರು.

ಪ್ರಿಯಾಂಕ್ ಖರ್ಗೆ, 'ಉದ್ಯಮ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳಿಗೆ ಅಗತ್ಯವಿರುವ ಸವಲತ್ತು ಮತ್ತು ನೆರವನ್ನು ಒದಗಿಸುವ ಮೂಲಕ ರಾಜ್ಯ ಸರ್ಕಾರವು ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಗೆ ಸದಾ ನಿಲ್ಲಲಿದೆ' ಎಂದರು.

'ಕ್ಷೇತ್ರ ಮರುವಿಂಗಡಣೆ: ಒಗ್ಗಟ್ಟಿನ ಹೋರಾಟ ಅಗತ್ಯ'

ಅಮಿತ್ ಶಾ ಹೇಳಿಕೆ ನಂಬಿಕೆಗೆ ಅರ್ಹವಲ್ಲ; ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕವೂ ಸೇರಿದಂತೆ ದಕ್ಷಿಣದ ರಾಜ್ಯಗಳಿಗೆ ಕ್ಷೇತ್ರ ಮರುವಿಂಗಡಣೆಯಿಂದ ಅನ್ಯಾಯ ಆಗಬಾರದೆಂದರೆ ಒಂದೋ 1971ರ ಜನಗಣತಿಯನ್ನು ಆಧಾರವಾಗಿ ಇಟ್ಟುಕೊಳ್ಳಬೇಕು ಅಥವಾ ಜನಸಂಖ್ಯೆಯ ಮಾನದಂಡ ಕೈಬಿಟ್ಟು ಈಗಿನ ಲೋಕಸಭಾ ಕ್ಷೇತ್ರಗಳ ಸಂಖ್ಯೆಯ ಅನುಪಾತಕ್ಕೆ ಅನುಗುಣವಾಗಿ ಹೆಚ್ಚಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

'ಕ್ಷೇತ್ರ ಮರುವಿಂಗಡಣೆಯಿಂದ ದಕ್ಷಿಣದ ರಾಜ್ಯಗಳಿಗೆ ನಷ್ಟ ಆಗಲು ಬಿಡುವುದಿಲ್ಲ' ಎಂಬ ಗೃಹ ಸಚಿವ ಅಮಿತ್ ಶಾ ಹೇಳಿಕೆ ನಂಬಿಕೆಗೆ ಅರ್ಹವಲ್ಲ. ಕೇಂದ್ರದ ಅನ್ಯಾಯದ ವಿರುದ್ಧ ಒಗ್ಗಟ್ಟಿನಿಂದ ಹೋರಾಟ ರೂಪಿಸಲು ನೆರೆಯ ದಕ್ಷಿಣದ ರಾಜ್ಯಗಳ ಜೊತೆ ಮಾತುಕತೆ ನಡೆಸಲಾಗುತ್ತಿದೆ' ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಿದ್ದರಾಮಯ್ಯ

'ದಕ್ಷಿಣದ ರಾಜ್ಯಗಳಿಗೆ ಅನ್ಯಾಯ ಮಾಡಬಾರದೆಂಬ ಸದುದ್ದೇಶವನ್ನು ಕೇಂದ್ರ ಸರ್ಕಾರ ಹೊಂದಿದೆ ಎಂದಾದರೆ, ಜನಸಂಖ್ಯೆಯ ಅನುಪಾತದ ಆಧಾರದಲ್ಲಿ ಕ್ಷೇತ್ರ ಮರುವಿಂಗಡಣೆ ಮಾಡಲಾಗುವುದೊ? ಲೋಕಸಭಾ ಸದಸ್ಯರ ಈಗಿನ ಸಂಖ್ಯೆಯ ಅನುಪಾತದಲ್ಲಿ ಮಾಡಲಾಗುವುದೋ ಎಂಬ ಪ್ರಶ್ನೆಗಳಿಗೆ ಗೃಹ ಸಚಿವರು ಉತ್ತರಿಸಬೇಕು' ಎಂದಿದ್ದಾರೆ.

'ಇತ್ತೀಚಿನ ಜನಸಂಖ್ಯೆಯ ಅನುಪಾತದಲ್ಲಿ ಕ್ಷೇತ್ರ ಮರುವಿಂಗಡಣೆ ನಡೆದರೆ ದಕ್ಷಿಣದ ರಾಜ್ಯಗಳಿಗೆ ಅನ್ಯಾಯ ಕಟ್ಟಿಟ್ಟ ಬುತ್ತಿ. ದಕ್ಷಿಣದ ರಾಜ್ಯಗಳು 50 ವರ್ಷಗಳಲ್ಲಿ ಜನಸಂಖ್ಯೆಯನ್ನು ನಿಯಂತ್ರಿಸಿವೆ. ಆದರೆ, ಉತ್ತರಪ್ರದೇಶ, ಬಿಹಾರ, ಮಧ್ಯಪ್ರದೇಶದಂಥ ಉತ್ತರದ ರಾಜ್ಯಗಳು ಜನಸಂಖ್ಯೆ ನಿಯಂತ್ರಿಸುವಲ್ಲಿ ವಿಫಲವಾಗಿವೆ. ಜನಸಂಖ್ಯೆ ಅನುಪಾತದಲ್ಲಿ ಕ್ಷೇತ್ರ ಮರುವಿಂಗಡಣೆ ನಡೆಸಿದರೆ ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗಲಿದೆ ಅಥವಾ ಉತ್ತರದ ರಾಜ್ಯಗಳ ಕ್ಷೇತ್ರಗಳ ಪ್ರಮಾಣದಲ್ಲಿ ಏರಿಕೆ ಆಗದು. ಈ ಎರಡೂ ಬೆಳವಣಿಗೆಗಳಿಂದ ದಕ್ಷಿಣದ ರಾಜ್ಯಗಳೇ ನಷ್ಟ ಅನುಭವಿಸಲಿದೆ' ಎಂದಿದ್ದಾರೆ.

'ರಾಜ್ಯದ ಕ್ಷೇತ್ರಗಳ ಸಂಖ್ಯೆ 26ಕ್ಕೆ ಕುಸಿತ'

'ಕ್ಷೇತ್ರ ಮರುವಿಂಗಡಣೆಗೆ ಸಂಬಂಧಿಸಿದಂತೆ ನಡೆದ ಅಧ್ಯಯನಗಳ ಪ್ರಕಾರ ಜನಗಣತಿ (2021 ಇಲ್ಲವೇ 2031) ಆಧರಿಸಿ ಕ್ಷೇತ್ರ ಮರುವಿಂಗಡಣೆ ನಡೆದರೆ ಕರ್ನಾಟಕದ ಲೋಕಸಭಾ ಕ್ಷೇತ್ರಗಳ ಸಂಖ್ಯೆ 28ರಿಂದ 26ಕ್ಕೆ ಇಳಿಯಬಹುದು' ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

'ಆಂಧ್ರಪ್ರದೇಶದ ಸಂಖ್ಯೆ 42ರಿಂದ 34, ಕೇರಳದ ಸಂಖ್ಯೆ 20ರಿಂದ 12, ತಮಿಳುನಾಡಿನ ಸಂಖ್ಯೆ 39ರಿಂದ 31ಕ್ಕೆ ಇಳಿಯಲಿದೆ. ಇದೇ ವೇಳೆ ಉತ್ತರಪ್ರದೇಶದ ಕ್ಷೇತ್ರಗಳ ಸಂಖ್ಯೆ, 80ರಿಂದ 91, ಬಿಹಾರದ ಸಂಖ್ಯೆ 40ರಿಂದ 50, ಮಧ್ಯಪ್ರದೇಶದ ಸಂಖ್ಯೆ 29ರಿಂದ 33ಕ್ಕೆ ಏರಿಕೆ ಆಗಲಿದೆ' ಎಂದಿದ್ದಾರೆ.

ರಾಷ್ಟ್ರೀಯ ತೋಟಗಾರಿಕಾ ಮೇಳದಲ್ಲಿ ಸಾರ್ವಜನಿಕರ ಗಮನ ಸೆಳೆದ ಜೈವಿಕ ಅನಿಲ ಘಟಕ

ಕಸದಿಂದ ಬಯೊಮಿಥೇನ್ ಅನಿಲ ಉತ್ಪತ್ತಿ

• ಖಲೀಲ ಅಹ್ಮದ ಶೇಖ

ಬೆಂಗಳೂರು: ನಗರ ಪ್ರದೇಶದ ಮನೆಗಳಲ್ಲಿ ಉತ್ಪತ್ತಿಯಾಗುವ ಹಸಿ ಕಸ ವಿಲೇವಾರಿಯೇ ದೊಡ್ಡ ಸಮಸ್ಯೆ. ಇದಕ್ಕೆ ಪರಿಹಾರ ನೀಡಲು 'ಹರಿತವಾಣಿ ವಜ್ರ' ಎಂಬ ನವೋದ್ಯಮವು ಜೈವಿಕ ಅನಿಲ ಘಟಕವೊಂದನ್ನು ಅಭಿವೃದ್ಧಿಪಡಿಸಿದೆ. ಪ್ರತಿದಿನ ಇದರಲ್ಲಿ ಐದು ಕೆ.ಜಿ ಹಸಿ ತ್ಯಾಜ್ಯ ಹಾಕಿದರೆ, 1 ಸಾವಿರ ಲೀಟರ್ ಬಯೊಮಿಥೇನ್ ಅನಿಲ ಉತ್ಪತ್ತಿ ಆಗುತ್ತದೆ.

ಬೆಂಗಳೂರಿನ ಹೆಸರಘಟ್ಟದ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ (ಐಐಎಚ್‌ಆರ್) ಗುರುವಾರ ಆರಂಭವಾದ 'ರಾಷ್ಟ್ರೀಯ ತೋಟಗಾರಿಕಾ ಮೇಳ'ದಲ್ಲಿ ಈ ಜೈವಿಕ ಅನಿಲ ಘಟಕವನ್ನು ಪ್ರದರ್ಶನಕ್ಕೆ ಇರಿಸಲಾಗಿದೆ.

'ಮನೆಯಲ್ಲಿನ ಹಸಿ ಕಸವನ್ನು ಕರಗಿಸಿ ಜೈವಿಕ ಅನಿಲ ಉತ್ಪಾದಿಸಲು ಈ ಘಟಕ ಸಹಾಯಕವಾಗಿದೆ. ಆಮ್ಲಜನಕ ರಹಿತ ಜೀರ್ಣಕ್ರಿಯೆಯ ಮಾದರಿಯಲ್ಲಿ ಅನಿಲ ಉತ್ಪಾದನೆ ಆಗುತ್ತದೆ. ಡ್ರಮ್ ಮಾದರಿಯಲ್ಲಿರುವ ಈ ಘಟಕಕ್ಕೆ ಬಲೂನ್‌ವೊಂದನ್ನು ಅಳವಡಿಸಿ, ಅದರಲ್ಲಿಯೇ ಅನಿಲ ಶೇಖರಿಸಲಾಗುತ್ತದೆ. ಬಲೂನ್‌ನಲ್ಲಿರುವ ಅನಿಲವನ್ನು ಕೊಳವೆಗಳ ಮೂಲಕ ಗ್ಯಾಸ್ ಸ್ಟೌಗೆ ಜೋಡಿಸಲಾಗುತ್ತದೆ' ಎಂದು ಸಂಸ್ಥೆಯ ಸಂಸ್ಥಾಪಕ ಕಿರಣ್ ಕುಮಾರ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಜೈವಿಕ ಅನಿಲ ಘಟಕ ಅಳವಡಿಸಿಕೊಂಡು ಐದು ಕೆ.ಜಿ ಹಸಿ ಕಸ ಹಾಕಿದ ನಾಲ್ಕು ವಾರದ ನಂತರ ಅದು ಅನಿಲವಾಗಿ ಪರಿವರ್ತನೆಯಾಗುತ್ತದೆ. ನಿತ್ಯ ನಮ್ಮ ಮನೆಗಳಲ್ಲಿ ಉತ್ಪತ್ತಿಯಾಗುವ ಹಸಿ ಕಸವನ್ನು ಈ ಘಟಕಕ್ಕೆ ಹಾಕುತ್ತಾ ಹೋಗಬೇಕು. ಈ ಘಟಕಕ್ಕೆ ವಿದ್ಯುತ್ ಬಳಕೆಯ ಅಗತ್ಯವಿಲ್ಲ. ಘಟಕದ ಮೇಲೆ ಬಿಸಿಲು ಬಿದ್ದರೆ ಅಷ್ಟೇ ಸಾಕು. ಅನಿಲವಾಗಿ ಪರಿವರ್ತನೆಯಾಗುವ ಸಂದರ್ಭದಲ್ಲಿ ಉತ್ಪತ್ತಿಯಾಗುವ ದ್ರವವನ್ನು ಗಿಡಗಳಿಗೆ ಗೊಬ್ಬರವಾಗಿ ಬಳಸಬಹುದು. ಈ ಘಟಕ ಗರಿಷ್ಠ 35 ಕೆ.ಜಿವರೆಗೂ ಹಸಿ ಕಸ ಸಂಗ್ರಹಿಸುವ ಸಾಮರ್ಥ್ಯ ಹೊಂದಿದೆ' ಎಂದು ಅವರು ಮಾಹಿತಿ ನೀಡಿದರು.

'ಹಣ್ಣು–ತರಕಾರಿಗಳ ಸಿಪ್ಪೆ, ಮೊಟ್ಟೆಯ ಸಿಪ್ಪೆ, ಹಸಿ ಮಾಂಸ, ಮೀನಿನ ಮುಳ್ಳುಗಳು, ಬೇಯಿಸಿರುವ ಮೂಳೆ, ಉಳಿದ ಅನ್ನ, ಸಾಂಬಾರು, ಕಾಫಿ, ಚಹಾ ಪುಡಿಯನ್ನು ಈ ಘಟಕದಲ್ಲಿ ಹಾಕಬಹುದು. ಒಣಗಿರುವ ಎಲೆ, ತೆಂಗಿನ ಚಿಪ್ಪು, ಪ್ಲಾಸ್ಟಿಕ್ ಹಾಗೂ ಕಾಗದ ಹಾಕಬಾರದು. ಹಸುಗಳಿರುವ ಮನೆಗಳಲ್ಲಿ 10 ಕೆ.ಜಿ. ಸೆಗಣಿ ಹಾಕಿದರೆ ನಿತ್ಯವೂ ನಮಗೆ 1,500 ಲೀಟರ್ ಅನಿಲ ಉತ್ಪತ್ತಿ ಆಗುತ್ತದೆ' ಎಂದರು.

'ಒಂದು ಘಟಕ ಸ್ಥಾಪಿಸಲು ₹30 ಸಾವಿರ ಖರ್ಚಾಗಲಿದೆ. ಇದಕ್ಕೆ 20 ವರ್ಷದ ಖಾತರಿ ನೀಡುತ್ತೇವೆ. ಜೈವಿಕ ಅನಿಲ ಬಲೂನ್, ಸ್ಟೌ ಉಚಿತವಾಗಿ ನೀಡಲಾಗುತ್ತದೆ. ಈ ಘಟಕದ ಪೇಟೆಂಟ್ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ' ಎಂದು ಹೇಳಿದರು.

ರಾಷ್ಟ್ರೀಯ ತೋಟಗಾರಿಕಾ ಮೇಳದಲ್ಲಿ ಪ್ರದರ್ಶಿಸಿರುವ ಜೈವಿಕ ಅನಿಲ ಘಟಕ
ಪ್ರಜಾವಾಣಿ ಚಿತ್ರ–ಕೃಷ್ಣಕುಮಾರ್ ಪಿ.ಎಸ್

ಗಮನ ಸೆಳೆದ ಅಲ್ಟಿಮೇಟ್ ರೋಬೊ

ಒಂದೇ ರೋಬೊ ಬಳಸಿ ತೋಟಗಾರಿಕೆ ಬೆಳೆಗಳ ಪ್ರದೇಶದಲ್ಲಿ ಕಸ ತೆಗೆಯುವ, ಔಷಧ ಸಿಂಪಡಿಸುವ, ಉಳುಮೆ ಮಾಡುವ ಮತ್ತು ಸರಕು ಸಾಗಿಸುವ ಸಾಧನಗಳನ್ನು ರಿಮೋಟ್ ಮೂಲಕ ನಿಯಂತ್ರಿಸಬಹುದಾದ 'ಅಲ್ಟಿಮೇಟ್ ರೋಬೊ' ಹೆಸರಿನ ಸಾಧನ ಪ್ರದರ್ಶನದಲ್ಲಿ ರೈತರ ಗಮನ ಸೆಳೆಯಿತು.

ಎಕ್ಸ್ ಮಷಿನ್ ಕಂಪನಿ ಮೇಳದಲ್ಲಿ ತನ್ನ ಈ ಉತ್ಪನ್ನವನ್ನು ಪ್ರದರ್ಶನಕ್ಕೆ ಇರಿಸಿದೆ.

'ಈ ರೋಬೊ 1.77 ಅಡಿ ಅಗಲ, 2.88 ಅಡಿ ಎತ್ತರ ಇದೆ. ಎಲ್ಲ ರೀತಿಯ ತೋಟಗಾರಿಕೆ ಬೆಳೆಗಳ ನಿರ್ವಹಣೆಗೆ ಸಹಕಾರಿ ಆಗಿದೆ. ರಿಮೋಟ್ ಮೂಲಕ ನಿಯಂತ್ರಿಸಬಹುದು. ಇದರ ಬ್ಯಾಟರಿಯನ್ನು ಒಮ್ಮೆ ಚಾರ್ಜ್ ಮಾಡಿದರೆ ನಾಲ್ಕು ಗಂಟೆಯವರೆಗೆ ಕೆಲಸ ಮಾಡುತ್ತದೆ. ಒಂದು ಗಂಟೆಯಲ್ಲಿ ಒಂದು ಎಕರೆ ಜಮೀನನ್ನು ಉಳುಮೆ ಮಾಡಬಹುದು ಅಥವಾ ಔಷಧಿ, ಗೊಬ್ಬರ ಸಿಂಪಡಿಸಬಹುದು' ಎಂದು ಕಂಪನಿಯ ಪ್ರತಿನಿಧಿ ಜಿತೇಂದ್ರ ಮಾಹಿತಿ ನೀಡಿದರು.

'ಈ ರೋಬೊಗೆ ಔಷಧಿ ಸಿಂಪಡಿಸುವ, ಹುಲ್ಲು ಕತ್ತರಿಸುವ ಯಂತ್ರ, ರೋಟೊವೇಟರ್, ಟಿಲ್ಲರ್ ನೀಡಲಾಗುತ್ತದೆ. 300 ಮೀಟರ್ ವ್ಯಾಪ್ತಿಯೊಳಗೆ ಇದನ್ನು ರಿಮೋಟ್ ಮೂಲಕ ನಿಯಂತ್ರಿಸಬಹುದು. ಈ ಎಲ್ಲ ಯಂತ್ರಗಳ ಒಟ್ಟು ಬೆಲೆ ₹3.5 ಲಕ್ಷ ಇದೆ' ಎಂದರು.

ಚಿಕ್ಕಬಳ್ಳಾಪುರದಲ್ಲಿ ಹಕ್ಕಿಜ್ವರ ಪತ್ತೆ

ಒಂದನೇ ಪುಟದಿಂದ...

ಹಕ್ಕಿಜ್ವರ ದೃಢಪಡುತ್ತಲೇ ಪಶುಸಂಗೋಪನಾ ಇಲಾಖೆ ನಿರ್ದೇಶಕ ರಂಗಪ್ಪ ಹಾಗೂ ಜಿಲ್ಲಾ ಆರೋಗ್ಯ ಅಧಿಕಾರಿ ಮಹೇಶ್ ಕುಮಾರ ಅವರು ಸಿಬ್ಬಂದಿ ಜೊತೆ ಗ್ರಾಮಕ್ಕೆ ಧಾವಿಸಿದರು. ಹಕ್ಕಿಜ್ವರ ತಡೆಗೆ ಗ್ರಾಮದಲ್ಲಿ ಮುಂಜಾಗ್ರತಾ ಕ್ರಮ ಕೈಗೊಂಡಿದ್ದು, ಸೋಡಿಯಂ ಹೈಪೋಕ್ಲೋರೈಡ್ ದ್ರಾವಣ ಸಿಂಪಡಿಸಲಾಯಿತು.

'ಹಕ್ಕಿಜ್ವರದಿಂದ ಕೋಳಿಗಳು ಮೃತಪಟ್ಟಿರುವುದು ವರದಿಯಲ್ಲಿ ದೃಢವಾಗಿದೆ. ವರದಹಳ್ಳಿಯಲ್ಲಿ ಕಟ್ಟುನಿಟ್ಟಿನ ಮುನ್ನೆಚ್ಚರಿಕೆ ಕ್ರಮ ವಹಿಸಲಾಗಿದೆ. ಗ್ರಾಮದ ತುಂಬಾ ಔಷಧಿ ಸಿಂಪಡಿಸಲಾಗಿದೆ. ಗ್ರಾಮದಲ್ಲಿ ಕೋಳಿ ಸಾಕಿದವರ ಮನೆಗೆ ತೆರಳಿ ಅಧಿಕಾರಿಗಳು ಮಾಹಿತಿ ಪಡೆಯುತ್ತಿದ್ದಾರೆ' ಎಂದು ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

ಜಿಲ್ಲಾಧಿಕಾರಿ ನೇತೃತ್ವದಲ್ಲಿ ಆರೋಗ್ಯ ಇಲಾಖೆ ಮತ್ತು ಪಶುಸಂಗೋಪನಾ ಇಲಾಖೆ ಅಧಿಕಾರಿಗಳ ತುರ್ತು ಸಭೆ ನಡೆದಿದ್ದು, ಹಕ್ಕಿಜ್ವರ ತಡೆಗೆ ಅನುಸರಿಸಬೇಕಾದ ಕಟ್ಟುನಿಟ್ಟಿನ ಕ್ರಮ ಮತ್ತು ಮುನ್ನೆಚ್ಚರಿಕೆ ಬಗ್ಗೆ ಚರ್ಚೆ ನಡೆಸಲಾಗಿದೆ. ಗ್ರಾಮದ ಒಂದು ಕಿ.ಮೀ ವ್ಯಾಪ್ತಿಯಲ್ಲಿ ಕೋಳಿ ಮಾಂಸ ಮಾರಾಟ ಮತ್ತು ಸೇವನೆ ನಿಷೇಧಿಸಿ ಜಿಲ್ಲಾಡಳಿತ ಆದೇಶ ಹೊರಡಿಸಿದೆ.

ಹೊರ ರಾಜ್ಯಗಳ ವಾಹನ ಪ್ರವೇಶ ನಿರ್ಬಂಧ: ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಹಕ್ಕಿಜ್ವರ ತೀವ್ರವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಗೆ ಈ ರಾಜ್ಯಗಳ ವಾಹನಗಳ ಪ್ರವೇಶದ ವೇಳೆ ನಿಗಾವಹಿಸಲು ಜಿಲ್ಲಾ ಆರೋಗ್ಯ ಇಲಾಖೆ ಸಲಹೆ ನೀಡಿದೆ. ಅಲ್ಲದೆ ಅಗತ್ಯವಿದ್ದರೆ ಎರಡೂ ರಾಜ್ಯಗಳ ವಾಹನಗಳ ಪ್ರವೇಶವನ್ನು ನಿರ್ಬಂಧಕ್ಕೂ ಸಲಹೆ ನೀಡಿದೆ.

ಚಿಕ್ಕಬಳ್ಳಾಪುರದ ವರದಹಳ್ಳಿಯಲ್ಲಿ ಹಕ್ಕಿಜ್ವರ ದೃಢವಾದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಔಷಧಗಳನ್ನು ಸಿಂಪಡಿಸಲಾಯಿತು

ಮಾನ್ವಿ: 30 ಹಕ್ಕಿಗಳ ನಿಗೂಢ ಸಾವು

ಒಂದನೇ ಪುಟದಿಂದ...

'ಮಾನ್ವಿಯಲ್ಲಿ ಹಕ್ಕಿಗಳು ಮೃತಪಟ್ಟಿರುವುದು ನಿಜ. ಬೆಂಗಳೂರಿನ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪ್ರಯೋಗಾಲಯಕ್ಕೆ ಈಗಾಗಲೇ ಮಾದರಿ ಕಳುಹಿಸಿಕೊಡಲಾಗಿದೆ. ವರದಿ ಬಂದ ಮೇಲೆ ನಿಖರ ಕಾರಣ ತಿಳಿಯಲಿದೆ' ಎಂದು ಜಿಲ್ಲಾಧಿಕಾರಿ ನಿತೀಶ್ ತಿಳಿಸಿದ್ದಾರೆ.

ನಕಲಿ ಅಂಕಪಟ್ಟಿ ಜಾಲ: ಒಬ್ಬ ಸೆರೆ

ಒಂದನೇ ಪುಟದಿಂದ...

'ಇಷ್ಟೇ ಅಲ್ಲದೆ, ನಾನಾ ಬ್ಯಾಂಕ್‌ಗಳ 87 ಪಾಸ್‌ಬುಕ್‌ಗಳು, ಆರೋಪಿಯ ವಿವಿಧ ಹೆಸರುಗಳ 123 ಗುರುತಿನ ಚೀಟಿಗಳು, ₹1.20 ಲಕ್ಷ ನಗದನ್ನು ಬಂಧಿತನಿಂದ ವಶಕ್ಕೆ ಪಡೆಯಲಾಗಿದೆ. ಆರೋಪಿಯು ₹10 ಸಾವಿರದಿಂದ ₹50 ಸಾವಿರಕ್ಕೆ ನಕಲಿ ಅಂಕಪಟ್ಟಿ ಮಾರುತ್ತಿದ್ದ' ಎಂದರು.

'ಎನ್‌ಸಿಆರ್ ಎಜುಕೇಶನ್ ಗ್ರೂಪ್ ಕಟ್ಟಿಕೊಂಡು, ದೆಹಲಿಯಲ್ಲಿ ಕಚೇರಿ ತೆರೆದು ಕಳೆದ ಏಳೆಂಟು ವರ್ಷಗಳಿಂದ ಮಧ್ಯವರ್ತಿಗಳ ಮೂಲಕ ನಕಲಿ ಅಂಕಪಟ್ಟಿಗಳ ಜಾಲ ನಡೆಸುತ್ತಿದ್ದ. ಸರ್ಕಾರಿ ನೌಕರಿಗಾಗಿ ನೀಡುವುದಿಲ್ಲ ಎಂದು ಕರಾರು ವಿಧಿಸುತ್ತಿದ್ದ ರಾಜೀವ್, ಕೇವಲ ಖಾಸಗಿ ಕೆಲಸ, ಮದುವೆ, ಶೈಕ್ಷಣಿಕ ಅರ್ಹತೆಗಾಗಿ ಪಿಯುಸಿಯಿಂದ ಪಿಎಚ್‌ಡಿವರೆಗೆ 26 ಕೋರ್ಸ್‌ಗಳಿಗೆ ನಕಲಿ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಕೊಡುತ್ತಿದ್ದ' ಎಂದು ಹೇಳಿದರು.

ಕಾಯ್ದಿರಿಸಿದ್ದ ತೀರ್ಪು ಪ್ರಕಟಿಸಿದ ಸಿಜೆಐ ಸಂಜೀವ್ ಖನ್ನಾ ನೇತೃತ್ವದ ತ್ರಿಸದಸ್ಯ ಪೀಠ

ಎಫ್‌ಐಆರ್ ಇಲ್ಲದಿದ್ದರೂ ನಿರೀಕ್ಷಣಾ ಜಾಮೀನು

ಪ್ರಜಾವಾಣಿ ವಾರ್ತೆ/ಪಿಟಿಐ

ಮುಖ್ಯಾಂಶಗಳು
- ಕಳೆದ ವರ್ಷ ಕಾಯ್ದಿರಿಸಿದ್ದ ತೀರ್ಪು
- ರಾಧಿಕಾ ಅಗರ್ವಾಲ್ 2018ರಲ್ಲಿ ಸಲ್ಲಿಸಿದ್ದ ಅರ್ಜಿ
- ಬಂಧಿತ ವ್ಯಕ್ತಿಗೆ ವಕೀಲರನ್ನು ಸಂಪರ್ಕಿಸುವ ಹಕ್ಕಿದೆ

ಜಿಎಸ್‌ಟಿ ಸೀಮಾಸುಂಕ ಪ್ರಕರಣ

ನವದೆಹಲಿ: ಸರಕು ಮತ್ತು ಸೇವಾ ಕಾಯ್ದೆ ಹಾಗೂ ಸೀಮಾಸುಂಕ ಕಾಯ್ದೆಗೆ ನಿರೀಕ್ಷಣಾ ಜಾಮೀನು ಅನ್ವಯ ವಾಗುತ್ತದೆ, ಎಫ್‌ಐಆರ್ ದಾಖಲಾಗದೆ ಇದ್ದರೂ ವ್ಯಕ್ತಿಗಳು ಬಂಧನದಿಂದ ತಪ್ಪಿಸಿಕೊಳ್ಳಲು ಜಾಮೀನು ಕೋರಿ ಅರ್ಜಿ ಸಲ್ಲಿಸಬಹುದು ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್, ಬೇಲಾ ಎಂ. ತ್ರಿವೇದಿ ಅವರು ಇರುವ ತ್ರಿಸದಸ್ಯ ಪೀಠವು ಕಳೆದ ವರ್ಷದ ಮೇ 16ರಂದು ಕಾಯ್ದಿರಿಸಿದ್ದ ತೀರ್ಪನ್ನು ಗುರುವಾರ ಪ್ರಕಟಿಸಿದೆ.

ಸೀಮಾಸುಂಕ ಕಾಯ್ದೆ ಮತ್ತು ಜಿಎಸ್‌ಟಿ ಕಾಯ್ದೆಯಲ್ಲಿನ ಕೆಲವು ಅಂಶಗಳು ಅಪರಾಧ ದಂಡಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಹಾಗೂ ಸಂವಿಧಾನದಲ್ಲಿನ ಅಂಶಗಳಿಗೆ ಪೂರಕವಾಗಿ ಇಲ್ಲ ಎಂದು ರಾಧಿಕಾ ಅಗರ್ವಾಲ್ ಮತ್ತು ಇತರರು 2018ರಲ್ಲಿ ಅರ್ಜಿ ಸಲ್ಲಿಸಿದ್ದರು.

ಸಿಆರ್‌ಪಿಸಿ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯಲ್ಲಿ (ಬಿಎನ್‌ಎಸ್‌ಎಸ್) ನಿರೀಕ್ಷಣಾ ಜಾಮೀನಿನ ಕುರಿತಾಗಿ ಇರುವ ಅಂಶಗಳು ಸೀಮಾಸುಂಕ ಕಾಯ್ದೆ ಮತ್ತು ಜಿಎಸ್‌ಟಿ ಕಾಯ್ದೆಗೆ ಕೂಡ ಅನ್ವಯ ಆಗುತ್ತವೆ ಎಂದು ಸಿಜೆಐ ಅವರು ತೀರ್ಪು ಪ್ರಕಟಿಸುವಾಗ ಹೇಳಿದ್ದಾರೆ.

ಸಿಆರ್‌ಪಿಸಿಯ ಸೆಕ್ಷನ್ 438ರ ಅಡಿಯಲ್ಲಿ, ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸುವುದಕ್ಕೂ ಮೊದಲು ಎಫ್‌ಐಆರ್ ದಾಖಲಾಗಿರಲೇ ಬೇಕು ಎಂಬ ನಿಯಮ ಇಲ್ಲ. ವಾಸ್ತವ ಏನು ಎಂಬುದು ಸ್ಪಷ್ಟವಾಗಿದ್ದರೆ, ಬಂಧನದ ಭೀತಿಗೆ ಸಕಾರಣಗಳು ಇದ್ದರೆ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಬಹುದು ಎಂದು ಪೀಠವು ಹೇಳಿದೆ.

ಈ ತತ್ವವನ್ನು ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠವು ಈಚೆಗೆ ಸುಶೀಲಾ ಅಗರ್ವಾಲ್ ಪ್ರಕರಣದಲ್ಲಿ ಸ್ಪಷ್ಟಪಡಿಸಿದೆ ಎಂದು ಹೇಳಿದೆ.

ಜಿಎಸ್‌ಟಿ ಮತ್ತು ಸೀಮಾಸುಂಕ ಕಾಯ್ದೆಗಳ ಅಡಿಯಲ್ಲಿ ಬಂಧನದ ಭೀತಿ ಎದುರಿಸುತ್ತಿರುವ ವ್ಯಕ್ತಿಗಳು ಎಫ್‌ಐಆರ್ ದಾಖಲಾಗುವ ಮೊದಲೂ ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಬಹುದು ಎಂದು ತೀರ್ಪಿನಲ್ಲಿ ಸ್ಪಷ್ಟಪಡಿಸಲಾಗಿದೆ.

ತೆರಿಗೆ ವಸೂಲಿಗೆ ಯಾವುದೇ ತೆರಿಗೆದಾರರಿಗೆ ಬಂಧನದ ಬೆದರಿಕೆ ಎದುರಾಗದಂತೆ ನೋಡಿಕೊಳ್ಳಲು ಕೇಂದ್ರ ಪರೋಕ್ಷ ತೆರಿಗೆಗಳು ಮತ್ತು ಸೀಮಾಸುಂಕ ಮಂಡಳಿಯು ಸ್ಪಷ್ಟವಾದ ಮಾರ್ಗಸೂಚಿ ರೂಪಿಸಬೇಕಿರುವುದು ಅಪೇಕ್ಷಣೀಯ ಎಂದು ಪೀಠ ಹೇಳಿದೆ.

ಸೀಮಾಸುಂಕ ಅಧಿಕಾರಿಗಳು ಪೊಲೀಸರಲ್ಲ. ಸೀಮಾಸುಂಕ ಅಧಿಕಾರಿಗಳಿಂದ ಬಂಧಿತ ವ್ಯಕ್ತಿಯು ತನ್ನ ವಕೀಲರನ್ನು ಭೇಟಿ ಮಾಡುವ ಹಕ್ಕು ಹೊಂದಿರುತ್ತಾನೆ. ಆದರೆ ವಿಚಾರಣೆಯ ಉದ್ದಕ್ಕೂ ಆತ ವಕೀಲರನ್ನು ಭೇಟಿ ಮಾಡುವಂತಿಲ್ಲ ಎಂದು ಸ್ಪಷ್ಟಪಡಿಸಿದೆ.

ವಿಚಾರಣೆಗಳ ಕಡತ ಕೋರಿದ ದೆಹಲಿ ನ್ಯಾಯಾಲಯ

ನವದೆಹಲಿ (ಪಿಟಿಐ): ಮುಂಬೈ ಮೇಲೆ 2008ರಲ್ಲಿ ನಡೆದ ಭಯೋತ್ಪಾದಕರ ದಾಳಿಯ ಸೂತ್ರಧಾರ ತಹವ್ವುರ್ ಹುಸೇನ್ ರಾಣಾನನ್ನು ಭಾರತಕ್ಕೆ ಕರೆತರಲಾಗುತ್ತದೆ ಎಂಬ ನಿರೀಕ್ಷೆಗಳು ಇರುವ ಸಂದರ್ಭದಲ್ಲಿ, ಈ ಪ್ರಕರಣದ ವಿಚಾರಣೆಗೆ ಸಂಬಂಧಿಸಿದ ಕಡತಗಳನ್ನು ಸಲ್ಲಿಸುವಂತೆ ದೆಹಲಿಯ ನ್ಯಾಯಾಲಯವೊಂದು ಮುಂಬೈನ ನ್ಯಾಯಾಲಯವೊಂದಕ್ಕೆ ಹೇಳಿದೆ.

ದಾಖಲೆಗಳನ್ನು ಸಲ್ಲಿಸುವಂತೆ ಮುಂಬೈ ನ್ಯಾಯಾಲಯದ ಅಧಿಕಾರಿಗಳಿಗೆ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶ ವಿಮಲ್ ಕುಮಾರ್ ಯಾದವ್ ಅವರು ಜನವರಿ 28ರಂದು ನೀಡಿರುವ ಆದೇಶದಲ್ಲಿ ಹೇಳಿದ್ದಾರೆ.

ಮುಂಬೈನಲ್ಲಿ ಇರುವ ಕಡತಗಳು ಬೇಕು ಎಂದು ಎನ್‌ಐಎ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಯಾದವ್ ಅವರು ಈ ಆದೇಶ ನೀಡಿದ್ದಾರೆ.

‘ಜನಸಾಮಾನ್ಯರ ಜೇಬು ಖಾಲಿ’

ನಿರುದ್ಯೋಗ ಸಮಸ್ಯೆಯು ನಮ್ಮ ಯುವಕರಿಗೆ ಅಸಹನೀಯವಾಗಿದೆ. ಬಜೆಟ್ ಘೋಷಣೆಗಳು ವಿಫಲ ಪ್ರಯತ್ನ ಎನಿಸಿವೆ
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ‘ವಿಕಸಿತ ಭಾರತ’ ಪರಿಕಲ್ಪನೆಯು ದೇಶದ ಸಾಮಾನ್ಯ ಪ್ರಜೆಗಳ ಜೇಬನ್ನು ಖಾಲಿ ಮಾಡಿದ್ದು, ಕೆಲವೇ ಕೆಲವು ಶತಕೋಟ್ಯಧಿಪತಿಗಳ ಬೊಕ್ಕಸವನ್ನು ತುಂಬಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದ್ದಾರೆ.

‘ನರೇಂದ್ರ ಮೋದಿ ಅವರೇ, 100 ಕೋಟಿ ಭಾರತೀಯರ ಬಳಿ ಖರ್ಚು ಮಾಡಲು ಯಾವುದೇ ಹೆಚ್ಚುವರಿ ಆದಾಯ ಇಲ್ಲ. ನಮ್ಮ ಜಿಡಿಪಿಯ ಶೇ 60ರಷ್ಟು ಭಾಗವು ಖರೀದಿ ಮತ್ತು ಬಳಕೆಯ ಮೇಲೆ ಅವಲಂಬಿತವಾಗಿದೆ. ಆದರೆ ಇಂದು ದೇಶದಲ್ಲಿ ಶೇ 10ರಷ್ಟು ಮಂದಿ ಮಾತ್ರ ಖರೀದಿಸುವ ಮತ್ತು ಆರ್ಥಿಕ ಬೆಳವಣಿಗೆಗೆ ಕೊಡುವ ನೀಡುವ ಸಾಮರ್ಥ್ಯ ಹೊಂದಿದ್ದಾರೆ. ಶೇ 90ರಷ್ಟು ಮಂದಿಗೆ ದೈನಂದಿನ ಅಗತ್ಯಗಳನ್ನು ಪೂರೈಸುವ ವಸ್ತುಗಳನ್ನು ಖರೀದಿಸುವ ಶಕ್ತಿಯೂ ಇಲ್ಲ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಭಾರತದ ತೆರಿಗೆ ಪಾವತಿಸುವರಲ್ಲಿ ಶೇ 50 ರಷ್ಟು ಮಂದಿಯ ವೇತನ ಕಳೆದ ದಶಕದಲ್ಲಿ ಅಲ್ಪವೂ ಏರಿಕೆಯಾಗಿಲ್ಲ. ಗ್ರಾಮೀಣ ಭಾಗದ ಜನರ ವೇತನ ನಕಾರಾತ್ಮಕ ಬೆಳವಣಿಗೆಗೆ ಸಾಕ್ಷಿಯಾಗುತ್ತಿವೆ. ಸಂಪತ್ತಿನ ಕೇಂದ್ರೀಕರಣವು ಹೆಚ್ಚುತ್ತಿದ್ದು, ಸರ್ಕಾರದ ನೀತಿಗಳು ಆದಾಯವನ್ನು ಎಲ್ಲರಿಗೂ ಹಂಚಿಕೆ ಮಾಡುವಲ್ಲಿ ವಿಫಲವಾಗಿವೆ’ ಎಂದು ದೂರಿದ್ದಾರೆ.

‘ಕಳೆದ 10 ವರ್ಷಗಳಲ್ಲಿ ವೇತನದಲ್ಲಿ ಹೆಚ್ಚಳ ಆಗದಿರುವುದು, ಹಣದುಬ್ಬರ, ಖರೀದಿ ಮತ್ತು ಬಳಕೆಯ ಪ್ರಮಾಣ ಕುಸಿದ ಕಾರಣ ಜನರ ಉಳಿತಾಯದ ಪ್ರಮಾಣ 50 ವರ್ಷಗಳಲ್ಲೇ ಕನಿಷ್ಠ ಮಟ್ಟಕ್ಕೆ ಇಳಿದಿದೆ. ಆದಾಯದ ಅಸಮಾನತೆಯು 100 ವರ್ಷಗಳ ಗರಿಷ್ಠ ಮಟ್ಟಕ್ಕೆ ಏರಿದೆ. ಮನೆಮಂದಿಯ ಸಾಲದ ಪ್ರಮಾಣ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದೆ’ ಎಂದು ಹೇಳಿದ್ದಾರೆ.

ತುರ್ತು ವೀಸಾ: ವಿದ್ಯಾರ್ಥಿನಿ ತಂದೆ ಮೊರೆ

ನವದೆಹಲಿ (ಪಿಟಿಐ): ಕ್ಯಾಲಿಫೋರ್ನಿಯಾದಲ್ಲಿ ಸಂಭವಿಸಿದ ರಸ್ತೆ ಅಪಘಾತದಿಂದಾಗಿ ಜೀವನ್ಮರಣ ಹೋರಾಟ ನಡೆಸುತ್ತಿರುವ ಭಾರತೀಯ ವಿದ್ಯಾರ್ಥಿನಿಯ ಕುಟುಂಬಕ್ಕೆ ತುರ್ತು ವೀಸಾ ನೀಡುವಂತೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಅಮೆರಿಕಕ್ಕೆ ಮನವಿ ಮಾಡಿದೆ ಎಂದು ಮೂಲಗಳು ತಿಳಿಸಿವೆ.

ಮಹಾರಾಷ್ಟ್ರದ ಸತಾರಾ ಜಿಲ್ಲೆಯವರಾದ ನೀಲಂ ಶಿಂದೆ ಅವರು ಫೆ.14ರಂದು ನಡೆದ ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು, ಆಸ್ಪತ್ರೆಯಲ್ಲಿ ಕೋಮಾ ಸ್ಥಿತಿಯಲ್ಲಿದ್ದಾರೆ. ಶಿಂದೆ ಅವರ ತಲೆ, ಕೈ ಮತ್ತು ಎದೆಗೆ ತೀವ್ರ ಗಾಯಗಳಾಗಿವೆ ಎಂದು ವರದಿಯಾಗಿದೆ.

ಆಕೆಯನ್ನು ನೋಡಿಕೊಳ್ಳುವ ಸಲುವಾಗಿ ಅಮೆರಿಕಕ್ಕೆ ಹೋಗಲು ತುರ್ತು ವೀಸಾ ನೀಡುವಂತೆ ಆಕೆಯ ತಂದೆ ಕೋರಿದ್ದಾರೆ. ಇದನ್ನು ಅಮೆರಿಕದ ಗಮನಕ್ಕೆ ತರಲಾಗಿದ್ದು, ವಿದ್ಯಾರ್ಥಿನಿಯ ಕುಟುಂಬಕ್ಕೆ ತುರ್ತು ವೀಸಾ ಒದಗಿಸಲು ಪರಿಶೀಲನೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಎನ್‌ಸಿಪಿ (ಶರದ್‌ಚಂದ್ರ ಪವಾರ್) ನಾಯಕಿ ಸುಪ್ರಿಯಾ ಸುಳೆ ಅವರು, ‘ಸತಾರಾದವರಾದ ನೀಲಂ ಅವರ ತಂದೆ ತಾನಾಜಿ ಶಿಂದೆ ಅವರು ವೈದ್ಯಕೀಯ ತುರ್ತುಸ್ಥಿತಿಯ ಕಾರಣದಿಂದಾಗಿ ತಮ್ಮ ಮಗಳನ್ನು ಭೇಟಿ ಮಾಡಬೇಕಾಗಿದೆ. ಅವರು ತುರ್ತು ವೀಸಾಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಅವರಿಗೆ ನೆರವಿನ ಅಗತ್ಯವಿದೆ’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಹಂಚಿಕೊಂಡಿದ್ದರು.

ಗಂಗೆ, ಯಮುನೆ, ಸರಸ್ವತಿ ಹಾಗೂ ಜನರಲ್ಲಿ ಕ್ಷಮೆಯಾಚನೆ

‘ಅಪಚಾರವಾಗಿದ್ದರೆ ಕ್ಷಮಿಸಿ’

ನವದೆಹಲಿ (ಪಿಟಿಐ): ‘ಮಹಾಕುಂಭ ಮುಕ್ತಾಯಗೊಂಡಿದೆ; ಏಕತೆಯ ‘ಮಹಾಯಜ್ಞ’ವೊಂದು ಮುಕ್ತಾಯಗೊಂಡಿದೆ. ಗಂಗಾ ಮಾತೆ, ತಾಯಿ ಯಮುನೆ ಮತ್ತು ಸರಸ್ವತಿ ಹಾಗೂ ಜನರು ನನಗೆ ದೇವರ ಸಮಾನ. ನಿಮ್ಮ ಸೇವೆಯಲ್ಲಿ ಏನಾದರೂ ಅಪಚಾರವಾಗಿದ್ದರೆ ನನ್ನನ್ನು ಕ್ಷಮಿಸಿ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸುದೀರ್ಘವಾದ ಬರಹವನ್ನು ಬರೆದಿದ್ದಾರೆ.

ಜ.13ರಿಂದ ಆರಂಭಗೊಂಡು, 45 ದಿನಗಳವರೆಗೆ ಉತ್ತರ ಪ್ರದೇಶದ ಪ್ರಯಾಗರಾಜ್‌ನಲ್ಲಿ ನಡೆದ ಮಹಾ ಕುಂಭ ಮೇಳವು ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಅವರು ಲೇಖನ ಬರೆದಿದ್ದಾರೆ. ಇದನ್ನು ತಮ್ಮ ಸಾಮಾಜಿಕ ಜಾಲತಾಣಗಳ ಖಾತೆಗಳ ಮೂಲಕ ಹಂಚಿಕೊಂಡಿದ್ದಾರೆ.

‘ಗಂಗೆ, ಯಮುನೆ ಸೇರಿ ಇತರ ನದಿಗಳ ಸ್ವಚ್ಛತೆಯು ಜನರ ಬದುಕಿನೊಂದಿಗೆ ನಂಟು ಹೊಂದಿದೆ. ಈ ನದಿಗಳ ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂಬ ನನ್ನ ಬದ್ಧತೆಗೆ ಈ ಮಹಾ ಕಾರ್ಯಕ್ರಮವು ಇಂಬು ನೀಡಿದೆ’ ಎಂದರು. ‘ಅಮೆರಿಕದ ಜನಸಂಖ್ಯೆಯ ಎರಡರಷ್ಟು ಜನರು ಮೇಳದಲ್ಲಿ ಭಾಗವಹಿಸಿದ್ದಾರೆ. ಕಳೆದ ಬಾರಿಯ ಕುಂಭಮೇಳವನ್ನು ದೃಷ್ಟಿಯಲ್ಲಿಟ್ಟುಕೊಂಡು ತಯಾರಿ ಮಾಡಿಕೊಳ್ಳಲಾಗಿತ್ತು. ಆದರೆ, ಅಂದಾಜು ಮಾಡಿಕೊಂಡಿದ್ದಕ್ಕಿಂತ ಅತ್ಯಧಿಕ ಸಂಖ್ಯೆಯಲ್ಲಿ ಜನರು ಬಂದರು. ಇಷ್ಟೊಂದು ಜನರಿಗೆ ವ್ಯವಸ್ಥೆ ಮಾಡುವುದು ಸುಲಭದ ವಿಚಾರವಲ್ಲ’ ಎಂದರು. ಇದೇ ವೇಳೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಕಾರ್ಯವನ್ನು ಶ್ಲಾಘಿಸಿದ್ದಾರೆ.

‘ಹೊಸ ಭಾಷ್ಯ ಬರೆದ ಮಹಾಕುಂಭ’

‘ಕೋಟ್ಯಂತರ ಭಾರತೀಯರು ಅತ್ಯುತ್ಸಾಹದಿಂದ ಮಹಾಕುಂಭದಲ್ಲಿ ಪಾಲ್ಗೊಂಡ ಬಗ್ಗೆ ಅಧ್ಯಾತ್ಮದ ವಿದ್ವಾಂಸರು ವಿಶ್ಲೇಷಣೆ ಮಾಡಿದರೆ, ‘ಪರಂಪರೆಗಳ ಬಗ್ಗೆ ಹೆಮ್ಮೆ ಇರುವ ಭಾರತವು ಈಗ ಹೊಸದೊಂದು ಶಕ್ತಿಯನ್ನು ಸಂಚಯಿಸಿಕೊಂಡು ಮುನ್ನುಗ್ಗುತ್ತಿದೆ’ ಎಂದೇ ಹೇಳುತ್ತಾರೆ. ಹೊಸದೊಂದು ಯುಗದ ಆರಂಭ ಇದು ಎಂದು ನಾನು ನಂಬಿದ್ದೇನೆ. ಇದು ಭಾರತದ ಭವಿಷ್ಯದ ಭಾಷ್ಯ ಬರೆಯುತ್ತದೆ’ ಎಂದರು.

‘ಪ್ರಯಾಗರಾಜ್‌ನಲ್ಲಿ ಜನವರಿ 13ರ ನಂತರ ನಡೆದ ಮಹಾಕುಂಭದ ದೃಶ್ಯಗಳು ಹೇಗಿದ್ದವು ಎಂದರೆ, ದೇಶವೊಂದರ ಪ್ರಜ್ಞೆಯು ಜಾಗೃತಗೊಂಡಂತೆ; ನೂರಾರು ವರ್ಷಗಳ ಗುಲಾಮಗಿರಿಯ ಸಂಕೋಲೆಗಳನ್ನು ಕಿತ್ತೆಸೆದು ಹೊಸ ಪ್ರಜ್ಞೆಯನ್ನು ಉಸಿರಾಡಿದಂತೆ’ ಎಂದು ಹೇಳಿದರು.

144 ವರ್ಷಗಳ ಬಳಿಕ ನಡೆದ ಮಹಾಕುಂಭ ಮೇಳ ಭಾರತದ ಅಭಿವೃದ್ಧಿಯ ಹೊಸ ಅಧ್ಯಾಯ ಆರಂಭವಾಗುವ ಸಂದೇಶ ನೀಡಿದೆ. ಇದು ‘ವಿಕಸಿತ ಭಾರತ’ದ ಸಂದೇಶ
ನರೇಂದ್ರ ಮೋದಿ, ಪ್ರಧಾನಿ

ಮಹಾಕುಂಭ ಮೇಳದ ಯಶಸ್ಸು ಸಂಪೂರ್ಣವಾಗಿ ಪ್ರಧಾನಿ ಮೋದಿ ಅವರಿಗೆ ಸಲ್ಲಬೇಕು. ಅವರ ದೂರದೃಷ್ಟಿ ಕಾರಣ ಈ ಯಶಸ್ಸು ಲಭಿಸಿದೆ
ಯೋಗಿ ಆದಿತ್ಯನಾಥ
ಉತ್ತರ ಪ್ರದೇಶದ ಮುಖ್ಯಮಂತ್ರಿ

ನಿಂಬೆ ವಸ್ತ್ರ ಮಹಾ ಶಿವರಾತ್ರಿ ಮಾರನೇ ದಿನ ಆಚರಿಸಲಾಗುವ ‘ಮಯಾನ್ ಕೊಳ್ಳೈ’ ಉತ್ಸವದ ಅಂಗವಾಗಿ ಚೆನ್ನೈನಲ್ಲಿ ಗುರುವಾರ ನಡೆದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಭಕ್ತರು ನಿಂಬೆ ಹಣ್ಣುಗಳನ್ನು ಧರಿಸಿದ್ದರು –ಪಿಟಿಐ ಚಿತ್ರ

‘ಹಿಂದಿ, ಸಂಸ್ಕೃತ ಹೇರುವ ಯತ್ನ’

ಎಂ.ಕೆ.ಸ್ಟಾಲಿನ್

ಚೆನ್ನೈ (ಪಿಟಿಐ): ‘ತಮಿಳುನಾಡಿನಲ್ಲಿ ಹಿಂದಿ ಹೇರಿಕೆಗೆ ಅವಕಾಶ ನೀಡುವುದಿಲ್ಲ’ ಎಂಬುದನ್ನು ಪುನರುಚ್ಚರಿಸಿರುವ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ತಮಿಳು ಭಾಷೆ ಹಾಗೂ ರಾಜ್ಯದ ಸಂಸ್ಕೃತಿಯನ್ನು ರಕ್ಷಿಸುವುದಾಗಿ ಗುರುವಾರ ಪ್ರತಿಜ್ಞೆ ಮಾಡಿದರು.

ಕೇಂದ್ರ ಸರ್ಕಾರವು ‘ತ್ರಿಭಾಷಾ ಸೂತ್ರ’ದ ಹೆಸರಿನಲ್ಲಿ ಹಿಂದಿ ಭಾಷೆಯನ್ನು ಹೇರಿ, ಆ ಮೂಲಕ ಸಂಸ್ಕೃತ ಭಾಷೆಗೆ ಉತ್ತೇಜನ ನೀಡಲು ಮುಂದಾಗಿದೆ ಎಂದು ಅವರು ಆರೋಪಿಸಿದರು.

‘ಹಿಂದಿ ಹೇರಿಕೆ ವಿರೋಧಿಸುತ್ತೇವೆ. ಹಿಂದಿ ಎಂಬುದು ಮುಖವಾಡ ಆಗಿದ್ದು, ಸಂಸ್ಕೃತ ಭಾಷೆಯೇ ಅದರ ಹಿಂದಿನ ನಿಜವಾದ ಮುಖ’ ಎಂದು ಪಕ್ಷದ ಕಾರ್ಯಕರ್ತರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಎನ್‌ಇಪಿ ಭಾಗವಾಗಿ ತ್ರಿಭಾಷಾ ಸೂತ್ರದ ಹೆಸರಿನಲ್ಲಿ ಕೇಂದ್ರ ಸರ್ಕಾರವು ಹಿಂದಿ ಹೇರಲು ಮುಂದಾಗಿದೆ ಎಂದು ಆಡಳಿತಾರೂಢ ಡಿಎಂಕೆ ಆರೋಪಿಸುತ್ತಾ ಬಂದಿದೆ.

ರಕ್ಷಣಾ ಕಾರ್ಯ ಮುಗಿಸಲು 48 ಗಂಟೆ ಗಡುವು

ಪ್ರಜಾವಾಣಿ ವಾರ್ತೆ

ಸುರಂಗ ಅವಘಡ

ಹೈದರಾಬಾದ್: ನಿರ್ಮಾಣ ಹಂತದಲ್ಲಿರುವ, ಶ್ರೀಶೈಲಂ ಎಡ ದಂಡೆ ಕಾಲುವೆ (ಎಸ್‌ಎಲ್‌ಬಿಸಿ) ಕುಸಿದ ಪರಿಣಾಮ ಸಿಲುಕಿರುವ 8 ಮಂದಿ ಕಾರ್ಮಿಕರ ರಕ್ಷಣಾ ಕಾರ್ಯ ಗುರುವಾರವೂ ಮುಂದುವರಿದಿದ್ದು, ಹಾನಿಗೆ ಒಳಗಾಗಿರುವ ಟನೆಲ್ ಬೋರಿಂಗ್ ಮಷಿನ್ (ಟಿಬಿಎಂ) ಅನ್ನು ಕತ್ತರಿಸುವ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಈ ನಡುವೆ, ರಕ್ಷಣಾ ಕಾರ್ಯ ಪೂರ್ಣಗೊಳಿಸಲು ತೆಲಂಗಾಣ ಸರ್ಕಾರ 48 ಗಂಟೆ ಗಡುವು ನೀಡಿದೆ.

ಸಿಲುಕಿರುವ ಸಿಬ್ಬಂದಿ ರಕ್ಷಣೆಗೆ ಟಿಬಿಎಂ ದೊಡ್ಡ ಅಡ್ಡಿಯಾಗಿದೆ. ಈ ಬೃಹತ್ ಯಂತ್ರವನ್ನು ಕತ್ತರಿಸುವ ಸಲುವಾಗಿ ಪ್ಲಾಸ್ಮಾ ಕಟರ್ ಹಾಗೂ ಇತರ ಸಾಧನಗಳೊಂದಿಗೆ ರಕ್ಷಣಾ ಸಿಬ್ಬಂದಿ ಸುರಂಗದೊಳಗೆ ತೆರಳಿದ್ದಾರೆ.

‘ಕೆಸರಿನಿಂದ ಕೂಡಿದ ಮಣ್ಣು ಸೇರಿದಂತೆ ಸುರಂಗದಲ್ಲಿ ಬಿದ್ದಿರುವ ಅವಶೇಷಗಳನ್ನು ಸಾಗಿಸುವುದಕ್ಕಾಗಿ ಟಿಬಿಎಂನ ಕನ್ವೆಯರ್ ಬೆಲ್ಟ್ ದುರಸ್ತಿಗೂ ಚಾಲನೆ ನೀಡಲಾಗಿದೆ. ಇನ್ನೊಂದೆಡೆ ಟಿಬಿಎಂ ಯಂತ್ರದ ಭಾಗಗಳನ್ನು ಕತ್ತರಿಸುವ ಕಾರ್ಯಕ್ಕೆ ಗುರುವಾರ ಮತ್ತೆ ಚಾಲನೆ ನೀಡಲಾಗಿದೆ’ ಎಂದು ನೀರಾವರಿ ಸಚಿವ ಎನ್. ಉತ್ತಮ ಕುಮಾರ್ ರೆಡ್ಡಿ ಹೇಳಿದ್ದಾರೆ.

‘ಈ ರಕ್ಷಣಾ ಕಾರ್ಯ ಭಾರಿ ಸವಾಲಿನಿಂದ ಕೂಡಿದೆ. ತಜ್ಞರು ತಮ್ಮ ಜೀವ ಪಣಕ್ಕಿಟ್ಟು, ಸುರಂಗದಲ್ಲಿ ಸಿಲುಕಿರುವವರ ರಕ್ಷಣೆಗಾಗಿ ಶ್ರಮಿಸುತ್ತಿದ್ದಾರೆ’ ಎಂದೂ ಸಚಿವ ರೆಡ್ಡಿ ಹೇಳಿದ್ದಾರೆ.

ರಾಜ್ಯಗಳ ತೆರಿಗೆ ಪಾಲು ಕಡಿತ?

ಒಂದನೇ ಪುಟದಿಂದ...

ಆದರೆ ಕೇಂದ್ರ ಸರ್ಕಾರದ ವೆಚ್ಚದ ಪ್ರಮಾಣ, ವಿಶೇಷವಾಗಿ ಆರ್ಥಿಕ ಹಿಂಜರಿತದ ವರ್ಷಗಳಲ್ಲಿ ಇನ್ನಷ್ಟು ಹೆಚ್ಚಾಗಿದೆ. ಇದರಿಂದ ರಾಜ್ಯಗಳಿಗೆ ನೀಡುವ ತೆರಿಗೆ ಪಾಲನ್ನು ತಗ್ಗಿಸುವ ನಿರ್ಧಾರಕ್ಕೆ ಬರಲಾಗಿದೆ ಎಂದು ಮೂಲಗಳು ಹೇಳಿವೆ. 2024–25ರಲ್ಲಿ ದೇಶದ ವಿತ್ತೀಯ ಕೊರತೆಯು ಜಿಡಿಪಿಯ ಶೇ 4.8ರಷ್ಟು ಇರಲಿದೆ ಎಂದು ಅಂದಾಜಿಸಲಾಗಿದೆ. ರಾಜ್ಯಗಳ ವಿತ್ತೀಯ ಕೊರತೆ ಶೇ 3.2ರಷ್ಟಿದೆ.

ರಾಜ್ಯಗಳಿಗೆ ನೀಡುವ ಪಾಲನ್ನು ಶೇ 1ರಷ್ಟು ಕಡಿತಗೊಳಿಸುವ ನಿರ್ಧಾರದ ಬಗ್ಗೆ ಸ್ಪಷ್ಟನೆ ಕೋರಿ ಹಣಕಾಸು ಸಚಿವಾಲಯ ಮತ್ತು ಹಣಕಾಸು ಆಯೋಗಕ್ಕೆ ಇ–ಮೇಲ್ ಕಳುಹಿಸಿದರೂ, ಯಾವುದೇ ಪ್ರತಿಕ್ರಿಯೆ ಲಭಿಸಿಲ್ಲ.

‘ಕೇಂದ್ರದ ಹೊಸ ಅಸ್ತ್ರ’

ಒಂದನೇ ಪುಟದಿಂದ...

‘ಈ ಎಲ್ಲ ಅನ್ಯಾಯಗಳ ವಿರುದ್ಧ ರಾಷ್ಟ್ರ ಮಟ್ಟದಲ್ಲಿ ದನಿ ಎತ್ತದಂತೆ ಮಾಡಲು, ಸಂಸತ್‌ನಲ್ಲಿ ದಕ್ಷಿಣದ ರಾಜ್ಯಗಳ ದನಿಯನ್ನು ಇನ್ನಷ್ಟು ಕ್ಷೀಣಗೊಳಿಸುವ ದುರುದ್ದೇಶದಿಂದ ಕೇಂದ್ರದ ಬಿಜೆಪಿ ಸರ್ಕಾರ ಕ್ಷೇತ್ರ ಮರುವಿಂಗಡಣೆಯ ಹೊಸ ಅಸ್ತ್ರವನ್ನು ಎತ್ತಿಕೊಂಡು ಹೊರಟಿದೆ’ ಎಂದಿದ್ದಾರೆ.

ಆಯೋಗದ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ನಡೆಸುವುದಾಗಿ ಎಚ್ಚರಿಕೆ

‘ನಕಲಿ ಮತದಾರರ ನೋಂದಣಿ’

ಕೋಲ್ಕತ್ತ (ಪಿಟಿಐ): ಚುನಾವಣಾ ಆಯೋಗದ (ಇ.ಸಿ) ನೆರವಿನೊಂದಿಗೆ ಬಿಜೆಪಿಯು ಇತರ ರಾಜ್ಯಗಳ ನಕಲಿ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಸೇರಿಸಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದು, ಇದನ್ನು ಸರಿಪಡಿಸದಿದ್ದಲ್ಲಿ ಚುನಾವಣಾ ಆಯೋಗದ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ನಡೆಸುವುದಾಗಿ ಗುರುವಾರ ಎಚ್ಚರಿಸಿದರು.

ಇಲ್ಲಿ ನಡೆದ ಟಿಎಂಸಿ ಸಮಾವೇಶ ಉದ್ದೇಶಿಸಿ ಮಾತನಾಡಿ, ಜ್ಞಾನೇಶ್ ಕುಮಾರ್ ಅವರನ್ನು ಮುಖ್ಯ ಚುನಾವಣಾ ಆಯುಕ್ತರನ್ನಾಗಿ ನೇಮಿಸಿರುವುದನ್ನು ಪ್ರಶ್ನಿಸಿದರು. ಬಿಜೆಪಿ ಸಾಂವಿಧಾನಿಕ ಸಂಸ್ಥೆಯ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು.

‘ಚುನಾವಣೆಯಲ್ಲಿ ಅಕ್ರಮ ನಡೆಸಲು, ಹರಿಯಾಣ ಮತ್ತು ಗುಜರಾತ್‌ನ ಮತದಾರರನ್ನು ಬೇರೆ ರಾಜ್ಯಗಳ ಮತದಾರರ ಪಟ್ಟಿಯಲ್ಲಿ ಸೇರಿಸಲಾಗಿದೆ. ದೆಹಲಿ ಮತ್ತು ಮಹಾರಾಷ್ಟ್ರದಲ್ಲಿ ಬಿಜೆಪಿ ಇದೇ ರೀತಿಯ ತಂತ್ರಗಳನ್ನು ಬಳಸಿ, ಚುನಾವಣೆಯಲ್ಲಿ ಗೆಲುವು ಸಾಧಿಸಿದೆ. ಇ.ಸಿ ಆಶೀರ್ವಾದದೊಂದಿಗೆ ಬಿಜೆಪಿಯು ಮತದಾರರ ಪಟ್ಟಿಯನ್ನು ಹೇಗೆ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂಬುದು ಸ್ಪಷ್ಟವಾಗಿದೆ’ ಎಂದು ಅವರು ಹೇಳಿದರು.

ನಕಲಿ ಮತದಾರರ ಗುರುತಿಸುತ್ತೇವೆ. ಹೊರಗಿನವರು (ಬಿಜೆಪಿ) ಬಂಗಾಳ ವಶಪಡಿಸಿಕೊಳ್ಳಲು ಬಿಡುವುದಿಲ್ಲ. ದೆಹಲಿಯಲ್ಲಿ ಬಿಜೆಪಿ ಮಾಡಿದ್ದನ್ನು ಇಲ್ಲಿ ಪುನರಾವರ್ತಿಸಲು ಸಾಧ್ಯವಿಲ್ಲ
ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳ ಮುಖ್ಯಮಂತ್ರಿ

‘ಮುಕ್ತ ಮತ್ತು ನ್ಯಾಯಯುತ ಚುನಾವಣೆ ನಡೆದರೆ ಪಶ್ಚಿಮ ಬಂಗಾಳದಲ್ಲಿ ಚುನಾವಣೆಯನ್ನು ಗೆಲ್ಲಲು ಸಾಧ್ಯವಿಲ್ಲವೆಂಬುದು ಬಿಜೆಪಿಗೆ ತಿಳಿದಿದೆ. ಹಾಗಾಗಿಯೇ ಆ ಪಕ್ಷವು ಈ ನಕಲಿ ಮತದಾರರನ್ನು ಹರಿಯಾಣ ಮತ್ತು ಗುಜರಾತ್‌ನಿಂದ ಕರೆತಂದು ಇಲ್ಲಿ ಚುನಾವಣೆ ಗೆಲ್ಲಲು ಪ್ರಯತ್ನಿಸುತ್ತಿದೆ. ಇ.ಸಿಯ ನೆರವಿನಿಂದ ಇತರ ರಾಜ್ಯಗಳ ನಕಲಿ ಮತದಾರರನ್ನು ಪಶ್ಚಿಮ ಬಂಗಾಳದ ವಿವಿಧ ಜಿಲ್ಲೆಗಳಲ್ಲಿ ಸೇರಿಸಿದೆ’ ಎಂದು ಅವರು ಆರೋಪಿಸಿದರು.

‘ನಾನು 26 ದಿನಗಳ ಉಪವಾಸ ಸತ್ಯಾಗ್ರಹ (2006ರಲ್ಲಿ ಭೂ ಸ್ವಾಧೀನ ವಿರೋಧಿ ಚಳವಳಿ ಸಂದರ್ಭ) ನಡೆಸಿದ್ದೆ. ಈಗ ಚುನಾವಣಾ ಆಯೋಗದ ವಿರುದ್ಧವೂ ಚಳವಳಿ ಪ್ರಾರಂಭಿಸಬೇಕಾಗಿದೆ. ಮತದಾರರ ಪಟ್ಟಿಯನ್ನು ಸರಿಪಡಿಸಲು ಮತ್ತು ನಕಲಿ ಮತದಾರರನ್ನು ತೆಗೆದುಹಾಕಲು ಒತ್ತಾಯಿಸಿ, ಚುನಾವಣಾ ಆಯೋಗದ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ನಡೆಸಲಿದ್ದೇವೆ’ ಎಂದು ಮಮತಾ ಎಚ್ಚರಿಕೆ ನೀಡಿದರು.

‘ಭಿನ್ನಾಭಿಪ್ರಾಯ ಇಲ್ಲ’

ಅಭಿಷೇಕ್ ಬ್ಯಾನರ್ಜಿ

ಕೋಲ್ಕತ್ತ (ಪಿಟಿಐ): ತಮ್ಮ ಹಾಗೂ ಪಕ್ಷದ ಮುಖ್ಯಸ್ಥೆ ಮಮತಾ ಬ್ಯಾನರ್ಜಿ ನಡುವೆ ಭಿನ್ನಾಭಿಪ್ರಾಯಗಳಿವೆ ಎಂಬ ವರದಿಗಳನ್ನು ತೃಣ ಮೂಲ ಕಾಂಗ್ರೆಸ್ ಪಕ್ಷದ (ಟಿಎಂಸಿ) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಗುರುವಾರ ನಿರಾಕರಿಸಿದ್ದಾರೆ.

ಪಕ್ಷದ ಹಿರಿಯ ಕಾರ್ಯಕರ್ತರ ಮತ್ತು ನಾಯಕರ ಸಭೆಯಲ್ಲಿ ಮಾತನಾಡಿದ ಅವರು ‘ನಾನು ಟಿಎಂಸಿಯ ನಿಷ್ಠಾವಂತ ಕಾರ್ಯಕರ್ತ, ಮಮತಾ ಬ್ಯಾನರ್ಜಿ ನಮ್ಮ ನಾಯಕಿ’ ಎಂದು ಹೇಳಿದರು.

ಅಭಿಷೇಕ್ ಅವರು ಬಿಜೆಪಿಗೆ ಸೇರ್ಪಡೆಯಾಗಲಿದ್ದಾರೆ ಎಂಬ ವದಂತಿಗಳ ಕುರಿತು ಮಾತನಾಡಿದ ಅವರು ‘ನಾನು ಬಿಜೆಪಿ ಸೇರುತ್ತೇನೆ ಎಂದು ಹೇಳುತ್ತಿರುವವರು ಸುಳ್ಳನ್ನು ಹರಡುತ್ತಿದ್ದಾರೆ. ನನ್ನ ತಲೆ ಕತ್ತರಿಸಿದರೂ ನಾನು ‘ಮಮತಾ ಬ್ಯಾನರ್ಜಿ ಜಿಂದಾಬಾದ್’ ಎಂದೇ ಹೇಳುತ್ತೇನೆ’ ಎಂದರು.

‘ಸಿಬಿಐ ಹೆದರಿದೆ’: ಶಿಕ್ಷಕರ ನೇಮಕಾತಿ ಹಗರಣ ತನಿಖೆಗೆ ಸಂಬಂಧಿಸಿದ ದೋಷಾರೋಪ ಪಟ್ಟಿಯಲ್ಲಿ ಸಿಬಿಐ ತಮ್ಮ ಹೆಸರನ್ನು ಉಲ್ಲೇಖಿಸಿರುವ ಬಗ್ಗೆ ಮಾತನಾಡಿದ ಅಭಿಷೇಕ್ ಬ್ಯಾನರ್ಜಿ, ‘ಸಿಬಿಐ ತುಂಬಾ ಹೆದರಿದೆ. ನನ್ನ ವಿರುದ್ಧ ಸೂಕ್ತ ಸಾಕ್ಷ್ಯಗಳು ಅದರ ಬಳಿಯಿಲ್ಲ. ಅದಕ್ಕಾಗಿ ಪರೋಕ್ಷ ರೀತಿಯಲ್ಲಿ ನನ್ನತ್ತ ಬೆರಳು ಮಾಡಿದೆ. ನಾನು ಇದನ್ನು ಐದು ವರ್ಷಗಳ ಹಿಂದೆಯೇ ಹೇಳಿದ್ದೇನೆ, ಮತ್ತೆ ಹೇಳುತ್ತೇನೆ’ ಎಂದರು.

ವಿಧಾನಸಭೆ ಆವರಣಕ್ಕೆ ಪ್ರವೇಶ ನಿರ್ಬಂಧ: ಎಎಪಿ ಶಾಸಕರ ಧರಣಿ

ನವದೆಹಲಿ(ಪಿಟಿಐ): ವಿರೋಧ ಪಕ್ಷದ ನಾಯಕಿ ಆತಿಶಿ ಮತ್ತು ಎಎಪಿಯ ಶಾಸಕರಿಗೆ ಗುರುವಾರ ದೆಹಲಿ ವಿಧಾನಸಭೆ ಆವರಣ ಪ್ರವೇಶಿಸಲು ಅವಕಾಶ ನಿರಾಕರಿಸಿ, ಪ್ರವೇಶದ್ವಾರದಲ್ಲೆ ತಡೆಯೊಡ್ಡಲಾಯಿತು. ಇದನ್ನು ಖಂಡಿಸಿ ಎಎಪಿ ಶಾಸಕರು ವಿಧಾನಸಭೆ ಆವರಣದ ಹೊರಗೆ ಧರಣಿ ನಡೆಸಿದರು.

ಬಿಜೆಪಿಯು ದೆಹಲಿಯಲ್ಲಿ ಅಧಿಕಾರಕ್ಕೆ ಬಂದ ನಂತರ ಸರ್ವಾಧಿಕಾರದ ಎಲ್ಲ ಎಲ್ಲೆಗಳನ್ನು ಮೀರಿದೆ ಎಂದು ಆತಿಶಿ ಆಕ್ರೋಶ ವ್ಯಕ್ತಪಡಿಸಿದರು. ಸಿ.ಎಂ ಕಚೇರಿಯಿಂದ ಅಂಬೇಡ್ಕರ್ ಅವರ ಭಾವಚಿತ್ರವನ್ನು ಬಿಜೆಪಿ ಸರ್ಕಾರ ತೆಗೆದು ಹಾಕಿರುವುದನ್ನು ಖಂಡಿಸಿ ಪ್ರತಿಭಟಿಸುತ್ತಿರುವುದಾಗಿ ಎಎಪಿ ಹೇಳಿದೆ. ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರ ಭಾಷಣದ ಸಮಯದಲ್ಲಿ ಸದನದ ಕಲಾಪಕ್ಕೆ ಅಡ್ಡಿಪಡಿಸಿದ ಆರೋಪದ ಮೇಲೆ ಎಎಪಿ ಶಾಸಕರನ್ನು ವಿಧಾನಸಭೆಯಿಂದ ಮಂಗಳವಾರ ಅಮಾನತುಗೊಳಿಸಿ ಸ್ಪೀಕರ್ ಆದೇಶ ಹೊರಡಿಸಿದ್ದರು.

ಅಂಬೇಡ್ಕರ್ ಭಾವಚಿತ್ರವನ್ನು ಕೈಯಲ್ಲಿ ಹಿಡಿದು ಬಿಜೆಪಿ ವಿರುದ್ಧ ಘೋಷಣೆ ಕೂಗಿದ ಶಾಸಕರು, ‘ಬಿಜೆಪಿಯ ಸರ್ವಾಧಿಕಾರ ನಡೆಯುವುದಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ನಾವು ಸದನದಲ್ಲಿ ಜೈ ಭೀಮ್ ಘೋಷಣೆ ಕೂಗಿದ್ದಕ್ಕೆ ನಮ್ಮನ್ನು ಮೂರು ದಿನಗಳ ಕಾಲ ಅಮಾನತುಗೊಳಿಸಿದ್ದಾರೆ. ಈಗ ನಮಗೆ ಸದನ ಪ್ರವೇಶಿಸಲು ಅವಕಾಶ ನೀಡಲಿಲ್ಲ. ಇದು ತಪ್ಪು’ ಎಂದು ಎಎಪಿ ಶಾಸಕ ಕುಲದೀಪ್ ಕುಮಾರ್ ಸುದ್ದಿಸಂಸ್ಥೆಗೆ ತಿಳಿಸಿದರು.

ಎಎಪಿಯ ಮತ್ತೊಬ್ಬ ಶಾಸಕ ಸಂಜೀವ್ ಝಾ ಮಾತನಾಡಿ, ‘ಸ್ಪೀಕರ್ ಆದೇಶ ವಿಚಿತ್ರವಾಗಿದೆ. ಅವರ ನೇಮಕವನ್ನು ಬೆಂಬಲಿಸಿದ್ದ ನಮ್ಮನ್ನೇ ಈಗ ಅವರು ಹೊರಹಾಕಿದ್ದಾರೆ. ಸ್ಪೀಕರ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು, ಆದರೆ, ಅವರು ನಮ್ಮ ಕರೆಗಳಿಗೆ ಉತ್ತರಿಸುತ್ತಿಲ್ಲ. ಬಿಜೆಪಿ ಸರ್ಕಾರವು ಅಂಬೇಡ್ಕರ್ ಅವರ ಸಿದ್ಧಾಂತವನ್ನು ದ್ವೇಷಿಸುತ್ತಿದೆ’ ಎಂದು ಕಿಡಿಕಾರಿದರು.

ನವದೆಹಲಿಯಲ್ಲಿ ಗುರುವಾರ ವಿಧಾನಸಭೆ ವಿರೋಧ ಪಕ್ಷದ ನಾಯಕಿ ಆತಿಶಿ ಅವರ ನೇತೃತ್ವದಲ್ಲಿ ಎಎಪಿ ಶಾಸಕರು, ಮುಖ್ಯಮಂತ್ರಿ ಕಚೇರಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರ ತೆಗೆದಿರುವುದನ್ನು ಖಂಡಿಸಿ ಬಿಜೆಪಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು — ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಇಡ್ಲಿ– ಸಾಂಬಾರ್ ಮಾರಾಟ ಗೋವಾ ಶಾಸಕ ಮೈಕೆಲ್ ಕಿಡಿ

ಪಣಜಿ (ಪಿಟಿಐ): ಗೋವಾ ರಾಜ್ಯಕ್ಕೆ ಭೇಟಿ ನೀಡುವ ವಿದೇಶಿ ಪ್ರವಾಸಿಗರ ಸಂಖ್ಯೆ ಗಣನೀಯವಾಗಿ ಕುಸಿತವಾಗಿದ್ದು, ಇದಕ್ಕೆ ಬೀಚ್‌ಗಳ ಬಳಿಯ ಗೂಡಂಗಡಿಗಳಲ್ಲಿ ನಡೆಯುತ್ತಿರುವ ಇಡ್ಲಿ– ಸಾಂಬಾರ್ ಮಾರಾಟ ಪ್ರಮುಖ ಕಾರಣ ಎಂದು ಇಲ್ಲಿನ ಬಿಜೆಪಿ ಶಾಸಕ ಮೈಕೆಲ್ ಲೋಬೊ ಆರೋಪಿಸಿದರು.

ಕರಾವಳಿ ರಾಜ್ಯ ಎದುರಿಸುತ್ತಿರುವ ಈ ಸಮಸ್ಯೆಗೆ ಕೇವಲ ಸರ್ಕಾರವನ್ನು ದೂಷಿಸುವುದು ಸರಿಯಲ್ಲ, ಏಕೆಂದರೆ ಎಲ್ಲ ಭಾಗಿದಾರರು ಇದಕ್ಕೆ ಸಮಾನ ಜವಾಬ್ದಾರ ರಾಗಿದ್ದಾರೆ ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಗೋವಾದ ಜನರು ಬೀಚ್ ಬಳಿಯ ತಮ್ಮ ಗೂಡಂಗಡಿಗಳನ್ನು ಬೇರೆಡೆಯ ಉದ್ಯಮಿಗಳಿಗೆ ಬಾಡಿಗೆಗೆ ನೀಡಿದ್ದಾರೆ. ಇವುಗಳಲ್ಲಿ ಬೆಂಗಳೂರಿನ ಕೆಲವರು ‘ವಡಾ ಪಾವ್’ ಮಾರುತ್ತಿದ್ದರೆ, ಇನ್ನೂ ಕೆಲವರು ಇಡ್ಲಿ–ಸಾಂಬಾರ್ ಮಾರುತ್ತಿದ್ದಾರೆ. ಈ ಕಾರಣಗಳಿಂದಾಗಿ ಎರಡು ವರ್ಷಗಳಿಂದ ಗೋವಾಗೆ ವಿದೇಶಿ ಪ್ರವಾಸಿಗರ ಸಂಖ್ಯೆ ಕ್ಷೀಣಿಸಿದೆ ಎಂದು ಅವರು ಅಭಿಪ್ರಾಯಪಟ್ಟರು.

ಆದರೆ, ದಕ್ಷಿಣ ಭಾರತದ ಜನಪ್ರಿಯ ಉಪಹಾರ ಖಾದ್ಯವಾದ ಇಡ್ಲಿ– ಸಾಂಬಾರ್ ಹೇಗೆ ರಾಜ್ಯದ ಪ್ರವಾಸೋದ್ಯಮದ ಮೇಲೆ ಪರಿಣಾಮ ಬೀರುತ್ತಿದೆ ಎಂಬುದನ್ನು ಶಾಸಕರು ವಿವರಿಸಲಿಲ್ಲ.

ವಕ್ಫ್ ಮಸೂದೆ: ಮಾ. 10 ಬಳಿಕ ಮಂಡನೆ ಸಾಧ್ಯತೆ

ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಮಸೂದೆಗೆ ಸಂಸತ್ತಿನ ಜಂಟಿ ಸಮಿತಿ (ಜೆಪಿಸಿ) ಪ್ರಸ್ತಾಪಿಸಿರುವ ತಿದ್ದುಪಡಿಗಳಿಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದ್ದು, ಬಜೆಟ್ ಅಧಿವೇಶನದ ದ್ವಿತೀಯಾರ್ಧದಲ್ಲಿ ಸಂಸತ್ತಿನಲ್ಲಿ ಮಂಡನೆಯಾಗುವ ಸಾಧ್ಯತೆಗಳಿವೆ.

ಸಮಿತಿ ಪ್ರಸ್ತಾಪಿಸಿರುವ 14 ತಿದ್ದುಪಡಿಗಳಿಗೆ ಸಂಪುಟವು ಫೆಬ್ರುವರಿ 19ರಂದು ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿಯ ಸಂಸದರಾದ ಜಗದಾಂಬಿಕಾ ಪಾಲ್ ನೇತೃತ್ವದ ಸಮಿತಿಯು ಫೆ.13ರಂದು ಸಂಸತ್ತಿನಲ್ಲಿ ಕೋಲಾಹಲದ ನಡುವೆಯೂ ತನ್ನ ವರದಿಯನ್ನು ಮಂಡಿಸಿತ್ತು. ಈ ವೇಳೆ ವಿರೋಧ ಪಕ್ಷಗಳು ಸಭಾತ್ಯಾಗ ಮಾಡಿದ್ದವು.

ವಕ್ಫ್ ಆಸ್ತಿಗಳ ದುರುಪಯೋಗ ತಡೆಯುವುದು ಮತ್ತು ಅವುಗಳ ನೋಂದಣಿಯನ್ನು ವ್ಯವಸ್ಥಿತಗೊಳಿಸುವ ಪ್ರಮುಖ ಉದ್ದೇಶವನ್ನು ಈ ಮಸೂದೆ ಒಳಗೊಂಡಿದೆ.

ಅಧಿವೇಶನದ ಎರಡನೇ ಹಂತವು ಮಾರ್ಚ್ 10ರಿಂದ ಏಪ್ರಿಲ್ 4ರವರೆಗೆ ನಡೆಯಲಿದ್ದು, ಈ ವೇಳೆ ವಕ್ಫ್ (ತಿದ್ದುಪಡಿ) ಮಸೂದೆ ಸಂಸತ್ತಿನ ಮುಂದೆ ಬರುವ ಸಾಧ್ಯತೆಗಳಿವೆ ಎಂದು ಮೂಲಗಳು ತಿಳಿಸಿವೆ. ಇದೇ ಅಧಿವೇಶನದಲ್ಲಿ ಮಸೂದೆ ಅಂಗೀಕಾರ ಆಗುವ ಸಾಧ್ಯತೆಯಿದೆ ಎಂದು ಬಿಜೆಪಿಯ ಹಲವು ಹಿರಿಯ ನಾಯಕರು ಅಭಿಪ್ರಾಯಪಟ್ಟಿದ್ದಾರೆ.

31 ಸದಸ್ಯರ ಜಂಟಿ ಸಂಸದೀಯ ಸಮಿತಿಯು ಹಲವು ಸಭೆ, ವಿಚಾರಣೆಗಳ ಬಳಿಕ ಉದ್ದೇಶಿತ ಮಸೂದೆಗೆ ಹಲವು ತಿದ್ದುಪಡಿಗಳನ್ನು ಪ್ರಸ್ತಾಪಿಸಿದೆ.

ಶೈಜಾ ಎ. ನೇಮಕ: ಕೇಂದ್ರ ಸರ್ಕಾರದ ನಡೆಗೆ ಕಾಂಗ್ರೆಸ್ ಟೀಕೆ

‘ಗೋಡ್ಸೆ ಹೊಗಳಿದ್ದ ಪ್ರೊಫೆಸರ್‌ಗೆ ಡೀನ್ ಹುದ್ದೆ’

ನವದೆಹಲಿ (ಪಿಟಿಐ): ‘ಮಹಾತ್ಮ ಗಾಂಧಿಯನ್ನು ಹತ್ಯೆಗೈದು ಗೋಡ್ಸೆಯವರು ದೇಶವನ್ನು ರಕ್ಷಿಸಿದರು. ಇದು ಹೆಮ್ಮೆ ವಿಚಾರ’ ಎಂಬರ್ಥದ ಕಾಮೆಂಟ್ ಹಾಕಿದ್ದ ಕೇರಳದ ಪ್ರೊಫೆಸರ್ ಶೈಜಾ ಎ. ಅವರನ್ನು ಕ್ಯಾಲಿಕಟ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಡೀನ್ ಹುದ್ದೆಗೆ ನೇಮಕ ಮಾಡಿದ ಕೇಂದ್ರ ಸರ್ಕಾರದ ಕ್ರಮವನ್ನು ಕಾಂಗ್ರೆಸ್ ತೀವ್ರವಾಗಿ ವಿರೋಧಿಸಿದೆ.

ಪ್ರಧಾನಿ ನರೇಂದ್ರ ಮೋದಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಕಾಂಗ್ರೆಸ್, ‘ಒಂದು ಕಡೆ ಗಾಂಧಿಯನ್ನು ಬಳಸಿಕೊಳ್ಳುವುದು. ಇನ್ನೊಂದು ಕಡೆ ಗೋಡ್ಸೆಯನ್ನು ವೈಭವೀಕರಿಸುವುದು ಈ ಸರ್ಕಾರ ಧೋರಣೆಯಾಗಿದೆ’ ಎಂದಿದೆ. ಜೊತೆಗೆ, ಕೇಂದ್ರ ಸರ್ಕಾರವು ತನ್ನ ನಿರ್ಧಾರವನ್ನು ವಾಪಸು ಪಡೆಯಬೇಕು ಎಂದೂ ಒತ್ತಾಯಿಸಿದೆ.

‘ಗೋಡ್ಸೆ ಬಗ್ಗೆ ಹೆಮ್ಮೆ ಇದೆ ಎಂದು ಸಾರ್ವಜನಿಕ ವಾಗಿ ಹೇಳುವ ಪ್ರೊಫೆಸರ್ ಅವರನ್ನು ಕೇಂದ್ರ ಸರ್ಕಾರ ಡೀನ್ ಮಾಡಿದೆ. ‘ಗಾಂಧಿ ಮತ್ತು ಗೋಡ್ಸೆ ಮಧ್ಯೆ ಒಬ್ಬರನ್ನು ಆಯ್ಕೆ ಮಾಡಲಾರೆ’ ಎಂದು ಹೇಳಿದ ಕೋಲ್ಕತ್ತ ಹೈಕೋರ್ಟ್‌ನ ಮಾಜಿ ನ್ಯಾಯಮೂರ್ತಿಯೊಬ್ಬರು ಈಗ ಬಿಜೆಪಿ ಸಂಸದ ರಾಗಿದ್ದಾರೆ. ಗಾಂಧಿಯನ್ನು ಬಳಸಿಕೊಂಡು, ಗೋಡ್ಸೆಯನ್ನು ವೈಭವೀಕರಿಸುವ ಮೋದಿ ಧೋರಣೆಯ ಭಾಗ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದರು.

ಮಾ.7ಕ್ಕೆ ಅಧಿಕಾರ ಸ್ವೀಕಾರ: ಕಾಲೇಜಿನ ಯೋಜನೆ ಮತ್ತು ಅಭಿವೃದ್ಧಿ ವಿಭಾಗಕ್ಕೆ ಶೈಜಾ ಅವರನ್ನು ಡೀನ್ ಆಗಿ ನೇಮಿಸಲಾಗಿದೆ. ಮಾರ್ಚ್ 7ಕ್ಕೆ ಅವರು ಅಧಿಕಾರ ವಹಿಸಿಕೊಳ್ಳಲಿದ್ದಾರೆ.

NIT-Calicut professor who praised Gandhi's assassin appointed as Dean; rules violated in appointment, say students

Dr. Shaija Andavan, a professor at the Department of Mechanical Engineering at the National Institute of Technology-Calicut (NIT-C), who was previously embroiled in controversy over a social media post praising Gandhi's assassin Nathuram Godse, has been appointed as the Dean of Planning and Development at the institute.

maktoobmedia.com 26 Feb 202

ಜೈರಾಮ್ ರಮೇಶ್ ಅವರು ತಮ್ಮ ಪೋಸ್ಟ್‌ನೊಂದಿಗೆ ಹಂಚಿಕೊಂಡಿರುವ ಚಿತ್ರ

ಪೊಲೀಸ್ ವಿಚಾರಣೆಗೆ ಒಳಗಾಗಿದ್ದ ಶೈಜಾ

ಬಲಪಂಥೀಯ ವಿಚಾರಧಾರೆಯ ಪೇಜ್‌ವೊಂದು ಗೋಡ್ಸೆ ಕುರಿತು ಮಾಡಿದ್ದ ಪೋಸ್ಟ್‌ಗೆ ಶೈಜಾ ಅವರು ಕಾಮೆಂಟ್ ಮಾಡಿದ್ದರು. ಇದನ್ನು ವಿರೋಧಿಸಿ ಶೈಜಾ ವಿರುದ್ಧ ಡಿವೈಎಫ್‌ಐ, ಎಸ್‌ಎಫ್‌ಐ ಮತ್ತು ಯುವ ಕಾಂಗ್ರೆಸ್ ಪೊಲೀಸರಿಗೆ ದೂರು ನೀಡಿದ್ದವು. ಈ ಪ್ರಕರಣ ಸಂಬಂಧ ಪೊಲೀಸರು 2024ರ ಫೆಬ್ರುವರಿಯಲ್ಲಿ ಶೈಜಾ ಅವರನ್ನು ಮನೆಯಲ್ಲಿಯೇ ವಿಚಾರಣೆಗೆ ಒಳಪಡಿಸಿದರು.

ಪ್ರತಿಭಟನೆಯ ಎಚ್ಚರಿಕೆ: ಶೈಜಾ ಅವರ ನೇಮಕವನ್ನು ತೀವ್ರವಾಗಿ ವಿರೋಧಿಸಿರುವ ಡಿವೈಎಫ್‌ಐ, ಯುವ ಕಾಂಗ್ರೆಸ್ ಹಾಗೂ ಸಿಪಿಎಂ ಪಕ್ಷಗಳು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿವರೆಗೂ ಪ್ರತಿಭಟನಾ ಮೆರವಣಿಗೆ ನಡೆಸುವುದಾಗಿ ಎಚ್ಚರಿಕೆ ನೀಡಿವೆ.



ಶೈಜಾ ಅವರನ್ನು ನೇಮಕ ಮಾಡುವ ಮೂಲಕ, ಶೈಜಾ ಅವರ ಗಾಂಧಿ ವಿರೋಧಿ ಧೋರಣೆಯನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಂತಾಗಿದೆ. ಜೊತೆಗೆ, ಇದು ಗೋಡ್ಸೆಯನ್ನು ಪ್ರಚಾರಕ್ಕೆ ತರುವ ಕೇಂದ್ರದ ಯತ್ನ ಕೂಡ ಆಗಿದೆ. ಗೋಡ್ಸೆಯ ಕಾರ್ಯಸೂಚಿಯನ್ನು ಸಾರ್ವಜನಿಕ ಸಂವಾದದಲ್ಲಿ ತೂರಿಸುವುದು ಕೇಂದ್ರದ ಉದ್ದೇಶ
ಕೆ.ಸಿ.ವೇಣುಗೋಪಾಲ್
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಸುಭಾಷಿತ

ನಿರ್ದಾಕ್ಷಿಣ್ಯವಾದ ವಿಚಾರ ವಿಮರ್ಶೆಯೇ ಒಬ್ಬ ವ್ಯಕ್ತಿಯು ದೇಶಕ್ಕೆ ಸಲ್ಲಿಸಬಹುದಾದ ಸರ್ವೋತ್ತಮ ಸೇವೆ.

-ಡಿ.ವಿ.ಜಿ.

ಎಲ್ಲರಿಗೂ ವಿಮಾ ಸೌಲಭ್ಯದ ಗುರಿ ಪರಿಣಾಮಕಾರಿ ಕ್ರಮ ಅಗತ್ಯ

ಭಾರತದಲ್ಲಿ ವಿಮಾ ಪಾಲಿಸಿಗಳನ್ನು ಪಡೆಯುವವರ ಪ್ರಮಾಣ ಕಡಿಮೆ ಇರುವುದು ಬಹುಕಾಲದಿಂದ ಚರ್ಚೆಯ ವಸ್ತುವಾಗಿ ಉಳಿದಿದೆ. 2047ರ ವೇಳೆಗೆ ಎಲ್ಲರಿಗೂ ವಿಮಾ ರಕ್ಷೆ ಲಭ್ಯವಾಗಬೇಕು ಎಂಬ ಗುರಿಯನ್ನು ಕೇಂದ್ರ ಸರ್ಕಾರ ಹಾಗೂ ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ) ಹೊಂದಿವೆ. ದೇಶದಲ್ಲಿ ಈಗ ಒಟ್ಟಾರೆಯಾಗಿ ವಿಮಾ ರಕ್ಷೆ ಪಡೆದವರ ಪ್ರಮಾಣ ಶೇಕಡ 3.7ರಷ್ಟು ಮಾತ್ರ ಎಂದು ಅಂಕಿ-ಅಂಶಗಳು ಹೇಳುತ್ತವೆ. ಅದರಲ್ಲೂ, ಜೀವ ವಿಮೆಯನ್ನು ಪಡೆದವರ ಪ್ರಮಾಣ ಶೇ 2ಕ್ಕಿಂತ ಕಡಿಮೆ ಇದೆ. ದೇಶದಲ್ಲಿ ಬಡತನ ವ್ಯಾಪಕವಾಗಿರುವಾಗ, ಆರೋಗ್ಯ ಸೇವಾ ಸೌಲಭ್ಯಗಳು ಮತ್ತು ಸಾಮಾಜಿಕ ಭದ್ರತಾ ವ್ಯವಸ್ಥೆಯು ಸಮರ್ಪಕವಾಗಿ ಇಲ್ಲದಿರುವಾಗ ವಿಮಾ ರಕ್ಷೆಯು ಎಲ್ಲರಿಗೂ ಲಭ್ಯವಾಗುವಂತೆ ಮಾಡುವುದು ಬಹಳ ಮಹತ್ವದ್ದು ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯ ಇಲ್ಲ. ದೇಶದ ಜನಸಂಖ್ಯೆಯ ಸ್ವರೂಪದಲ್ಲಿಯೂ ಬದಲಾವಣೆಗಳು ಆಗುತ್ತಿವೆ. ಆರ್ಥಿಕ ಚಟುವಟಿಕೆಗಳ ಸ್ವರೂಪವು ಸಂಕೀರ್ಣವಾಗುತ್ತಿರುವ ಈ ಕಾಲಘಟ್ಟದಲ್ಲಿ ಜೀವ ವಿಮೆ ಮತ್ತು ಆರೋಗ್ಯ ವಿಮೆಯ ಆಚೆಗೂ ವಿಮಾ ರಕ್ಷೆಯನ್ನು ಸಾರ್ವಜನಿಕರಿಗೆ ಒದಗಿಸಬೇಕಾದ ಅಗತ್ಯ ಇದೆ. ಹೊಸ ಕಾಲದ ಅಗತ್ಯಗಳಿಗೆ ಸ್ಪಂದಿಸಲು ದೇಶದ ವಿಮಾ ಕ್ಷೇತ್ರವು ಪ್ರಯತ್ನಿಸಿದೆ. ಆದರೆ ಅಂದುಕೊಂಡ ಫಲ ಹಲವು ಕಾರಣಗಳಿಂದಾಗಿ ಸಿಕ್ಕಿಲ್ಲ.

ಬೇರೆ ಬೇರೆ ವರ್ಗಗಳ ಜನರಿಗೆ ಬೇರೆ ಬೇರೆ ವಿಧಗಳಲ್ಲಿ ವಿಮಾ ಉತ್ಪನ್ನಗಳನ್ನು ತಲುಪಿಸುವ ಕೆಲಸ ಆಗಬೇಕು

ಐಆರ್‌ಡಿಎಐ ನೀಡಿದ ಅಂಕಿ-ಅಂಶಗಳ ಪ್ರಕಾರ ಕಳೆದ ಒಂದು ದಶಕದ ಅವಧಿಯಲ್ಲಿ ವಿಮಾ ರಕ್ಷೆಯನ್ನು ಪಡೆದವರ ಪ್ರಮಾಣವು ಅಷ್ಟೇನೂ ಹೆಚ್ಚಾಗಿಲ್ಲ. ವಿಮೆ ಪಡೆದವರ ಪ್ರಮಾಣವು 2015-16ರಲ್ಲಿ ಶೇಕಡ 3.7ರಷ್ಟು ಇದ್ದಿದ್ದು 2021-22ರಲ್ಲಿ ಶೇ 4.2ಕ್ಕೆ ಹೆಚ್ಚಳ ಕಂಡಿತ್ತು. ಆದರೆ ಇದು 2023-24ರಲ್ಲಿ ಮತ್ತೆ ಶೇ 3.7ಕ್ಕೆ ಕುಸಿದಿದೆ. ತಮ್ಮ ಸೇವೆಗಳ ಭಾಗವಾಗಿ ವಿಮಾ ಸೌಲಭ್ಯವನ್ನು ಒದಗಿಸುವ ಬ್ಯಾಂಕ್‌ಗಳು ಸೇರಿದಂತೆ ದೇಶದಲ್ಲಿ ಒಟ್ಟು 70ಕ್ಕೂ ಹೆಚ್ಚು ವಿಮಾ ಸೇವಾದಾತರು ಇದ್ದಾರೆ. ಜೀವ, ಆರೋಗ್ಯ, ಅಪಘಾತ, ಬೆಳೆ ಸೇರಿದಂತೆ ಸಮಾಜದ ವಿವಿಧ ವರ್ಗಗಳಿಗೆ ಬೇಕಾಗುವ ವಿಮಾ ರಕ್ಷೆಯನ್ನು ಒದಗಿಸುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳೂ ಹಲವಾರು ಇವೆ. ಅದರಲ್ಲೂ ಮುಖ್ಯವಾಗಿ ಮಧ್ಯಮ ಹಾಗೂ ಕಡಿಮೆ ಆದಾಯದ ವರ್ಗಗಳಿಗೆ ಈ ಸೌಲಭ್ಯವನ್ನು ಅವು ಒದಗಿಸುತ್ತಿವೆ. ಸರ್ಕಾರ ಮತ್ತು ಸಂಬಂಧಪಟ್ಟ ಕೆಲವು ಏಜೆನ್ಸಿಗಳು ಜನರಲ್ಲಿ ಜಾಗೃತಿ ಮೂಡಿಸುವ ಅಭಿಯಾನವನ್ನು ನಡೆಸುತ್ತಿವೆ, ವಿಮಾ ಕಂಪನಿಗಳು ವ್ಯಾಪಕವಾದ ಪ್ರಚಾರ ಕಾರ್ಯವನ್ನು ನಡೆಸುತ್ತಿವೆ. ಹೀಗಿದ್ದರೂ ದೇಶದಲ್ಲಿ ವಿಮಾ ಸೌಲಭ್ಯಗಳನ್ನು ಪಡೆಯುವವರ ಪ್ರಮಾಣವು ಏಕೆ ಹೆಚ್ಚಳ ಕಾಣುತ್ತಿಲ್ಲ ಎಂಬುದರ ಬಗ್ಗೆ ಅಧ್ಯಯನ ಆಗಬೇಕಿದೆ.

ವಿಮಾ ಸೌಲಭ್ಯ ಪಡೆಯುವವರ ಪ್ರಮಾಣ ಹೆಚ್ಚಳ ಕಾಣದೇ ಇರುವುದಕ್ಕೆ ಕಾರಣಗಳು ವಿಮಾ ಸೌಲಭ್ಯದ ಸ್ವರೂಪ ಹಾಗೂ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗೆ ಅನುಗುಣವಾಗಿ ಭಿನ್ನವಾಗಿ ಇರಬಹುದು. ಆರೋಗ್ಯ ವಿಮೆಗಳ ವಿಚಾರದಲ್ಲಿ ಹೇಳುವುದಾದರೆ, ಆಸ್ಪತ್ರೆ ವೆಚ್ಚವನ್ನು ವಿಮಾ ಕಂಪನಿಗಳಿಂದ ಪಡೆಯುವುದರಲ್ಲಿ ಇರುವ ಸಮಸ್ಯೆಗಳ ಕಾರಣದಿಂದಾಗಿ ಈ ವಿಮಾ ಸೌಲಭ್ಯ ಪಡೆಯುವವರ ಪ್ರಮಾಣ ಕಡಿಮೆ ಆಗಿರಬಹುದು. ಆರೋಗ್ಯ ವಿಮಾ ಕ್ಲೇಮ್‌ಗಳನ್ನು ಇತ್ಯರ್ಥ ಪಡಿಸುವಲ್ಲಿ ನಿಧಾನ ಆಗುತ್ತಿದೆ, ಹಲವು ಕ್ಲೇಮ್‌ಗಳು ತಿರಸ್ಕೃತಗೊಳ್ಳುತ್ತಿವೆ, ಕೆಲವು ಸಂದರ್ಭ ಗಳಲ್ಲಿ ಕ್ಲೇಮ್ ಮೊತ್ತವನ್ನು ಪೂರ್ತಿಯಾಗಿ ನೀಡುತ್ತಿಲ್ಲ ಎಂದು ಈಚಿನ ಸಮೀಕ್ಷೆಯೊಂದು ಹೇಳುತ್ತಿದೆ. ಹಲವು ಜೀವ ವಿಮಾ ಉತ್ಪನ್ನಗಳನ್ನು ಜನರ ಹಣ ಉಳಿತಾಯದ ಉತ್ಪನ್ನದ ರೂಪದಲ್ಲಿ ಅಥವಾ ತೆರಿಗೆ ಉಳಿತಾಯಕ್ಕೆ ಇರುವ ಉತ್ಪನ್ನದ ರೂಪದಲ್ಲಿ ನೀಡಲಾಗುತ್ತಿದೆ. ವಿಮಾ ಉತ್ಪನ್ನಗಳನ್ನು ಬೇರೆ ಯಾವುದೋ ಪ್ರಯೋಜನಗಳ ಕಾರಣ ನೀಡಿ ಮಾರಾಟ ಮಾಡುವ ಅಗತ್ಯ ಇಲ್ಲ. ವಿಮಾ ಉತ್ಪನ್ನಗಳ ಪ್ರಯೋಜನಗಳ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡುವ ಕೆಲಸ ಆಗಬೇಕು. ಬೇರೆ ಬೇರೆ ವರ್ಗಗಳ ಜನರಿಗೆ ಬೇರೆ ಬೇರೆ ವಿಧಗಳಲ್ಲಿ ವಿಮಾ ಉತ್ಪನ್ನಗಳನ್ನು ತಲುಪಿಸುವ ಕೆಲಸ ಆಗಬೇಕು. ಸಮಾಜದ ಎಲ್ಲ ವರ್ಗಗಳಿಗೆ ವಿಮಾ ಸೌಲಭ್ಯ ತಲುಪುವಂತೆ ಆಗಬೇಕು ಎಂದಾದರೆ ಹೆಚ್ಚು ಪರಿಣಾಮ ಕಾರಿಯಾದ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯ ಇದೆ.

ದಿನದ ಟ್ವೀಟ್

ಆಹಾರ ವಿಷವಾಗದಿರಲಿ

ಈ ದಿನಗಳಲ್ಲಿ ಬೀದಿಬದಿ ವ್ಯಾಪಾರಿಗಳು ರಾಸಾಯನಿಕ, ಕೆಂಪು ಸಾಸ್, ಹಸಿರು ಪೇಸ್ಟ್, ವಿನೆಗರ್, ಟೇಸ್ಟಿಂಗ್ ಪೌಡರ್‌ನಂತಹ, ಸ್ಥಳೀಯವಾಗಿ ಉತ್ಪಾದಿಸುವ ಬ್ರ್ಯಾಂಡೆಡ್ ಅಲ್ಲದ ಆಹಾರ ಪದಾರ್ಥಗಳನ್ನು ಬಳಸುತ್ತಿದ್ದಾರೆ. ದಯಮಾಡಿ ಕ್ರಮ ಕೈಗೊಳ್ಳಿ ಅಥವಾ ಮಕ್ಕಳು ಮತ್ತು ಸಾರ್ವಜನಿಕರನ್ನು ಇದರಿಂದ ಕಾಪಾಡಲು ಈ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಆಯೋಜಿಸಿ.

ಯೋಗೇಶ್ ಎಂ.

ಕಿಡಿನುಡಿ

ಬೆಂಗಳೂರಿನಲ್ಲಿ ಕಪ್ಪುಹಣ ಸೃಷ್ಟಿಯಾಗುವುದು ಹೀಗೆ: 2 ಮಹಡಿಗಳ ನಿರ್ಮಾಣಕ್ಕಷ್ಟೇ ಅವಕಾಶ ಇರುವೆಡೆ 7, 8 ಮಹಡಿಗಳನ್ನು ನಿರ್ಮಿಸುವುದು, ನಂತರ ಬಾಡಿಗೆದಾರರಿಂದ ನಗದು ಪಡೆಯುವುದು ಮತ್ತು ಆ ಎಲ್ಲಾ ನಗದನ್ನು ಪುನಃ ಭೂವ್ಯವಹಾರಕ್ಕೆ ಹಾಕಿ, ಭೂಮಿಯ ಬೆಲೆಯನ್ನು ಹೆಚ್ಚಿಸುವುದು...

ವಿಪಿನ್ ಭಂಡಾರಿ

25 ವರ್ಷಗಳ ಹಿಂದೆ

ಸೋಮವಾರ, 28-2-2000

- **ನನಗೂ ಪ್ರಾಣಭೀತಿ: ಉಳ್ವೇಕರ**

ಕಾರವಾರ, ಫೆ. 27- 'ಸಾಹೇಬರನ್ನು ಕೊಂದವರಿಂದ ನನಗೂ ಪ್ರಾಣಭೀತಿಯಿದೆ. ಆದರೆ ನಮ್ಮ ದೇವರೇ ಹೋದ ಮೇಲೆ ನಾವು ಬದುಕಿದ್ದು ಏನು ಪ್ರಯೋಜನ?'

ನಗರದ ದೈವಜ್ಞ ಕಲ್ಯಾಣ ಮಂಟಪದ ಹತ್ತಿರ ಸ್ಥಳೀಯ ಶಾಸಕ ವಸಂತ ಅಸ್ನೋಟಿಕರ್ ಅವರ ಹತ್ಯೆ ಸಮಯದಲ್ಲಿ ಗುಂಡೇಟು ತಿಂದು, ಬದುಕಿ ಉಳಿದಿರುವ ಪುರಸಭೆ ಸದಸ್ಯ ಗಣಪತಿ ಉಳ್ವೇಕರ ಅವರ ಆತಂಕ ಇದು.

ಮಣಿಪಾಲ ಆಸ್ಪತ್ರೆಯಿಂದ ನಿನ್ನೆ ರಾತ್ರಿ ಮನೆಗೆ ಬಂದಿರುವ ಉಳ್ವೇಕರ, ತಮ್ಮನ್ನು ಭೇಟಿ ಮಾಡಿದ ವರದಿಗಾರರ ಜೊತೆಗೆ ಮಾತನಾಡುತ್ತ, 'ಸಾಹೇಬರ ಸಾವಿನಿಂದ ಸಾವಿರಾರು ಜನರೂ 'ಸತ್ತ'ರಲ್ಲ' ಎಂದು ಶೋಕಿಸಿದರು.

ಅಸ್ನೋಟಿಕರ್ ಕಟ್ಟಾ ಬೆಂಬಲಿಗರಾಗಿದ್ದ ಉಳ್ವೇಕರ ಅವರು ಅಸ್ನೋಟಿಕರ್ ಹತ್ಯೆಯ ಏಕೈಕ ಪ್ರತ್ಯಕ್ಷದರ್ಶಿ ಸಾಕ್ಷಿ. ಅಂತಲೇ ಅವರ ಮನೆಗೆ ಹೋಗಿ ಬರುವವರ ಮೇಲೆ ನಿಗಾ ಇಡಲು ಈಗಾಗಲೇ ಒಬ್ಬ ಕಾನ್‌ಸ್ಟೆಬಲ್‌ನನ್ನು ಕಾವಲಿಗೆ ಇಡಲಾಗಿದೆ. ಅದರ ಜೊತೆಗೆ ಅಸ್ನೋಟಿಕರ್ ಅವರ ಕೆಲವು ಬೆಂಬಲಿಗರು ಸಹ ಬರಹೋಗುವವರ ಕಾವಲು ಕಾಯುತ್ತಿದ್ದಾರೆ.

- **ವಿಧಾನಸಭೆಗೆ ಬಿನ್ನಿ ನಾಮಕರಣ**

ಬೆಂಗಳೂರು, ಫೆ. 27- ವಿಧಾನಸಭೆಯಲ್ಲಿ ಆಂಗ್ಲೊ ಇಂಡಿಯನ್ ಸಮುದಾಯಕ್ಕೆ ಮೀಸಲಿರುವ ಒಂದು ಸ್ಥಾನಕ್ಕೆ ಖ್ಯಾತ ಕ್ರಿಕೆಟ್ ಪಟು ರೋಜರ್ ಬಿನ್ನಿ ಅವರನ್ನು ನಾಮಕರಣ ಮಾಡುವಂತೆ ರಾಜ್ಯಪಾಲರಿಗೆ ರಾಜ್ಯ ಸರ್ಕಾರ ಶಿಫಾರಸು ಮಾಡಿದೆ.

ಬೆಂಗಳೂರಿನಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಅಧಿಕಾರಿಯಾಗಿರುವ ರೋಜರ್ ಬಿನ್ನಿ (44) ಅವರು, ನಗರದ ಸೇಂಟ್ ಜೋಸೆಫ್ ಇಂಡಿಯನ್ ಶಾಲೆಯ ವಿದ್ಯಾರ್ಥಿ.

50 ವರ್ಷಗಳ ಹಿಂದೆ

ಶುಕ್ರವಾರ, 28-2-1975

- **ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶಕ್ಕೆ ಕ್ರಮ**

ಬೆಂಗಳೂರು, ಫೆ. 27- ರಾಜ್ಯದ ಕಾರ್ಖಾನೆ ಗಳಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶ ದೊರೆಯುವಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಕಾರ್ಮಿಕ ಸಚಿವ ಎಸ್.ಎಂ.ಯಾಹ್ಯಾ ಅವರು ಇಂದು ವಿಧಾನಸಭೆಯಲ್ಲಿ ಎಂ.ಎಸ್.ಕೃಷ್ಣನ್ ಅವರಿಗೆ ತಿಳಿಸಿದರು.

ಸ್ಥಳೀಯರಿಗೆ ಉದ್ಯೋಗ ನೀಡುವಂತೆ ಸಾಧ್ಯವಾಗಲು ಶಾಲಾ ಸರ್ಟಿಫಿಕೇಟ್, ರೇಷನ್ ಕಾರ್ಡು ಇತ್ಯಾದಿ ಆಧಾರಗಳ ಮೂಲಕ ಉದ್ಯೋಗ ವಿನಿಮಯ ಕಚೇರಿಗಳು ಹೆಸರುಗಳನ್ನು ಕಳಿಸುತ್ತಿವೆ ಎಂದು ಸಚಿವರು ತಿಳಿಸಿದರು.

- **ಅನಿಶ್ಚಿತತೆಯ ತೂಗುಗತ್ತಿ**

ಬೆಂಗಳೂರು, ಫೆ. 27- ಅನಿಶ್ಚಿತತೆಯ ಕತ್ತಿ ತಲೆಯ ಮೇಲೆ ತೂಗುತ್ತಿದೆಯೆಂದು ಆತಂಕ, 'ನಾಳೆ ಸದಸ್ಯರಾಗಿರುತ್ತೇವೆಯೋ ಇಲ್ಲವೋ ಅದೇ ಸಂಶಯ'.

ಮೇಲ್ಮನೆಗಳನ್ನು ರದ್ದು ಮಾಡಬೇಕೆಂಬ ಒತ್ತಾಯ ಭಾರತದ ನಾನಾ ಕಡೆಗಳಲ್ಲಿ ಕೇಳಿಬಂದಿದೆ. ಅಂತಹ ಒತ್ತಾಯ ಬಂದಿರುವುದು ಬಹುಮಟ್ಟಿಗೆ ವಿರೋಧ ಪಕ್ಷಗಳಿಂದ.

ಮೇಲ್ಮನೆಯ ವಿಸರ್ಜನೆಗೆ ಕಾಂಗ್ರೆಸ್ ಸದಸ್ಯರೊಬ್ಬರು ಒತ್ತಾಯಪಡಿಸಿ, ಅನಿಶ್ಚಿತತೆ ಉಂಟು ಮಾಡಿದ್ದಾರೆಂದು ಕರ್ನಾಟಕ ರಾಜ್ಯದ ಮೇಲ್ಮನೆಯಲ್ಲಿ ಗುರುವಾರ ಆತಂಕ ವ್ಯಕ್ತವಾದದ್ದು ವಿರೋಧ ಪಕ್ಷದ ನಾಯಕರಿಂದ.

ಬುಧವಾರ ಮಸೂದೆಯೊಂದು ಬಿದ್ದುಹೋದ ಮೇಲೆ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಎಫ್.ಎಂ.ಖಾನ್ ಅವರು ಮೇಲ್ಮನೆಯನ್ನು ವಿಸರ್ಜಿಸಬೇಕೆಂದು ಸಲಹೆ ಮಾಡಿದರೆಂಬ ಪತ್ರಿಕಾ ವರದಿಗಳನ್ನು ರಾಮಕೃಷ್ಣ ಹೆಗಡೆಯವರು ಪ್ರಸ್ತಾಪಿಸಿ, 'ವರದಿ ತಪ್ಪಿರಬಹುದು. ಆದರೆ ಮುಖ್ಯಮಂತ್ರಿಯವರು ವರದಿ ನಿರಾಕರಿಸಿಲ್ಲ' ಎಂದರು.

ಕೇಂದ್ರದ ಅನುದಾನ ಬಿಡುಗಡೆಗೆ ತ್ರಿಭಾಷಾ ಸೂತ್ರದ ನೆಪ ಒಡ್ಡುವುದು ಸರಿಯಲ್ಲ

ತ್ರಿಭಾಷಾ ಸೂತ್ರದ ರಾಜಕಾರಣ

ವಿಶ್ಲೇಷಣೆ

ಯೋಗೇಂದ್ರ ಯಾದವ್

ತ್ರಿಭಾಷಾ ಸೂತ್ರಕ್ಕೆ ಸಂಬಂಧಿಸಿ ಇನ್ನೊಂದು ಸುತ್ತಿನ ರಾಜಕೀಯ ಚರ್ಚೆಗೆ ವೇದಿಕೆ ಸಜ್ಜಾಗಿದೆ. ವಿಚಿತ್ರವೆಂದರೆ, ನಮ್ಮ ನೀತಿ ನಿರೂಪಕರು ಎರಡು ಭಾಷೆ ಮತ್ತು ಮೂರು ಭಾಷೆ ಸೂತ್ರದ ಅನುಕೂಲಗಳ ಕುರಿತು ಚರ್ಚೆ ನಡೆಸುತ್ತಿರಬೇಕಾದರೆ, ದೇಶವು ಒಂದೇ ಭಾಷೆ ನೀತಿಯತ್ತ ಸದ್ದಿಲ್ಲದೆ ಸಾಗುತ್ತಿದೆ. ಸಾಮಾನ್ಯ ಜ್ಞಾನ ಮತ್ತು ಶಿಕ್ಷಣದ ಕುರಿತು ಪರಿಣತರ ಅಭಿಮತಗಳೆಲ್ಲವಕ್ಕೆ ತದ್ವಿರುದ್ಧವಾಗಿ ಇಂಗ್ಲಿಷ್ ಏಕೈಕ ಭಾಷೆ ನೀತಿಯತ್ತ ದೇಶವು ಜಾರುತ್ತಿದೆ. ಇನ್ನೂ ವಿಷಾದನೀಯವೆಂದರೆ ಜ್ಞಾನ, ಸಂಸ್ಕೃತಿ, ನಾಗರಿಕತೆಯನ್ನು ಬಹುಭಾಷಿಕತೆಯಿಂದ ಏಕಭಾಷೆಯತ್ತ ಹಿಂದಕ್ಕೆ ದಬ್ಬುವಿಕೆಯನ್ನು ಆಧುನಿಕತೆ ಎಂದು ಸಂಭ್ರಮಿಸಲಾಗುತ್ತಿದೆ. ಇದು ಸರ್ಕಾರಿ ಪ್ರಾಯೋಜಿತವೂ ಹೌದು.

ತ್ರಿಭಾಷಾ ಸೂತ್ರ ಎಂಬುದು ಶಾಲೆಯಲ್ಲಿ ಮಕ್ಕಳಿಗೆ ಮೂರು ಭಾಷೆಗಳನ್ನು ಕಲಿಸುವ ನೀತಿಗೆ ಇರುವ ಅಧಿಕೃತ ಹೆಸರು. 1968ರಲ್ಲಿ ಮಾಡಿಕೊಳ್ಳಲಾದ ರಾಜಿ ಸಂಧಾನವು ಹೀಗೆ ಹೇಳುತ್ತದೆ: 'ಹಿಂದಿ ಭಾಷಿಕ ರಾಜ್ಯಗಳಲ್ಲಿ ಹಿಂದಿ, ಇಂಗ್ಲಿಷ್ ಮತ್ತು ಆಧುನಿಕ ಭಾರತೀಯ ಭಾಷೆ (ದಕ್ಷಿಣದ ಭಾಷೆಯೊಂದನ್ನು ಕಲಿಸುವುದು ಉತ್ತಮ) ಕಲಿಸುವುದು ಮತ್ತು ಹಿಂದಿ ಭಾಷಿಕವಲ್ಲದ ರಾಜ್ಯಗಳಲ್ಲಿ ಹಿಂದಿ, ಇಂಗ್ಲಿಷ್ ಮತ್ತು ಆಯಾ ರಾಜ್ಯದ ಭಾಷೆಯನ್ನು ಕಲಿಸುವುದು'. ದಕ್ಷಿಣದ ರಾಜ್ಯಗಳಲ್ಲಿ ಹಿಂದಿಯ ವಿರುದ್ಧ ಪ್ರತಿಭಟನೆ ನಡೆದ ಕಾರಣ ಮುಖ್ಯಮಂತ್ರಿಗಳು ಒಟ್ಟಾಗಿ ಭಾಷಾ ನೀತಿ ರೂಪಿಸಲು ನಡೆಸಿದ ಸಭೆಯಲ್ಲಿ ಈ ರಾಜಿ ಸಂಧಾನಕ್ಕೆ ಬರಲಾಯಿತು. ರಾಧಾಕೃಷ್ಣನ್ ಆಯೋಗವು 1948-49ರಲ್ಲಿ ಮುಂದಿಟ್ಟ ಸೂತ್ರವನ್ನು ಮೊದಲ ಶಿಕ್ಷಣ ಆಯೋಗವಾಗಿದ್ದ ಕೊಠಾರಿ ಆಯೋಗ ಅನುಮೋದಿಸಿತು. 1960 ಮತ್ತು 1980ರ ದಶಕಗಳಲ್ಲಿ ಇದ್ದ ಕಾಂಗ್ರೆಸ್ ನೇತೃತ್ವದ ಸರ್ಕಾರಗಳು ಒಂದು ಮತ್ತು ಎರಡನೇ ಶಿಕ್ಷಣ ನೀತಿಯಲ್ಲಿ ಈ ಸೂತ್ರ ಅಳವಡಿಸಿಕೊಂಡವು.

ತ್ರಿಭಾಷಾಸೂತ್ರದಮೂಲತರ್ಕಹೀಗಿದೆ:ಭಾರತವನ್ನು ಬಹುಭಾಷಿಕವೆಂದರಷ್ಟೇ ಸಾಲದು. ಭಾರತದ ಹೆಚ್ಚಿನ ಸಮುದಾಯಗಳು ಮತ್ತು ವ್ಯಕ್ತಿಗಳು ಒಂದಕ್ಕಿಂತ ಹೆಚ್ಚಿನ ಭಾಷೆ ಮಾತನಾಡುತ್ತಾರೆ. ಆದುದರಿಂದಲೇ, ಭಾರತೀಯ ಅಸ್ಮಿತೆಯನ್ನು ರೂಪುಗೊಳಿಸಿರುವ ಬಹುಭಾಷಿಕತೆಯನ್ನು ಉಳಿಸಲು ಮತ್ತು ಪೋಷಿಸಲು ಬೇಕಾದ ರೀತಿಯಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯು ಇರಬೇಕು. ತ್ರಿಭಾಷಾ ಸೂತ್ರವು ಬಹುಭಾಷಿಕತೆಯನ್ನು ಉಳಿಸಿಕೊಳ್ಳುವ ಒಂದು ಅನುಕೂಲಕರ ವಿಧಾನವಾಗಿದೆ. ಡಿ.ಪಿ.ಪಟ್ಟನಾಯಕ್ ಮತ್ತು ರಮಾಕಾಂತ್ ಅಗ್ನಿಹೋತ್ರಿ ಅವರೂ ಇದ್ದ ಭಾಷಾ ಶಾಸ್ತ್ರಜ್ಞರು ಮತ್ತು ಶಿಕ್ಷಣ ತಜ್ಞರ ಸಮಿತಿಯು ಹೀಗೆ ಹೇಳಿದೆ: 'ತ್ರಿಭಾಷಾ ಸೂತ್ರವೇ ಅಂತಿಮ ಗುರಿ ಅಲ್ಲ ಅಥವಾ ಭಾಷಾ ಕಲಿಕೆಗೆ ಇದೊಂದು ಮಿತಿ ಹೇರಿಕೆಯೂ ಅಲ್ಲ. ಬದಲಿಗೆ, ಜ್ಞಾನದ ದಿಗಂತವನ್ನು ವಿಸ್ತರಿಸುವುದಕ್ಕೆ ಮತ್ತು ರಾಷ್ಟ್ರದ ಭಾವನಾತ್ಮಕ ಸಮಗ್ರತೆ ಸಾಧಿಸುವುದಕ್ಕೆ ಇರುವ ಅನುಕೂಲಕರ ಆರಂಭಿಕ ಬಿಂದುವಾಗಿದೆ' (ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು-2005, ಎನ್‌ಸಿಇಆರ್‌ಟಿ). ಮಕ್ಕಳು ಹಂತ ಹಂತವಾಗಿ ಮೂರಕ್ಕಿಂತ ಹೆಚ್ಚು ಭಾಷೆಗಳನ್ನು ಕಲಿಯಬಹುದು; ಹೆಚ್ಚುವರಿ ಭಾಷೆಗಳನ್ನು ಕಲಿಯುವುದು ಒಂದು ಮತ್ತು ಎರಡನೇ ಭಾಷೆಯ ಕಲಿಕೆಗೂ ನೆರವಾಗುತ್ತದೆ ಎಂದು ಈ ಸಮಿತಿಯು ಹೇಳಿತ್ತು.

ಹಾಗಿದ್ದರೆ, ಈಗಿನ ಚರ್ಚೆ ಏನು? ತಮಿಳುನಾಡು ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಒಪ್ಪಿಲ್ಲ ಎಂಬ ಕಾರಣಕ್ಕೆ ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ನೀಡಬೇಕಿದ್ದ ಗಣನೀಯ ಮೊತ್ತವನ್ನು ಕೇಂದ್ರವು ತಡೆಹಿಡಿದಿದೆ. ತಮ್ಮ ಪಕ್ಷವು ತ್ರಿಭಾಷಾ ಸೂತ್ರಕ್ಕೆ ವಿರುದ್ಧವಾಗಿದೆ, ಹಾಗಾಗಿ ಎನ್‌ಇಪಿಯನ್ನು ಒಪ್ಪಲಾಗದು ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹೇಳಿದ್ದಾರೆ. ಈ ರಾಜ್ಯವು ಹಿಂದಿನಿಂದಲೂ ತಮಿಳು ಮತ್ತು ಇಂಗ್ಲಿಷ್ ಭಾಷೆಯನ್ನು ಮಾತ್ರ ಕಲಿಸುತ್ತಿದೆ. ಮೂರು ಭಾಷೆ ಕಲಿಸಬೇಕು ಎಂಬುದು ಹಿಂದಿ ಹೇರಿಕೆಗೆ ಇರುವ ನೆಪ ಎಂದು ಅವರು ಹೇಳುತ್ತಾರೆ. ತಮಿಳುನಾಡು ಸರ್ಕಾರವು ಸಂವಿಧಾನಕ್ಕೆ ಬದ್ಧವಾಗಿರಬೇಕು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ. ಈ ವಿಚಾರವು ಹೆಚ್ಚು ಭಾವನಾತ್ಮಕವಾದುದು. ಜೊತೆಗೆ, ತಮಿಳುನಾಡು ವಿಧಾನಸಭೆಗೆ ಮುಂದಿನ ವರ್ಷ ಚುನಾವಣೆ ಇದೆ. ಹಾಗಾಗಿ, ಸಂಸತ್ತಿನ ಬಜೆಟ್ ಅಧಿವೇಶನವು ಪುನರಾರಂಭಗೊಂಡಾಗಲೂ ಈ ಸಂಘರ್ಷವು ಇನ್ನೂ ಜೋರಾಗಿ ಕಾಣಿಸಿಕೊಳ್ಳಬಹುದು.

ಆಕ್ರೋಶ ಮತ್ತು ಸಂದೇಹ ವ್ಯಕ್ತಪಡಿಸಲು ಡಿಎಂಕೆ ನೇತೃತ್ವದ ಸರ್ಕಾರಕ್ಕೆ ಸರಿಯಾದ ಕಾರಣಗಳೇ ಇವೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಒಕ್ಕೂಟ ವ್ಯವಸ್ಥೆಯಲ್ಲಿ ಪಾಲಿಸಬೇಕಾದ ರೀತಿ-ರಿವಾಜುಗಳನ್ನು ಹಲವು ಬಾರಿ ಉಲ್ಲಂಘಿಸಿದೆ. ಬಿಜೆಪಿ ಪರವಾಗಿ ತಮಿಳುನಾಡಿನ ರಾಜ್ಯಪಾಲರ ವರ್ತನೆ ಭಂಡತನದಿಂದಲೇ ಕೂಡಿದೆ. ಶಿಕ್ಷಣ ಕ್ಷೇತ್ರದಲ್ಲಿ ರಾಜ್ಯಗಳ ಅಧಿಕಾರವನ್ನು ಒತ್ತುವರಿ ಮಾಡುವ ಕೆಲಸವನ್ನು ಕೇಂದ್ರ ಸರ್ಕಾರವು ಪದೇ ಪದೇ ಮಾಡಿದೆ. ಕುಲಪತಿಗಳ ನೇಮಕದ ನಿಯಮ ಬದಲಾವಣೆ ಪ್ರಸ್ತಾವ ಅದಕ್ಕೆ ಇತ್ತೀಚಿನ ಉದಾಹರಣೆ. ಶಿಕ್ಷಣ ನೀತಿಗಳು, ಅದರಲ್ಲೂ ವಿಶೇಷವಾಗಿ ಭಾಷೆ ಆಯ್ಕೆಯಂತಹ ಭಾವನಾತ್ಮಕ ವಿಚಾರಗಳನ್ನು ಅಳವಡಿಸಿಕೊಳ್ಳುವಂತೆ ಕೇಂದ್ರದ ನಿಧಿಯನ್ನು ತಡೆಹಿಡಿದು ರಾಜ್ಯಗಳ ಮೇಲೆ ಒತ್ತಡ ಹೇರಬಾರದು.

ನಿಜ ಏನೆಂದರೆ, ಎನ್‌ಇಪಿಯಲ್ಲಿ ತ್ರಿಭಾಷಾ ಸೂತ್ರವನ್ನೇ ಪುನರುಚ್ಚರಿಸಲಾಗಿದೆ. ಮೊದಲ ಮತ್ತು ಎರಡನೇ ಶಿಕ್ಷಣ ನೀತಿಗಳಲ್ಲಿಯೂ ಈ ಅಂಶ ಇತ್ತು. ಹಾಗೆ ನೋಡಿದರೆ, ಎನ್‌ಇಪಿ-2020 ಭಾಷೆಗಳ ಆಯ್ಕೆಯನ್ನು ಇನ್ನಷ್ಟು ಸುಲಭಗೊಳಿಸಿದೆ. ಹಿಂದಿಯ ಉಲ್ಲೇಖ ಎಲ್ಲಿಯೂ ಇಲ್ಲ. ರಾಜ್ಯವು ಆಯ್ಕೆ ಮಾಡಿದ ಮೂರು ಭಾಷೆಗಳನ್ನು ಮಕ್ಕಳಿಗೆ ಕಲಿಸಬೇಕು. ಅವುಗಳಲ್ಲಿ ಎರಡು ಭಾರತದ ಭಾಷೆಗಳಾಗಿರಬೇಕು ಎಂದು ಹೇಳಲಾಗಿದೆ. ಶಾಸ್ತ್ರೀಯ ಭಾಷೆಗಳಾದ ಸಂಸ್ಕೃತ ಮತ್ತು ತಮಿಳು ಭಾರತೀಯ ಭಾಷೆಗಳ ಪಟ್ಟಿಯಲ್ಲಿ ಇವೆ. ಹಾಗಾಗಿ, ತಮಿಳುನಾಡಿಗೆ ಬೇಕಿದ್ದರೆ, ತಮಿಳು ಮತ್ತು ಮಲಯಾಳ ಅಥವಾ ತೆಲುಗು ಅಥವಾ ಕನ್ನಡ ಹಾಗೂ ಇಂಗ್ಲಿಷ್ ಕಲಿಸಬಹುದು. ತಮಿಳು, ಶಾಸ್ತ್ರೀಯ ತಮಿಳು ಮತ್ತು ಇಂಗ್ಲಿಷ್ ಕಲಿಸುವ ಮೂಲಕ ತ್ರಿಭಾಷಾ ಸೂತ್ರದ ನಿಯಮ ಪಾಲಿಸಬಹುದು. ಈಗ, ಹಿಂದಿ ಹೇರಿಕೆಯ ಯಾವುದೇ ಭಯ ಇಲ್ಲದೆಯೇ ತ್ರಿಭಾಷಾ ಸೂತ್ರ ಅಳವಡಿಕೆಯ ಕುರಿತು ತಮಿಳುನಾಡು ಯೋಚಿಸಬಹುದು. ಹೀಗಾಗಿ, ತ್ರಿಭಾಷಾ ಸೂತ್ರವನ್ನು ವಿರೋಧಿಸುವ ಬದಲಿಗೆ, ಎಲ್ಲ ರಾಜ್ಯಗಳಲ್ಲಿಯೂ ಏಕರೂಪದಲ್ಲಿ ಜಾರಿ ಆಗುವುದಿದ್ದರೆ ತಾವು ಕೂಡ ಅದನ್ನು ಸ್ವೀಕರಿಸಲು ಸಿದ್ಧ ಎಂದು ಸ್ಟಾಲಿನ್ ಹೇಳಬಹುದಿತ್ತು. ಎಲ್ಲ ಹಿಂದಿ ಭಾಷಿಕ ರಾಜ್ಯಗಳಲ್ಲಿ ತಮಿಳು ಅಥವಾ ದಕ್ಷಿಣದ ಯಾವುದಾದರೂ ಒಂದು ಭಾಷೆಯನ್ನು ತೃತೀಯ ಭಾಷೆಯಾಗಿ ಕಲಿಸುವುದಿದ್ದರೆ ನಮ್ಮ ಶಾಲೆಗಳಲ್ಲಿ ಹಿಂದಿ ಕಲಿಸಲು ಸಿದ್ಧ ಎನ್ನಬಹುದಿತ್ತು.

ಇಂತಹ ನಡೆಯಿಂದ, ತ್ರಿಭಾಷಾ ಸೂತ್ರವನ್ನು ಹಾಳು ಮಾಡಿದ್ದು ತಮಿಳುನಾಡು ಅಲ್ಲ, ಬದಲಿಗೆ ಹಿಂದಿ ಭಾಷಿಕ ರಾಜ್ಯಗಳು ಎಂಬ ಸರಳ ಸತ್ಯವು ಬಹಿರಂಗ ಆಗುತ್ತಿತ್ತು. ಆರಂಭದಲ್ಲಿ, ಉತ್ತರಪ್ರದೇಶದಲ್ಲಿ ತಮಿಳು, ಹರಿಯಾಣದಲ್ಲಿ ತೆಲುಗು ಭಾಷೆ ಕಲಿಸುವುದು ಎಂಬಂತಹ ಯೋಜನೆ ಇತ್ತು. ಆದರೆ, ಕೆಲ ಕಾಲದ ಬಳಿಕ ಅವರು ಅಡ್ಡದಾರಿಯೊಂದನ್ನು ಹುಡುಕಿಕೊಂಡರು. ತೃತೀಯ ಭಾಷೆಯಾಗಿ ಸಂಸ್ಕೃತವನ್ನು ಆಯ್ದುಕೊಂಡರು. ಇಲ್ಲವೇ ತೃತೀಯ ಭಾಷೆಯಾಗಿ ಆಯ್ಕೆ ಮಾಡಿದ ಭಾಷೆಯಲ್ಲಿ ಒಂದಷ್ಟನ್ನು ಕಂಠಪಾಠ ಮಾಡಿಸತೊಡಗಿದರು. ಹೀಗೆ, ಭಾಷೆ ಕಲಿಕೆ ಅಥವಾ ಕೃತಿ ಓದುವಿಕೆಯಿಂದ ತಪ್ಪಿಸಿಕೊಂಡರು. ಹೀಗಾಗಿ, ತ್ರಿಭಾಷಾ ಸೂತ್ರವು ದಕ್ಷಿಣದವರಿಗೆ ಮಾತ್ರ ಎಂಬಂತಾಯಿತು. ಹೀಗಾಗಿಯೇ ತ್ರಿಭಾಷಾ ಸೂತ್ರವು ರಾಜಕೀಯ ಅತೃಪ್ತಿಗೆ ಕಾರಣವಾಯಿತು. ಈ ಎಲ್ಲ ಅಸಂಬದ್ಧವನ್ನು ನಿಲ್ಲಿಸಲು ಇದು ಸಕಾಲ.

ಕೇಂದ್ರ ಸರ್ಕಾರವು ತ್ರಿಭಾಷಾ ಸೂತ್ರದ ಕುರಿತು ಗಂಭೀರವಾಗಿದ್ದರೆ, ಹಿಂದಿ ಹೇರಿಕೆಯ ಉದ್ದೇಶ ಇಲ್ಲದಿದ್ದರೆ, ಅನುದಾನ ಬಿಡುಗಡೆಗೆ ತ್ರಿಭಾಷಾ ಸೂತ್ರದ ನೆಪವನ್ನು ಒಡ್ಡಬಾರದು. ಎಲ್ಲ ಮುಖ್ಯಮಂತ್ರಿಗಳ ಸಭೆ ಕರೆದು ರಾಷ್ಟ್ರೀಯ ಸಹಮತ ರೂಪಿಸಬೇಕು. ತೃತೀಯ ಭಾಷೆಗೆ ಪರ್ಯಾಯವಾಗಿ ಸಂಸ್ಕೃತ ಕಲಿಸಿ ತಪ್ಪಿಸಿಕೊಳ್ಳಲು ಹಿಂದಿ ಭಾಷಿಕ ರಾಜ್ಯಗಳಿಗೆ ಅವಕಾಶ ಕೊಡಬಾರದು. ಹೀಗೆ ಮಾಡುವುದರಿಂದ ಭಾಷೆಯ ಕುರಿತ ರಾಜಕೀಯ ಸಂಘರ್ಷ ಕೊನೆಯಾಗಿ, ಬಹುಭಾಷಿಕತೆಯತ್ತ ಗಮನ ಕೇಂದ್ರೀಕರಣಗೊಳ್ಳಬಹುದು.

ಶಿಕ್ಷಣ ವ್ಯವಸ್ಥೆಯಲ್ಲಿನ ಇಂಗ್ಲಿಷ್‌ನ ಯಜಮಾನಿಕೆ ಕೊನೆಗೊಳಿಸುವ ಸವಾಲು ಈಗ ನಮ್ಮ ರಾಜಕೀಯ ವರ್ಗದ ಮುಂದೆ ಇದೆ. ದಮನಕಾರಿ ನಿರಂಕುಶ ಪ್ರಭುತ್ವವನ್ನು ಎದುರಿಸಿ ನಿಲ್ಲಬಹುದು; ಶಸ್ತ್ರಸನ್ನದ್ಧ ಭಾರಿ ಸೇನೆಯನ್ನು ಎದುರಿಸಬಹುದು. ಆದರೆ, ಇಂಗ್ಲಿಷ್ ಪ್ರಾಬಲ್ಯವನ್ನು ಮುರಿಯುವುದು ಸುಲಭವೇನಲ್ಲ.



ಚುರುಮುರಿ



ಫ್ಯಾಟ್ ಚಾಲೆಂಜ್!

• ಬಿ.ಎನ್.ಮಲ್ಲೇಶ್

'ಲೇ ತೆಪರ, ರಾಜ್ಯದಾಗೆ ಬಿಜೆಪಿ, ಕಾಂಗ್ರೆಸ್ ಅಧ್ಯಕ್ಷರುಗಳು ಚೇಂಜ್ ಆಗ್ತಾರೆ ಅಂತೀಯ? ಎಷ್ಟು ಗದ್ಲ ನಡೆದ್ರೂ ಹೈಕಮಾಂಡ್‌ಗಳು ಯಾಕೆ ಪಿಟಕ್ಕಂತಿಲ್ಲ?' ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

'ಏನೋಪ್ಪ, ಏನೂ ತಿಳೀತಿಲ್ಲ. ನಮ್ ಬಂಡೆ ಮೇಲೆ ಹೂವು ಕುಂತಂಗೆ ಕಾಣುಸ್ತತಿ, ಹೂವಿನ ಪಕ್ಕದಲ್ಲಿ ದಳಗಳೆಲ್ಲ ದಿಕ್ಪಾಪಾಲಾಗಿ ದಾವು. ಅಧಿವೇಶನ ಆದ ಮೇಲೆ ಎಲ್ಲ ನಿಚ್ಚಳ ಆಗಬೋದು ಅನ್ಸುತ್ತೆ' ಎಂದ ತೆಪರೇಸಿ.

'ಅಲ್ಲ, ಅಧಿವೇಶನದಾಗೆ ಎಮ್ಮೆಲ್ಲೆಗಳು ನಿದ್ದಿ ಮಾಡಾಕೆ ಅದೆಂಥದೋ ಮಲಗೋ ಕುರ್ಚಿ ತರ್ಸಿದಾರಂತೆ?' ಮಂಜಮ್ಮ ಕೇಳಿದಳು.

'ಏಯ್, ಅಧಿವೇಶನದಾಗೆ ನಿದ್ದಿ ಮಾಡಾಕಲ್ಲ, ಮಧ್ಯಾಹ್ನ ಊಟ ಆದ ಮೇಲೆ ಒಂದು ಜಂಪ್ ಹಂಗೇ ಕಣ್ಣು ಮುಚ್ಚಾಕೆ ಅಷ್ಟೆ' ಗುಡ್ಡೆ ತಿದ್ದಿದ.

'ಅಂದ್ರೆ ಮಲಗೋರಿಗೆ ಚಾಪಿ ಹಾಸಿ ಕೊಟ್ಟಂಗಾತು. ಸರ್ಕಾರ ಭರ್ಜರಿ ಗೊರಕಿ ಹೊಡೀಬಹುದು' ಮಂಜಮ್ಮ ನಕ್ಕಳು.

'ನಮ್ದು ಹಂಗಿರ್ಲಿ, ನಿಮ್ ಮೋದಿ ಸಾಹೇಬ್ರು ಅದೇನೋ 'ಫ್ಯಾಟ್ ಚಾಲೆಂಜ್' ಹಾಕ್ಯಾರಂತೆ, ಏನದು?' ಗುಡ್ಡೆ ಕೇಳಿದ.

'ಫ್ಯಾಟ್ ಚಾಲೆಂಜ್ ಅಂದ್ರ ನಿನ್ನ ಈ ದಪ್ಪ ಹೊಟ್ಟೆ ಐತಲ್ಲ, ಅದ್ನ ಕರಗಿಸೋದು ಅಂತ'.

'ಅದಕ್ಕೆ ಏನ್ ಮಾಡ್ಬೇಕು?'

'ಎಣ್ಣೆ ಕಡಿಮಿ ಮಾಡ್ಬೇಕು'.

'ಎಣ್ಣೆನಾ? ಸಾಧ್ಯ ಇಲ್ಲ, ನಾವು ತಗಳ್ಳಾದೇ ನೈನ್ಟಿ, ಅದ್ನೂ ಕಡಿಮಿ ಮಾಡು ಅಂದ್ರ?' ಗುಡ್ಡೆ ತಲೆ ಒಗೆದ.

'ಏನ್ ಮಬ್ಬದೀಯಲೆ, ಆ ಎಣ್ಣೆ ಅಲ್ಲ, ಅಡುಗಿ ಎಣ್ಣೆ, ಮಿರ್ಚಿ, ಬೋಂಡಾ ಹಾಳು ಮೂಳು ತಿಂತೀಯಲ್ಲ, ಅದನ್ನ ಕಡಿಮಿ ಮಾಡು ಅಂತ' ತೆಪರೇಸಿ ಬಿಡಿಸಿ ಹೇಳಿದ.

'ಅದೂ ಕಷ್ಟ, ಸೈಡ್ಸ್ ಇಲ್ಲ ಅಂದ್ರ ಹೆಂಗೆ?'

'ಹಂಗಾದ್ರೆ ನೀನು ಫ್ಯಾಟ್ ಚಾಲೆಂಜ್ ಅಲ್ಲ, 'ಪ್ಯಾಂಟ್ ಚಾಲೆಂಜ್' ಮಾಡಬೇಕಾಗ್ತತಿ'.

'ಅಂದ್ರೆ?'

'ನಿನ್ನ ಈ ದಪ್ಪ ಹೊಟ್ಟೆ ಮೇಲೆ ಪ್ಯಾಂಟ್ ನಿಲ್ಲುತ್ತೆ ಅಂತ ಪ್ರೂವ್ ಮಾಡಬೇಕಾಗ್ತತಿ' ತೆಪರೇಸಿ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಚರ್ಚೆ

ಭ್ರಮೆ ಹುಟ್ಟಿಸುವ ವಿಶ್ವವಿದ್ಯಾಲಯ!

ವಿಶ್ವವಿದ್ಯಾಲಯ ಎಂಬ ಹೆಸರಿನ ಸಾಧಾರಣ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳ ಮಾನಸಿಕ, ಬೌದ್ಧಿಕ ವಿಕಾಸ ಎಷ್ಟರಮಟ್ಟಿನದು ಎಂಬುದು ಸಂದೇಹಾಸ್ಪದ

• ಚಂದ್ರಶೇಖರ ತಾಳ್ಯ

'ವಿಶ್ವವಿದ್ಯಾಲಯ: ಸಂಖ್ಯೆಯಷ್ಟೆ ಮುಖ್ಯವೇ?' ಎಂಬ ಲೇಖನ (ಸಂಗತ, ಫೆ. 17) ಶಿಕ್ಷಣದ ಇಂದಿನ ಅಧೋಗತಿಯನ್ನು ಓದುಗರ ಮುಂದಿಟ್ಟಿದೆ. ನಾಯಿಕೊಡೆಗಳಂತೆ ಹುಟ್ಟಿಕೊಳ್ಳುತ್ತಿರುವ, ವಿಶ್ವವಿದ್ಯಾಲಯಗಳೆಂಬ ಭ್ರಮೆ ಹುಟ್ಟಿಸುವ ಸ್ನಾತಕೋತ್ತರ ಕೇಂದ್ರಗಳು ನಮ್ಮ ವಿದ್ಯಾಭ್ಯಾಸದ ಅಸಲಿ ಅರ್ಥವನ್ನೇ ಪಲ್ಲಟಗೊಳಿಸುತ್ತಿರುವ ಹೊತ್ತು ಇದು.

ಮೈಸೂರು ವಿಶ್ವವಿದ್ಯಾಲಯದ ಮಾನಸಗಂಗೋತ್ರಿಯಲ್ಲಿ ನಾನು ಎಪ್ಪತ್ತರ ದಶಕದಲ್ಲಿ ತತ್ವಶಾಸ್ತ್ರ ಓದಿದೆ. ಅದೊಂದು ರಸಮಯ, ವೈಚಾರಿಕ, ಉಲ್ಲಾಸಮಯ ವಾತಾವರಣದ ಕಲಿಕೆ. ಆಕರ್ಷಕ ಹೆಸರಿನ ಮಾನಸ ಗಂಗೋತ್ರಿಯನ್ನು ರೂಪಿಸಿದವರು ಕವಿ ಕುವೆಂಪು. ಮನಸ್ಸನ್ನು ಪವಿತ್ರಗೊಳಿಸುವ, ಹೊಸ ಸಂವೇದನೆಗಳನ್ನು ರೂಢಿಸುವ, ಹೊಸ ವಿಚಾರಗಳನ್ನು ಆಲಿಸುವುದಷ್ಟೇ ಅಲ್ಲ ಅವುಗಳ ಮೇಲೆ ಪ್ರಭುತ್ವವನ್ನು ಸಾಧಿಸಲು ನೆರವಾಗುವ, ಲೋಕಜ್ಞಾನವನ್ನು ವಿಸ್ತರಿಸುವ, ವಿಶ್ವದ ನಾನಾ ಭಾಗಗಳಿಂದ ಕಲಿಯಲು ಬಂದ ವಿದ್ಯಾರ್ಥಿಗಳ ಜೊತೆ ಬೆರೆತು ಸಂವಾದಿಸುವ ಪರಿಕಲ್ಪನೆಯಾಗಿ ಕುವೆಂಪು ಅದನ್ನು ರೂಪಿಸಿದರು. ಈ ಕಾರಣದಿಂದ, ತಾವು ಕವಿಯಷ್ಟೇ ಅಲ್ಲ ಶ್ರೇಷ್ಠ ಶಿಕ್ಷಣ ತಜ್ಞ, ತತ್ವಜ್ಞಾನಿ ಎಂಬುದನ್ನೂ ಈ ಮೂಲಕ ತೋರಿಸಿಕೊಟ್ಟದ್ದು ಕರ್ನಾಟಕದ ಹೆಗ್ಗಳಿಕೆ.

ಇದೇ ಮಾದರಿಯನ್ನು ಮುಂದೆ ಬೆರಳೆಣಿಕೆಯ ವಿಶ್ವವಿದ್ಯಾಲಯಗಳು ಅಳವಡಿಸಿಕೊಂಡವು. ವಿಶ್ವವಿದ್ಯಾಲಯದ ಕಲ್ಪನೆ ಪೂರ್ಣ ಪ್ರಮಾಣದಲ್ಲಿ ಸಾಕಾರಗೊಳ್ಳಬೇಕೆಂದರೆ, ಬಹು ಮುಖ್ಯವಾಗಿ ಬೋಧನಾಂಗ, ಸಂಶೋಧನಾಂಗ ಮತ್ತು ಪ್ರಸಾರಾಂಗ ಇರಲೇಬೇಕು. ಈ ಎಲ್ಲ ಅಂಗಗಳೂ ಆ ಕಾಲಕ್ಕೆ ದೊಡ್ಡ ಪ್ರಮಾಣದಲ್ಲಿಯೇ ಕ್ರಿಯಾಶೀಲವಾಗಿದ್ದವು. ಬೋಧನಾಂಗದಲ್ಲಿ ರಾಧಾಕೃಷ್ಣನ್, ಟಿ.ಎಸ್.ವೆಂಕಣ್ಣಯ್ಯ, ಸಿಡಿಎಸ್, ಕುವೆಂಪು, ಎಲ್.ಬಸವರಾಜು, ಹಾಮಾನಾ, ಅನಂತಮೂರ್ತಿ, ತೀನಂಶ್ರೀ ಅವರಂತಹ ಖ್ಯಾತಿವೆತ್ತ ಹಲವಾರು ಪ್ರಾಧ್ಯಾಪಕರು ಇದ್ದರು. ತಮ್ಮ ಸೃಜನಶೀಲ ಬೋಧನೆಯಿಂದ ವಿದ್ಯಾರ್ಥಿಗಳನ್ನು ಪ್ರಚೋದಿಸುತ್ತಾ, ದೀಪ್ತಗೊಳಿಸುತ್ತಾ, ಉಜ್ವಲಗೊಳಿಸಬಲ್ಲವರಾಗಿದ್ದರು.

ಆಗಿನ ಪ್ರಸಾರಾಂಗವಂತೂ ಪ್ರಭುಶಂಕರ ಅವರ ಸಾರಥ್ಯದಲ್ಲಿ ಅಕ್ಷರಶಃ ಜೀವಂತವಾಗಿತ್ತು. ಅಲ್ಲಿ ಪ್ರಕಟಗೊಂಡ ಗ್ರಂಥಗಳು ವಿಶ್ವಮಾನ್ಯವಾದವು ಎಂದರೆ ಅತಿಶಯೋಕ್ತಿಯೇನೂ ಅಲ್ಲ. ಅದು ಮುಂದೆ ಉಳಿದ ವಿಶ್ವವಿದ್ಯಾಲಯಗಳಲ್ಲೂ ಪ್ರಸಾರಾಂಗ ಸಕ್ರಿಯವಾಗಲು ಪ್ರೇರಕವಾಯಿತು. ಸಂಶೋಧನಾಂಗ ಅಷ್ಟೊಂದು ಪ್ರಮಾಣದಲ್ಲಿ ಮುನ್ನೆಲೆಗೆ ಬಾರದಿದ್ದರೂ ತನ್ನ ಮಿತಿಯಲ್ಲಿ ಅದೂ ಕೆಲಸ ನಿರ್ವಹಿಸಿತು.

ಮಾನಸಗಂಗೋತ್ರಿ ಎಂಬ ಮಂತ್ರಸದೃಶ ಪರಿಸರ ಭೌತಿಕವಾಗಿಯೂ ತನ್ನ ಚೆಲುವಾದ ವಿನ್ಯಾಸದಿಂದ, ಭವ್ಯವಾದ ಕಟ್ಟಡಗಳಿಂದ, ಮಲೆನಾಡಿನ ಪ್ರಕೃತಿಯಂತೆ ಕಂಗೊಳಿಸುತ್ತಿದ್ದ ಹಸಿರಿನ ರಮ್ಯತೆಯಿಂದ, ಗಾಂಧಿ ವಿಚಾರಗಳನ್ನು ಹೊತ್ತ ಗಾಂಧಿ ಭವನದಿಂದ 'ನೋಟ ಸೇರದು ಯಾರಿಗೆ?' ಎನ್ನುವಂತೆ ಜ್ಞಾನ ಸಮೃದ್ಧಿಯ ಒಂದು ಶಾಂತಿನಿಕೇತನದಂತೆ ಇದ್ದುದೇ ಹೌದು.

ವಿಶ್ವದ ನಾನಾ ಭಾಗಗಳಿಂದ ವಿದ್ಯಾರ್ಥಿಗಳು ತಮ್ಮ ಆಸಕ್ತಿಯ ವಿಷಯಗಳನ್ನು ಕಲಿಯಲು ಬರುತ್ತಿದ್ದರು. ನಾನು ಕಲಿಯುತ್ತಿದ್ದ ತತ್ವಶಾಸ್ತ್ರ ವಿಭಾಗದಲ್ಲೇ ಅಮೆರಿಕ ಮತ್ತು ಥಾಯ್ಲೆಂಡಿನ ವಿದ್ಯಾರ್ಥಿಗಳಿದ್ದರು. ಹೀಗೆ ಎಲ್ಲ ವಿಭಾಗಗಳಲ್ಲೂ ಹೊರದೇಶಗಳ ವಿದ್ಯಾರ್ಥಿಗಳಿದ್ದರು. ಅದೊಂದು ಮಿನಿ ವಿಶ್ವವೇ ಆಗಿತ್ತು. ಹೊರದೇಶದ ವಿದ್ಯಾರ್ಥಿಗಳ ವಿಭಿನ್ನ ಸಂಸ್ಕೃತಿ, ಭಾಷೆ, ಧರ್ಮಗಳ ಪರಿಚಯ ನಮಗಾಗಿ, ನಮ್ಮೆಲ್ಲರಲ್ಲಿ ರೋಮಾಂಚನ ಮೂಡಿಸುವಂತಿತ್ತು. ವಿಶ್ವವಿದ್ಯಾಲಯವೆಂದರೆ ಹೀಗಿರಬೇಕಲ್ಲವೇ? ಅದರ ಪರಿಕಲ್ಪನೆ ಎಂದರೆ ಬೌದ್ಧಿಕ, ಮಾನಸಿಕ ವಿಕಸನವಲ್ಲವೇ? ಅದು ವಿಶ್ವ ಮಟ್ಟಕ್ಕೆ ವ್ಯಕ್ತಿತ್ವವನ್ನು ಎತ್ತರಿಸುವುದಲ್ಲವೇ? ಆದರೆ ಈಗೇನಾಗಿದೆ?

ಈಗಿನ ಪರಿಸ್ಥಿತಿ ಘನಘೋರ. ಈಗಿರುವ ವಿಶ್ವವಿದ್ಯಾಲಯ ಎಂಬ ಹೆಸರಿನ ಸಾಧಾರಣ ಕಾಲೇಜುಗಳು ಬಿದ್ದ ಮನೆಯ ಅವಶೇಷಗಳ ಮೇಲೆ ನಿಂತಂತೆ ಕಾಣಿಸುತ್ತವೆ. ಪದವಿ ಓದಿದ ಅಂಗಳದಲ್ಲೇ ಎರಡು, ಮೂರು ಅಥವಾ ಒಂದೇ ವಿಷಯವಾರು ಸ್ನಾತಕೋತ್ತರ ಕೇಂದ್ರ. ಆ ಪಾಪದ ವಿದ್ಯಾರ್ಥಿಗಳ ಮಾನಸಿಕ, ಬೌದ್ಧಿಕ ವಿಕಾಸ ಎಷ್ಟರಮಟ್ಟಿನದು ಎಂಬುದೇ ಸಂದೇಹಾಸ್ಪದ. ಸ್ವಸಾಮರ್ಥ್ಯದಿಂದ ಎಲ್ಲೋ ಬೆರಳೆಣಿಕೆಯ ವಿದ್ಯಾರ್ಥಿಗಳು ಸುಮಾರಾಗಿ ಲೋಕಜ್ಞಾನವನ್ನು ಗಳಿಸಿಯಾರು!

ಜಿಲ್ಲೆಗೊಂದು, ತಾಲ್ಲೂಕಿಗೊಂದು (ಮುಂದೆ ಹೋಬಳಿಗೊಂದು ಬಂದರೂ ಅಚ್ಚರಿಯಿಲ್ಲ) ಸ್ನಾತಕೋತ್ತರ ಕೇಂದ್ರಗಳಾಗುತ್ತಾ ಅವು ವಿಶ್ವವಿದ್ಯಾಲಯದ ಭ್ರಮೆ ಹುಟ್ಟಿಸಿ ನಮ್ಮ ಮಕ್ಕಳನ್ನು ಮತ್ತಷ್ಟು ಅಜ್ಞಾನಿಗಳನ್ನಾಗಿ ಮಾಡುವುದು ನಮ್ಮ ನಾಡಿಗಾಗುವ ಕೇಡು. ಇದನ್ನು ನಮ್ಮ ಶಿಕ್ಷಣ ತಜ್ಞರು, ರಾಜಕಾರಣಿಗಳು ಅರಿಯಬೇಕು.

ಜ್ಞಾನವೆಂಬುದು ಸತತ ಶ್ರಮದಿಂದ, ಅನವರತ ಕುತೂಹಲದಿಂದ, ಅದ್ಭುತವೆನಿಸುವ ಅಸಾಮಾನ್ಯ ಪರಿಸರದಿಂದ, ವಿಭಿನ್ನ ಸಂಸ್ಕೃತಿ, ಭಾಷೆ, ಧರ್ಮಕ್ಕೆ ಸೇರಿದ ವಿದ್ಯಾರ್ಥಿಗಳ ಒಡನಾಟದಿಂದ, ಆಟದಿಂದ, ಪರಸ್ಪರ ಜ್ಞಾನ ವಿನಿಮಯದಿಂದ ಗಳಿಕೆಯಾಗುತ್ತಾ ಕ್ರಮೇಣ ವಿಕಾಸಗೊಳ್ಳುತ್ತಾ ಮುಂದಿರುವ ಬದುಕಿನ ಪುಟ ತೆರೆಯುವುದಕ್ಕೆ ನೆರವಾಗುವಂತಹುದು.

ನನ್ನ ವಿಶ್ವವಿದ್ಯಾಲಯದ ವಿದ್ಯಾರ್ಜನೆ, ಅದರಿಂದ ಗಳಿಸಿದ ಲಾಭ ಎಣೆಯಿಲ್ಲದ್ದು. ಅಲ್ಲಿ ಕಲಿತ ನನ್ನ ಕಾಲದ ಪ್ರತಿಭಾವಂತ ವಿದ್ಯಾರ್ಥಿಗಳು ಇಂದು ರಾಷ್ಟ್ರ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಸರಾಗಿದ್ದಾರೆ. ಯಾಕೆಂದರೆ ಅವರೆಲ್ಲ ನಿಜ ಅರ್ಥದ ವಿಶ್ವವಿದ್ಯಾಲಯದಲ್ಲಿ ಕಲಿತವರೇ ವಿನಾ ಸಂಖ್ಯಾ ವಿಶ್ವವಿದ್ಯಾಲಯದಲ್ಲಿ ಅಲ್ಲ.

ವಾಚಕರ ವಾಣಿ

ವಿಧಾನಸೌಧದಲ್ಲಿ 'ಸಾಹಿತ್ಯ ಹಬ್ಬ'

ವಿಧಾನಸೌಧದಲ್ಲಿ ಮೊದಲ ಬಾರಿಗೆ ಸಾಹಿತ್ಯಾಸಕ್ತರಿಗಾಗಿ ಪುಸ್ತಕ ಮೇಳ ಏರ್ಪಡಿಸಿರುವುದನ್ನು ತಿಳಿದು ತುಂಬಾ ಸಂತೋಷವಾಯಿತು. ವಿಧಾನಸಭೆ ಸಚಿವಾಲಯ ಆಯೋಜಿಸಿರುವ ಈ ಮೇಳ ಗುರುವಾರ ಆರಂಭವಾಗಿದ್ದು, ಮಾರ್ಚ್ 3ರವರೆಗೆ ನಡೆಯಲಿರುವುದು ಶ್ಲಾಘನೀಯ. ಪುಸ್ತಕಪ್ರೇಮಿಗಳು, ಸಾಹಿತಿಗಳು, ವಿಧಾನಸೌಧವನ್ನು ನೋಡಬೇಕು ಎಂದುಕೊಂಡ ಕನ್ನಡದ ಮನಸ್ಸುಗಳಿಗೆ ಇದೊಂದು ಸಾಹಿತ್ಯದ ಹಬ್ಬವೇ ಸರಿ. ರಾಜ್ಯ ಸರ್ಕಾರವು ರಾಜಕೀಯ ಚಟುವಟಿಕೆಗಳನ್ನು ಒಂದಿಷ್ಟು ಬದಿಗಿಟ್ಟು ಈ ವಿನೂತನ ಹೆಜ್ಜೆ ಹಾಕಲು ಮುಂದಾಗಿದ್ದು ಪ್ರಶಂಸನೀಯ. ಈ ಸಾಹಿತ್ಯ ಹಬ್ಬ ಅರ್ಥಪೂರ್ಣವಾಗಿ ನೆರವೇರಲಿ.

ಮಹಾಂತೇಶಪ್ಪ, ಶಿವಮೊಗ್ಗ

ಹಿರಿಯ ನಾಗರಿಕರ ಮಾಸಾಶನ ಹೆಚ್ಚಲಿ

ನಮ್ಮ ರಾಜ್ಯದ ಅಕ್ಕಪಕ್ಕದ ರಾಜ್ಯಗಳಲ್ಲಿ ಹಿರಿಯ ನಾಗರಿಕರಿಗೆ ₹ 2,000 ಮಾಸಾಶನ ನೀಡಲಾಗುತ್ತಿದೆ. ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಹಿರಿಯ ನಾಗರಿಕರು ₹ 2,500 ಮಾಸಾಶನ ಪಡೆಯುತ್ತಿದ್ದಾರೆ. ಆದರೆ ಕರ್ನಾಟಕದಲ್ಲಿ ಮಾತ್ರ ಹಿರಿಯ ನಾಗರಿಕರಿಗೆ ₹ 1,200 ನೀಡಲಾಗುತ್ತಿದೆ. ಹಿರಿಯ ನಾಗರಿಕರಲ್ಲಿ ಹೆಚ್ಚಿನವರು ಸಾಮಾನ್ಯವಾಗಿ ಆರ್ಥಿಕ ಸಂಕಷ್ಟ ಎದುರಿಸುತ್ತಾರೆ. ಹೀಗಾಗಿ ನಮ್ಮ ರಾಜ್ಯದಲ್ಲೂ ಹಿರಿಯ ನಾಗರಿಕರ ಮಾಸಾಶನವನ್ನು ₹ 2,000ಕ್ಕೆ ಏರಿಸಬೇಕು. ಈ ಮೂಲಕ, ಬಾಳಿನ ಮುಸ್ಸಂಜೆಯಲ್ಲಿ ಇರುವವರು ಆರ್ಥಿಕ ಸಂಕಷ್ಟದಿಂದ ಹೊರಬರಲು ಅನುವು ಮಾಡಿಕೊಡಬೇಕು.

ಎ.ವಿ.ಶಾಮರಾವ್, ಬೆಂಗಳೂರು

ನೆಲದ ಭಾಷೆಗೆ ಬದ್ಧತೆ: ಹಿಂದೇಟು ಏಕೆ?

ತೆಲಂಗಾಣದಲ್ಲಿ ಮುಂದಿನ ದಿನಗಳಲ್ಲಿ ಎಲ್ಲಾ ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪಠ್ಯಕ್ರಮದ ಶಾಲೆಗಳಲ್ಲಿ ತೆಲುಗು ಭಾಷೆಯನ್ನು ಒಂದು ವಿಷಯವಾಗಿ ಕಡ್ಡಾಯವಾಗಿ ಕಲಿಸುವಂತೆ ಅಲ್ಲಿನ ಸರ್ಕಾರ ಹೊರಡಿಸಿರುವ ಆದೇಶವನ್ನು ತೆಲಂಗಾಣದ ಜನ ಹೃತ್ಪೂರ್ವಕವಾಗಿ ಸ್ವಾಗತಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಸರ್ಕಾರಿ ನೌಕರರು ಕಚೇರಿಗಳಲ್ಲಿ ಮರಾಠಿಯಲ್ಲಿಯೇ ಮಾತನಾಡಬೇಕೆಂದು ಅಲ್ಲಿನ ಸರ್ಕಾರ ನಿರ್ದೇಶನ ನೀಡಿದೆ. ವಿಪರ್ಯಾಸವೆಂದರೆ, ಕರ್ನಾಟಕದಲ್ಲಿ ಕನ್ನಡ ಮತ್ತು ಕನ್ನಡಿಗರ ಹಿತರಕ್ಷಣೆಯನ್ನು ದೃಷ್ಟಿಯಲ್ಲಿಟ್ಟ ಸರೋಜಿನಿ ಮಹಿಷಿ ವರದಿ ಜಾರಿಯಾಗದೆ ವಿಧಾನಸೌಧದ ಕೊಠಡಿಯಲ್ಲಿ ದಶಕಗಳಿಂದ ದೂಳು ತಿನ್ನುತ್ತಿದೆ. ಕರ್ನಾಟಕದಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡುವುದಕ್ಕೆ ಸಂಬಂಧಿಸಿದ ಮಸೂದೆ ಸದನದಲ್ಲಿ ಮಂಡನೆಯಾಗಲೇ ಇಲ್ಲ. ರಾಜ್ಯದಲ್ಲಿ ಮಾತೃಭಾಷೆಯಲ್ಲಿಯೇ ಶಿಕ್ಷಣ ನೀಡುವ ಪ್ರಯತ್ನಕ್ಕೆ ಸೋಲಾಗಿದೆ.

ಪ್ರತಿ ರಾಜ್ಯವೂ ತನ್ನ ನೆಲದ ಭಾಷೆಗೆ ಬದ್ಧತೆ ತೋರಿಸುವ ಧಾವಂತದಲ್ಲಿ ಇರುವಾಗ, ಈ ವಿಷಯದಲ್ಲಿ ಕನ್ನಡಿಗರೇಕೆ ಹಿಂದೇಟು ಹಾಕುತ್ತಿದ್ದಾರೆ ಎನ್ನುವುದು ತಿಳಿಯುತ್ತಿಲ್ಲ. ಭಾಷಾ ಅಸ್ಮಿತೆಯ ವಿಷಯದಲ್ಲಿ ಕನ್ನಡಿಗರು ಎಂದೆಂದೂ ಹಿಂದೆ ಮತ್ತು ನಮ್ಮಲ್ಲಿ ರಾಜಕೀಯ ಇಚ್ಛಾಶಕ್ತಿಯ ಕೊರತೆ ಇದೆ ಎನ್ನುವುದು ಇನ್ನೊಮ್ಮೆ ದೃಢಪಟ್ಟಿದೆ.

ರಮಾನಂದ ಶರ್ಮಾ, ಬೆಂಗಳೂರು

ಸರ್ಕಾರಿ ಕೃಪಾಪೋಷಿತ ನಾಟಕ!

ರಾಜ್ಯ ಸರ್ಕಾರದ ಅಧೀನದ 'ಕುಮಾರಕೃಪ' ಅತಿಥಿಗೃಹವು ಭ್ರಷ್ಟಾಚಾರದ ಕೂಪವಾಗಿರುವ ಸುದ್ದಿಯು (ಪ್ರ.ವಾ., ಫೆ. 27) 'ಕುರಿ ಕಾಯಲು ತೋಳ ನೇಮಿಸಿದಂತೆ' ಎಂಬ ಮಾತನ್ನು ನೆನಪಿಸುವಂತಿದೆ. ಕೋಟಿಗಳ ಲೆಕ್ಕದಲ್ಲಿ ಅಧಿಕಾರಿಗಳೇ ಅಕ್ರಮ ಎಸಗುವುದರ ಜೊತೆಗೆ ಕಚೇರಿ ಕೆಲಸಗಾರರನ್ನು ಮೇಲಧಿಕಾರಿಗಳು ಮನೆಗೆಲಸಕ್ಕೆ ಬಳಸಿಕೊಳ್ಳುವುದು ತೀರಾ ನಾಚಿಕೆಗೇಡಿನ ಸಂಗತಿ. ನಮ್ಮ ದೇಶದಲ್ಲಿ ಯಾವುದೇ ಅಕ್ರಮಗಳ ವಿರುದ್ಧ ಶೀಘ್ರದಲ್ಲಿ ತನಿಖೆಗಳನ್ನು ನಡೆಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳದಿರುವುದು, ಪ್ರಕರಣಕ್ಕೆ ತಾರ್ಕಿಕ ಅಂತ್ಯ ಕಾಣಿಸದೇ ಇರುವುದು ಇಂಥ ಪ್ರಕರಣಗಳು ಮರುಕಳಿಸಲು ಕಾರಣ.

ಗೈರುಹಾಜರಾದ, ರಜೆ ಪಡೆದ ಎಲ್ಲ ನೌಕರರಿಗೂ ಪೂರ್ಣ ಪ್ರಮಾಣದ ವೇತನ ನೀಡಲಾಗಿದೆ. ತಿಂಗಳಾನುಗಟ್ಟಲೆ ರಜೆಯನ್ನೇ ಹಾಕದೆ ನಿರಂತರವಾಗಿ ಕೆಲಸ ಮಾಡುವ ನೌಕರರು ಇದ್ದಿದ್ದೇ ಆಗಿದ್ದರೆ ನಮ್ಮ ದೇಶದ ಪ್ರಗತಿಯ ಚಿತ್ರಣ ಬೇರೆ ರೀತಿಯಲ್ಲೇ ಇರುತ್ತಿತ್ತು. ಈ ಐಷಾರಾಮಿ ಕಟ್ಟಡದ ನಿರ್ವಹಣೆಯ ಹೊಣೆ ಹೊತ್ತಿರುವ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹಿರಿಯ ಅಧಿಕಾರಿಯನ್ನೇ ತನಿಖೆಗೆ ನೇಮಕ ಮಾಡಿರುವುದು ಸಂಶಯಾಸ್ಪದವಾಗಿದೆ. ಸರ್ಕಾರಕ್ಕೆ ನೈಜ ಕಾಳಜಿ ಇದ್ದಿದ್ದರೆ ಕನಿಷ್ಠ ಸಿಐಡಿ ತನಿಖೆಯನ್ನಾದರೂ ನಡೆಸಬೇಕಿತ್ತು. ಹಾಗೆ ಮಾಡದೇ ಇರುವುದನ್ನು ನೋಡಿದರೆ ಇದು ತನಿಖೆ ಎಂಬ ಸರ್ಕಾರಿ ಕೃಪಾಪೋಷಿತ ನಾಟಕ ಎನ್ನದೇ ವಿಧಿಯಿಲ್ಲ.

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಮಾನವರಹಿತ ತಂತ್ರಜ್ಞಾನ: ಇರಲಿ ವಿವೇಚನೆ

ತೆಲಂಗಾಣದ ಶ್ರೀಶೈಲಂ ಎಡದಂಡೆ ಕಾಲುವೆ ಕುಸಿದು ಅದರೊಳಗೆ ಸಿಲುಕಿರುವ ಕಾರ್ಮಿಕರ ರಕ್ಷಣಾ ಕಾರ್ಯ ಸವಾಲಾಗಿ ಪರಿಣಮಿಸಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಗಣಿಗಳು, ಸುರಂಗಗಳು ಮತ್ತು ಇತರ ಅಪಾಯಕಾರಿ ಸ್ಥಳಗಳಲ್ಲಿ ಕಾರ್ಮಿಕರು ಸಿಲುಕಿಕೊಳ್ಳುವುದು, ಅವರನ್ನು ರಕ್ಷಿಸಲು ಕಾರ್ಯಾಚರಣೆ ನಡೆಸುವುದು ಆಗಿಂದಾಗ್ಗೆ ದೇಶ ವಿದೇಶಗಳಿಂದ ವರದಿಯಾಗುತ್ತಿರುತ್ತದೆ. ಮನುಷ್ಯ ಕೆಲಸ ಮಾಡಲು ಅಪಾಯಕಾರಿಯಾಗಿರುವ ಸ್ಥಳಗಳಲ್ಲಿ ಮಾನವರಹಿತ ಯಂತ್ರಗಳು, ರೊಬೋಟ್‌ಗಳ ಬಳಕೆಯ ಬಗ್ಗೆ ಸರ್ಕಾರಗಳು, ಸಂಶೋಧಕರು ಕ್ರಿಯಾಶೀಲರಾಗಬೇಕು. ಇದರಿಂದ ಎಷ್ಟೋ ಜೀವಗಳು ಉಳಿಯುತ್ತವೆ. ಹಾಗೆಯೇ ಮನುಷ್ಯರು ಸುಲಭವಾಗಿ ಕಾರ್ಯ ನಿರ್ವಹಿಸುವ ಸ್ಥಳಗಳಲ್ಲಿ ಮಾನವರಹಿತ ತಂತ್ರಜ್ಞಾನವನ್ನು ಅಳವಡಿಸುವುದೂ ಅವೈಜ್ಞಾನಿಕ.

ಬೆಂಗಳೂರಿನ 'ನಮ್ಮ ಮೆಟ್ರೊ'ದಲ್ಲಿ ಚಾಲಕರಹಿತ ಸಂಚಾರದ ಪರೀಕ್ಷೆ ನಡೆಸಿರುವುದು ವರದಿಯಾಗಿದೆ. ಇದು ಅನಗತ್ಯ ಹಾಗೂ ಉದ್ಯೋಗವನ್ನು ಕಸಿಯುವ ನಡೆಯಾಗಿದೆ. ಆದ್ದರಿಂದ ಮಾನವರಹಿತ ತಂತ್ರಜ್ಞಾನವನ್ನು ಎಲ್ಲಿ ಮನುಷ್ಯರು ಕೆಲಸ ಮಾಡಲು ಸಾಧ್ಯವಿಲ್ಲವೋ ಅಪಾಯವಿರುತ್ತದೋ ಅಲ್ಲಿ ಖಂಡಿತವಾಗಿ ಅಳವಡಿಸಬೇಕು. ಉಳಿದ ಕಡೆಗಳಲ್ಲಿ ಅದರ ಅಗತ್ಯ ಇರುವುದಿಲ್ಲ. ಈ ಬಗ್ಗೆ ಸರ್ಕಾರ ಚಿಂತಿಸಬೇಕಾಗಿದೆ.

ಈ.ಬಸವರಾಜು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಏಳು ಗ್ರಹಗಳ 'ಪಥಸಂಚಲನ'

ಇಂದು ಆಗಸದಲ್ಲಿ ಅಪರೂಪದ ವಿದ್ಯಮಾನ

ಹೇಗೆ ಕಾಣಿಸಿಕೊಳ್ಳಲಿವೆ?

ಗ್ರಹಗಳ ಸಾಲಿನಲ್ಲಿ ಮೊದಲು (ಎಡದಿಂದ) ಮಂಗಳ ಗ್ರಹ ಇರಲಿದೆ. ನಂತರ ಗುರು ಗ್ರಹ, ಬಳಿಕ ಯುರೇನಸ್, ಪಶ್ಚಿಮದ ಬಾನಂಚಿನ ಹತ್ತಿರ ಶುಕ್ರ ಗ್ರಹ, ಆ ನಂತರದಲ್ಲಿ ನೆಪ್ಚೂನ್, ಅದರ ನಂತರ ಬುಧ ಗ್ರಹ ಗೋಚರಿಸಲಿದೆ. ಗ್ರಹಗಳ ಸಾಲಿನ ಕೊನೆಯಲ್ಲಿ ಶನಿ ಗ್ರಹ ಕಾಣಿಸಿಕೊಳ್ಳಲಿದೆ. ಸಾಮಾನ್ಯವಾಗಿ ಶನಿ ಗ್ರಹ ಬರಿ ಕಣ್ಣಿಗೆ ಕಾಣಿಸಿಕೊಳ್ಳುತ್ತದೆಯಾದರೂ ಈಗ ಅದು ಸೂರ್ಯನಿಗೆ ಸಮೀಪದಲ್ಲಿರುವುದರಿಂದ ಅದನ್ನು ಗುರುತಿಸುವುದು ಕೊಂಚ ಸವಾಲಿನ ಕೆಲಸವಾಗಬಹುದು ಎಂದು 'ಸ್ಟಾರ್‌ವಾಕ್' ವರದಿ ಮಾಡಿದೆ.

ಇಂದು ರಾತ್ರಿ ಆಕಾಶದಲ್ಲಿ ಅಪರೂಪದ ವಿದ್ಯಮಾನ ನಡೆಯಲಿದೆ. ಸೌರಮಂಡಲದ ಏಳು ಗ್ರಹಗಳು ಆಗಸದಲ್ಲಿ ಒಟ್ಟಾಗಿ ಕಾಣಿಸಿಕೊಳ್ಳಲಿವೆ. ಸೂರ್ಯಾಸ್ತದ ನಂತರ ಕಾಣಸಿಗುವ ಈ ಕೌತುಕಕ್ಕೆ ಜಗತ್ತೇ ಸಾಕ್ಷಿಯಾಗಲಿದೆ. ಮೂರು ನಾಲ್ಕು ಗ್ರಹಗಳು ಒಟ್ಟಾಗಿ ಕಾಣಿಸಿಕೊಳ್ಳುವುದು ಸಾಮಾನ್ಯವಾದರೂ ಆರೇಳು ಗ್ರಹಗಳು ಒಟ್ಟಾಗಿ ಗೋಚರಿಸುವುದು ಬಹಳ ಅಪರೂಪ. ಮುಂದಿನ 15 ವರ್ಷಗಳವರೆಗೆ ಏಳು ಗ್ರಹಗಳು ಒಟ್ಟಾಗಿ ಕಾಣಲು ಸಿಗವು ಎಂಬುದು ವಿಜ್ಞಾನಿಗಳ ಹೇಳಿಕೆ

ಪ್ರಜಾವಾಣಿ ವಾರ್ತೆ

ಈ ವರ್ಷದ ಮೊದಲ ತಿಂಗಳಲ್ಲೇ ಆಗಸದಲ್ಲಿ ಸೌರ ಮಂಡಲದ ಆರು ಗ್ರಹಗಳು (ಶುಕ್ರ, ಮಂಗಳ, ಗುರು, ಶನಿ, ಯುರೇನಸ್ ಮತ್ತು ನೆಪ್ಚೂನ್) ಒಟ್ಟಾಗಿ ಕಾಣಿಸಿಕೊಂಡು ನಕ್ಷತ್ರ ವೀಕ್ಷಕರು, ಗಗನ ಕುತೂಹಲಿಗಳನ್ನು ಅಚ್ಚರಿಗೆ ಕೆಡವಿದ್ದವು. ಶುಕ್ರವಾರ (ಫೆ.28) ಮತ್ತೊಂದು ಅಪರೂಪದ ಖಗೋಳ ವಿದ್ಯಮಾನಕ್ಕೆ ಈ ಜಗತ್ತು ಸಾಕ್ಷಿಯಾಗಲಿದೆ. ಈ ಆರು ಗ್ರಹಗಳ ಸಾಲಿಗೆ ಬುಧ ಗ್ರಹವೂ ಸೇರಿ ಸೌರ ಮಂಡಲದ ಇತರ ಎಲ್ಲ ಏಳು ಗ್ರಹಗಳೂ ಆಕಾಶದಲ್ಲಿ 'ಪಥಸಂಚಲನ' ನಡೆಸಲಿವೆ. ಮತ್ತೊಮ್ಮೆ ಇಂತಹ ಅಪರೂಪದ ವಿದ್ಯಮಾನಕ್ಕೆ ನಾವು ಸಾಕ್ಷಿಯಾಗಲು ಕನಿಷ್ಠ 15 ವರ್ಷ ಕಾಯಬೇಕು.

ಗ್ರಹಗಳು ಒಟ್ಟಿಗೆ ಗೋಚರಿಸುವುದು ಖಗೋಳ ವಿಜ್ಞಾನದಲ್ಲಿ ಸಾಮಾನ್ಯ ವಿದ್ಯಮಾನ. ಪ್ರತಿ ದಿನ ರಾತ್ರಿ ಶುಕ್ರ, ಗುರು, ಮಂಗಳ ಗ್ರಹ ಬರಿ ಕಣ್ಣಿಗೆ ಕಾಣಿಸುತ್ತವೆ. ಐದಕ್ಕಿಂತ ಹೆಚ್ಚು ಗ್ರಹಗಳು ಒಟ್ಟಾಗಿ ಕಾಣಿಸಿಕೊಳ್ಳುವುದು ಅಪರೂಪ. ಅದರಲ್ಲೂ ಏಳು ಗ್ರಹಗಳು ಒಂದೇ ಸಾಲಿನಲ್ಲಿ ಬರುವುದು ಇನ್ನೂ ಅಪರೂಪ. ಖಗೋಳ ವಿಜ್ಞಾನದಲ್ಲಿ ಇದನ್ನು 'ಗ್ರಹಗಳ ಸಾಲುಗೂಡುವಿಕೆ' (planetary alignment) ಎಂದು ಕರೆಯಲಾಗುತ್ತದೆ.

ಗ್ರಹಗಳು ಕಾಣುವುದೆಲ್ಲಿ ?

ಹಲವು ಗ್ರಹಗಳು, ಏಕಕಾಲದಲ್ಲಿ ಸೂರ್ಯನಿಗೆ ಹತ್ತಿರವಾಗಿ ಒಂದು ಬದಿಗೆ ಬಂದಾಗ ಗ್ರಹಗಳ ಪಂಕ್ತಿ ಕಾಣಿಸುತ್ತದೆ. ಸಾಲು ಎಂದಾಕ್ಷಣ ಈ ಗ್ರಹಗಳು ಸರಳ ರೇಖೆಯಲ್ಲಿ ಇರುವುದಿಲ್ಲ. ವೈಜ್ಞಾನಿಕವಾಗಿ 'ಇಕ್ಲಿಪ್ಟಿಕ್' ಎಂದು ಕರೆಯಲಾಗುವ ಕಲ್ಪನಾ ಪಥ ಅಥವಾ ಕಕ್ಷೆಯಲ್ಲಿ ಈ ಗ್ರಹಗಳು ಕಾಣಿಸಿಕೊಳ್ಳುತ್ತವೆ. 'ಇಕ್ಲಿಪ್ಟಿಕ್' ಎನ್ನುವುದು ಅಧಿಕೃತ ಕಕ್ಷೆ ಅಥವಾ ಪಥವಲ್ಲ; ಭೂಮಿಯಿಂದ ಆಕಾಶವನ್ನು ನೋಡುವಾಗ ಸೂರ್ಯನು ವರ್ಷದ ಅವಧಿಯಲ್ಲಿ ನಕ್ಷತ್ರಗಳ ನಡುವೆ ಸಾಗಿದಂತೆ ಕಾಣುವ ಹಾದಿ. ಈ ಹಾದಿಯನ್ನು, ಸೂರ್ಯನ ಸುತ್ತಲಿನ ಭೂಮಿಯ ಕಕ್ಷೆಯನ್ನು ಒಳಗೊಂಡಿರುವ ಕಾಲ್ಪನಿಕ ಸಮತಲ ಎಂದು ನಾಸಾ ವಿವರಿಸುತ್ತದೆ.

ಭೂಮಿ ಸೇರಿದಂತೆ ಎಲ್ಲ ಗ್ರಹಗಳು ಇದೇ ಸಮತಲದಲ್ಲಿ ಸೂರ್ಯನ ಸುತ್ತ ತಿರುಗುವುದರಿಂದ ಎಲ್ಲ ಗ್ರಹಗಳು ರಾತ್ರಿ ಆಕಾಶದಲ್ಲಿ ಈ ಕಲ್ಪನಾ ಹಾದಿಯ ಆಸುಪಾಸಿನಲ್ಲೇ ಕಾಣಿಸಿಕೊಳ್ಳುತ್ತವೆ.

3ಂಗಳಿಂದ ಗೋಚರ

ಜನವರಿ 18ರಿಂದೀಚೆಗೆ ಐದಾರು ಗ್ರಹಗಳು ಸಾಲು ಸಾಲಾಗಿ ಒಟ್ಟಿಗೆ ಕಾಣಿಸಿಕೊಂಡು ಖಗೋಳ ವೀಕ್ಷಣೆಯನ್ನು ಹವ್ಯಾಸವನ್ನಾಗಿಸಿಕೊಂಡವರ ಕಣ್ಣಿಗೆ ಹಬ್ಬವನ್ನೇ ತಂದಿವೆ. ಕತ್ತಲಿನ ಶುಭ್ರ ಆಕಾಶದಲ್ಲಿ ಶುಕ್ರ, ಮಂಗಳ, ಗುರು, ಶನಿ, ಯುರೇನಸ್ ಮತ್ತು ನೆಪ್ಚೂನ್ ಗ್ರಹಗಳು ಒಟ್ಟಾಗಿ ಕಾಣಿಸಿಕೊಂಡು ಅವರ ಸಂಭ್ರಮವನ್ನು ಹೆಚ್ಚಿಸಿವೆ. ಆರು ಗ್ರಹಗಳ ಪೈಕಿ ಯುರೇನಸ್ ಮತ್ತು ನೆಪ್ಚೂನ್ ಗ್ರಹಗಳನ್ನು ಬಿಟ್ಟು ಉಳಿದವುಗಳು ಬರಿಗಣ್ಣಿಗೆ ಕಾಣಿಸಿಕೊಂಡರೆ, ಈ ಎರಡು ಗ್ರಹಗಳನ್ನು ನೋಡಲು ದೂರದರ್ಶಕ, ಬೈನಾಕ್ಯುಲರ್‌ಗಳನ್ನು ಗಗನ ಕುತೂಹಲಿಗಳು ಹಿಡಿಯಬೇಕಾಗಿತ್ತು.

ಆರು ಗ್ರಹಗಳ 'ಪಥಸಂಚಲನ'ಕ್ಕೆ ಬುಧ ಗ್ರಹವೂ ಈಗ ಸೇರ್ಪಡೆಗೊಂಡಿದೆ. ಈ ತಿಂಗಳ ಕೊನೆಯ ದಿನ ಶುಕ್ರವಾರ ಸೌರ ಮಂಡಲದ ಉಳಿದ ಏಳೂ ಗ್ರಹಗಳು ಸಾಲಾಗಿ ಕಾಣಿಸಿಕೊಳ್ಳಲಿವೆ.

ಬುಧ ಗ್ರಹವು ಈ ತಿಂಗಳ 22ರಿಂದಲೇ ಕಾಣಿಸಿಕೊಳ್ಳಲು ಆರಂಭಿಸಿದೆ. ಆದರೆ, ಜಗತ್ತಿನ ಬಹುತೇಕ ಕಡೆಗಳಲ್ಲಿ ಏಳು ಗ್ರಹಗಳು ಶುಕ್ರವಾರದಂದು ಒಟ್ಟಾಗಿ ಕಾಣಿಸಿಕೊಳ್ಳಲಿವೆ ಎಂದು ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದ ಸ್ಟಾರ್‌ವಾಕ್ ವೆಬ್‌ಸೈಟ್ ವರದಿ ಮಾಡಿದೆ. ಮಾರ್ಚ್ 1ರಿಂದ ಶನಿ ಗ್ರಹವು ಗ್ರಹಗಳ ಸಾಲಿನಿಂದ ಮರೆಯಾಗಲಿದೆ. ಇದರೊಂದಿಗೆ ಏಳು ಗ್ರಹಗಳ ಅಪರೂಪದ ಪಥಸಂಚಲನಕ್ಕೆ ತೆರೆ ಬೀಳಲಿದೆ.

ಈ ವರ್ಷದ ಆಗಸ್ಟ್‌ನಲ್ಲಿ ಮತ್ತೆ ನಾಲ್ಕು ಗ್ರಹಗಳು ಒಟ್ಟಾಗಿ ಕಾಣಲಿವೆ ಎಂದು ನಾಸಾ ಹೇಳಿದೆ.

ಆಧಾರ: ನಾಸಾ, ಬಿಬಿಸಿ, ದಿ ನ್ಯೂಯಾರ್ಕ್ ಟೈಮ್ಸ್

ಗ್ರಹಗಳ ಮುಂದಿನ 'ಪಥಸಂಚಲನ'...

2025ರ ಆಗಸ್ಟ್	**2028**ರ ಅಕ್ಟೋಬರ್	**2034**ರ ಫೆಬ್ರುವರಿ
ಅಂತ್ಯಕ್ಕೆ ನಾಲ್ಕು ಗ್ರಹಗಳು ಸೂರ್ಯೋದಯಕ್ಕೂ ಮೊದಲು ಗೋಚರಿಸಲಿವೆ	ಕೊನೆಗೆ ಸೂರ್ಯೋದಯಕ್ಕೂ ಮುನ್ನ ಐದು ಗ್ರಹಗಳ ಸಾಲು ಕಾಣಸಿಗಲಿದೆ	ಕೊನೆಗೆ ಸೂರ್ಯಾಸ್ತದ ನಂತರ ಐದು ಗ್ರಹಗಳು ಒಟ್ಟಾಗಿ ಕಾಣಲಿವೆ

ಯಾವಾಗ ವೀಕ್ಷಿಸಬಹುದು?

- ಶುಕ್ರವಾರ ಸಂಜೆ ಸೂರ್ಯಾಸ್ತ ಆದ ನಂತರ ಈ ಅಪರೂಪದ ವಿದ್ಯಮಾನವನ್ನು ವೀಕ್ಷಿಸಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ. ಭಾರತದಲ್ಲೂ ಎಲ್ಲ ಕಡೆಗಳಲ್ಲಿ ಈ ಖಗೋಳ ಕೌತುಕವನ್ನು ವೀಕ್ಷಿಸಬಹುದು. ಆಕಾಶ ಶುಭ್ರವಾಗಿರಬೇಕಷ್ಟೆ
- ಬುಧ, ಶುಕ್ರ, ಮಂಗಳ, ಗುರು, ಶನಿ ಗ್ರಹಗಳು ಬರಿ ಕಣ್ಣಿಗೆ ಗೋಚರಿಸಲಿವೆ ಯುರೇನಸ್ ಮತ್ತು ನೆಪ್ಚೂನ್ ಗ್ರಹಗಳನ್ನು ವೀಕ್ಷಿಸಲು ಬೈನಾಕ್ಯುಲರ್ ಅಥವಾ ದೂರದರ್ಶಕದ ಸಹಾಯ ಬೇಕು
- ಶುಕ್ರ ಮತ್ತು ಗುರು ಗ್ರಹವು ಹೆಚ್ಚು ಪ್ರಕಾಶಮಾನವಾಗಿರುವುದರಿಂದ ಗುರುತಿಸುವುದು ಸುಲಭ. ಮಂಗಳ ಗ್ರಹ ಕೊಂಚ ನಸುಗೆಂಪು ಬಣ್ಣದಲ್ಲಿ ಕಾಣಲಿದೆ
- ಬುಧ ಮತ್ತು ಶನಿ ಗ್ರಹಗಳು ಸೂರ್ಯಾಸ್ತ ಆದ ಸ್ವಲ್ಪ ಹೊತ್ತಿನಲ್ಲೇ ದಿಗಂತದಿಂದ ಕೆಳಗೆ ಜಾರುವುದರಿಂದ ಇವುಗಳ ವೀಕ್ಷಣೆಗೆ ಕೆಲವು ನಿಮಿಷಗಳ ಅವಕಾಶವಷ್ಟೇ ಸಿಗಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ. ಶುಕ್ರವಾರ, ಗುರು, ಮಂಗಳ ಗ್ರಹಗಳನ್ನು ದೀರ್ಘಾವಧಿಗೆ ವೀಕ್ಷಿಸಬಹುದು ಎಂದು ಅವರು ಹೇಳಿದ್ದಾರೆ

ಸಿನಿ ಬಿಟ್ಸ್

ನಾನ್ ಪೋಲಿ ಎಂದ ಹೊಸಬರು

ದಿಶಾ ಶೆಟ್ಟಿ

ಬಹುತೇಕ ಹೊಸಬರಿಂದಲೇ ಕೂಡಿರುವ 'ನಾನ್ ಪೋಲಿ' ಚಿತ್ರದ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಯಶವಂತ್ ಎಂ. ಕಥೆ ಬರೆದು ನಿರ್ದೇಶಿಸುವುದರ ಜೊತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ. 'ಸ್ನೇಹ, ಪ್ರೀತಿ ಹಾಗೂ ತಾಯಿ ಸೆಂಟಿಮಂಟ್ ಸುತ್ತ ನಡೆಯುವ ಕಥಾಹಂದರವಿದೆ. ಇಬ್ಬರು ಸ್ನೇಹಿತರ ಕಥೆ. ಮಧ್ಯಮ ವರ್ಗ ಹಾಗೂ ಶ್ರೀಮಂತ ಕುಟುಂಬಕ್ಕೆ ಸೇರಿದ ಸ್ನೇಹಿತರ ನಡುವಿನ ಪ್ರೇಮಕಥೆಯೂ ಚಿತ್ರದಲ್ಲಿದೆ. ಈಗಾಗಲೇ ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿದಿದ್ದು, ಸದ್ಯದಲ್ಲಿಯೇ ತೆರೆಗೆ ಬರಲಿದೆ' ಎಂದರು ನಿರ್ದೇಶಕರು.

ಹರೀಶ್, ದಿಶಾ ಶೆಟ್ಟಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ದೇವರಾಜ್ ಖಳ ನಟನಾಗಿ ಕಾಣಿಸಿಕೊಂಡಿದ್ದಾರೆ. ಚೇತನ್ ಸಂಗೀತ ನಿರ್ದೇಶನ, ಕೀರ್ತಿವರ್ಧನ್ ಛಾಯಾಚಿತ್ರಗ್ರಹಣವಿದೆ. ಬೆಂಗಳೂರು ಸುತ್ತಮುತ್ತ ಚಿತ್ರೀಕರಣಗೊಂಡಿದೆ. ❖

'ಹಿಟ್ 3'ಯಲ್ಲಿ ನಾನಿ ಮಾಸ್ ಅವತಾರ

ನಾನಿ

'**ನ್ಯಾಚುರಲ್ ಸ್ಟಾರ್**' ಎಂದೇ ಖ್ಯಾತಿ ಪಡೆದಿರುವ ನಾನಿ ನಟನೆಯ ಹೊಸ ಸಿನಿಮಾದ ಟೀಸರ್ ಬಿಡುಗಡೆಯಾಗಿದೆ. 'ಹಿಟ್-3' ಸಿನಿಮಾದಲ್ಲಿ ಮಾಸ್ ಅವತಾರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ರೊಮ್ಯಾಂಟಿಕ್ ಹೀರೊ.

ಓರ್ವ ಸರಣಿ ಹಂತಕನನ್ನು ಹಿಡಿಯಲು ನಡೆಯುವ ತನಿಖೆಯೇ ಈ ಸಿನಿಮಾದ ಕಥೆಯಾಗಿದ್ದು, ಅರ್ಜುನ್ ಸರ್ಕಾರ್ ಎಂಬ ಪಾತ್ರದಲ್ಲಿ ನಾನಿ ಕಾಣಿಸಿಕೊಂಡಿದ್ದಾರೆ. ಈ ಸಿನಿಮಾ ಹಿಟ್ ಫ್ರಾಂಚೈಸಿಯಿಂದ ಬರುತ್ತಿರುವ ಸಿನಿಮಾವಾಗಿದೆ. ಈ ಚಿತ್ರಕ್ಕೆ ಶೈಲೇಶ್ ಕೊಲನು ನಿರ್ದೇಶನವಿದೆ. 'ಹಿಟ್' ಮೊದಲನೇ ಸಿನಿಮಾದಲ್ಲಿ ವಿಶ್ವಕ್ ಸೇನ್ ಹೀರೊ ಆಗಿ ನಟಿಸಿದ್ದರು. 'ಹಿಟ್ 2'ರಲ್ಲಿ ಅಡವಿಶೇಷು ನಟಿಸಿದ್ದರು. ಕನ್ನಡ, ತೆಲುಗು, ತಮಿಳು, ಹಿಂದಿ ಭಾಷೆಯಲ್ಲಿ 'ಹಿಟ್-3' ಟೀಸರ್ ಬಿಡುಗಡೆಯಾಗಿದ್ದು, ನಾನಿಗೆ ಜೋಡಿಯಾಗಿ ಶ್ರೀನಿಧಿ ಶೆಟ್ಟಿ ನಟಿಸಿದ್ದಾರೆ. ಪ್ರಶಾಂತಿ ತಿಪಿರ್ನೇನಿ ನಿರ್ಮಾಣದಲ್ಲಿ ಚಿತ್ರ ಮೂಡಿಬರಲಿದ್ದು, ಸಾನು ಜಾನ್ ವರ್ಗೀಸ್ ಛಾಯಾಚಿತ್ರಗ್ರಹಣ ಹಾಗೂ ಕಾರ್ತಿಕ್ ಶ್ರೀನಿವಾಸ್ ಸಂಕಲನ ಚಿತ್ರಕ್ಕಿದೆ. ಮೇ 1ರಂದು ಚಿತ್ರ ಬಿಡುಗಡೆಯಾಗಲಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮಹಿಳೆಯೊಬ್ಬರು ನದಿ ತಟದಲ್ಲಿ ವಿವಿಧ ಭಂಗಿಗಳಲ್ಲಿ ಕತ್ತಿ ಝಳಪಿಸುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಕತ್ತಿ ಹಿಡಿದಿರುವ ಮಹಿಳೆಯು ದೆಹಲಿಯ ನೂತನ ರೇಖಾ ಗುಪ್ತಾ ಎಂದು ಪ್ರತಿಪಾದಿಸಲಾಗುತ್ತಿದ್ದು, ಇದು ಅವರ ಹಳೆಯ ವಿಡಿಯೊ ಎಂದು ಪೋಸ್ಟ್ ಹಂಚಿಕೊಳ್ಳುವ ಮೂಲಕ ಪ್ರಚಾರ ಮಾಡಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಇದೇ ಪೋಸ್ಟ್ ಕೆಳಗೆ ಕೆಲವರು ಇದು ಮರಾಠಿ ನಟಿ ಪಾಯಲ್ ಜಾಧವ್ ಅವರ ವಿಡಿಯೊ ಎಂದು ಪ್ರತಿಕ್ರಿಯೆ ನೀಡಿದ್ದಾರೆ. ಅದರ ಆಧಾರದಲ್ಲಿ ಹುಡುಕಾಟ ನಡೆಸಿದಾಗ, ಪಾಯಲ್ ಜಾಧವ್ ನಟಿಯಾಗಿದ್ದು, ಹಲವು ಸಿನಿಮಾಗಳಲ್ಲಿ ಹಾಗೂ ಶೋಗಳಲ್ಲಿ ಭಾಗವಹಿಸಿದ್ದಾರೆ ಎನ್ನುವುದು ತಿಳಿಯಿತು. ಮತ್ತಷ್ಟು ಹುಡುಕಾಟ ನಡೆಸಿದಾಗ, ಪಾಯಲ್ ಜಾಧವ್ ಅವರೇ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಫೆ.19ರಂದು ವಿಡಿಯೊ ಹಂಚಿಕೊಂಡಿರುವುದು ಸಿಕ್ಕಿತು. ಮಾರ್ಷಲ್ ಆರ್ಟ್ಸ್ ತರಬೇತಿ ನೀಡುವ 'ಸವ್ಯಸಾಚಿ ಗುರುಕುಲ'ಕ್ಕೆ ತಮ್ಮ ಪೋಸ್ಟ್ ಅನ್ನು ಅವರು ಟ್ಯಾಗ್ ಮಾಡಿದ್ದಾರೆ. ನಟಿಯ ವಿಡಿಯೊ ಎಂದೇ ಇದನ್ನು ರಾಜಶ್ರೀ ಮರಾಠಿ ಶೋಬುಜ್ ತನ್ನ ಯುಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡಿದೆ. ಮರಾಠಿ ನಟಿಯ ವಿಡಿಯೊ ಅನ್ನು ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಎಂದು ಕೆಲವರು ಸುಳ್ಳು ಪ್ರತಿಪಾದನೆಯೊಂದಿಗೆ ಹರಡುತ್ತಿದ್ದಾರೆ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ

ಮನುಷ್ಯನ ದುಃಖದ ಬೀಜ

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

142

ಜೀವನದಲ್ಲಿ ನನಗೆ ಎಲ್ಲಿ ಸೋಲಾತು, ನಾನು ಗೆಲುವಿನ ಜೀವನವನ್ನು ಕಟ್ಟಿಕೊಳ್ಳುವುದು ಹೇಗೆ ಎಂದು ವಿಚಾರ ಮಾಡುವುದಕ್ಕೆ ಸ್ವಾಧ್ಯಾಯ ಎಂದು ಕರೀತಾರೆ. ಇದು ಆತ್ಮಾವಲೋಕನ. ನನ್ನ ತಪ್ಪುಗಳನ್ನು ತಿದ್ದಿಕೊಂಡು ನಾನು ಸಮಾಜದಲ್ಲಿ ಗೆಲ್ಲಬೇಕು ಎಂದು ಆಲೋಚಿಸಬೇಕು. ಹೊಸ ಜೀವನವನ್ನು, ಆದರ್ಶದ ಜೀವನವನ್ನು ಕಟ್ಟಬೇಕಲ್ಲ ಹೇಗೆ ಎಂದು ಆಲೋಚಿಸಬೇಕು. ಮನುಷ್ಯನಿಗೆ ಮುಕ್ತಿ ಬೇಕು. ಮುಕ್ತಿ ಎಂದರೆ ಆನಂದದಿಂದ ಇರುವುದು ಅಷ್ಟೇ. ಅದೇ ಜೀವನ್ಮುಕ್ತ ಅವಸ್ಥೆ. ಅಳುತ್ತಾ ಇದ್ದರೆ ಅದೇ ನರಕ. ಮನುಷ್ಯ ಆನಂದದಿಂದ ಬದುಕಲು ಏನು ಮಾಡಬೇಕು ಎಂದು ನಿಜಗುಣರು ಹೇಳಿದರು. ನಮ್ಮ ಇಡೀ ಆಯಷ್ಯ ಸಂತೋಷದಿಂದ ಇರಬೇಕು ಎಂದು ವಿಚಾರ ಮಾಡಬೇಡ. ಈ ದಿನ ಹೇಗೆ ಸಂತೋಷವಾಗಿರಬೇಕು ಎಂದು ವಿಚಾರ ಮಾಡು ಸಾಕು. ನಾಳೆ ಎನ್ನುವುದು ಇದ್ದರೆ ಆ ಮೇಲೆ ಅದರ ಬಗ್ಗೆ ವಿಚಾರ ಮಾಡಬಹುದಂತೆ ಎಂದರು ಅವರು. ರಾತ್ರಿ ಮಲಗಿ ಕಣ್ಣು ಮುಚ್ಚಿದವರೆಲ್ಲ ಬೆಳಿಗ್ಗೆ ಕಣ್ಣು ತೆರೆದಿಲ್ಲ ಎನ್ನುವುದು ನೆನಪಿನಲ್ಲಿರಲಿ. ದಿನಾ ದಿನಾ ಸಂತೋಷವಾಗಿದ್ದರೆ ಆಯುಷ್ಯ ಪೂರ್ಣ ಸಂತೋಷವಾಗಿರಬಹುದು. ಅದಕ್ಕೆ ನಮಗೆ ಸಿಕ್ಕ ಈ ದಿನ ಸಂತೋಷವಾಗಿರಲು ಪ್ರಯತ್ನಿಸು. ಈ ದಿನ ದುಃಖ ಇದ್ದು ನಾಳೆ ಸಂತೋಷವಾಗಿರಬೇಕು ಎಂದರೆ ಸಾಧ್ಯವಿಲ್ಲ.

ಮನುಷ್ಯನ ದುಃಖದ ಬೀಜ ಎಲ್ಲಿದೆ ಎಂದರೆ, ಮನುಷ್ಯ ಹಿಂದಿನದ್ದು ವಿಚಾರ ಮಾಡುತ್ತಾನೆ ಅಥವಾ ಮುಂದಿನದರ ಬಗ್ಗೆ ವಿಚಾರ ಮಾಡುತ್ತಾನೆ. ಹಿಂದಿನದರ ಬಗ್ಗೆ ಶೋಕ ಮತ್ತು ನಾಳೆಯ ಬಗ್ಗೆ ಭಯ. ಇದೇ ದುಃಖಕ್ಕೆ ಮೂಲ. ನಿನ್ನೆಯೂ ಇಲ್ಲ. ನಾಳೆಯೂ ಇಲ್ಲ. ಇಂದು ಸಂತೋಷವಾಗಿರಬೇಕು ಅಷ್ಟೇ. ನಿನ್ನೆ ಸತ್ತಿದೆ, ನಾಳೆ ಇನ್ನೂ ಹುಟ್ಟಿಲ್ಲ. ಇಂದು ನಮ್ಮ ಕೈಯಲ್ಲಿ ಐತಿ. ಅದನ್ನು ಸಂತೋಷವಾಗಿ ಅನುಭವಿಸುವವರಿಗೆ ಸಂತರು ಎನ್ನುತ್ತಾರೆ. ಇವತ್ತು ಸಂತೋಷವಾಗಿ ಬದುಕಲು ಏನು ಮಾಡಬೇಕು? ಬೆಳಿಗ್ಗೆ ಏಳುವಾಗ ಒಳ್ಳೆಯ ವಿಚಾರದೊಂದಿಗೆ ಏಳಬೇಕು. ನನಗೆ ಇನ್ನೊಂದು ದಿನ ಕೊಟ್ಟಿದ್ದೀಯಲ್ಲ ಎಂದು ದೇವರನ್ನು ನೆನೆಯಬೇಕು. ಮಂದಿ ಮಾತು ನಂಬಬೇಡ. ನಿನ್ನೊಳಗಿರುವ ಶಕ್ತಿಯನ್ನು ನಂಬಿ ಬದುಕು.

ಬೆಳಿಗ್ಗೆ ಎದ್ದಾಗ ಯಾರ ತಟ್ಟೆಯಲ್ಲಿ ಅನ್ನ ಇಲ್ಲ, ಅವರು ಭಿಕ್ಷುಕರಲ್ಲ. ಬೆಳಿಗ್ಗೆ ಎದ್ದಾಗ ಯಾರ ತಲೆಯಲ್ಲಿ ಒಳ್ಳೆಯ ವಿಚಾರಗಳಿಲ್ಲ ಅವರು ಭಿಕ್ಷುಕರು. ಕಾಲಿನಲ್ಲಿ ಬ್ರಾಂಡೆಡ್ ಚಪ್ಪಲಿ ಹಾಕಿಕೊಂಡವರು ದೊಡ್ಡವರಲ್ಲ. ತಲೆಯಲ್ಲಿ ಬ್ರಾಂಡೆಡ್ ವಿಚಾರ ಇದ್ದವರು ದೊಡ್ಡವರಾಗುತ್ತಾರೆ. ಕಾಡಿನಲ್ಲಿ ಒಂದು ಚಿಕ್ಕ ಬಳ್ಳಿಯಲ್ಲಿ ಹೂವು ಬಿಟ್ಟಿರುತ್ತದೆ. ಪಕ್ಕದಲ್ಲಿಯೇ 40 ಅಡಿ ಎತ್ತರದ ಮರವೂ ಇದೆ. ನಿಸರ್ಗ ಚಿಕ್ಕ ಬಳ್ಳಿಗೂ ಸಾಕಷ್ಟು ಗಾಳಿ ಬೆಳಕು ನೀಡಿದೆ. ಮರಕ್ಕೂ ಸಾಕಷ್ಟು ಗಾಳಿ ಬೆಳಕು ನೀಡಿದೆ. ವ್ಯತ್ಯಾಸ ಮಾಡಿಲ್ಲ. ಅದಕ್ಕೆ ಬಳ್ಳಿ 'ನೀನು ಯಾವುದೇ ತಾರತಮ್ಯ ಮಾಡಿಲ್ಲ. ಅದಕ್ಕಾಗಿ ನನ್ನ ಹೃದಯವನ್ನೇ ಹೂವಾಗಿ ನಿನಗೆ ಅರ್ಪಿಸುತ್ತೇನೆ' ಎಂದು ಹೇಳುತ್ತೈತಿ. ಅದಕ್ಕೆ ಮನುಷ್ಯನಿಗೂ ಕೃತಜ್ಞತೆ ಇರಬೇಕು. ತಂದೆ ತಾಯಿಯ ಬಗ್ಗೆ, ಗುರುಗಳ ಬಗ್ಗೆ, ಸ್ನೇಹಿತರ ಬಗ್ಗೆ ಇದೇ ಭಾವನೆ ಇರಬೇಕು. ಎಲ್ಲದಕ್ಕೂ ಋಣರೂಪನಾಗಿ ಮನುಷ್ಯ ಬದುಕಬೇಕು. ನಮ್ಮ ಬದುಕಿಗೆ ನೆರವಾದವರನ್ನು ನಾವು ನೆನೆಯಬೇಕು; ಮರೆಯಬಾರದು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಫೆಬ್ರುವರಿ 28, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಪ್ರತಿಪದ್ ಗಂ. 27-17 ನಕ್ಷತ್ರ: ಶತಭಿಷ ಗಂ. 13-40 ಯೋಗ: ಸಿದ್ಧ ಗಂ. 20-08 ಕರಣ: ಕಿಂಸ್ತುಘ್ನ ಗಂ. 16-47, ಕುಂಭ ಮಾಸದ 16 ನೇ ದಿನ, ಮಳೆನಕ್ಷತ್ರ: ಶತಭಿಷ 3.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-51 ಸೂರ್ಯಾಸ್ತ : 06-36
ಮುಸ್ಲಿಂ ದಿನಾಂಕ : 29 ಶಬನ್
ಅದೃಷ್ಟ ಸಂಖ್ಯೆ : 8, 10

ಮೇಷ: ಜೀವನದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಗುವುದರಿಂದ ದೇವತಾ ಕಾರ್ಯಗಳನ್ನು ಜರುಗಿಸುವ ಬಗ್ಗೆ ಯೋಚಿಸಿ. ಕುಟುಂಬದಲ್ಲಿ ಉತ್ತಮ ವಾತಾವರಣವಿದ್ದು ಸಂತಸ ಹಾಗೂ ಸಮಾಧಾನ ತರಲಿದೆ.

ವೃಷಭ: ವೃತ್ತಿರಂಗದಲ್ಲಿ ಅನವಶ್ಯಕವಾಗಿ ಇತರರ ಕೋಪಕ್ಕೆ ಗುರಿಯಾಗುವುದನ್ನು ಸ್ನೇಹಿತರು ತಪ್ಪಿಸುವರು. ಸಂತೋಷದ ಜತೆ ನಿಮ್ಮ ಜತೆಗಾರರಿಗೂ ಸಂತೋಷ ಪಡಿಸಿ. ಆರೋಗ್ಯ ವೃದ್ಧಿಯಾಗುವುದು.

ಮಿಥುನ: ಸ್ನೇಹಿತರು ವಿಶ್ವಾಸವನ್ನು ದುರುಪಯೋಗಪಡಿಸಿಕೊಳ್ಳುವ ಸನ್ನಿವೇಶಗಳನ್ನು ಎದುರಿಸಬೇಕಾಗುವುದು. ಖಾದ್ಯ ವಸ್ತುಗಳ ಮಾರಾಟದ ಉದ್ಯೋಗದವರು ಉತ್ತಮ ವ್ಯಾಪಾರದಿಂದ ನೆಮ್ಮದಿ ಕಾಣಬಹುದು.

ಕರ್ಕಾಟಕ: ಸರ್ಕಾರಿ ಕಚೇರಿಗಳಲ್ಲಿನ ಕೆಲಸಕ್ಕೆ ಹೆಚ್ಚು ಓಡಾಡುವ ಸಂದರ್ಭ ಎದುರಾಗುವುದು. ಈಗಿನ ಪರಿಸ್ಥಿತಿಯಲ್ಲಿ ಅರಸಿ ಬಂದ ಉದ್ಯೋಗದ ನಿರಾಕರಣೆ ಮೂರ್ಖತನಕ್ಕೆ ಉದಾಹರಣೆಯಾಗುವುದು.

ಸಿಂಹ: ಹಿಂದೆಯೇ ಬರಬೇಕಾಗಿದ್ದ ಸಾಲದ ಹಣವು ಬಂಧು ಒಬ್ಬರ ನೆರವಿನಿಂದ ಕೈಸೇರಲಿದೆ. ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟ ಅಥವಾ ರಿಪೇರಿಗಳಿಂದ ಆದಾಯ ಹೆಚ್ಚುವುದು. ದಿನದಲ್ಲಿ ಅಧಿಕ ಸಮಯ ಸಂತೋಷವಿರುವುದು.

ಕನ್ಯಾ: ಗಿಡಮೂಲಿಕೆಯ ಔಷಧಿಯನ್ನು ನೀಡುವವರಿಗೆ ವೈದ್ಯಕೀಯ ಲೋಕದಲ್ಲಿ ಒಂದು ಸಾಧನೆ ಮಾಡಿದ ಸಂತೋಷ ಸಿಗಲಿದೆ. ವ್ಯವಹಾರದಲ್ಲಿ ಸೋದರರನ್ನು ಸೇರಿಸಿಕೊಂಡು ನೂತನ ಘಟಕಗಳನ್ನು ಆರಂಭಿಸಬಹುದು.

ತುಲಾ: ಏನನ್ನಾದರೂ ಸಾಧಿಸಲೇಬೇಕೆಂದಿರುವವರಿಗೆ ಆತ್ಮವಿಶ್ವಾಸದ ಕೊರತೆಯಂತೂ ಕಾಣಿಸದು. ಅದಕ್ಕೆ ಸರಿಯಾದ ಪ್ರಯತ್ನದ ಕೊರತೆ ಉಂಟಾಗದಂತೆ ನೋಡಿಕೊಳ್ಳಿ. ವಾಣಿಜ್ಯ ಉದ್ಯಮಿಗಳಿಗೆ ವಿಶೇಷ ದಿನ. \

ವೃಶ್ಚಿಕ: ಖರ್ಚಿನ ವಿಚಾರದಲ್ಲಿ ಮಿತವ್ಯಯಿಗಳಾಗುವ ಪ್ರಯತ್ನದಿಂದಾಗಿ ಶ್ರೀಮಂತಿಕೆ ಗಳಿಸಬಹುದು. ವಿಶ್ರಾಂತಿಯಿಲ್ಲದ ಕಾರ್ಯದೊತ್ತಡದಿಂದ ಅನಾರೋಗ್ಯ ಉಂಟಾಗಬಹುದು. ಅಕ್ಕ ಪಕ್ಕದ ವ್ಯಕ್ತಿಗಳ ಬಗ್ಗೆ ಎಚ್ಚರವಹಿಸಿ.

ಧನು: ವೈದ್ಯರು ಅದರಲ್ಲೂ ನರರೋಗ ತಜ್ಞರು ಅಭ್ಯಾಸದಲ್ಲಿ ತೋರಿದ ಬೇಜವಾಬ್ದಾರಿತನದಿಂದ ತೊಂದರೆ ಉಂಟಾಗುವುದು. ರಾಜಕೀಯ ರಂಗದಲ್ಲಿ ಬಹಳ ದಿನಗಳಿಂದ ಅಂದುಕೊಂಡಿದ್ದ ಯಶಸ್ಸು ದೊರೆಯಲಿದೆ.

ಮಕರ: ಸಹೋದ್ಯೋಗಿಗಳ ನಡವಳಿಕೆಯು ಕೆಲಸದಲ್ಲಿ ಹೆಚ್ಚಿನ ಸ್ಫೂರ್ತಿಯನ್ನು ನೀಡುವುದು. ವ್ಯಾಪಾರದಲ್ಲಿ ಹಳೆಯ ಸಾಲವನ್ನು ಪಾವತಿಸುವುದರಿಂದ ಸಮಾಧಾನ ಲಭಿಸಲಿದೆ. ಅಚ್ಚರಿಯಿಂದ ಕೂಡಿದ ದಿನವಾಗುವುದು.

ಕುಂಭ: ಉತ್ಪಾದಿತ ವಸ್ತುಗಳಿಗೆ ಬೇಡಿಕೆ ದೊರೆತು ಸಂತೋಷಕರ ವಾತಾವರಣ ನಿಮ್ಮದಾಗಲಿದೆ. ಕೋರ್ಟು ಕಚೇರಿ ವ್ಯವಹಾರದಲ್ಲಿ ಜಯ ಪಡೆಯುವ ಬಗ್ಗೆ ಅಧಿಕ ಪ್ರಯತ್ನವಿರಲಿ. ಕೈಗಾರಿಕಾ ಕ್ಷೇತ್ರದಲ್ಲಿ ಲಾಭ ಪಡೆಯುವಿರಿ.

ಮೀನ: ಕಾಲು ನೋವು ನಿವಾರಿಸಿಕೊಳ್ಳಲು ತೈಲ ಲೇಪನ, ಬಿಸಿನೀರಿನ ಶಾಖದಂತಹ ಮಾರ್ಗವನ್ನು ಅನುಸರಿಸುವುದು ಉಪಯೋಗಕಾರಿ. ಆಲಂಕಾರಿಕ ವಸ್ತುವಿನ ಆಯ್ಕೆಯಲ್ಲಿ ಗೊಂದಲಗಳು ಎದುರಾಗಬಹುದು.

ಪದಬಂಧ 5967

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸಾಧಕನಿಗುಂಟಾದ ಅಡ್ಡಿ! (3)
3.ಕೊನೆಗೆ ಬೆಲೆಯಿಟ್ಟಾಗಲೇ ಮಡಿಕೆ ಕಂಡೀತು (3)
5.ಪದಾತಿ ಹತ್ತಿರವಿರುವ ಗಂಡ (2)
6.ಹುತ್ತ ಇಲ್ಲಿ ಕಾಣುತ್ತಿದೆ (3)
7.ಕಳ್ಳನಿಗೊಂದು ಪಿಳ್ಳೆಯ ಈ ಕಾರಣ! (2)
9.ವಸತಿ ಹತ್ತಿರ ಕಾಣಿಸಿದ ತರುಣಿ (3)
10.ಸಂಗೀತದಲ್ಲಿ ರಾಗದಛಾಯೆಯನ್ನು ವಿಸ್ತರಿಸಿ ತೋರಿಸುವುದು (3)
11.ಹರಕೆ ಹೊತ್ತಿರುವವನ ಮೆಟ್ಟು (2)
13.ಹೆಣ್ಣಿಗೆ ಬೇಕಾಗಿರುವ ಬಾಚಣಿಕೆ (3)
15.ಮಾರನೆ ದಿನ ಕಾಣಿಸಿದ ಮನ್ಮಥ! (2)
16.ಪೈರು ಕೊಯ್ಯುವುದು (3)
17.ಲೋಭಿ ಇಲ್ಲಿದ್ದಾನೆ (3)

ಮೇಲಿಂದ ಕೆಳಕ್ಕೆ
1.ಹೆರಿಗೆಯಾದ ಹೆಂಗಸು (3)
2.ಕಕ್ಕಾಬಿಕ್ಕಿಯಾಗಿ ನಿಂತಿರುವ ಪೆದ್ದ! (3)
3.ಪದ ಹೇಳಿದ್ದಕ್ಕೆ ಬಹುಮಾನವಾಗಿ ಸಿಕ್ಕ ಬಿಲ್ಲೆ (3)
4.ಸಾಗಿಸುವಿಕೆಗೊಂದು ಪರ್ಯಾಯ ಪದ (3)
5.ಹಿಂದಿನಿಂದ ಉಳಿದು ಬಂದ ಪ್ರಾಣಿ ಪಕ್ಷಿಗಳ ಅವಶೇಷ (5)
8.ಇತರರಿಗೆ ನೀಡುವ ನೆರವು (5)
12.ಈತ ಕಾಪಾಡುವವನು (3)
13.ಧಾನ್ಯಗಳನ್ನು ತುಂಬಿಡುವ ಕಣಜ (3)
14.ಮರಮಟ್ಟುಗಳನ್ನು ತಿಂದು ಮಣ್ಣುಮಾಡುವ ಹುಳು (3)
15.ತಿಂಗಳಿಗೊಮ್ಮೆ ಜರುಗುವಂಥದ್ದು (3)



5966ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವ್ಯವಸ್ಥೆ 3.ಪುಲ್ಲಿಂಗ 5.ಕಥೆ 6.ಜನನಾಯಕ 8.ಕರಡಿ 9.ವಿಷಯ 12.ಮರಣಪತ್ರ 13.ಮೌನ 14.ಚಲ್ಲಣ 15.ಬಲಾಢ್ಯ

ಮೇಲಿಂದ ಕೆಳಕ್ಕೆ:
1.ವ್ಯಥೆ 3.ಪುಳಕ 4.ಗಮಾರ 5.ಕರ್ನಾಟಕ 6.ಜರಡಿ 7.ನಾಮಕರಣ 9.ವಿಚಿತ್ರ 10.ಯಜಮಾನ 11.ಎಡಚ 12.ಮಸಣ 13.ಮೌಢ್ಯ

ಸುಡೊಕು 6352

	4				1		2	
8		7		3				9
		5			9		8	3
	6					3		8
	7	4	1	8	3			
3						5		1
	8		3		4		1	
		1		9		8		4
4	3		5			2		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6351 ಸುಡೊಕು

8	3	1	6	7	2	5	4	9
6	9	2	5	4	1	8	7	3
5	4	7	3	8	9	2	1	6
4	7	8	9	6	5	3	2	1
3	6	9	2	1	8	4	5	7
2	1	5	4	3	7	9	6	8
1	5	6	8	2	3	7	9	4
7	2	3	1	9	4	6	8	5
9	8	4	7	5	6	1	3	2

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,547
ಇಂದಿನ ಅಂತ್ಯ	22,545
▼	2
ದಿನದ ಕನಿಷ್ಠ	22,509

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹25250
ಎಸಿ	₹14840
ಆರ್‌ಪಿ	₹22750
ಆರ್‌ಸಿ	₹12150

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹475
12 ಕ್ಕೆ	₹65
ಮೈಸೂರು	
100ಕ್ಕೆ	₹475

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹187.50
ಆರ್‌ಎಸ್‌ಎಸ್-5	₹182.50
ಗುಡ್ ಲಾಟ್	₹177.50

(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹14000-14530
ತಿಪಟೂರು	₹13800-14702
ದಾವಣಗೆರೆ	₹11000-11000
ತುರುವೇಕೆರೆ	₹14000-14600

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-37000
ಹಳತು	45200-49200
ಕುಮಟ	
ಚಾಲಿ	30369-37000
ಚಿಪ್ಪು	10629-26689
ಕೋಕ	4300-18171
ಫ್ಯಾಕ್ಟರಿ	3589-21899
ಹೊಸಚಾಲಿ	29010-34539
ಸಾಗರ	
ಬಿಳಿಗೋಟು	7012-21600
ಚಾಲಿ	20199-34019
ಕೋಕ	6299-19566
ಕೆಂಪುಗೋಟು	10899-23069
ರಾಶಿ	28899-51901
ಸಿಪ್ಪೆಗೋಟು	6299-16288
ಶಿವಮೊಗ್ಗ	
ಬೆಟ್ಟೆ	43110-56200
ಗೊರಬಲು	17515-30189
ರಾಶಿ	30009-51669
ಸರಕು	52199-91770
ಸಿದ್ದಾಪುರ	
ಬಿಳಿಗೋಟು	20119-25079
ಚಾಲಿ	32909-36699
ಕೋಕ	14319-21819
ಹೊಸಚಾಲಿ	27219-34569
ಕೆಂಪುಗೋಟು	19119-21319
ರಾಶಿ	41299-49299
ತಟ್ಟಿಬೆಟ್ಟೆ	27709-32499
ಶಿರಸಿ	
ಬೆಟ್ಟೆ	28609-43799
ಬಿಳಿಗೋಟು	16199-28579
ಚಾಲಿ	32009-36591
ಕೆಂಪುಗೋಟು	10999-24699
ರಾಶಿ	40018-46099
ಯಲ್ಲಾಪುರ	
ಅಪಿ	65695-81399
ಬಿಳಿಗೋಟು	12899-25131
ಚಾಲಿ	28469-38536
ಕೋಕ	4710-16365
ಕೆಂಪುಗೋಟು	16099-25899
ರಾಶಿ	40699-56059
ತಟ್ಟಿಬೆಟ್ಟೆ	27806-38565

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ



ಶ್ರೀ ಬಿ.ಸಿ. ಪುಂಗಪ್ಪನವರು
28.2.1984
ಸ್ಥಾಪಕರು:
ಶ್ರೀ ವೆಂಕಟೇಶ್ವರ ಮೋಟಾರ್ ಸರ್ವೀಸ್
ಶ್ರೀ ಬಿ.ಜಿ. ವೆಂಕಟೇಶ್ ಮತ್ತು ಕುಟುಂಬ ವರ್ಗದವರು

ಚಿರಸ್ಮರಣೆ

ಶ್ರೀಮತಿ ಎಂ. ಬಿ. ಸರೋಜ
07.06.1948 - 28.02.2017
ಶ್ರೀ ಎಸ್. ಸಿದ್ದರಾಮಯ್ಯ, ನಿ || ಉಪ ನಿರ್ದೇಶಕರು (ಉದ್ಯೋಗ ವಿನಿಮಯ ಕೇಂದ್ರಗಳು), ಬೆಂಗಳೂರು ಇವರ ಧರ್ಮಪತ್ನಿ.
ನೀವು ಭೌತಿಕವಾಗಿ ನಮ್ಮನ್ನು ಅಗಲಿ ಇಂದಿಗೆ 8 ವರ್ಷಗಳಾದರೂ ನಿಮ್ಮ ಆತ್ಮ ನಮ್ಮೊಂದಿಗೇ ಇದ್ದು ಮಾರ್ಗದರ್ಶಕರಾಗಿರುವುದನ್ನು ಕಾಣುತ್ತಿದ್ದೇವೆ.ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಿರುವ
ಪ್ರೀತಿಯ ಪತಿ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು
Mob: 9845696159

ಅಶ್ರುತರ್ಪಣ
MES
ಶ್ರೀಮತಿ ವಿಮಲಾ ರಂಗಾಚಾರ್
19.07.1929 – 25.02.2025
ಮೈಸೂರು ಎಜುಕೇಷನ್ ಸೊಸೈಟಿ ಸಂಸ್ಥಾಪಕ ಸದಸ್ಯರು ಹಾಗೂ ಅಧ್ಯಕ್ಷರಾಗಿದ್ದ ಇವರು ದಿನಾಂಕ 25.02.2025 ಮಂಗಳವಾರದಂದು ವಿಧಿವಶರಾಗಿದ್ದರೆಂದು ತಿಳಿಸಲು ದುಃಖತಪ್ತರಾಗಿದ್ದೇವೆ.
ಅಧ್ಯಕ್ಷರು, ಆಡಳಿತ ಮಂಡಳಿಯ ಸದಸ್ಯರು, ಪ್ರಾಂಶುಪಾಲರು, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು

ಇನ್ಫೊಸಿಸ್ ವಿರುದ್ಧ ಪ್ರತಿಭಟನೆ ಐ.ಟಿ ಸಂಘಟನೆ ಎಚ್ಚರಿಕೆ

ನವದೆಹಲಿ (ಪಿಟಿಐ): ಮೈಸೂರಿನ ಇನ್ಫೊಸಿಸ್ ಕ್ಯಾಂಪಸ್‌ನಲ್ಲಿ 300ಕ್ಕೂ ಹೆಚ್ಚು ಟ್ರೈನಿಗಳನ್ನು ಕೆಲಸದಿಂದ ವಜಾಗೊಳಿಸಿರುವುದನ್ನು ಖಂಡಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಪುಣೆ ಮೂಲದ ಐ.ಟಿ ಉದ್ಯೋಗಿಗಳ ಕ್ಷೇಮಾಭಿವೃದ್ಧಿ ಸಂಘವಾದ ಎನ್‌ಐಟಿಇಎಸ್ ತಿಳಿಸಿದೆ.

ಸರ್ಕಾರವು ಶೀಘ್ರವೇ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಇಲ್ಲವಾದರೆ ಟ್ರೈನಿಗಳ ಜೊತೆಗೂಡಿ ಹೋರಾಟ ನಡೆಸಲಾಗುವುದು ಎಂದು ಹೇಳಿದೆ.

'ವಜಾಗೊಂಡಿರುವ ಉದ್ಯೋಗಿಗಳಿಗೆ ನ್ಯಾಯಸಮ್ಮತವಾಗಿ ನೀಡಬೇಕಿರುವ ಸೌಲಭ್ಯ ಕಲ್ಪಿಸಬೇಕಿದೆ. ನಿರ್ಲಕ್ಷ್ಯವಹಿಸಿದರೆ ಕ್ಯಾಂಪಸ್ ಮುಂಭಾಗದಲ್ಲಿ ಬೃಹತ್ ಹೋರಾಟ ನಡೆಸಲು ಹಿಂಜರಿಯುವುದಿಲ್ಲ' ಎಂದು ಹೇಳಿದೆ.

ಸ್ಪಷ್ಟನೆ: ನ್ಯಾಯಸಮ್ಮತವಾಗಿಯೇ ಉದ್ಯೋಗಿಗಳನ್ನು ವಜಾಗೊಳಿಸಲಾಗಿದೆ. ಆಂತರಿಕ ಮೌಲ್ಯಮಾಪನದಲ್ಲಿ ಅನುತ್ತೀರ್ಣರಾಗಿರುವ ಬಗ್ಗೆ ಮನವರಿಕೆ ಮಾಡಿಕೊಡಲಾಗಿದೆ. ಅವರಿಗೆ ನಿಗದಿಪಡಿಸಿದ್ದ ಹಣವನ್ನು ಪಾವತಿಸಲಾಗಿದೆ. ಈಗಾಗಲೇ, ಶೇ 98ರಷ್ಟು ಉದ್ಯೋಗಿಗಳಿಗೆ ಕೆಲಸದಿಂದ ಬಿಡುಗಡೆಗೊಳಿಸಿರುವ ಪತ್ರ ನೀಡಲಾಗಿದೆ ಎಂದು ಇನ್ಫೊಸಿಸ್ ಸ್ಪಷ್ಟಪಡಿಸಿದೆ.

₹479 ಕೋಟಿ ಜಿಎಸ್‌ಟಿ ಬಾಕಿ ಎಲ್‌ಐಸಿಗೆ ನೋಟಿಸ್ ಜಾರಿ

ನವದೆಹಲಿ (ಪಿಟಿಐ): 2020–21ನೇ ಆರ್ಥಿಕ ವರ್ಷದಲ್ಲಿ ₹479.88 ಕೋಟಿ ತೆರಿಗೆ ಬಾಕಿಗೆ ಸಂಬಂಧಿಸಿದಂತೆ ಸರಕು ಮತ್ತು ಸೇವಾ ತೆರಿಗೆ ಇಲಾಖೆಯಿಂದ ನೋಟಿಸ್ ಸ್ವೀಕರಿಸಲಾಗಿದೆ ಎಂದು ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ಗುರುವಾರ ತಿಳಿಸಿದೆ.

ಮುಂಬೈನ ಜಿಎಸ್‌ಟಿ ಉಪ ಆಯುಕ್ತರು ನೋಟಿಸ್ ನೀಡಿದ್ದಾರೆ. ಈ ಮೊತ್ತದಲ್ಲಿ ಬಡ್ಡಿ ಹಾಗೂ ದಂಡವೂ ಸೇರಿದೆ ಎಂದು ಷೇರುಪೇಟೆಗೆ ತಿಳಿಸಿದೆ.

ರಿವರ್ಸ್ ಚಾರ್ಜ್ ಕಾರ್ಯ ವಿಧಾನದಲ್ಲಿ ಹೂಡುವಳಿ ತೆರಿಗೆ ಜಮೆಯಡಿ (ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್) ಇಷ್ಟು ಮೊತ್ತ ಪಡೆಯಲಾಗಿದೆ ಎಂದು ನೋಟಿಸ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಈ ನೋಟಿಸ್ ಪ್ರಶ್ನಿಸಿ ರಾಜ್ಯ ತೆರಿಗೆ ವಿಭಾಗದ ಜಂಟಿ ಆಯುಕ್ತರಿಗೆ ಮೇಲ್ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದೆ.

ಬೆಂಬಲ ಬೆಲೆಯಡಿ ರಾಗಿ, ಜೋಳ ಖರೀದಿ ವಿಳಂಬ: ರೈತರಿಗೆ ಸಂಕಷ್ಟ

ಖರೀದಿಗೆ ಗೋಣಿಚೀಲ ಕೊರತೆ

● ಹರಿಶಂಕರ್ ಆರ್.

ಬಳ್ಳಾರಿ: ರಾಜ್ಯದಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಮುಂಗಾರು ಋತುವಿನ ಜೋಳ ಮತ್ತು ರಾಗಿ ಖರೀದಿಗೆ ನೋಂದಣಿ ಆರಂಭವಾಗಿ ಎರಡೂವರೆ ತಿಂಗಳಾಗಿದೆ. ಆದರೆ, ಗೋಣಿ ಚೀಲಗಳ ಕೊರತೆಯಿಂದಾಗಿ ಇನ್ನೂ ಖರೀದಿ ಪ್ರಕ್ರಿಯೆ ಆರಂಭವಾಗಿಲ್ಲ.



ಕಳೆದ ವರ್ಷದ ಡಿಸೆಂಬರ್ 1ರಿಂದ ಜೋಳ ಖರೀದಿಗೆ ರೈತರ ಹೆಸರು ನೋಂದಣಿ ಪ್ರಕ್ರಿಯೆಯು ಆರಂಭವಾಗಿದೆ. ಬಿಳಿಜೋಳ (ಮಾಲ್ದಂಡಿ) ಕ್ವಿಂಟಲ್‌ಗೆ ₹3,421, ಬಿಳಿಜೋಳ (ಹೈಬ್ರಿಡ್) ಕ್ವಿಂಟಲ್‌ಗೆ ₹3,371 ಮತ್ತು ರಾಗಿ ಕ್ವಿಂಟಲ್‌ಗೆ ₹4,290 ಬೆಂಬಲ ಬೆಲೆ ನಿಗದಿಪಡಿಸಲಾಗಿದೆ.

ರಾಜ್ಯದಲ್ಲಿ ಫೆಬ್ರುವರಿ 21ರ ವರೆಗೆ 36.22 ಲಕ್ಷ ಕ್ವಿಂಟಲ್ ರಾಗಿ ಮಾರಾಟಕ್ಕೆ 2.38 ಲಕ್ಷ ರೈತರು ನೋಂದಣಿ ಮಾಡಿಸಿದ್ದಾರೆ. 7.12 ಲಕ್ಷ ಕ್ವಿಂಟಲ್ ಜೋಳ ಮಾರಾಟಕ್ಕೆ 17,500 ರೈತರು ನೋಂದಾಯಿಸಿದ್ದಾರೆ.

'ಪಶ್ಚಿಮ ಬಂಗಾಳದಲ್ಲಿ ಇರುವ ಭಾರತೀಯ ಸೆಣಬು ನಿಗಮದಿಂದ ಗೋಣಿಚೀಲ- ಗಳನ್ನು ಖರೀದಿ- ಸಲಾಗುತ್ತದೆ. ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯು ನೋಡೆಲ್ ಏಜೆನ್ಸಿ ಆಗಿದೆ. ಖರೀದಿಸಲಾದ ಗೋಣಿಚೀಲಗಳನ್ನು ಸಂಬಂಧಪಟ್ಟ ಏಜೆನ್ಸಿಗಳಿಗೆ ಜಿಲ್ಲಾವಾರು ಹಂಚಿಕೆ ಮಾಡಲಾಗುತ್ತದೆ. ಈ ಬಾರಿ ಚೀಲಗಳ ಖರೀದಿಗಾಗಿ ನಡೆಸಿದ ಟೆಂಡರ್ ಪ್ರಕ್ರಿಯೆ ವಿಳಂಬವಾಗಿದೆ' ಎಂಬುದು ಅಧಿಕಾರಿಗಳ ವಿವರಣೆ.

ಹಂತ ಹಂತವಾಗಿ ಪೂರೈಕೆ: 'ಬೇಡಿಕೆಗೆ ತಕ್ಕಂತೆ ಗೋಣಿಚೀಲ ಪೂರೈಕೆಯಾಗುತ್ತಿಲ್ಲ. ಹಂತ ಹಂತವಾಗಿ ಪೂರೈಸುವುದಾಗಿ ಹೇಳಿದರೂ ಸರ್ಕಾರವು ಈವರೆಗೆ ಶೇ 10ರಷ್ಟು ಮಾತ್ರ ಪೂರೈಸಿದೆ. ಅಗತ್ಯ ಪ್ರಮಾಣದಲ್ಲಿ ಗೋಣಿ ಚೀಲಗಳು ಸಿಕ್ಕರೂ ಕೆಲವೇ ದಿನಗಳಲ್ಲಿ ಅವು ಖಾಲಿಯಾಗಿ ಮತ್ತೆ ಖರೀದಿ ಪ್ರಕ್ರಿಯೆ ನಿಲ್ಲುವ ಸಾಧ್ಯತೆ ಇದೆ. ಖರೀದಿ ಬಗ್ಗೆ ರೈತರು ಪದೇ ಪದೇ ವಿಚಾರಿಸುತ್ತಿದ್ದು, ಅವರಿಗೆ ಉತ್ತರಿಸುವುದು ಕಷ್ಟವಾಗುತ್ತಿದೆ' ಎಂದು ಅಧಿಕಾರಿಗಳು ಹೇಳುತ್ತಾರೆ.

> **ಚೀಲದ ಕೊರತೆ ಕಾರಣಕ್ಕೆ ಖರೀದಿ ನಡೆದಿರಲಿಲ್ಲ. ಕೆಲವೇ ದಿನಗಳಲ್ಲಿ ಚೀಲ ಲಭ್ಯವಾಗಲಿದ್ದು, ಖರೀದಿ ಆರಂಭವಾಗಲಿದೆ**
> **ಸಕೀನಾ**
> ಉಪ ನಿರ್ದೇಶಕಿ, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ

> **ಗೋಣಿಚೀಲದ ನೆಪವೊಡ್ಡಿ ಸರ್ಕಾರ ಖರೀದಿ ವಿಳಂಬ ಮಾಡಿದ್ದು ಸರಿಯಲ್ಲ. ಕೂಡಲೇ ಪೂರ್ಣ ಪ್ರಮಾಣದಲ್ಲಿ ಚೀಲಗಳನ್ನು ಪೂರೈಸಿ ಖರೀದಿ ಆರಂಭಿಸಬೇಕು**
> **ಕರೂರು ಮಾಧವ ರೆಡ್ಡಿ**
> ಅಧ್ಯಕ್ಷ, ರಾಜ್ಯ ರೈತ ಸಂಘ

'ವಿಳಂಬವಾದಷ್ಟೂ ನಷ್ಟ'

'ಜೋಳ ಖರೀದಿ ವಿಳಂಬವಾದರೆ ಅದರ ದಾಸ್ತಾನು ಮತ್ತು ವಿಲೇವಾರಿ ಕಷ್ಟವಾಗುತ್ತದೆ. ಜೋಳದ ಕಾಳಿನ ಬಾಳಿಕೆ ಗರಿಷ್ಠ 5 ತಿಂಗಳು ಮಾತ್ರ. ಧೂಮೀಕರಣ, ಕೀಟನಾಶಕ ಸಿಂಪಡಿಸಿದರೆ 8 ರಿಂದ 10 ತಿಂಗಳು ಬರಬಹುದು. ಈಗಾಗಲೇ, ಡಿಸೆಂಬರ್‌ನಲ್ಲೇ ಫಸಲು ಕಟಾವುಗೊಂಡಿದೆ. ಇನ್ನೂ ಖರೀದಿಯಾಗಿಲ್ಲ' ಎಂದು ರಾಜ್ಯ ಉಗ್ರಾಣ ನಿಗಮದ ಅಧಿಕಾರಿಯೊಬ್ಬರು ಹೇಳಿದರು.

'ಇನ್ನೂ ಜೋಳ ಖರೀದಿ ಆಗಿಲ್ಲ. ನಮಗೆ ಬರುವಾಗಲೇ ಎರಡೂವರೆ ತಿಂಗಳು ಕಳೆದಿದೆ. ಬಂದ ಬಳಿಕ ಮೂರು ತಿಂಗಳಲ್ಲಿ ಹುಳುಗಳ ಕಾಟ ಶುರುವಾಗುತ್ತದೆ. ಅಷ್ಟರೊಳಗೆ ನಾವು ಹಂಚಿಕೆ ಮಾಡಬೇಕು. ಇಲ್ಲವಾದರೆ ದಾಸ್ತಾನು ಹಾಳಾಗುತ್ತದೆ' ಎಂದು ಹೇಳಿದರು.

ಗುಜರಾತ್: 5ರಿಂದ ಸೆಮಿಕಂಡಕ್ಟರ್ ಸಮ್ಮೇಳನ

ಗಾಂಧಿನಗರ (ಪಿಟಿಐ): ಗುಜರಾತ್‌ನ ಗಾಂಧಿನಗರದಲ್ಲಿ ಮಾರ್ಚ್ 5ರಿಂದ 7ರ ವರೆಗೆ ಬೃಹತ್ ಸೆಮಿಕಂಡಕ್ಟರ್ ಸಮ್ಮೇಳನ ಆಯೋಜಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಸಮ್ಮೇಳನಕ್ಕೆ ಚಾಲನೆ ನೀಡಲಿದ್ದು, 2,500ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ. ಸೆಮಿಕಂಡಕ್ಟರ್ ವಲಯದ 100ಕ್ಕೂ ಹೆಚ್ಚು ಪರಿಣತರು ಅನುಭವ ಹಂಚಿಕೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.

ಚಿನ್ನದ ದರ ₹1,150 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದ್ದ ಚಿನ್ನದ ಧಾರಣೆಯು ಗುರುವಾರದ ವಹಿವಾಟಿನಲ್ಲಿ ಇಳಿಕೆಯಾಗಿದೆ. ಬೆಳ್ಳಿ ಧಾರಣೆ ಕೂಡ ಇಳಿಕೆ ಕಂಡಿದೆ.



10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹1,150 ಇಳಿಕೆಯಾಗಿದ್ದು, ₹88,200 ಆಗಿದೆ. ಆಭರಣ ಚಿನ್ನವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ₹87,800 ಆಗಿದೆ.

ಬೆಳ್ಳಿ ಧಾರಣೆಯು ಪ್ರತಿ ಕೆ.ಜಿಗೆ ₹1 ಸಾವಿರ ಇಳಿಕೆಯಾಗಿದ್ದು, ₹98,500ಕ್ಕೆ ಮಾರಾಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

'ಶುಕ್ರವಾರ ಅಮೆರಿಕದ ಬೆಲೆ ಸೂಚ್ಯಂಕ ವರದಿ ಪ್ರಕಟವಾಗಲಿದೆ. ಇದರ ಮೇಲೆ ಹೂಡಿಕೆದಾರರು ದೃಷ್ಟಿ ನೆಟ್ಟಿದ್ದಾರೆ. ಹಾಗಾಗಿ, ಹಳದಿ ಲೋಹದ ಬೆಲೆಯಲ್ಲಿ ಇಳಿಕೆಯಾಗಿದೆ' ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

'ಯುರೋಪಿಯನ್ ಒಕ್ಕೂಟ, ಮೆಕ್ಸಿಕೊ ಮತ್ತು ಕೆನಡಾದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಮಾರ್ಚ್ 4ರಿಂದ ಶೇ 25ರಷ್ಟು ಸುಂಕ ವಿಧಿಸುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಿಸಿದ್ದರು. ಆ ವೇಳೆ ಡಾಲರ್ ಮೌಲ್ಯ ಬಲಗೊಂಡಿತ್ತು. ಚಿನ್ನದ ಬೆಲೆಯೂ ಏರಿಕೆಯಾಗಿತ್ತು. ಸದ್ಯ ಸುಂಕ ಹೇರಿಕೆ ನೀತಿ ಜಾರಿಗೊಳಿಸುವುದನ್ನು ಏಪ್ರಿಲ್ 2ಕ್ಕೆ ಮುಂದೂಡಲಾಗಿದೆ. ಇದರಿಂದ ಹಳದಿ ಲೋಹದ ಬೆಲೆಯಲ್ಲಿ ಇಳಿಕೆಯಾಗಿದೆ' ಎಂದು ಅಬಾನ್ಸ್ ಹೋಲ್ಡಿಂಗ್ಸ್‌ನ ಸಿಇಒ ಚಿಂತನ್ ಮೆಹ್ತಾ ತಿಳಿಸಿದ್ದಾರೆ.

ಮೆಕ್ಸಿಕೊ ಮತ್ತು ಕೆನಡಾದ ಮೇಲೆ ಸುಂಕ ವಿಧಿಸುವುದು ಇನ್ನೂ ಅನಿಶ್ಚಿತತೆಯಿಂದ ಕೂಡಿದೆ. ಇದು ದೇಶೀಯ ಷೇರುಪೇಟೆ ಮತ್ತು ಚಿನಿವಾರ ಪೇಟೆಯ ಏರಿಳಿತಕ್ಕೆ ಕಾರಣವಾಗಲಿದೆ ಎಂದು ಹೇಳಿದ್ದಾರೆ.

ಅಮೆಜಾನ್ ಸಂಸ್ಥೆಗೆ ₹340 ಕೋಟಿ ದಂಡ

ನವದೆಹಲಿ (ಪಿಟಿಐ): ಟ್ರೇಡ್‌ಮಾರ್ಕ್ ಉಲ್ಲಂಘನೆಗೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್, ಅಮೆಜಾನ್ ಇಂಡಿಯಾಕ್ಕೆ ₹340 ಕೋಟಿ ದಂಡ ವಿಧಿಸಿದೆ.



ಅಮೆಜಾನ್ ಟೆಕ್ನಾಲಜೀಸ್‌ನ ವೆಬ್‌ಸೈಟ್‌ನಲ್ಲಿ ಕಾನೂನುಬಾಹಿರವಾಗಿ ಬೆವರ್ಲಿ ಹಿಲ್ಸ್ ಪೋಲೊ ಕ್ಲಬ್‌ನ ಬ್ರ್ಯಾಂಡ್ ಚಿಹ್ನೆ ಬಳಸಿಕೊಂಡು ಸಿದ್ಧಉಡುಪುಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದು 2020ರಲ್ಲಿ ಲೈಫ್‌ಸ್ಟೈಲ್ ಈಕ್ವಿಟೀಸ್ ಕಂಪನಿಯು ಪ್ರಕರಣ ದಾಖಲಿಸಿತ್ತು. ನಮ್ಮ ಬ್ರ್ಯಾಂಡ್ ಚಿಹ್ನೆಯಡಿಯೇ ಸಿದ್ಧಉಡುಪು ತಯಾರಿಸಿ ಮಾರಾಟ ಮಾಡಲಾಗುತ್ತಿದೆ ಎಂದು ಆರೋಪಿಸಿತ್ತು. ದೇಶದಲ್ಲಿ ಟ್ರೇಡ್‌ಮಾರ್ಕ್ ಉಲ್ಲಂಘನೆಗೆ ಸಂಬಂಧಿಸಿದಂತೆ ಅತಿಹೆಚ್ಚು ದಂಡ ವಿಧಿಸಿರುವ ಪ್ರಕರಣ ಇದಾಗಿದೆ ಎಂದು ಹೇಳಲಾಗಿದೆ.

ಅಮೆಜಾನ್ ಇಂಡಿಯಾವು ತನ್ನ ವೆಬ್‌ಸೈಟ್‌ನಲ್ಲಿ ಆಯ್ದ ಮಾರಾಟಗಾರರಿಗೆ ಅವಕಾಶ ಕಲ್ಪಿಸುವ ಮೂಲಕ ಸ್ಪರ್ಧಾತ್ಮಕತೆಯ ನಿಯಮಗಳನ್ನು ಉಲ್ಲಂಘಿಸುತ್ತಿದೆ ಎಂಬ ಆರೋಪವೂ ಕೇಳಿಬಂದಿದೆ. ಆದರೆ, ಇದನ್ನು ಕಂಪನಿಯು ನಿರಾಕರಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಟಾಟಾ ACE ಗೆ ಅಗತ್ಯವಿರುವ ಚಾಲಕ ಬೇಕಾಗಿದ್ದಾರೆ, ಪೀಣ್ಯ ಬೆಂಗಳೂರು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: 9448684912

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 14,000-18,000. 8951315839, 7022770052

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Multiple Vacancy

ಬಿಲಿಯರ್ಡ್ಸ್ ರೂಮ್ ಕೆ ಮಾರ್ಕರ್ ಬೇಕಾಗಿದ್ದಾರೆ ದಯವಿಟ್ಟು ಸಂಪರ್ಕಿಸಿ ಮೊಬೈಲ್ ಸಂಖ್ಯೆ 7090650796 ಜೆಪಿ ನಗರ್ 2 ನೇ ಹಂತ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606385001, 9606384001

ವೈಯಕ್ತಿಕ

Change of Name

I, NAVYASHREE.R has changed my daughter's name from Nainikaa Rao aged 9 years to Nainikaa N Vaghme vide affidavit dated 24th February 2025 before P. Anuradha from Bangalore.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel Agencies

ನೇಪಾಳ ಪ್ರವಾಸ 9 ದಿನಗಳು 15/3/2025 ಅಯೋಧ್ಯ ಮುಕ್ತಿನಾಥ ಪೋಕ್ರ, ಕಟ್ಮಂಡು, ಲುಂಬಿನಿ ಪಶುಪತಿನಾಥ ಜನಕಪರ ಇತರೆ ಸ್ಥಳಗಳು ಸುವರ್ಣಯಾತ್ರ 9019462508/ 6360146483

Travel

20.03.2025 ಕಾಶಿ ಅಯೋಧ್ಯ ಅಲಹಾಬಾದ್,ಬುದ್ಧಗಯಾ. 14.04.2025 ವೈಷ್ಣೋದೇವಿ ಕಾಶ್ಮೀರ್,ಜ್ವಾಲಾಮುಖಿ ಕುಲುಮನಾಲಿ. 28.04.2025 12.05.2025 ಚಾರ್‌ಧಾಮ್ ಸಮೇತಪ್ರವಾಸ. 26.06.2025 10.07.2025 ಅಮರನಾಥ್ ಅಮೃತ್‌ಸರ್ ಕುರುಕ್ಷೇತ್ರ ಗುಲ್ ಮಾರ್ಗ. 14.04.2025 ಸೋಮನಾಥ್,ದ್ವಾರಕಾ, ಮಹಾಕಾಳೇಶ್ವರ ಓಂಕಾರೇಶ್ವರ್. ಇತ್ಯಾದಿ. ಏಷ್ಯನ್ ಟ್ರಾವೆಲ್ ಏಜೆನ್ಸಿ ಬೆಂಗಳೂರು.4. 26574131 8431888138 8317446683 9686708171

2.4.2025 ದೆಹಲಿ, ಅಮೃತ್‌ಸರ್, ವೈಷ್ಣೋದೇವಿ,ಕಾಶಿ,ಗಯಾ18.4. 2025 ಅಯೋಧ್ಯಾ,ಕಾಶಿ, ಪ್ರಯಾಗ್‌ರಾಜ್, ನೈಮಿಶರಣ್ಯ 22.4.2025 ಶಿರಡಿ/ ಮಹಾರಾಷ್ಟ್ರ, ಜ್ಯೋತಿರ್ಲಿಂಗ ಪ್ರವಾಸ1.5.2025 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

26.03.2025/ ಏಪ್ರಿಲ್ ಮೇ ತಿಂಗಳಲ್ಲಿ 7 ದಿನಗಳ ಕಾಶಿ,ಗಯಾ,ಪ್ರಯಾಗ್‌ರಾಜ್ ಅಯೋಧ್ಯ. ಮೇ ತಿಂಗಳಿಂದ ಪ್ರತಿ 15 ದಿನಗಳಿಗೊಮ್ಮೆ 13 ದಿನಗಳ ಚಾರ್‌ಧಾಮ ಬದರಿನಾಥ್,ಕೇದಾರನಾಥ್ ಗಂಗೋತ್ರಿ ಯಮನೋತ್ರಿ ದೆಹಲಿ. ಶ್ರೀಸುಧಾ ಟ್ರಾವಲ್ಸ್ 8088826815 9019301300

ವಿಮಾನದಲ್ಲಿ 10 ದಿನಗಳು ಸಿಂಗಾಪುರ, ಮಲೇಷ್ಯಾ, ಥೈಲ್ಯಾಂಡ್ 20/4/2025 ಮತ್ತು 7 ದಿನಗಳು ಶ್ರೀಲಂಕಾ 14/3/2025, ಹಿರಿಯ ನಾಗರಿಕರಿಗೆ 5000 ರಿಯಾಯಿತಿ! ಸಂಪರ್ಕಿಸಿ: ನಿಸರ್ಗ ಹಾಲಿಡೇಸ್, ಬೆಂಗಳೂರು. ಮೊ: 9900664943, 9880241669

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI
ALL KARNATAKA, ON ALL DAYS
www.dhclassifieds.com
@500/-* PER SQCM
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಕದನ ವಿರಾಮ: ಚರ್ಚೆಗೆ ಹಮಾಸ್ ಕರೆ

ಗಾಜಾಪಟ್ಟಿ: ಒಪ್ಪಂದದಂತೆ ಕಡೇ ಹಂತದಲ್ಲಿ ನಾಲ್ವರು ಒತ್ತೆಯಾಳು, 600ಕೈದಿಗಳ ಬಿಡುಗಡೆ

ಖಾನ್ ಯೂನಿಸ್ (ಎ.ಪಿ): ಕದನ ವಿರಾಮದ ಒಪ್ಪಂದದಂತೆ, ಗುರುವಾರ ಅಂತಿಮ ಹಂತದಲ್ಲಿ ಹಮಾಸ್‌ನ ಬಂಡುಕೋರರು ನಾಲ್ವರು ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ್ದಾರೆ. ಪ್ರತಿಯಾಗಿ ಇಸ್ರೇಲ್ ಪ್ಯಾಲೆಸ್ಟೀನ್‌ನ 600 ಕೈದಿಗಳ ಬಿಡುಗಡೆ ಮಾಡಿದೆ.

ಅಂತಿಮ ಕಂತಿನಲ್ಲಿ ಒತ್ತೆಯಾಳುಗಳು ಹಾಗೂ ಕೈದಿಗಳು ಬಿಡುಗಡೆಯಾಗುತ್ತಿದ್ದಂತೆ, 'ಮುಂದಿನ ಹಂತದ ಕದನ ವಿರಾಮ ಕುರಿತಂತೆ ಮಾತುಕತೆ ನಡೆಯಲಿ' ಎಂದು ಹಮಾಸ್ ಬಯಸಿದೆ.

'ಎರಡನೇ ಹಂತದ ಕದನ ವಿರಾಮದಲ್ಲಿ, ಡಜನ್ನುಗಟ್ಟಲೆ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲಾಗುವುದು. ಅದಕ್ಕೆ ಪ್ರತಿಯಾಗಿ ಪ್ಯಾಲೆಸ್ಟೀನ್ ಕೈದಿಗಳನ್ನು ಬಿಡುಗಡೆ ಮಾಡಬೇಕಿದ್ದು, ಈ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ' ಎಂದು ಸ್ಪಷ್ಟಪಡಿಸಿದೆ.

ಹಮಾಸ್ ನಾಲ್ವರು ಒತ್ತೆಯಾಳುಗಳ ಬಿಡುಗಡೆ ಮಾಡಿದೆ. ಇಸ್ರೇಲ್‌ನಲ್ಲಿರುವ ಒತ್ತೆಯಾಳುಗಳ ಕುಟುಂಬದವರು ಇದನ್ನು ದೃಢಪಡಿಸಿದ್ದಾರೆ ಎಂದು ತಿಳಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಹಮಾಸ್, 'ಬಾಕಿ ಇರುವ ಇಸ್ರೇಲ್‌ನ ಒತ್ತೆಯಾಳುಗಳ ಬಿಡುಗಡೆಗೆ ಇರುವ ಏಕೈಕ ಮಾರ್ಗವೆಂದರೆ ಮಾತುಕತೆ ಮಾತ್ರ' ಎಂದು ಸ್ಪಷ್ಟಪಡಿಸಿದೆ.

ಗಾಜಾಪಟ್ಟಿಯಲ್ಲಿ ಕದನ ವಿರಾಮ ಜಾರಿ ಬಳಿಕ ಹಮಾಸ್ ಈವರೆಗೆ 33 ಒತ್ತೆಯಾಳುಗಳನ್ನು ಬಿಡುಗಡೆ ಮಾಡಿದ್ದರೆ, ಇಸ್ರೇಲ್ ಸುಮಾರು 2000 ಕೈದಿಗಳನ್ನು ಬಿಡುಗಡೆ ಮಾಡಿದೆ.

ಇಸ್ರೇಲ್ ಗುರುವಾರ ಬಿಡುಗಡೆ ಮಾಡಿದ ಕೈದಿಗಳಲ್ಲಿ 21 ತರುಣರು, 445 ಪುರುಷರು ಮತ್ತು ಒಬ್ಬ ಮಹಿಳೆ ಸೇರಿದ್ದಾರೆ.

ಇಸ್ರೇಲ್ ಬಿಡುಗಡೆ ಮಾಡಿದ ಪ್ಯಾಲೆಸ್ಟೀನ್ ಕೈದಿಗಳ ವಾಪಸಾತಿಗಾಗಿ, ಅವರ ಕುಟುಂಬ ಸದಸ್ಯರು ಗುರುವಾರ ಖಾನ್ ಯೂನಿಸ್‌ನ ಆಸ್ಪತ್ರೆ ಎದುರು ಕಾಯುತ್ತಿದ್ದರು —ಎಎಫ್‌ಪಿ ಚಿತ್ರ

ಮಾತುಕತೆಗೆ ನೆತನ್ಯಾಹು ಸೂಚನೆ

ಜೆರುಸಲೇಂ (ರಾಯಿಟರ್ಸ್): ಕದನ ವಿರಾಮ ಮಾತುಕತೆಗಾಗಿ ಕೈರೋಗೆ ತೆರಳಬೇಕು ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಗುರುವಾರ ಅಧಿಕಾರಿಗಳಿಗೆ ಸೂಚಿಸಿದ್ದಾರೆ

ಪ್ರಧಾನಿ ಕಚೇರಿಯು ಈ ಬಗ್ಗೆ ಹೇಳಿಕೆ ನೀಡಿದೆ. ಪ್ರಸ್ತುತ ಜಾರಿಯಲ್ಲಿರುವ ಮೊದಲ ಹಂತದ ಕದನ ವಿರಾಮದ ಅವಧಿ ಈ ವಾರಾಂತ್ಯ ಅಂತ್ಯಗೊಳ್ಳಲಿದ್ದು, ಚರ್ಚೆ ಮಹತ್ವ ಪಡೆದಿದೆ.

ಇದರ ನಡುವೆಯೇ, ಇಸ್ರೇಲ್ ಅಧಿಕಾರಿಯೊಬ್ಬರು ಫಿಲಡೆಲ್ಫಿ ಪ್ರದೇಶದಿಂದ ಸೇನೆಯನ್ನು ಹಿಂಪಡೆಯುವುದಿಲ್ಲ. ಶಸ್ತ್ರಾಸ್ತ್ರ ಕಳ್ಳಸಾಗಣೆ ಮೇಲೆ ನಿಗಾ ಇಡಲು ಸೇನೆ ಅಲ್ಲಿರುವುದು ಅನಿವಾರ್ಯ ಎಂದಿದ್ದಾರೆ. ಇದು ಕದನ ವಿರಾಮದ ಉಲ್ಲಂಘನೆಯಾಗುವ ಸಾಧ್ಯತೆ ಇದ್ದು, ಹಮಾಸ್ ಈ ಕುರಿತು ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

'ವಾರಾಂತ್ಯಕ್ಕೆ ಕದನ ವಿರಾಮ ಕೊನೆ'

ಖಾನ್ ಯೂನಿಸ್ (ಎ.ಪಿ): ಕದನ ವಿರಾಮದ ಆರು ವಾರಗಳ ಅವಧಿ ಈ ವಾರಾಂತ್ಯ ಮುಗಿಯಲಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮಧ್ಯಪೂರ್ವ ಪ್ರತಿನಿಧಿ ಸ್ಟೀವ್ ವಿಟ್‌ಕಾಫ್ ಅವರು, 'ಎರಡನೇ ಹಂತದ ಕದನ ವಿರಾಮಕ್ಕೆ ಚರ್ಚೆ ಆರಂಭವಾಗಬೇಕು' ಎಂದಿದ್ದಾರೆ.

ಇನ್ನೊಂದೆಡೆ, ಇಸ್ರೇಲ್ ಪ್ರಧಾನಿ ನೆತನ್ಯಾಹು ಅವರು, ಗಾಜಾಪಟ್ಟಿಯಲ್ಲಿರುವ ಹಮಾಸ್‌ನ ಆಡಳಿತ ವ್ಯವಸ್ಥೆ, ಸೇನಾ ಸಾಮರ್ಥ್ಯ ಧ್ವಂಸ ಮಾಡುವ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದಾರೆ. ಕೆಲ ಒತ್ತೆಯಾಳುಗಳು ಹಮಾಸ್ ವಶದಲ್ಲಿರುವಾಗ ಇದು ಸಾಧ್ಯವೇ ಎಂಬ ಪ್ರಶ್ನೆ ಮೂಡಿದೆ.

ಹಮಾಸ್ ಬಂಡುಕೋರರು ಹಾಗೂ ಇಸ್ರೇಲ್ ನಡುವೆ ಮೊದಲ ಹಂತದಲ್ಲಿ ಕದನ ವಿರಾಮ ಮೂಡಲು ಅಮೆರಿಕ, ಈಜಿಪ್ಟ್ ಹಾಗೂ ಕತಾರ್ ಮಧ್ಯಸ್ಥಿಕೆ ವಹಿಸಿದ್ದವು.

ಕಾಫಿ ಡೇ ದಿವಾಳಿ ಪ್ರಕ್ರಿಯೆ ರದ್ದು

ನವದೆಹಲಿ (ಪಿಟಿಐ): ಕಾಫಿ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್ (ಸಿಡಿಇಎಲ್) ವಿರುದ್ಧ ಕಾರ್ಪೊರೇಟ್ ದಿವಾಳಿ ಪ್ರಕ್ರಿಯೆ ಆರಂಭಿಸುವಂತೆ ಬೆಂಗಳೂರಿನ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯ ಮಂಡಳಿ (ಎನ್‌ಸಿಎಲ್‌ಟಿ) ನೀಡಿದ್ದ ಆದೇಶವನ್ನು, ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯ ಮಂಡಳಿಯ (ಎನ್‌ಸಿಎಲ್‌ಎಟಿ) ಚೆನ್ನೈ ಪೀಠವು ಗುರುವಾರ ರದ್ದುಪಡಿಸಿದೆ.

ನ್ಯಾಯಮೂರ್ತಿಗಳಾದ ಶರದ್ ಕುಮಾರ್ ಶರ್ಮಾ ಮತ್ತು ಜತೀಂದ್ರ ನಾಥ್ ಸ್ವೈನ್ ಅವರಿದ್ದ ವಿಭಾಗೀಯ ಪೀಠವು ಈ ಆದೇಶ ಹೊರಡಿಸಿದೆ.

ಕಾಫಿ ಡೇ ಸಮೂಹದ ಮಾತೃಸಂಸ್ಥೆ ಕಾಫಿ ಡೇ ಎಂಟರ್‌ಪ್ರೈಸಸ್ ತನಗೆ ₹228.45 ಕೋಟಿ ಬಾಕಿ ಪಾವತಿಸಿಲ್ಲ ಎಂದು ಆರೋಪಿಸಿದ್ದ ಐಡಿಬಿಐ ಟ್ರಸ್ಟಿಶಿಪ್ ಸರ್ವಿಸಸ್ ಲಿಮಿಟೆಡ್, ಎನ್‌ಸಿಎಲ್‌ಟಿಗೆ ಅರ್ಜಿ ಸಲ್ಲಿಸಿತ್ತು. ಇದರ ವಿಚಾರಣೆ ನಡೆಸಿದ್ದ ನ್ಯಾಯಮಂಡಳಿಯು ದಿವಾಳಿ ಪ್ರಕ್ರಿಯೆಗೆ ಅನುಮತಿ ನೀಡಿ ಆದೇಶಿಸಿತ್ತು.

ಇದನ್ನು ಪ್ರಶ್ನಿಸಿ ಸಿಡಿಇಎಲ್‌ನ ಕಾರ್ಯ ನಿರ್ವಾಹಕ ನಿರ್ದೇಶಕಿ ಮತ್ತು ಸಿಇಒ ಮಾಳವಿಕಾ ಹೆಗ್ಡೆ ಅವರು ಎನ್‌ಸಿಎಲ್‌ಎಟಿಗೆ ಮೇಲ್ಮನವಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ್ದ ನ್ಯಾಯಪೀಠವು ಎನ್‌ಸಿಎಲ್‌ಟಿ ಆದೇಶಕ್ಕೆ ತಡೆಯಾಜ್ಞೆ ನೀಡಿತ್ತು. ಇದನ್ನು ಐಡಿಬಿಐ ಟ್ರಸ್ಟಿಶಿಪ್ ಸರ್ವಿಸಸ್ ಲಿಮಿಟೆಡ್, ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

ಲಡಾಖ್: ಪರಿಣಾಮಕಾರಿಯಾಗಿ ಒಪ್ಪಂದದ ಅನುಷ್ಠಾನ –ಚೀನಾ

ಬೀಜಿಂಗ್ (ಪಿಟಿಐ): ಪೂರ್ವ ಲಡಾಖ್‌ನಲ್ಲಿ ಮೂಡಿದ್ದ ಅನಿಶ್ಚಿತತೆಯನ್ನು ಕೊನೆಗಾಣಿಸಲು ಭಾರತ–ಚೀನಾ ಸೇನೆಗಳು ಮಾಡಿಕೊಂಡಿರುವ ಒಪ್ಪಂದವನ್ನು 'ಸಮಗ್ರವಾಗಿ ಮತ್ತು ಪರಿಣಾಮಕಾರಿಯಾಗಿ' ಜಾರಿಗೊಳಿಸುತ್ತಿವೆ ಎಂದು ಚೀನಾದ ರಕ್ಷಣಾ ಸಚಿವಾಲಯ ಹೇಳಿದೆ.

'ಪ್ರಸ್ತುತ, ಗಡಿ ಪ್ರದೇಶಗಳಿಗೆ ಅನ್ವಯಿಸಿ ಈ ಒಪ್ಪಂದವನ್ನು ಜಾರಿಗೊಳಿಸಲಾಗುತ್ತಿದೆ' ಎಂದು ಚೀನಾದ ರಕ್ಷಣಾ ಸಚಿವಾಲಯದ ವಕ್ತಾರ ಕರ್ನಲ್ ವು ಕ್ವಿಯಾನ್ ತಿಳಿಸಿದ್ದಾರೆ.

'ಗಡಿ ಪ್ರದೇಶದಲ್ಲಿ ಶಾಂತ ವಾತಾವರಣ ಸ್ಥಾಪಿಸಲು ಭಾರತ ಸೇನೆಯ ಜೊತೆಗೂಡಿ ಕಾರ್ಯನಿರ್ವಹಿಸಲು ನಾವು ಸಿದ್ಧರಿದ್ದೇವೆ' ಎಂದೂ ತಿಳಿಸಿದರು.

ಹಾಲಿವುಡ್ ನಟ ಜೀನ್ ಹ್ಯಾಕ್‌ಮನ್ ನಿಧನ

ಮೆಕ್ಸಿಕೊ: ಆಸ್ಕರ್ ಪ್ರಶಸ್ತಿ ಪುರಸ್ಕೃತ, ಖ್ಯಾತ ಹಾಲಿವುಡ್ ನಟ ಜೀನ್ ಹ್ಯಾಕ್‌ಮನ್ (95) ಹಾಗೂ ಅವರ ಪತ್ನಿ ಬೆಟ್ಸಿ ಅರಾಕವಾ (64) ಮೃತಪಟ್ಟಿದ್ದಾರೆ. ಅಮೆರಿಕದ ಮೆಕ್ಸಿಕೊದಲ್ಲಿರುವ ಮನೆಯಲ್ಲಿ ಬುಧವಾರ ಮಧ್ಯಾಹ್ನ ದಂಪತಿಯ ಮೃತದೇಹಗಳು ಪತ್ತೆಯಾಗಿವೆ. ಇದೇ ವೇಳೆ, ಅವರ ಮನೆಯ ನಾಯಿಯ ಶವವೂ ಪತ್ತೆಯಾಗಿದೆ.

ಈ ಸಾವಿಗೆ ಕಾರಣ ಏನೆಂಬುದು ತಿಳಿದುಬಂದಿಲ್ಲ. ಪ್ರಾಥಮಿಕ ತನಿಖೆಯ ಪ್ರಕಾರ ಇದು ಕೊಲೆ ಅಲ್ಲ ಎಂದು ಶಂಕಿಸಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

'ಬೋನಿ ಆ್ಯಂಡ್ ಕ್ಲೈಡ್', 'ದಿ ಫ್ರೆಂಚ್ ಕನೆಕ್ಷನ್', 'ದಿ ಪಸೈಡನ್ ಅಡ್ವೆಂಚರ್', 'ಮಿಸಿಸಿಪ್ಪಿ ಬರ್ನಿಂಗ್' ಹಾಗೂ 'ಸೂಪರ್‌ಮ್ಯಾನ್' ಸೇರಿದಂತೆ ಅನೇಕ ಜನಪ್ರಿಯ ಸಿನಿಮಾಗಳಲ್ಲಿ ನಟಿಸಿರುವ ಜೀನ್ ಹ್ಯಾಕ್‌ಮನ್ ಅವರು 40 ವರ್ಷ ಸಿನಿಮಾ ರಂಗದಲ್ಲಿದ್ದರು.

ಅಮೆರಿಕ: ಗುತ್ತಿಗೆದಾರರಿಗೆ ಶೇ 90ರಷ್ಟು ವಿದೇಶಿ ನೆರವು ನಿಧಿ

ಹಣ ಬಿಡುಗಡೆ – 'ಸುಪ್ರೀಂ' ತಡೆ

ವಾಷಿಂಗ್ಟನ್ (ರಾಯಿಟರ್ಸ್/ಎಪಿ): ಗುತ್ತಿಗೆದಾರರು ಮತ್ತು ಅನುದಾನ ಪಡೆಯುವವರಿಗೆ ಅವರು ಹಿಂದೆ ಮಾಡಿರುವ ಕೆಲಸಗಳಿಗೆ ವಿದೇಶಿ ನೆರವು ನಿಧಿಯನ್ನು ಪಾವತಿಸಬೇಕು ಎಂದು ಅಧೀನ ನ್ಯಾಯಾಲಯವು ಡೊನಾಲ್ಡ್ ಟ್ರಂಪ್ ನೇತೃತ್ವದ ಆಡಳಿತಕ್ಕೆ ನೀಡಿದ್ದ ಸೂಚನೆಗೆ ಅಮೆರಿಕದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜಾನ್ ರಾಬರ್ಟ್ಸ್ ಅವರು ಬುಧವಾರ ತಡೆ ನೀಡಿದ್ದಾರೆ.

ವಾಷಿಂಗ್ಟನ್‌ನಲ್ಲಿ ಇರುವ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶ ಅಮೀರ್ ಅಲಿ ಅವರು ಈ ಪಾವತಿಗಳನ್ನು ಬುಧವಾರ ಮಧ್ಯರಾತ್ರಿ 11.59ಕ್ಕೆ ಮೊದಲು ಮಾಡಬೇಕು ಎಂದು ಗಡುವು ನೀಡಿದ್ದರು. ಅಲಿ ಅವರ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದೆ.

ಲಾಭದ ಉದ್ದೇಶವಿಲ್ಲದ ಕೆಲವು ಗುಂಪುಗಳು ಹಾಗೂ ಕೆಲವು ಉದ್ದಿಮೆಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಅಲಿ ಅವರು ಈ ಸೂಚನೆ ನೀಡಿದ್ದರು. ಈ ಆದೇಶದಲ್ಲಿ ಮಧ್ಯ ಪ್ರವೇಶ ಮಾಡಬೇಕು ಎಂದು ಅಮೆರಿಕದ ಆಡಳಿತ ಸಲ್ಲಿಸಿದ್ದ ಮೇಲ್ಮನವಿಯನ್ನು ಪುರಸ್ಕರಿಸಲು ಮೇಲ್ಮನವಿ ಸಮಿತಿಯು ಒಪ್ಪಿರಲಿಲ್ಲ.

ಅಮೆರಿಕದ ಅಂತರರಾಷ್ಟ್ರೀಯ ನೆರವು ಏಜೆನ್ಸಿಯ (ಯುಎಸ್‌ಎಐಡಿ) ಶೇಕಡ 90ರಷ್ಟು ವಿದೇಶಿ ನೆರವು ಗುತ್ತಿಗೆಗಳನ್ನು, ವಿಶ್ವದಾದ್ಯಂತ ಅಮೆರಿಕ ನೀಡುತ್ತಿರುವ ನೆರವಿನಲ್ಲಿ 60 ಬಿಲಿಯನ್ ಡಾಲರ್ (ಅಂದಾಜು ₹5.23 ಲಕ್ಷ ಕೋಟಿ) ಮೊತ್ತವನ್ನು ನಿಲ್ಲಿಸಲಾಗುತ್ತಿದೆ ಎಂದು ಟ್ರಂಪ್ ನೇತೃತ್ವದ ಆಡಳಿತ ಹೇಳಿದೆ.

ಝೆಲೆನ್‌ಸ್ಕಿ ಭೇಟಿ ಇಂದು: ಟ್ರಂಪ್

ವಾಷಿಂಗ್ಟನ್ (ಎಪಿ): 'ದೀರ್ಘಕಾಲದಿಂದ ಬಾಕಿ ಉಳಿದಿರುವ ಖನಿಜ ಒಪ್ಪಂದಕ್ಕೆ ಸಹಿ ಹಾಕಲು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಶುಕ್ರವಾರ ಶ್ವೇತಭವನಕ್ಕೆ ಭೇಟಿ ನೀಡಲಿದ್ದಾರೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಆ ಮೂಲಕ ಎರಡು ರಾಷ್ಟ್ರಗಳು ಮತ್ತಷ್ಟು ಹತ್ತಿರಕ್ಕೆ ಬರಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಎರಡನೇ ಅವಧಿಗೆ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಡೊನಾಲ್ಡ್ ಟ್ರಂಪ್ ಅವರು ತಮ್ಮ ಮೊದಲ ಸಚಿವರ ಸಂಪುಟದ ಸಭೆಯಲ್ಲಿಯೇ ಈ ಘೋಷಣೆ ಮಾಡಿದ್ದು, ಅತ್ಯಂತ ದೊಡ್ಡ ಒಪ್ಪಂದವಾಗಿದೆ ಎಂದು ತಿಳಿಸಿದ್ದರು.

ರಷ್ಯಾ ವಿರುದ್ಧದ ಉಕ್ರೇನ್ ಯುದ್ಧಕ್ಕಾಗಿ ಅಮೆರಿಕವು ದೊಡ್ಡ ಮಟ್ಟದಲ್ಲಿ ಜನರ ತೆರಿಗೆ ಹಣವನ್ನು ವ್ಯಯಿಸಿದೆ ಎಂದು ರಿಪಬ್ಲಿಕನ್ ಪಕ್ಷದ ಅಧ್ಯಕ್ಷರಾದ ಟ್ರಂಪ್ ಚುನಾವಣಾ ಪ್ರಚಾರದಲ್ಲಿಯೂ ದೂರಿದ್ದರು. ಈಗಾಗಲೇ ಅಮೆರಿಕ ನೀಡಿದ ನೆರವಿಗೆ ಪ್ರತಿಯಾಗಿ, ಉಕ್ರೇನ್‌ನಲ್ಲಿರುವ ಅಪರೂಪದ ಖನಿಜಗಳನ್ನು ಮರಳಿ ಪಡೆಯುವ ಒಪ್ಪಂದವನ್ನು ಟ್ರಂಪ್ ರೂಪಿಸಿದ್ದಾರೆ. ಇದು ಹಿಂದಿನ ಅಧ್ಯಕ್ಷ ಜೋ ಬೈಡನ್ ಅವಧಿಯಲ್ಲಿ ಅಮೆರಿಕ ನೀಡಿದ ನೆರವಿಗೆ ಪ್ರತಿಯಾಗಿ ಉಕ್ರೇನ್ ಮರುಪಾವತಿಸಬೇಕಾದ ಮೊತ್ತವಾಗಿದೆ ಎಂದು ಹೇಳಲಾಗಿದೆ.

'ಪದವೀಧರರಿಗೆ ಅನುಕೂಲ'

ವಾಷಿಂಗ್ಟನ್ (ಪಿಟಿಐ): 'ಪ್ರಸ್ತಾವಿತ ಗೋಲ್ಡ್ ಕಾರ್ಡ್ ವೀಸಾ ವ್ಯವಸ್ಥೆಯಿಂದ ಅಮೆರಿಕದ ಕಂಪನಿಗಳು ಹಾರ್ವರ್ಡ್, ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಕಲಿಯುವ ಭಾರತದ ಪದವೀಧರರನ್ನು ನೇಮಕ ಮಾಡಿಕೊಳ್ಳಬಹುದು' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ.

'ಈಗಿರುವ ವಲಸೆ ನಿಯಮವು ಅಂತರರಾಷ್ಟ್ರೀಯ ಪ್ರತಿಭೆಗಳನ್ನು ಅಮೆರಿಕದಲ್ಲಿ ಉಳಿಸಿಕೊಳ್ಳಲು ಅಡ್ಡಿಯಾಗುತ್ತಿದೆ. ಕೆಲಸ ಸಿಕ್ಕರೂ ಇಲ್ಲಿ ನೆಲಸುವ ಅವಕಾಶ ಸಿಗದ ಕಾರಣ ತಮ್ಮ ದೇಶಕ್ಕೆ ಹಿಂತಿರುಗುತ್ತಾರೆ. ಅಲ್ಲಿ ಶತಕೋಟ್ಯಧಿಪತಿಗಳಾಗಿ ನೂರಾರು ಮಂದಿಗೆ ಉದ್ಯೋಗ ನೀಡುತ್ತಿದ್ದಾರೆ' ಎಂದಿದ್ದಾರೆ.

ಸೆಮಿ ಸ್ಥಾನಕ್ಕೆ ಅಫ್ಗನ್–ಆಸ್ಟ್ರೇಲಿಯಾ ಸೆಣಸು

- ಇಂದಿನ ನಿರ್ಣಾಯಕ ಪಂದ್ಯಕ್ಕೂ ಮಳೆ ಭೀತಿ
- ಮತ್ತೊಂದು ಅಚ್ಚರಿಯ ನಿರೀಕ್ಷೆಯಲ್ಲಿ ಹಷ್ಮತ್ ಪಡೆ

ಅಫ್ಗಾನಿಸ್ತಾನದ ಇಬ್ರಾಹಿಂ ಜದ್ರಾನ್

ಲಾಹೋರ್, ಪಾಕಿಸ್ತಾನ (ಎಎಫ್‌ಪಿ): ಇಂಗ್ಲೆಂಡ್ ತಂಡವನ್ನು ಸೋಲಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಿಂದ ಹೊರದೂಡಿರುವ ಉತ್ಸಾಹ ದಲ್ಲಿರುವ ಅಫ್ಗಾನಿಸ್ತಾನ ಈಗ ಆಸ್ಟ್ರೇಲಿಯಾದ ತಂಡದ ಕಡೆ ತನ್ನ ಗುರಿಯನ್ನು ನೆಟ್ಟಿದೆ. ಸೆಮಿಫೈನಲ್‌ಗೆ ಸ್ಥಾನ ನಿರ್ಧರಿಸುವ 'ಬಿ' ಗುಂಪಿನ ನಿರ್ಣಾಯಕ ಪಂದ್ಯದಲ್ಲಿ ಹಷ್ಮತ್‌ವುಲ್ಲಾ ಶಾಹಿದಿ ಬಳಗವು ಶುಕ್ರವಾರ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ.

ಚಾಂಪಿಯನ್ಸ್ ಟ್ರೋಫಿಗೆ ಪದಾರ್ಪಣೆ ಮಾಡಿರುವ ಅಫ್ಗನ್ ಪಡೆ ಇಲ್ಲಿನ ಗಡಾಫಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ರೋಚಕ ಹೋರಾಟದಲ್ಲಿ ಎಂಟು ರನ್‌ಗಳಿಂದ ಸೋಲಿಸಿ ಅಚ್ಚರಿಯ ಫಲಿತಾಂಶ ನೀಡಿತ್ತು. ಭಾರತದಲ್ಲಿ ನಡೆದ 2023ರ ಏಕದಿನ ವಿಶ್ವಕಪ್‌ನಲ್ಲೂ ಆಗ ಹಾಲಿ ಚಾಂಪಿಯನ್ ಆಗಿದ್ದ ಇಂಗ್ಲೆಂಡ್ ತಂಡಕ್ಕೆ ಅಫ್ಗಾನಿಸ್ತಾನ ತಂಡವು ಸೋಲುಣಿಸಿತ್ತು.

ಎಂಟು ರಾಷ್ಟ್ರಗಳ ಈ ಟೂರ್ನಿಯಲ್ಲಿ ನಾಲ್ಕರ ಘಟ್ಟ ತಲುಪಬೇಕಾದರೆ ಅಫ್ಗನ್ನರಿಗೆ ಕೊನೆಯ ಲೀಗ್ ಪಂದ್ಯದಲ್ಲಿ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ಮೇಲೆ ಗೆಲುವು ಅನಿವಾರ್ಯ. ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ 3 ಅಂಕ ಹೊಂದಿದೆ. ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ತಂಡದ 351 ರನ್‌ಗಳ ದೊಡ್ಡ ಮೊತ್ತ ಬೆನ್ನಟ್ಟಿ ಜಯಗಳಿಸಿತ್ತು. ದಕ್ಷಿಣ ಆಫ್ರಿಕಾ ವಿರುದ್ಧ ಆ ತಂಡದ ಎರಡನೇ ಪಂದ್ಯ ಮಳೆಯ ಪಾಲಾಗಿತ್ತು.

'ಇಂಥ ಗೆಲುವು ತಂಡದ ವಿಶ್ವಾಸ ಹೆಚ್ಚಿಸಿ ಬಲ ತುಂಬುತ್ತದೆ' ಎಂದು ಶಾಹಿದಿ, ಇಂಗ್ಲೆಂಡ್ ಮೇಲಿನ ಗೆಲುವಿನ ನಂತರ ಪ್ರತಿಕ್ರಿಯಿಸಿದ್ದಾರೆ. 'ಮುಂಬರುವ ಪಂದ್ಯ ಸೆಮಿಫೈನಲ್ ದೃಷ್ಟಿಯಿಂದ ಉಭಯ ತಂಡಗಳಿಗೂ ಮಹತ್ವದ್ದು. ಆಸ್ಟ್ರೇಲಿಯಾ ಎದುರಿಸಲು ಕಠಿಣ ಮತ್ತು ಉತ್ತಮ ತಂಡ' ಎಂದಿದ್ದಾರೆ. ಸೆಮಿಫೈನಲ್ ಧ್ಯಾನದಲ್ಲೇ ಒತ್ತಡ ತಂದುಕೊಳ್ಳಲು ನಾವು ಬಯಸುವುದಿಲ್ಲ ಎಂಬ ಮಾತನ್ನೂ ಆಡಿದ್ದಾರೆ.

ಮಳೆಯಾದರೂ ಅಫ್ಗನ್ನರ ಕನಸು ಜೀವಂತವಾಗಿ ಉಳಿಯಲಿದೆ. ಆದರೆ ಅದರ ಭವಿಷ್ಯ ಇನ್ನೊಂದು ಪಂದ್ಯದ ಫಲಿತಾಂಶ ಮತ್ತು ನೆಟ್ ರನ್ ರೇಟ್ ಮೇಲೆ ಅವಲಂಬಿತವಾಗಿದೆ.

'ನಮ್ಮ ಸಿದ್ಧತೆಯ ಬಹುಭಾಗ ಟೂರ್ನಿಗೆ ಮೊದಲೇ ಆಗಿದೆ. ಶುಕ್ರವಾರದ ಪಂದ್ಯದಲ್ಲಿ ಗೆಲುವಿಗೆ ಯತ್ನಿಸಿ ಪ್ರೇಕ್ಷಕರ ಸದ್ದಡಗಿಸು ವಂತೆ ಆಡುವುದು ನಮ್ಮ ಗುರಿ' ಎಂದು ಆಸ್ಟ್ರೇಲಿಯಾ ತಂಡದ ಮಾರ್ನಸ್ ಲಾಬುಷೇನ್ ಹೇಳಿದ್ದಾರೆ.

ಅಫ್ಗಾನಿಸ್ತಾನ ಮತ್ತು ಆಸ್ಟ್ರೇಲಿಯಾ ತಂಡಗಳು ಈ ಹಿಂದೆ ನಾಲ್ಕು ಏಕದಿನ ಪಂದ್ಯಗಳಲ್ಲಿ ಎದುರಾಗಿದ್ದು, ಎಲ್ಲದರಲ್ಲೂ ಆಸ್ಟ್ರೇಲಿಯಾ ಜಯಗಳಿಸಿದೆ. 2023ರ ವಿಶ್ವ-ಕಪ್‌ನಲ್ಲಿ ಆಸ್ಟ್ರೇಲಿಯಾವನ್ನು, ಅಫ್ಗನ್ ಪಡೆ ಒಂದು ಹಂತದಲ್ಲಿ 7 ವಿಕೆಟ್‌ಗೆ 91 ರನ್‌ಗಳಿಗೆ ಸೀಮಿತಗೊಳಿಸಿ ನಡುಕಹುಟ್ಟಿಸಿತ್ತು. ಆದರೆ ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಪವಾಡಸದೃಶ ಅಜೇಯ ದ್ವಿಶತಕ ಹೊಡೆದು ಅಫ್ಗಾನಿಸ್ತಾನದ ಕೈಯಲ್ಲಿದ್ದ ಪಂದ್ಯವನ್ನು ಕಸಿದುಕೊಂಡಿದ್ದರು.

ಹೋದ ವರ್ಷ ಟಿ20 ವಿಶ್ವಕಪ್‌ನಲ್ಲಿ ಅಫ್ಗನ್, ಇದೇ ಎದುರಾಳಿಯನ್ನು ಸೋಲಿಸಿ ಮೊದಲ ಬಾರಿ ಸೆಮಿಫೈನಲ್ ತಲುಪಿ ಕ್ರಿಕೆಟ್ ಅಭಿಮಾನಿಗಳ ಗಮನ ಸೆಳೆದಿತ್ತು.

ಈ ಟೂರ್ನಿಯ ಮೊದಲ ಪಂದ್ಯದಲ್ಲಿ ಅಫ್ಗನ್ನರು, ಹರಿಣಗಳ ತಂಡಕ್ಕೆ 107 ರನ್‌ಗಳಿಂದ ಸೋತರೂ ಪುಟಿದೆದ್ದು, ಇಂಗ್ಲೆಂಡ್ ವಿರುದ್ಧ ಹೋರಾಡಿ ಜಯಗಳಿಸಿದ್ದು ತಮ್ಮನ್ನು ಕಡೆಗಣಿಸುವಂತಿಲ್ಲ ಎಂದು ಸಾರಿದ್ದಾರೆ. 23 ವರ್ಷದ ಇಬ್ರಾಹಿಂ ಜದ್ರಾನ್ ಅವರ 177 ರನ್‌ಗಳು ಟೂರ್ನಿಯ ಅತ್ಯಧಿಕ ಎನಿಸಿದೆ.

ಮಳೆ ಭೀತಿ: ಈ ಮಹತ್ವದ ಪಂದ್ಯಕ್ಕೂ ಮಳೆಯಿಂದ ಅಡ್ಡಿಯಾಗುವ ಸಾಧ್ಯತೆಯಿದೆ. ಲಾಹೋರ್‌ನಲ್ಲಿ ಶುಕ್ರವಾರ ಬೆಳಿಗ್ಗೆ ಮಳೆಯಾಗುವ ಮುನ್ಸೂಚನೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಪಂದ್ಯ ರದ್ದಾದರೆ ಉಭಯ ತಂಡಗಳಿಗೆ ತಲಾ ಒಂದು ಅಂಕ ಸಿಗಲಿದೆ.

ಆಸ್ಟ್ರೇಲಿಯಾದ ಜೋಶ್ ಇಂಗ್ಲಿಸ್

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಚಾಂಪಿಯನ್ಸ್ ಟ್ರೋಫಿ ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಗುಂಪು ಎ						
ನ್ಯೂಜಿಲೆಂಡ್	2	2	0	0	4	0.863
ಭಾರತ	2	2	0	0	4	0.647
ಬಾಂಗ್ಲಾದೇಶ	3	0	2	1	1	-0.443
ಪಾಕಿಸ್ತಾನ	3	0	2	1	1	-1.087
ಗುಂಪು ಬಿ						
ದಕ್ಷಿಣ ಆಫ್ರಿಕಾ	2	1	0	1	3	2.140
ಆಸ್ಟ್ರೇಲಿಯಾ	2	1	0	1	3	0.475
ಅಫ್ಗಾನಿಸ್ತಾನ	2	1	1	0	2	-0.990
ಇಂಗ್ಲೆಂಡ್	2	0	2	0	0	-0.305

ತಲಾ ಒಂದು ಅಂಕ ಪಡೆದು ಹೊರನಡೆದ ತಂಡಗಳು
ಬಾಂಗ್ಲಾ–ಪಾಕ್ ಆಟಕ್ಕೆ ಮಳೆ ಅಡ್ಡಿ

ಪಾಕಿಸ್ತಾನ ತಂಡದ ಆಟಗಾರರಾದ ಹ್ಯಾರಿಸ್ ರವೂಫ್, ಇಮಾಮ್ ಉಲ್ ಹಕ್ ಹಾಗೂ ಅಂಪೈರ್ ಮೈಕೆಲ್ ಗಾಫ್ ಅವರು ಪಿಚ್ ಪರಿಶೀಲಿಸಿದರು –ಎಎಫ್‌ಪಿ ಚಿತ್ರ

ರಾವಲ್ಪಿಂಡಿ (ಪಿಟಿಐ): ಈಗಾಗಲೇ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಹಾದಿಯಿಂದ ಹೊರಬಿದ್ದಿರುವ ಆತಿಥೇಯ ಪಾಕಿಸ್ತಾನ ಮತ್ತು ಬಾಂಗ್ಲಾದೇಶ ತಂಡಗಳು ಗುರುವಾರ ಆಡಲಿದ್ದ ಪಂದ್ಯವು ಮಳೆಯಿಂದಾಗಿ ರದ್ದಾಯಿತು.

29 ವರ್ಷಗಳ ನಂತರ ಪಾಕಿಸ್ತಾನವು ಐಸಿಸಿ ಟ್ರೋಫಿ ಟೂರ್ನಿಯನ್ನು ಆಯೋಜಿಸಿದೆ. ಆದರೆ ಎ ಗುಂಪು ಹಂತದಲ್ಲಿ ಒಂದೇ ಒಂದು ಪಂದ್ಯ ಜಯಿಸದೇ ಹೊರಬಿದ್ದಿತು. ಮೊದಲೆರಡು ಪಂದ್ಯಗಳಲ್ಲಿ ನ್ಯೂಜಿಲೆಂಡ್ ಮತ್ತು ಭಾರತದ ಎದುರು ಸೋತಾಗಲೇ ಮೊಹಮ್ಮದ್ ರಿಜ್ವಾನ್ ನಾಯಕತ್ವದ ಪಾಕ್ ಹೊರಬಿದ್ದಿತ್ತು. ಬಾಂಗ್ಲಾ ಎದುರು ಸಮಾಧಾನಕರ ಜಯಗಳಿಸುವ ಯೋಚನೆಯಲ್ಲಿತ್ತು. ಆದರೆ ಅದಕ್ಕೆ ಮಳೆ ಆಸ್ಪದ ಕೊಡಲಿಲ್ಲ. ಬಾಂಗ್ಲಾ ಕೂಡ ಕಳೆದ ಎರಡೂ ಪಂದ್ಯಗಳಲ್ಲಿ ಸೋತಿತ್ತು.

ಉಭಯ ತಂಡಗಳಿಗೂ ತಲಾ ಒಂದು ಅಂಕ ನೀಡಲಾಯಿತು. ತವರಿನಲ್ಲಿಯೇ ಹೀನಾಯ ಸೋಲು ಅನುಭವಿಸಿದ ಪಾಕ್ ತಂಡವು ಅಭಿಮಾನಿಗಳ ಕೆಂಗಣ್ಣಿಗೆ ಗುರಿಯಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಟೀಕೆಗಳ ಮಹಾಪೂರವೇ ಹರಿಯುತ್ತಿದೆ.

ಈ ಟೂರ್ನಿಯಲ್ಲಿ ಮಳೆಯಿಂದಾಗಿ ರದ್ದಾಗಿರುವ ಎರಡನೇ ಪಂದ್ಯ ಇದಾಗಿದೆ. ರಾವಲ್ಪಿಂಡಿಯಲ್ಲಿಯೇ ನಡೆಯಬೇಕಿದ್ದ ದಕ್ಷಿಣ ಆಫ್ರಿಕಾ – ಆಸ್ಟ್ರೇಲಿಯಾ ಪಂದ್ಯವೂ ಈಚೆಗೆ ರದ್ದಾಗಿತ್ತು.

ಶತಕಗಳ ದಾಖಲೆ

ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಈ ಬಾರಿ ಶತಕಗಳ ದಾಖಲೆಯಾಗಿದೆ. ಈ ಹಿಂದಿನ ಎರಡು ಆವೃತ್ತಿಗಳಲ್ಲಿ (2002 ಮತ್ತು 2017) ತಲಾ 10 ಶತಕಗಳು ದಾಖಲಾಗಿದ್ದವು. ಆದರೆ ಈ ಸಲ ಟೂರ್ನಿ ಲೀಗ್ ಹಂತದಲ್ಲಿರುವಾಗಲೇ 11 ಶತಕಗಳು ಮೂಡಿಬಂದಿವೆ. ಪ್ರಸಕ್ತ ಟೂರ್ನಿಯಲ್ಲಿ ಇದುವರೆಗೆ ಏಳು ಪಂದ್ಯಗಳು ನಡೆದಿದ್ದು, ಗುರುವಾರದ ಪಾಕಿಸ್ತಾನ– ಬಾಂಗ್ಲಾದೇಶ ಪಂದ್ಯ ಸೇರಿ ಎರಡು ಪಂದ್ಯಗಳು ಮಳೆಯ ಪಾಲಾಗಿವೆ.

2025ರ ಚಾಂಪಿಯನ್ಸ್ ಟ್ರೋಫಿಯಲ್ಲಿ ಶತಕಗಳು

ಆಟಗಾರ	ತಂಡ	ಎದುರಾಳಿ	ರನ್
ವಿಲ್ ಯಂಗ್	ನ್ಯೂಜಿಲೆಂಡ್	ಪಾಕಿಸ್ತಾನ	107
ಟಾಮ್ ಲೇಥಮ್	ನ್ಯೂಜಿಲೆಂಡ್	ಪಾಕಿಸ್ತಾನ	118*
ತೌಹಿದ್ ಹೃದಯ್	ಬಾಂಗ್ಲಾದೇಶ	ಭಾರತ	100
ಶುಭಮನ್ ಗಿಲ್	ಭಾರತ	ಬಾಂಗ್ಲಾದೇಶ	101*
ರಯಾನ್ ರಿಕೆಲ್ಟನ್	ದಕ್ಷಿಣ ಆಫ್ರಿಕಾ	ಅಫ್ಗಾನಿಸ್ತಾನ	103
ಬೆನ್ ಡಕೆಟ್	ಇಂಗ್ಲೆಂಡ್	ಆಸ್ಟ್ರೇಲಿಯಾ	165
ಜೋಶ್ ಇಂಗ್ಲಿಸ್	ಆಸ್ಟ್ರೇಲಿಯಾ	ಇಂಗ್ಲೆಂಡ್	120*
ವಿರಾಟ್ ಕೊಹ್ಲಿ	ಭಾರತ	ಪಾಕಿಸ್ತಾನ	100*
ರಚಿನ್ ರವೀಂದ್ರ	ನ್ಯೂಜಿಲೆಂಡ್	ಬಾಂಗ್ಲಾದೇಶ	112
ಇಬ್ರಾಹಿಂ ಜದ್ರಾನ್	ಅಫ್ಗಾನಿಸ್ತಾನ	ಇಂಗ್ಲೆಂಡ್	177
ಜೋ ರೂಟ್	ಇಂಗ್ಲೆಂಡ್	ಅಫ್ಗಾನಿಸ್ತಾನ	120

ಸಂಕ್ಷಿಪ್ತ ಸುದ್ದಿ

ಗಿಲ್ ಅಭ್ಯಾಸ

ದುಬೈ (ಪಿಟಿಐ): ಭಾರತದ ಆರಂಭಿಕ ಆಟಗಾರ ಶುಭಮನ್ ಗಿಲ್ ಅವರು ಗುರುವಾರ ಬ್ಯಾಟಿಂಗ್ ಅಭ್ಯಾಸ ನಡೆಸುವ ಮೂಲಕ ಮುಂದಿನ ಪಂದ್ಯಕ್ಕೆ ಲಭ್ಯತೆಯ ಕುರಿತ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ.

ಐಸಿಸಿ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಭಾರತ ತಂಡವು ಭಾನುವಾರ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ. ತಂಡದ ಅಭ್ಯಾಸಕ್ಕೆ ಗುರುವಾರ ವಿರಾಮವಿದ್ದರೂ ಗಿಲ್ ಅವರು ಸಹಾಯಕ ಸಿಬ್ಬಂದಿಯೊಂದಿಗೆ ತಾಲೀಮು ನಡೆಸಿದರು.

ವಿಶ್ವದ ಅಗ್ರಮಾನ್ಯ ಬ್ಯಾಟರ್ ಆಗಿರುವ ಗಿಲ್ ಬುಧವಾರ ತಂಡದ ಪ್ರಾಕ್ಟೀಸ್ ವೇಳೆ ಕಾಣಿಸಿಕೊಂಡಿರಲಿಲ್ಲ. ಹೀಗಾಗಿ, ಮುಂದಿನ ಪಂದ್ಯಕ್ಕೆ ಅವರ ಲಭ್ಯತೆ ಕುರಿತು ಅನುಮಾನ ಮೂಡಿತ್ತು.

ಸೆಪ್ಟೆಂಬರ್‌ನಲ್ಲಿ ಏಷ್ಯಾ ಕಪ್ ಕ್ರಿಕೆಟ್?

ನವದೆಹಲಿ (ಪಿಟಿಐ): 2026ರ ಟಿ20 ವಿಶ್ವಕಪ್‌ಗೆ ಸಿದ್ಧತಾ ಟೂರ್ನಿಯ ರೂಪದಲ್ಲಿರುವ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿ ಇದೇ ವರ್ಷದ ಸೆಪ್ಟೆಂಬರ್‌ನಲ್ಲಿ ನಡೆಯುವ ಸಾಧ್ಯತೆಯಿದೆ. ಭಾರತ ಆತಿಥ್ಯದ ಹಕ್ಕುಗಳನ್ನು ಪಡೆದಿದ್ದರೂ, ಟೂರ್ನಿಯು ತಟಸ್ಥ ತಾಣದಲ್ಲಿ ನಡೆಯುವ ಸಾಧ್ಯತೆಯಿದೆ.

ತನಿಷ್ಕಾಗೆ ಪ್ರಶಸ್ತಿ

ವಡೋದರ (ಪಿಟಿಐ): ಕರ್ನಾಟಕದ ತನಿಷ್ಕಾ ಕಾಲಭೈರವ್, ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ಟೂರ್ನಿಯ 13 ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್‌ನಲ್ಲಿ ಗುರುವಾರ ತನಗಿಂತ ಮೇಲಿನ ಕ್ರಮಾಂಕದ ಆರಾಧ್ಯಾ ಧಿಂಗ್ರಾ ಅವರನ್ನು 3–0 ಯಿಂದ ಸೋಲಿಸಿ ಪ್ರಶಸ್ತಿ ಗೆದ್ದುಕೊಂಡರು.

ಕೇರಳಕ್ಕೆ ಆದಿತ್ಯ ಸರವಟೆ ಆಸರೆ
ರಣಜಿ ಫೈನಲ್ ಕ್ರಿಕೆಟ್: ಇನಿಂಗ್ಸ್ ಮುನ್ನಡೆಗಾಗಿ ಹೋರಾಟ

ನಾಗ್ಪುರ (ಪಿಟಿಐ): ಕೇರಳ ತಂಡವನ್ನು ಪ್ರತಿನಿಧಿಸುತ್ತಿರುವ ನಾಗ್ಪುರ ಮೂಲದ ಆದಿತ್ಯ ಸರವಟೆ ಅಜೇಯ ಅರ್ಧಶತಕ ಗಳಿಸಿದರು. ಅದರೊಂದಿಗೆ ವಿದರ್ಭ ಎದುರಿಗಿನ ರಣಜಿ ಟ್ರೋಫಿ ಫೈನಲ್ ಪಂದ್ಯದಲ್ಲಿ ಕೇರಳ ತಂಡದ ಮರುಹೋರಾಟಕ್ಕೆ ಬಲ ತುಂಬಿದರು.

ವಿದರ್ಭ ಕ್ರಿಕೆಟ್ ಸಂಸ್ಥೆ (ವಿಸಿಎ) ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನವಾದ ಗುರುವಾರ ಮೊದಲ ಇನಿಂಗ್ಸ್‌ನಲ್ಲಿ ವಿದರ್ಭ ತಂಡವು 123.1 ಓವರ್‌ಗಳಲ್ಲಿ 379 ರನ್ ಗಳಿಸಿತು.

ಇದಕ್ಕುತ್ತರವಾಗಿ ಕೇರಳ ತಂಡವು ದಿನದಾಟದ ಮುಕ್ತಾಯಕ್ಕೆ 39 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 131 ರನ್ ಗಳಿಸಿತು. ಮೊದಲ ಇನಿಂಗ್ಸ್ ಮೊತ್ತ ಚುಕ್ತಾ ಮಾಡಲು ಕೇರಳ ತಂಡಕ್ಕೆ ಇನ್ನೂ 248 ರನ್‌ಗಳ ಅಗತ್ಯವಿದೆ. ಆದಿತ್ಯ (ಬ್ಯಾಟಿಂಗ್ 66; 120ಎ, 4X10) ಹಾಗೂ ನಾಯಕ ಸಚಿನ್ ಬೇಬಿ (ಬ್ಯಾಟಿಂಗ್ 7; 23ಎ, 4X1) ಕ್ರೀಸ್‌ನಲ್ಲಿದ್ದಾರೆ.

ವಿದರ್ಭ ತಂಡದ ವೇಗಿ ದರ್ಶನ್ ನಲ್ಕಂಡೆ (22ಕ್ಕೆ2) ಅವರ ದಾಳಿಯಿಂದಾಗಿ ಕೇರಳ ತಂಡವು ಆರಂಭದಲ್ಲಿಯೇ ಪೆಟ್ಟು ತಿಂದಿತು. ಇನಿಂಗ್ಸ್‌ನ ಮೊದಲ ಓವರ್ ಮತ್ತು 3ನೇ ಓವರ್‌ನಲ್ಲಿ ದರ್ಶನ್ ಅವರು ಕ್ರಮವಾಗಿ ಆರಂಭಿಕ ಬ್ಯಾಟರ್ ಅಕ್ಷಯ್ ಚಂದ್ರನ್ ಮತ್ತು ರೋಹನ್ ಕುನ್ನುಮಲ್ ಅವರನ್ನು ಬೌಲ್ಡ್ ಮಾಡಿದರು.

ಈ ಹಂತದಲ್ಲಿ ಆದಿತ್ಯ ಮತ್ತು ಅಹಮದ್ ಇಮ್ರಾನ್ (37; 83ಎ, 4X3) ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 93 ರನ್ ಸೇರಿಸಿದರು. ಇದರಿಂದಾಗಿ ತಂಡವು ಚೇತರಿಸಿಕೊಂಡಿತು.

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಗುರುವಾರ ಕೇರಳದ ಆದಿತ್ಯ ಸರವಟೆ ಮತ್ತು ಅಹಮ್ಮದ್ ಇಮ್ರಾನ್ ಜೊತೆಯಾಟ–ಪಿಟಿಐ ಚಿತ್ರ

ತಾಳ್ಮೆ ಮತ್ತು ಏಕಾಗ್ರತೆಯಿಂದ ಬ್ಯಾಟಿಂಗ್ ಮಾಡಿದ ಆದಿತ್ಯ, ವಿದರ್ಭ ತಂಡದ ಬೌಲರ್‌ಗಳ ಉತ್ತಮ ದಾಳಿಯ ಮುಂದೆ ನೆಲಕಚ್ಚಿ ಆಡಿದರು.

ವಿದರ್ಭ ತಂಡವು ಮೊದಲ ದಿನದಾಟದಲ್ಲಿ 4ಕ್ಕೆ254 ರನ್ ಗಳಿಸಿತ್ತು. ದಾನಿಶ್ ಮಾಲೇವರ್ ಶತಕ ಮತ್ತು ಕರುಣ್ ನಾಯರ್ ಅರ್ಧಶತಕ ಗಳಿಸಿದ್ದರು. ದಾನಿಶ್ ಕ್ರೀಸ್‌ನಲ್ಲಿದ್ದರು. 400 ರನ್‌ಗಳಿಗಿಂತ ಹೆಚ್ಚಿನ ಮೊತ್ತವನ್ನು ದಾಖಲಿಸುವತ್ತ ಚಿತ್ತ ನೆಟ್ಟಿದ್ದ ಆತಿಥೇಯ ತಂಡಕ್ಕೆ ಕೇರಳದ ಬೌಲರ್ ನಿಧೀಶ್ (61ಕ್ಕೆ3), ಏಡನ್ ಆ್ಯಪಲ್ ಟೋಮ್ (102ಕ್ಕೆ3) ಮತ್ತು ಬಾಸಿಲ್ (60ಕ್ಕೆ2) ಅಡ್ಡಿಯಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವಿದರ್ಭ: 123.1 ಓವರ್‌ಗಳಲ್ಲಿ 379 (ದಾನಿಶ್ ಮಾಲೇವರ್ 153, ಯಶ್ ಠಾಕೂರ್ 25, ಅಕ್ಷಯ್ ವಾಡಕರ್ 23, ನಚಿಕೇತ್ ಭೂತೆ 32, ನಿಧೀಶ್ 61ಕ್ಕೆ3, ಈಡನ್ ಆ್ಯಪಲ್ 102ಕ್ಕೆ3, ನೆಡುಮಾಂಕುಳಿ ಬಾಸಿಲ್ 60ಕ್ಕೆ2) ಕೇರಳ: 39 ಓವರ್‌ಗಳಲ್ಲಿ 3ಕ್ಕೆ131 (ಆದಿತ್ಯ ಸರವಟೆ ಬ್ಯಾಟಿಂಗ್ 66, ಅಹಮದ್ ಇಮ್ರಾನ್ 37, ದರ್ಶನ್ ನಲ್ಕಂಡೆ 22ಕ್ಕೆ2, ಯಶ್ ಠಾಕೂರ್ 45ಕ್ಕೆ1)

ಅಗ್ರ ಬ್ಯಾಟರ್‌ಗಳ ವೈಫಲ್ಯ • ಆರ್‌ಸಿಬಿಗೆ ಸತತ ಮೂರನೇ ಸೋಲು
ಗಾರ್ಡನರ್ ಆಲ್‌ರೌಂಡ್ ಆಟಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಜಯವನ್ನು ಕಣ್ತುಂಬಿ ಕೊಳ್ಳುವ ನಿರೀಕ್ಷೆಯೊಂದಿಗೆ ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಲಗ್ಗೆಯಿಟ್ಟಿದ್ದ ಅಭಿಮಾನಿಗಳ ಆಸೆ ಗುರುವಾರವೂ ಈಡೇರಲಿಲ್ಲ.

ಇಲ್ಲಿ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಟೂರ್ನಿಯ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಸ್ಮೃತಿ ಮಂದಾನ ಪಡೆಯು 6 ವಿಕೆಟ್‌ಗಳಿಂದ ಪರಾಭವಗೊಂಡಿತು. ಆರ್‌ಸಿಬಿಗೆ ತವರಿನಂಗಳದಲ್ಲಿ ಸತತ 3ನೇ ಸೋಲು ಇದಾಗಿದೆ. ಅಂಕ ಪಟ್ಟಿಯ ಕೊನೆಯ ಸ್ಥಾನದಲ್ಲಿರುವ ಗುಜರಾತ್ ಜೈಂಟ್ಸ್ ಎದುರು ಆರ್‌ಸಿಬಿಯ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ವಿಫಲರಾಗಿದ್ದೇ ಸೋಲಿಗೆ ಕಾರಣವಾಯಿತು.

ಟಾಸ್ ಗೆದ್ದ ಗುಜರಾತ್ ಜೈಂಟ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಜೈಂಟ್ಸ್ ಬೌಲರ್‌ಗಳು ಬೆಂಗಳೂರು ತಂಡವನ್ನು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 125 ರನ್‌ಗಳಿಗೆ ಕಟ್ಟಿಹಾಕುವಲ್ಲಿ ಯಶಸ್ವಿಯಾದರು.

ಗುರಿ ಬೆನ್ನಟ್ಟಿದ ಗುಜರಾತ್ ತಂಡವು 16.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 126 ರನ್ ಗಳಿಸಿತು. ತಂಡದ ನಾಯಕಿ ಆ್ಯಷ್ಲೆ ಗಾರ್ಡನರ್ (58; 31ಎಸೆತ, 4X,6, 6X3) ಮಿಂಚಿದರು.

ಗುಜರಾತ್ ತಂಡದ ಇನಿಂಗ್ಸ್‌ನ ಅರಂಭವೂ ಉತ್ತಮವಾಗಿರಲಿಲ್ಲ. ರೇಣುಕಾ ಸಿಂಗ್ (24ಕ್ಕೆ2) ಉತ್ತಮ ಬೌಲಿಂಗ್‌ನಿಂದಾಗಿ 32 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿತು. ಹರ್ಲೀನ್ ಡಿಯೋಲ್ ಕೂಡ ಹೆಚ್ಚು ಹೊತ್ತು ನಿಲ್ಲಲಿಲ್ಲ. ಆಗ ಕ್ರೀಸ್‌ನಲ್ಲಿ ಜೊತೆಗೂಡಿದ ಗಾರ್ಡನರ್ ಮತ್ತು ಫೋಯೆಬಿ ಲಿಚ್‌ಫೀಲ್ಡ್ (ಔಟಾಗದೇ 30) ತಂಡದ ಹೋರಾಟಕ್ಕೆ ಶಕ್ತಿ ತುಂಬಿದರು.

ಆರ್‌ಸಿಬಿ ಕಡಿಮೆ ಮೊತ್ತ: ಆರ್‌ಸಿಬಿ ತಂಡವು ಡಬ್ಲ್ಯುಪಿಎಲ್‌ನಲ್ಲಿ ಎರಡನೇ ಬಾರಿ ಗಳಿಸಿದ ಅತಿ ಕಡಿಮೆ ಮೊತ್ತ ಇದಾಗಿದೆ. 2023ರಲ್ಲಿ ಮುಂಬೈನಲ್ಲಿ ನಡೆದಿದ್ದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಎದುರು ಇಷ್ಟೇ ಮೊತ್ತವನ್ನು ಗಳಿಸಿತ್ತು.

ಈ ಪಂದ್ಯದಲ್ಲಿ ಜೈಂಟ್ಸ್ ತಂಡಕ್ಕೆ ಆರಂಭದಲ್ಲಿಯೇ ಅದೃಷ್ಟ ಖುಲಾಯಿಸಿತು. ದಿಯಾಂದ್ರಾ ಡಾಟಿನ್ ಹಾಕಿದ ಮೊದಲ ಓವರ್‌ನಲ್ಲಿಯೇ ವೈಟ್ ಹಾಜ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಆಗ ಕ್ರೀಸ್‌ಗೆ ಎಲಿಸ್ ಪೆರಿ ಬಂದಾಗ ಭರವಸೆ ಚಿಗುರಿತ್ತು. ಕಳೆದೆರಡೂ ಪಂದ್ಯಗಳಲ್ಲಿ ಎಲಿಸ್ ಅವರೇ ಚೆಂದದ ಅರ್ಧಶತಕಗಳ ಮೂಲಕ ಆರ್‌ಸಿಬಿ ಸ್ಪರ್ಧಾತ್ಮಕ ಮೊತ್ತ ಗಳಿಸಲು ಕಾರಣರಾಗಿದ್ದರು. ಆದರೆ ಇಲ್ಲಿ ಅವರಿಗೆ ಖಾತೆ ತೆರೆಯಲೂ ಗಾರ್ಡನರ್ ಬಿಡಲಿಲ್ಲ.

ನಾಯಕಿ ಸ್ಮೃತಿ (10 ರನ್) ವೈಫಲ್ಯ ಮುಂದುವರಿಯಿತು. ಈ ಹಂತದಲ್ಲಿ ಜೊತೆಗೂಡಿದ ರಾಘವಿ ಬಿಷ್ಟ್ (22; 19ಎ) ಮತ್ತು ಕನಿಕಾ ಅಹುಜಾ (33; 28ಎ) ಇನಿಂಗ್ಸ್‌ಗೆ ತುಸು ಚೇತರಿಕೆ ನೀಡಿದರು. ಸ್ಪಿನ್ನರ್ ಪ್ರಿಯಾ ಮಿಶ್ರಾ ಹಾಕಿದ ಓವರ್‌ನಲ್ಲಿ ರಾಘವಿ ಮತ್ತು ಕನಿಕಾ ಸೇರಿ 18 ರನ್ ಸೂರೆ ಮಾಡಿದರು.

ಆದರೆ 12ನೇ ಓವರ್‌ನಲ್ಲಿ ಭಾರತಿ ಫೂಲ್‌ಮಾಲಿ ತೋರಿದ ಚಾಕಚಕ್ಯತೆ ಮತ್ತು ಸಮಯಪ್ರಜ್ಞೆಯಿಂದಾಗಿ ರಾಘವಿ ರನ್‌ಔಟ್ ಆದರು.

ಸಂಕ್ಷಿಪ್ತ ಸ್ಕೋರು: ರಾಯಲ್ ಚಾಲೆಂಜರ್ಸ್ ಬೆಂಗಳೂರು: 20 ಓವರ್‌ಗಳಲ್ಲಿ 7ಕ್ಕೆ 125 (ರಾಘವಿ ಬಿಷ್ಟ್ 22, ಕನಿಕಾ ಅಹುಜಾ 33, ಜಾರ್ಜಿಯಾ ವೇರ್‌ಹ್ಯಾಮ್ ಔಟಾಗದೇ 20, ಕಿಮ್ ಗಾರ್ಥ್ 14, ದಿಯಾಂದ್ರ ಡಾಟಿನ್ 31ಕ್ಕೆ2, ತನುಜಾ ಕನ್ವರ್ 16ಕ್ಕೆ2) ಗುಜರಾತ್ ಜೈಂಟ್ಸ್ : 16.3 ಓವರ್‌ಗಳಲ್ಲಿ 4ಕ್ಕೆ126 (ಆ್ಯಷ್ಲೆ ಗಾರ್ಡನರ್ 58, ಫೋಯೆಬಿ ಲಿಚ್‌ಫೀಲ್ಡ್ ಔಟಾಗದೇ 30, ರೇಣುಕಾ ಠಾಕೂರ್ 24ಕ್ಕೆ2, ಜಾರ್ಜಿಯಾ ವೇರ್‌ಹ್ಯಾಮ್ 26ಕ್ಕೆ2). ಫಲಿತಾಂಶ: ಗುಜರಾತ್ ಜೈಂಟ್ಸ್‌ಗೆ 6 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ್ತಿ: ಆ್ಯಷ್ಲೆ ಗಾರ್ಡನರ್

ಅರ್ಧಶತಕ ಗಳಿಸಿದ ಆ್ಯಷ್ಲೆ ಗಾರ್ಡನರ್ ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಮಹಿಳಾ ಪ್ರೀಮಿಯರ್ ಲೀಗ್

ಇಂದಿನ ಪಂದ್ಯ
ಡೆಲ್ಲಿ ಕ್ಯಾಪಿಟಲ್ಸ್ Vs ಮುಂಬೈ ಇಂಡಿಯನ್ಸ್
ಪಂದ್ಯ ಆರಂಭ: ರಾತ್ರಿ 7.30
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಪಾಯಿಂಟ್ಸ್ ಪಟ್ಟಿ

ತಂಡಗಳು	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಮುಂಬೈ ಇಂಡಿಯನ್ಸ್	4	3	1	6	0.780
ಡೆಲ್ಲಿ ಕ್ಯಾಪಿಟಲ್ಸ್	5	3	2	6	-0.223
ರಾಯಲ್ ಚಾಲೆಂಜರ್ಸ್ ಬೆಂಗಳೂರು	5	2	3	4	0.155
ಯು.ಪಿ ವಾರಿಯರ್ಸ್	5	2	3	4	-0.124
ಗುಜರಾತ್ ಜೈಂಟ್ಸ್	5	2	3	4	-0.450

ಕ್ವಾರ್ಟರ್ ಫೈನಲ್‌ಗೆ ತರುಣ್, ಉನ್ನತಿ

ಜರ್ಮನಿ (ಪಿಟಿಐ): ಭಾರತದ ತರುಣ್ ಮನ್ನೆಪಲ್ಲಿ, ಉನ್ನತಿ ಹೂಡಾ ಮತ್ತು ರಕ್ಷಿತಾಶ್ರೀ ಸಂತೋಷ್ ರಾಮರಾಜ್ ಅವರು ಜರ್ಮನಿ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ತರುಣ್ ಪುರುಷರ ಸಿಂಗಲ್ಸ್‌ನ ಎರಡನೇ ಸುತ್ತಿನಲ್ಲಿ 21-14, 15-21, 21-17ರಿಂದ ಎಂಟನೇ ಶ್ರೇಯಾಂಕದ ಕೆನಡಾದ ಬ್ರಿಯಾನ್ ಯಾಂಗ್ ಅವರಿಗೆ ಆಘಾತ ನೀಡಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಉನ್ನತಿ 21-13, 21-19ರಿಂದ ಜಪಾನ್‌ನ ಅಸುಕಾ ತಕಹಶಿ ಅವರನ್ನು ಮಣಿಸಿದರು. ರಕ್ಷಿತಾಶ್ರೀ 21–17, 21–11ರಿಂದ ಹಾಂಗ್‌ಕಾಂಗ್‌ನ ಲೋ ಸಿನ್ ಯಾನ್ ಹ್ಯಾಪಿ ಅವರನ್ನು ಸೋಲಿಸಿದರು.

ಮಿಶ್ರ ಡಬಲ್ಸ್‌ನಲ್ಲಿ ಧ್ರುವ ಕಪಿಲಾ ಮತ್ತು ತನಿಶಾ ಕ್ರಾಸ್ಟೊ ಜೋಡಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಪ್ರಿಯಾಂಶು ರಾಜಾವತ್ ಮತ್ತು ಕಿರಣ್ ಜಾರ್ಜ್ ಎರಡನೇ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು.

ವರದಕ್ಷಿಣೆ ಕಿರುಕುಳ: ದೀಪಕ್ ಹೂಡಾ ವಿರುದ್ಧ ಬಾಕ್ಸರ್ ಸ್ವೀಟಿ ಬೂರಾ ದೂರು

ಚಂಡೀಗಢ (ಪಿಟಿಐ): ಅರ್ಜುನ ಪ್ರಶಸ್ತಿ ಪುರಸ್ಕೃತೆಯಾಗಿರುವ ಮಾಜಿ ವಿಶ್ವ ಚಾಂಪಿಯನ್ ಬಾಕ್ಸರ್ ಸ್ವೀಟಿ ಬೂರಾ ಅವರು ಪತಿ, ಏಷ್ಯನ್ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಕಬಡ್ಡಿ ಆಟಗಾರ ದೀಪಕ್ ಹೂಡಾ ಮತ್ತು ಅವರ ಕುಟುಂಬದ ವಿರುದ್ಧ ವರದಕ್ಷಿಣೆ ಕಿರುಕುಳ ದೂರು ದಾಖಲಿಸಿದ್ದಾರೆ.

ಇಬ್ಬರಿಬ್ಬರ ವಿವಾಹ 2022ರಲ್ಲಿ ನಡೆದಿತ್ತು. ಅರ್ಜುನ ಪ್ರಶಸ್ತಿ ಪುರಸ್ಕೃತರೂ ಆಗಿರುವ ಹೂಡಾ ವಿರುದ್ಧ ಹರಿಯಾಣದ ಹಿಸಾರ್‌ನಲ್ಲಿ ದೂರು ದಾಖಲಾಗಿದೆ. ವರದಕ್ಷಿಣೆ ತರುವಂತೆ ತಮ್ಮ ಮೇಲೆ ಹಲ್ಲೆ ನಡೆಸಲಾಗಿದೆ ಎಂದೂ ದೂರಿದ್ದಾರೆ.

'ಪತಿ ದೀಪಕ್ ಹೂಡಾ ವಿರುದ್ಧ ಸ್ವೀಟಿ ಬೂರಾ ಅವರ ಸಲ್ಲಿಸಿರುವ ದೂರಿನ ಮೇರೆಗೆ ಫೆ. 25ರಂದು ಎಫ್‌ಐಆರ್ ದಾಖಲಾಗಿದೆ' ಎಂದು ಮಹಿಳಾ ಪೊಲೀಸ್ ಠಾಣೆಯ ಸ್ಥಾನಿಕ ಅಧಿಕಾರಿ (ಎಸ್‌ಎಚ್‌ಒ) ಆಗಿರುವ ಸೀಮಾ ಗುರುವಾರ ಇಲ್ಲಿ ತಿಳಿಸಿದರು.

ಈ ಬಗ್ಗೆ ಹಾಜರಾಗುವಂತೆ ಹೂಡಾ ಅವರಿಗೆ ಸೂಚಿಸಲಾಗಿದೆಯೇ ಎಂಬ ಪ್ರಶ್ನೆಗೆ 'ಅವರಿಗೆ 2–3 ಸಲ ನೋಟಿಸ್ ನೀಡಿದ್ದೇವೆ. ಅವರು ಇನ್ನೂ ಹಾಜರಾಗಿಲ್ಲ' ಎಂದು ಸೀಮಾ ತಿಳಿಸಿದರು.

'ಈ ಬಗ್ಗೆ ಹೂಡಾ ಅವರನ್ನು ಸುದ್ದಿಸಂಸ್ಥೆ ಸಂಪರ್ಕಿಸಿದಾಗ ತಮ್ಮ ಗೈರುಹಾಜರಿ ಸಮರ್ಥಿಸಿಕೊಂಡರು. 'ಪ್ರಕರಣದಿಂದ ಮಾನಸಿಕ ಕ್ಷೋಭೆಗೆ ಒಳಗಾಗಿದ್ದೇನೆ' ಎಂದರು.

ಬೆಂಗಳೂರು ಓಪನ್: ಸೆಮಿಗೆ ರಾಮಕುಮಾರ್–ಸಾಕೇತ್ ಜೋಡಿ

ಕ್ವಾರ್ಟರ್ ಫೈನಲ್‌ಗೆ ಹಾಲ್ಟ್, ಹೈನೆಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಮೂರನೇ ಶ್ರೇಯಾಂಕದ ಬ್ರಾಂಡನ್ ಹಾಲ್ಟ್ ಅವರು ಬೆಂಗಳೂರು ಓಪನ್ ಎಟಿಪಿ ಚಾಲೆಂಜರ್ 125 ಮಟ್ಟದ ಟೂರ್ನಿಯ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಹಾಕಿದರು.

ಕಬ್ಬನ್ ಪಾರ್ಕ್‌ನ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ ಕೋರ್ಟ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ನಾಲ್ಕನೇ ದಿನವಾದ ಗುರುವಾರ ಸಿಂಗಲ್ಸ್ ಪ್ರಿ ಕ್ವಾರ್ಟರ್ ಫೈನಲ್‌ನ ರೋಚಕ ಹಣಾಹಣಿಯಲ್ಲಿ ಅಮೆರಿಕದ 26 ವರ್ಷ ವಯಸ್ಸಿನ ಬ್ರಾಂಡನ್ 5-7, 6-4, 6-4ರಿಂದ ಆಸ್ಟ್ರೇಲಿಯಾದ ಅನುಭವಿ ಆಟಗಾರ ಬರ್ನಾರ್ಡ್ ಟಾಮಿಕ್ ಅವರನ್ನು ಹಿಮ್ಮೆಟ್ಟಿಸಿದರು.

32 ವರ್ಷ ವಯಸ್ಸಿನ ಟಾಮಿಕ್ 2016ರಲ್ಲಿ ಜೀವನಶ್ರೇಷ್ಠ 17ನೇ ರ‍್ಯಾಂಕ್ ಪಡೆದಿದ್ದರು. ಪ್ರಸ್ತುತ 213ನೇ ಕ್ರಮಾಂಕ ಹೊಂದಿರುವ ಅವರು ಮೊದಲ ಸೆಟ್‌ನಲ್ಲಿ ಪಾರಮ್ಯ ಸಾಧಿಸಿದರು. ಆದರೆ, ನಂತರದ ಸೆಟ್‌ಗಳಲ್ಲಿ ಹಾಲ್ಟ್ ಮೇಲುಗೈ ಸಾಧಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಅವರು ರಷ್ಯಾದ ಪೆಟ್ರ್ ಬಾರ್ ಬಿರ್ಯುಕೋವ್ ಅವರನ್ನು ಎದುರಿಸಲಿದ್ದಾರೆ.

ಝೆಕ್ ಗಣರಾಜ್ಯದ ಹೈನೆಕ್ ಬಾರ್ಟನ್ ಆಟದ ವೈಖರಿ ಪ್ರಜಾವಾಣಿ ಚಿತ್ರ

ಝೆಕ್ ಗಣರಾಜ್ಯದ 20 ವರ್ಷ ವಯಸ್ಸಿನ ಹೈನೆಕ್ ಬಾರ್ಟನ್ ಗೆಲುವಿನ ಓಟವನ್ನು ಮುಂದುವರಿಸಿದರು. ಅವರು 7-6 (5), 6-3ರಿಂದ ಡೆನ್ಮಾರ್ಕ್‌ನ ಆಗಸ್ಟ್ ಹೋಲ್ಮ್ರೆನ್ ಅವರನ್ನು ಮಣಿಸಿ ಕಾರ್ಟರ್ ಫೈನಲ್ ಪ್ರವೇಶಿಸಿದರು. ಏಳನೇ ಶ್ರೇಯಾಂಕದ ಜಪಾನ್‌ನ ಶಿಂಟಾರೊ ಮೊಚಿಜುಕಿ 5-7, 6-1, 6-2ರಿಂದ ಬ್ರಿಟನ್‌ನ ಜೇ ಕ್ಲಾರ್ಕ್ ಅವರನ್ನು ಸೋಲಿಸಿ ಎಂಟರ ಘಟ್ಟ ಪ್ರವೇಶಿಸಿದರು.

ಸೆಮಿಗೆ ರಾಮಕುಮಾರ್–ಸಾಕೇತ್ ಜೋಡಿ: ಹಾಲಿ ಚಾಂಪಿಯನ್ಸ್ ಸಾಕೇತ್ ಮೈನೇನಿ ಮತ್ತು ರಾಮಕುಮಾರ್ ರಾಮನಾಥನ್ ಜೋಡಿಯು ಡಬಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿತು. ಎಂಟರ ಘಟ್ಟದ ಪಂದ್ಯದಲ್ಲಿ ಭಾರತದ ಈ ಜೋಡಿ 6-3, 6-3ರಿಂದ ಝೆಕ್ ಗಣರಾಜ್ಯದ ಹೈನೆಕ್ ಬಾರ್ಟನ್ ಮತ್ತು ಉಕ್ರೇನ್‌ನ ಎರಿಕ್ ವಾನ್ಶೆಲ್ಬೋಯಿಮ್ ಅವರನ್ನು ಮಣಿಸಿತು.

ಭಾರತದ ಮತ್ತೊಂದು ಜೋಡಿ ಸಿದ್ಧಾಂತ್ ಬಂಥಿಯಾ ಮತ್ತು ಪರೀಕ್ಷಿತ್ ಸೊಮಾನಿ ಜೋಡಿಯೂ ನಾಲ್ಕರ ಘಟ್ಟಕ್ಕೆ ಮುನ್ನಡೆಯಿತು. ಈ ಆಟಗಾರರು 7-5, 6-0 ಯಿಂದ ನಿಕೋಲಸ್ ಮೆಜಿಯಾ (ಕೊಲಂಬಿಯಾ) ಮತ್ತು ಬರ್ನಾರ್ಡ್ ಟಾಮಿಕ್ (ಆಸ್ಟ್ರೇಲಿಯಾ) ಜೋಡಿಯನ್ನು ಸೋಲಿಸಿದರು.

ಆದಿಲ್ ಕಲ್ಯಾಣಪುರ ಮತ್ತು ಕರಣ್ ಸಿಂಗ್ ಜೋಡಿ ಕ್ವಾರ್ಟರ್ ಫೈನಲ್‌ನಲ್ಲಿ ನಿರಾಸೆ ಅನುಭವಿಸಿತು. ಭಾರತದ ಜೋಡಿಯು 2–6, 4–6 ರಿಂದ ಎರಡನೇ ಶ್ರೇಯಾಂಕದ ಬ್ಲೇಕ್ ಬೇಲ್ಡನ್ ಮತ್ತು ಮ್ಯಾಥ್ಯೂ ಕ್ರಿಸ್ಟೋಫರ್ ರೋಮಿಯೋಸ್ ಜೋಡಿಗೆ ತಲೆಬಾಗಿತು.

ಡಿಡಿ ಸ್ಪೋರ್ಟ್ಸ್‌ನಲ್ಲಿ ನೇರಪ್ರಸಾರ: ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಪ್ರಮುಖ ಕ್ಷಣಗಳನ್ನು ಪ್ರೇಕ್ಷಕರಿಗೆ ತಲುಪಿಸಲು ದೂರದರ್ಶನ ಸ್ಪೋರ್ಟ್ಸ್ ಜೊತೆ ಪಾಲುದಾರಿಕೆ ಒಪ್ಪಂದ ಮಾಡಲಾಗಿದೆ ಎಂದು ಟೂರ್ನಿಯ ನಿರ್ದೇಶಕ ಸುನಿಲ್ ಯಜಮಾನ್ ತಿಳಿಸಿದ್ದಾರೆ.

ಶುಕ್ರವಾರದಿಂದ ಮಾರ್ಚ್ 2ರವರೆಗೆ ನಡೆಯುವ ಪಂದ್ಯಗಳು ಡಿಡಿ ಸ್ಪೋರ್ಟ್ಸ್ ವಾಹಿನಿಯಲ್ಲಿ ನೇರಪ್ರಸಾರ ಇರಲಿದೆ. ಎಟಿಪಿ ವೆಬ್‌ಸೈಟ್ ಮತ್ತು ಡಫಾನ್ಯೂಸ್ ಬೆಂಗಳೂರು ಓಪನ್ ಅಪ್ಲಿಕೇಶನ್‌ನಲ್ಲಿ ಈಗಾಗಲೇ ನೇರಪ್ರಸಾರವಿದೆ.

ಚೆಸ್: ಡ್ರಾ ಪಂದ್ಯದಲ್ಲಿ ಪ್ರಜ್ಞಾನಂದ

ಪ್ರಾಗ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ ಅವರು ಪ್ರಾಗ್ ಮಾಸ್ಟರ್ಸ್ ಚೆಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಸ್ಥಳೀಯ ಭರವಸೆ ಡೇವಿಡ್ ನವಾರ ಅವರ ಜೊತೆ ಗುರುವಾರ ಡ್ರಾ ಮಾಡಿಕೊಂಡರು.

ಕಣದಲ್ಲಿರುವ ಭಾರತದ ಎರಡನೇ ಆಟಗಾರ ಅರವಿಂದ ಚಿದಂಬರಮ್ ಕೂಡ ತಮ್ಮ ಪಂದ್ಯವನ್ನು ಇನ್ನೊಬ್ಬ ಆತಿಥೇಯ ಆಟಗಾರ ಗುಯೆನ್ ಥಾಯ್ ದೈ ಜೊತೆ ಡ್ರಾ ಮಾಡಿಕೊಂಡರು. ಮೊದಲ ಸುತ್ತಿನ ಐದು ಪಂದ್ಯಗಳಲ್ಲಿ ಎರಡರಲ್ಲಿ ಸೋಲು–ಗೆಲುವು ನಿರ್ಧಾರವಾಯಿತು.

ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಡಿ.ಗುಕೇಶ್ ಅವರ ನೆರವು ತಂಡದಲ್ಲಿದ್ದ ಜರ್ಮನಿಯ ವಿನ್ಸೆಂಟ್ ಕೀಮರ್ ಅವರು ಅಚ್ಚರಿಯ ಫಲಿತಾಂಶದಲ್ಲಿ ಅಗ್ರ ಶ್ರೇಯಾಂಕದ ವಿ ಯೀ (ಚೀನಾ) ಅವರನ್ನು ಮಣಿಸಿದರು.

ಅಮೆರಿಕದ ಸ್ಯಾಮ್ ಶಂಕ್ಲಾಡ್ ಮೊದಲ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಟರ್ಕಿಯ ಗುರೆಲ್ ಎಡಿರ್ಝ್ ಅವರನ್ನು ಮಣಿಸಿದರು.

ವಿಯೆಟ್ನಾಮ್‌ನ ಅಗ್ರ ಆಟಗಾರ ಕ್ವಾಂಗ್ ಲೀಮ್ ಲೀ ಅವರು ಇನ್ನೊಂದು ಪಂದ್ಯದಲ್ಲಿ ಹಾಲೆಂಡ್‌ನ ಅನಿಶ್ ಗಿರಿ ಜೊತೆ ಡ್ರಾ ಮಾಡಿಕೊಂಡರು. ಹತ್ತು ಆಟಗಾರರು ಕಣದಲ್ಲಿದ್ದು, ಒಟ್ಟು 9 ಸುತ್ತುಗಳು ನಡೆಯಲಿವೆ.

ಕ್ಯಾಪಿಟಲ್ಸ್‌ಗೆ ಪೀಟರ್ಸನ್ ಮೆಂಟರ್



ನವದೆಹಲಿ (ಎಎಫ್‌ಪಿ): ಇಂಗ್ಲೆಂಡ್ ತಂಡದ ಮಾಜಿ ನಾಯಕ ಕೆವಿನ್ ಪೀಟರ್ಸನ್ ಅವರು ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡುವ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಮೆಂಟರ್ ಆಗಿ ಗುರುವಾರ ಸೇರ್ಪಡೆಯಾದರು.

44 ವರ್ಷ ವಯಸ್ಸಿನ ಪೀಟರ್ಸನ್, ಈ ಹಿಂದೆ 2014ರಲ್ಲಿ ಆಗಿನ ಡೆಲ್ಲಿ ಡೇರ್‌ಡೆವಿಲ್ಸ್ ತಂಡಕ್ಕೆ ನಾಯಕರಾಗಿದ್ದರು. 2016ರಲ್ಲಿ ಅವರು ಕೊನೆಯ ಬಾರಿ ಐಪಿಎಲ್‌ನಲ್ಲಿ ಆಡಿದ್ದರು.

'ತವರು ಡೆಲ್ಲಿ ತಂಡಕ್ಕೆ ಮರಳಲು ಖುಷಿಯಾಗುತ್ತಿದೆ! ಡೆಲ್ಲಿ ತಂಡದ ಜೊತೆ ನನಗೆ ಸವಿನೆನಪುಗಳಿವೆ' ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದಾರೆ.

ಡೆಲ್ಲಿ ಇದುವರೆಗೆ ಪ್ರಶಸ್ತಿ ಗೆದ್ದಿಲ್ಲ. ಒಮ್ಮೆ ಫೈನಲ್ ತಲಪಿತ್ತು. ಈ ಹಿಂದಿನ ಆವೃತ್ತಿಯಲ್ಲಿ ಆರನೇ ಸ್ಥಾನ ಗಳಿಸಿತ್ತು.

ಡೆಲ್ಲಿ ಕ್ಯಾಪಿಟಲ್ಸ್ ತಂಡ ಮಾರ್ಚ್ 22ರಂದು ಆರಂಭವಾಗುವ ಈ ಬಾರಿಯ ಆವೃತ್ತಿಗೆ ಇದುವರೆಗೆ ನಾಯಕನನ್ನು ಹೆಸರಿಸಿಲ್ಲ.

SOFAS & MORE
STANLEY
Hudson - 3str + Daybed
EMI Starts @ ₹ 35,800
Hudson - 1str
EMI Starts @ ₹ 11,622
Sale
FLAT 50% OFF*
LIMITED PERIOD OFFER
Hudson - 2str
EMI Starts @ ₹ 19,156
Your Sofa, Your Way.
Choose from 28 different configurations and 72 colour options, customized and crafted with 100% Genuine 1.4 to 1.6 mm thick top-grain Italian tannage leather.
THE 5 STAR STANLEY ADVANTAGE
★ Widest range of modern designs, colours and options.
★ Customizable to your exact requirements.
★ Unmatched quality delivered by a 3 decade experienced manufacturing brand.
★ Peace of mind with industry best Warranty.
★ Unmatched after sales service available nationwide.
Hudson - Home Theatre
EMI Starts @ ₹ 26,322
Hudson - 3str
EMI Starts @ ₹ 25,189
SEAL OF ASSURANCE SEAL OF
Made & Warranted by an established
ISO 9001/14001/41001 - FSI Certified Manufacturer
Hudson - 3sa+Corner+3sa
EMI Starts @ ₹ 60,722
10 YEAR MANUFACTURER WARRANTY*
CUSTOMISABLE PRODUCTS*
ON TIME DELIVERY
EASY EMI OPTIONS
100% GENUINE LEATHER
AVAIL INSTANT DISCOUNT
UPTO ₹10,000*
HDFC BANK
EASY EMI
BY pine labs
*T&C's Apply
VISIT OUR STORES @
sofasandmore.in
stanleysofasandmore
AIRPORT ROAD 96067 10424
BANASHANKARI 96639 11477
BANASWADI 91487 63030
DICKENSON ROAD 96063 06420
ELECTRONIC CITY 91482 24120
INDIRANAGAR 87929 22311
JP NAGAR 91481 33170
MARATHAHALLI 77608 58990
MISSION ROAD 91482 23170
MYSORE ROAD 96064 00760
OLD MADRAS ROAD 78996 78300
SARJAPUR ROAD 96320 66733
WHITEFIELD 89519 94664
YESHWANTHPUR 91487 18080
YELAHANKA 91482 20870
MYSORE 76193 06777
Sofas & More is a registered trademark of Stanley Lifestyles Limited. Any unauthorized use, copying, reproduction, or distribution of this trademark is strictly prohibited. All rights reserved.